ಆಧುನಿಕ ಕನ್ನಡ ಸಾಹಿತ್ಯದಲ್ಲಿ ಏಕಲವ್ಯ

ಎಂ. ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪ್ರಬಂಧ.

ಸಂಶೋಧಕರು
ಅಮರೇಶ ನುಗಡೋಣಿ

ಮಾರ್ಗದರ್ಶಕರು
ಡಾ. ರಹಮತ್ ತರೀಕೆರೆ

ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ
ಹಂಪಿ-583 211

ಮಾರ್ಚ್ ೧೯೯೪

ಸಂಪೂರ್ಣ ಸಂ. ಶಿ. [illegible]

60

60

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಏಕಲವ್ಯ

ಎಂ. ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪ್ರಬಂಧ.

ಸಂಶೋಧಕರು

ಅಮರೇಶ ನುಗಡೋಣಿ

ಮಾರ್ಗದರ್ಶಕರು

ಡಾ. ರಹಮತ್ ತರೀಕೆರೆ

ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ
ಹಂಪಿ-583 211

ಮಾರ್ಚ್ ೧೯೯೪

ದೃಢೀಕರಣ ಪತ್ರ.

ಶ್ರೀ ಅಮರೇಶ ನುಗಡೋಣಿ ಇವರು 'ಆಧುನಿಕ ಕನ್ನಡ ಸಾಹಿತ್ಯದಲ್ಲಿ ಏಕಲವ್ಯ' ಎಂಬ ತಲೆಬರಹವುಳ್ಳ ಈ ಸಂಶೋಧನ ಪ್ರಬಂಧವನ್ನು ನನ್ನ ಜತೆ ಸಮಾಲೋಚನೆ ನಡೆಸಿ ಸಿದ್ಧಪಡಿಸಿರುತ್ತಾರೆ. ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾಗುತ್ತಿರುವ ಪ್ರಸ್ತುತ ಪ್ರಬಂಧವನ್ನು ಅಥವ ಪ್ರಬಂಧದ ಯಾವುದೇ ಭಾಗವನ್ನು ಅಮರೇಶ ನುಗಡೋಣಿ ಯವರು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ.

ದಿನಾಂಕ: ೨೧. ಮಾರ್ಚ್. ೯೪.
ಸ್ಥಳ: ಹಂಪಿ.

(ರಹಮತ್ ತರೀಕೆರೆ)

ಪ್ರಮಾಣ ಪತ್ರ

'ಆಧುನಿಕ ಕನ್ನಡ ಸಾಹಿತ್ಯದಲ್ಲಿ ಏಕಲವ್ಯ' ಎಂಬ ಶೀರ್ಷಿಕೆಯ ಈ ಸಂಶೋಧನ ಪ್ರಬಂಧವನ್ನು ಡಾ. ರಹಮತ್ ತರೀಕೆರೆ ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದೇನೆ. ಈ ಪ್ರಬಂಧದ ವಿಷಯವನ್ನು ಅಥವಾ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲಿ ಅಥವಾ ಉದ್ದೇಶಗಳಿಗಾಗಲಿ ಬಳಸಿಕೊಂಡಿಲ್ಲವೆಂದು ತಿಳಿಯಪಡಿಸುತ್ತೇನೆ.

ಎನ್. ಅಮರೇಶ
ಸಂಶೋಧನ ಸಹಾಯಕ
ಕನ್ನಡ ವಿಶ್ವವಿದ್ಯಾಲಯ ಹಂಪಿ

ನೆನಕೆ, ನಮನ

ಎಂ.ಫಿಲ್ ಅಧ್ಯಯನಕ್ಕೆ ಕನ್ನಡ ವಿಶ್ವವಿದ್ಯಾಲಯದಲ್ಲಿ ಅವಕಾಶ ಮಾಡಿಕೊಟ್ಟ ಕುಲಪತಿಗಳಾದ ಡಾ. ಚಂದ್ರಶೇಖರ ಕಂಬಾರ, ಕುಲಸಚಿವರಾದ ಡಾ. ಕೆ.ವಿ. ನಾರಾಯಣ, ಅಧ್ಯಯನಾಂಗದ ನಿರ್ದೇಶಕರಾದ ಡಾ. ಪುರುಷೋತ್ತಮ ಬಿಳಿಮಲೆ ಮತ್ತು ಪ್ರೊ. ಟಿ.ಎಲ್. ನಾಗಭೂಷಣಸ್ವಾಮಿ –

ನನ್ನ ಈ ಪ್ರಬಂಧ ರಚನೆಯಲ್ಲಿ ಪೂರ್ಣ ನೆರವಿತ್ತ ಡಾ. ರಹಮತ್ ತರೀಕೆರೆ –

ಅಧ್ಯಯನದಲ್ಲಿ ಸಲಹೆ ನೀಡಿದ ಶ್ರೀ ಮಲ್ಲೇಪುರಂ ಜಿ. ವೆಂಕಟೇಶ, ಪ್ರೊ. ಎಚ್.ಎಸ್. ರಾಘವೇಂದ್ರರಾವ್, ಡಾ. ಮೋಹನ ಕುಂಟಾರ್ ಮತ್ತು ಶ್ರೀ ವಿಠಲರಾವ್ ಗಾಯಕ್ವಾಡ್, ಎಚ್. ನಾಗವೇಣಿ

ಈ ಪ್ರಬಂಧದ ಸಿದ್ಧತೆಗೆ ಸಹಾಯ ಮಾಡಿದ ಶ್ರೀ ಅಶೋಕ್ ಕುಮಾರ್ ರಂಜೇರೆ, ಶ್ರೀ ರಾಜಶೇಖರ ಹಳೆಮನಿ ಶ್ರೀ ಯು. ಮಲ್ಲಿಕಾರ್ಜುನ, ಎಂ. ಆಂಜನೇಯ, ಎಸ್. ಸುಹಾಸ್

ಇವರೆಲ್ಲರಿಗೆ .....

ಎಸ್. ಅಮರೇಶ
ಸಂಶೋಧನ ಸಹಾಯಕ
ಕನ್ನಡ ವಿಶ್ವವಿದ್ಯಾಲಯ
ಹಂಪಿ

ಪರಿವಿಡಿ

ಅಧ್ಯಯನಕ್ಕೆ ಮುನ್ನ ಅದರ ಸ್ವರೂಪ ಕುರಿತು

ಪುರಾಣ ಅಥವಾ ಚರಿತ್ರೆಯ ಯಾವುದಾದರೂ ವ್ಯಕ್ತಿ, ವಸ್ತು, ಘಟನೆಯನ್ನು ಕುರಿತು ವರ್ತಮಾನದ ಸಂದರ್ಭದಲ್ಲಿಟ್ಟು ಅರ್ಥೈಸುವ ಬಗೆಯು ಕನ್ನಡ ಸಾಹಿತ್ಯದ ಪ್ರಧಾನವಾದ ಪ್ರವೃತ್ತಿಯಾಗಿರುವುದನ್ನು ನೋಡುತ್ತೇವೆ. ಗತಕಾಲದ ಅನೇಕ ರಾಜಕೀಯ ಸಾಮಾಜಿಕ ಸಂಘರ್ಷ ಸಾಮರಸ್ಯಗಳ ಕುರುಹುಗಳನ್ನು ಪೊಟ್ಟಣಿಯೊಳಗಿಟ್ಟುಕೊಂಡು ಪ್ರತೀಕಗಳಾಗಿರುವ ಈ ಪುರಾಣಗಳು ಸಾಹಿತ್ಯಕ್ಕೆ ಯಾವತ್ತೂ ಕಾಡಿಸುತ್ತಲೇ ಬಂದಿವೆ. ದೇವಿಪ್ರಸಾದ ಚಟ್ಟೋಪಾಧ್ಯಾಯ, ಡಿ.ಡಿ.ಕೊಸಾಂಬಿಯಂಥ ತತ್ವಶಾಸ್ತ್ರಜ್ಞರು — ಚರಿತ್ರಕಾರರು ಪುರಾಣಗಳನ್ನು ಮಾನವಚರಿತ್ರೆಯ ಅಧ್ಯಯನಕ್ಕೆ ಬಹಳ ಮುಖ್ಯವಾದ ಆಕರಗಳನ್ನಾಗಿ ಮಾಡಿಕೊಳ್ಳುತ್ತಾರೆ. ಲೇಖಕರು ಪುರಾಣಗಳನ್ನು ಸಾಹಿತ್ಯದಲ್ಲಿ ಬಳಸಿಕೊಳ್ಳುವುದಕ್ಕೆ 'ಏರ್ಪಡುವ ಸಾಂಸ್ಕೃತಿಕ ಒತ್ತಡಗಳು ಯಾವುವು? ಪುರಾಣಗಳು ಅವರ ಕೃತಿಗಳಲ್ಲಿ ಕಲಾತ್ಮಕವಾಗಿ ಮರು ಸೃಷ್ಟಿಗೊಳ್ಳುವ ವಿಧಾನಗಳು ಯಾವುವು. ಹೀಗೆ ಮರು ಸೃಷ್ಟಿಗೊಂಡ ಪುರಾಣ ಹೇಗೆ ಆಧುನಿಕ ಸ್ವರೂಪವನ್ನು ಪಡೆದುಕೊಳ್ಳುತ್ತದೆ. ಈ ಮುಂತಾದ ಅಧ್ಯಯನಗಳು ಕೇವಲ ಕುತೂಹಲಕಾರಿಯಾದವಷ್ಟೇ ಅಲ್ಲ ಉಪಯುಕ್ತವಾದುದೂ ಹೌದು. ಈ ಹಿನ್ನೆಲೆಯಲ್ಲಿ ಪುರಾಣ — ಚರಿತ್ರೆ ಅಥವಾ ಚರಿತ್ರೆ — ಪುರಾಣದ ವ್ಯಕ್ತಿಯಾದ 'ಏಕಲವ್ಯ'ನನ್ನು ಕುರಿತು ಕನ್ನಡ ಸಾಹಿತ್ಯದ ಪುರಾಣದ ಪುನರ್ವ್ಯಾಖ್ಯಾನ ಪ್ರಕ್ರಿಯೆಯ ಮೂಲಕ ತೋರಿಸಿರುವ ಸೃಜನಶೀಲ ಪ್ರತಿಕ್ರಿಯೆ ಅಧ್ಯಯನವೇ ಈ ಪ್ರಬಂಧದ ಉದ್ದೇಶವಾಗಿದೆ.

ಪುರಾಣ ಅಥವಾ ಚರಿತ್ರೆ ಕಾಲಾಂತರದಲ್ಲಿ ಮರುವ್ಯಾಖ್ಯಾನಗೊಳ್ಳುತ್ತಾ ಬಂದಿರುವುದನ್ನು ಭಾರತೀಯ ಸಾಹಿತ್ಯದಲ್ಲಿ ಕಾಣುವ ಲಕ್ಷಣವಾಗಿದ್ದು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಕೂಡ ಸಹಜವಾಗಿ ಇದು ನಡೆದಿದೆ. ಪಂಪನಿಂದ ಹಿಡಿದು ಈ ಹೊತ್ತಿನ ತನಕ ಆಯಾಕಾಲದ ಸಾಂಸ್ಕೃತಿಕ ಒತ್ತಡ ಮತ್ತು ಅಗತ್ಯಗಳಿಗನುಗುಣವಾಗಿ ಪುರಾಣ ಅಥವಾ ಚರಿತ್ರೆ ಪುನರ್ವ್ಯಾಖ್ಯಾನವಾಗಿರುವುದನ್ನು ಅಂದರೆ ಪುನರ್ ಸೃಷ್ಟಿಯಾಗಿರುವುದನ್ನು ಈ ಪ್ರಬಂಧದ ಅಧ್ಯಯನದ ಹಿನ್ನೆಲೆಯಾಗಿ ಚರ್ಚಿಸಲಾಗಿದೆ.

ಈ ಶತಮಾನದ ಪ್ರಾರಂಭದಿಂದಲೇ ಭಾರತೀಯರು ಎದುರಿಸಿದ ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಬಿಕ್ಕಟ್ಟುಗಳು ಮತ್ತು ಅವುಗಳ ಮುಖಾಮುಖಿಯಲ್ಲಿ ನಡೆಸಿದ ಹೋರಾಟಗಳ ಫಲವಾಗಿ ಉಂಟಾದ ಅನೇಕ ಬಗೆಯ ಬದಲಾವಣೆಗಳು ಮನುಷ್ಯ ಸಂಬಂಧಗಳ ಸ್ವರೂಪದಲ್ಲಿ ಪರಿವರ್ತನೆಗಳು ಕಂಡು ಬಂದುವು. ಇದರಿಂದ ಮನುಷ್ಯನ ಪ್ರಭಾವಲಯ

ವಿಸ್ತಾರವಾದ ಕಾರಣ ಅನೇಕ ಬಗೆಯ ಚಿಂತನೆಗಳು ಸಮಾಜಿಕ ರಾಜಕೀಯ ಸಿದ್ಧಾಂತಗಳು ಹುಟ್ಟಿಕೊಂಡು ಸಮಾಜ ಪರಿವರ್ತನೆಯಾಯಿತು. ಇದರ ಸಾಂಸ್ಕೃತಿಕ ಫಲನೆಯನ್ನು ಈ ಪ್ರಬಂಧದ ಅಧ್ಯಯನಕ್ಕೆ ಪೂರಕವಾಗಿ ನೋಡಲಾಗಿದೆ.

ಪುರಾಣ ಅಥವಾ ಚರಿತ್ರೆಯ ವಸ್ತುವನ್ನು ಆಧರಿಸಿ ಮರುವ್ಯಾಖ್ಯಾನ ಮಾಡುವ ಪರಂಪರೆಯನ್ನು ಅತ್ಯಂತ ಸಮರ್ಥವಾಗಿ ಆಧುನಿಕ ಚಿಂತನೆಗಳ ಹಿನ್ನೆಲೆಯಲ್ಲಿ ನೋಡಲು ಶುರು ಮಾಡಿದವರಲ್ಲಿ ಕುವೆಂಪು ಮುಖ್ಯರು. ಪುರಾಣ ಪ್ರತಿಮೆಗಳನ್ನು ಕಾಲದ ಸಾಂಸ್ಕೃತಿಕ ಚಿಂತನೆಗಳಿಗೆ ತಕ್ಕಂತೆ ಮರು ರೂಪಿಸುವ ಕಾಂತರ್ಕೆಗೊಂಡು ಅನೇಕ ಕೃತಿಗಳನ್ನು ಕುವೆಂಪು ರಚಿಸಿದರು. ಅವುಗಳಲ್ಲಿ 'ಬೆರಳ್ ಗೆ ಕೊರಳ್' ನಾಟಕ ಒಂದು. ಪುರಾಣದ ಕಥೆಯನ್ನು ಮರು ಸೃಷ್ಟಿಸುವುದು ಎಂದರೇನೇ ಚರಿತ್ರೆಯನ್ನು ವಿಮರ್ಶಿಸುವುದು ಹಾಗೂ ವರ್ತಮಾನದ ತಲ್ಲಣಗಳಿಗೆ ರೂಪಕಗಳನ್ನು ಸೃಷ್ಟಿಸುವುದು ಎಂದರ್ಥ. ಕಲಾವಿದರಾಗಿ ಬಹುಮುಖ ಪ್ರತಿಭೆಯಾದ ಕುವೆಂಪು ಅನೇಕ ಸಾಂಸ್ಕೃತಿಕ ಕಾರಣಗಳಿಂದ ಕೂಡ ಬಹಳ ಮುಖ್ಯರಾದ ಲೇಖಕರಾಗಿರುವುದರಿಂದ ಕುವೆಂಪು ಈ ಚರ್ಚೆಯಲ್ಲಿ ಮತ್ತೆ ಮತ್ತೆ ನೆನಪಿಗೆ ಬರುವ ಹಾಗೂ ಹೋಲಿಕೆಗೊಳ್ಳುವ ಲೇಖಕರಾಗಿದ್ದಾರೆ.

'ಏಕಲವ್ಯ'ನನ್ನೇ ಕುರಿತು ಕುವೆಂಪು, ಗೋವಿಂದ ಪೈ, ಕೈಲಾಸಂ, ವಜ್ರಮಟ್ಟಿ, ಸಿದ್ಧಲಿಂಗಯ್ಯ, ಸೂರ್ಯನಂದ ಪಾಟೀಲ, ಎಸ್.ಎಲ್.ಭೈರಪ್ಪ (ಪರ್ವ) ಹಾಗೂ ಜ.ಹೊ. ನಾರಾಯಣಸ್ವಾಮಿ ಇವರೆಲ್ಲ ಕೃತಿಗಳನ್ನು ರಚಿಸಿದ್ದಾರೆ. ಇವರು ಆಧುನಿಕ ಕಾಲದವರಾದರೂ ಒಂದೇ ಬಗೆಯ ದೃಷ್ಟಿಕೋನವನ್ನು ಹೊಂದಿದವರಲ್ಲ. ಇವರ, ಚಿಂತನೆಗಳಿಗೆ ಬೇರೆ ಬೇರೆ ಸಿದ್ಧಾಂತಗಳ, ಇಜಂಗಳ ಹಿನ್ನೆಲೆಯಿದೆ. ಆದ್ದರಿಂದ ಈ ಎಲ್ಲ ಕೃತಿಕಾರರು 'ಏಕಲವ್ಯ'ನ ಮೂಲಕ ಪ್ರತಿಪಾದಿಸಲು ಪ್ರಯತ್ನಿಸಿದ 'ಆಶಯ'ಗಳನ್ನು ಗುರುತಿಸುವುದು ಈ ಅಧ್ಯಯನದ ಮುಖ್ಯ ನೆಲೆಯಾಗಿದೆ. ಜಿ.ಎಸ್.ಶಿವರುದ್ರಪ್ಪರಂಥ ಹಿರಿಯ ಕವಿಗಳಿಂದ ಹಿಡಿದು ಬರಗೂರು, ನಾಲೆಕರ ಮುಂತಾದ ಅನೇಕ ದಲಿತ, ಬಂಡಾಯ ಕವಿಗಳು 'ಏಕಲವ್ಯ'ನನ್ನು ತಮ್ಮ ಕವಿತೆಗಳಲ್ಲಿ ~~ಈ~~ ಚಿತ್ರಿಸಿದ್ದಾರೆ. ಇಂಥ ಕವಿತೆಗಳಲ್ಲಿ 'ಏಕಲವ್ಯ'ನನ್ನು ಯಾವ ಬಗೆಯಲ್ಲಿ ಅರ್ಥೈಸಲು ಪ್ರಯತ್ನಿಸಿದ್ದಾರೆ ಎಂಬುದನ್ನು ಈ ಪ್ರಬಂಧದ ಕೊನೆಯ ಅಧ್ಯಾಯದಲ್ಲಿ ವಿವರಿಸಲಾಗಿದೆ. ಈ ಎಲ್ಲ ಕೃತಿಗಳ ಒಳ ವಿವರಗಳೊಂದಿಗೆ ಮತ್ತು ತೌಲನಿಕವಾಗಿಯೂ ಇಲ್ಲಿ ಅಧ್ಯಯನ ಮಾಡಲಾಗಿದೆ.

ಚರಿತ್ರೆ ಹಾಗೂ ಸಾಹಿತ್ಯಗಳ ಮರು ಮೌಲ್ಯಮಾಪನ ಕ್ರಿಯೆಯು ಕನ್ನಡ ವಿಮರ್ಶೆ ಮತ್ತು ಸಂಶೋಧನೆಗಳ ಪ್ರಧಾನ ಚಟುವಟಿಕೆಯಾಗಿ ಬಿಟ್ಟಿರುವ ಈ ಹೊತ್ತಿನಲ್ಲಿ; [illegible] ಸಂಸ್ಕೃತಿಗಳ ಹೆಸರಿನಲ್ಲಿ ನ್ಯಾಸಬೇಧರ ಸಂಸ್ಕೃತಿಯಂಥ ಅನೇಕ ನಿರ್ಲಕ್ಷ್ಯಕ್ಕೊಳಗಾದ ಸಂಸ್ಕೃತಿಗಳ ಅಧ್ಯಯನಗಳು ನಡೆಯುತ್ತಿರುವ ಈ ಹೊತ್ತಿನಲ್ಲಿ ಪ್ರಸ್ತುತ ಅಧ್ಯಯನಕ್ಕೆ (ಆಧುನಿಕ ಕನ್ನಡ ಸಾಹಿತ್ಯದಲ್ಲಿ 'ಏಕಲವ್ಯ') ಸಾಂಸ್ಕೃತಿಕ ಪ್ರಾಮುಖ್ಯತೆ ಇದೆ ಎಂದು ತಿಳಿಯಬಹುದಾಗಿದೆ.

20ನೇ ಶತಮಾನದ ಸಾಂಸ್ಕೃತಿಕ ಚಲನೆಗಳು ಹಾಗೂ ಪುರಾಣ ಪುನರ್‌ವ್ಯಾಖ್ಯಾನ ಪ್ರಕ್ರಿಯೆ

ಬ್ರಿಟಿಷರ ಆಳ್ವಿಕೆಯಲ್ಲಿ ಭಾರತೀಯರಿಗೆ ಹಲವು ಮೂಲಗಳಿಂದ ವಿಚಾರಧಾರೆಯು ಹರಿದು ಬಂದಿತು. ಇಂಗ್ಲಿಷ್ ಭಾಷೆಯ ಕಲಿಕೆಯಿಂದ ಯುರೋಪಿನ ಚಿಂತನೆ ಲಭ್ಯವಾಗ ತೊಡಗಿತು. ಹೊಸ ಸಾಹಿತ್ಯದ ದರ್ಶನವಾಯಿತು. ಇದರಿಂದ ಭಾರತೀಯರ ಮನೋಧರ್ಮ ಬದಲಾವಯಿತು. ಸಾಹಿತ್ಯ ಮತ್ತು ಬದುಕಿನ ಸಂಬಂಧಗಳ ಸ್ವರೂಪದಲ್ಲಿ ಬದಲಾವಣೆ ಕಂಡು ಜೀವನ ಕ್ರಮಕ್ಕೆ ಹೊಸ ಅರ್ಥವಾ ಮಾಡತೊಡಗಿತು. ಬ್ರಿಟಿಷರ ಆಳ್ವಿಕೆಯಿಂದ ಭಾರತೀಯರಿಗೆ ಆಧುನಿಕತೆಯ ಸ್ಪರ್ಶವಾಯಿತು. ಆಗ ಭಾರತೀಯರಲ್ಲಿ ಮನೆಮಾಡಿಕೊಂಡಿದ್ದ ಮೂಢನಂಬಿಕೆಗಳು, ಸಂಪ್ರದಾಯಗಳು ವಿಮರ್ಶೆಗೆ ಒಳಗಾಗಿ ಸ್ವಲ್ಪಮಟ್ಟಿಗೆ ಸಡಿಲವಾಗ ತೊಡಗಿದವು. ವೈಚಾರಿಕತೆ ಮೂಡತೊಡಗಿತು. ಈ ಸಂದರ್ಭವು ಸಂಕ್ರಮಣ ಸ್ಥಿತಿಯಾಯಿತು. ಒಂದು ಕಡೆ ಬ್ರಿಟಿಷರ ದಾಸ್ಯದಿಂದ ಬಿಡುಗಡೆ ಹೊಂದಲು ಸ್ವಾಭಿಮಾನವು ಎಚ್ಚೆತ್ತಿತು. ಭಾರತೀಯರು ಹಲವು ಬಗೆಯಲ್ಲಿ ಪ್ರತಿಭಟಿಸಿ ಹೋರಾಟ ನಡೆಸಿದರು. ಇನ್ನೊಂದು ಕಡೆ ಬ್ರಿಟಿಷರ ಆಳ್ವಿಕೆಯಲ್ಲಿ ಕಲಿತ ಇಂಗ್ಲಿಷ್ ಅಭ್ಯಾಸದಿಂದ ದೇಶ ವಿದೇಶಗಳ ಚರಿತ್ರೆಗಳು ಭಾರತೀಯರ ಗಮನಕ್ಕೆ ಬಂದವು. ಮಹಾ ವ್ಯಕ್ತಿಗಳ ಚಿಂತನೆಗಳು ವಿಸ್ತೃತಂಬ ತೊಡಗಿದವು. ಇದರಿಂದ ಭಾರತೀಯರ ಬದುಕು ಸಂಕೀರ್ಣವಾಗ ತೊಡಗಿತು. 'ಏಕಕಾಲದಲ್ಲಿ ಶೇಕ್ಸ್‌ಪಿಯರ್, ಮಿಲ್ಟನ್, ವರ್ಡ್ಸ್‌ವರ್ತ್, ಷೆಲ್ಲಿ, ಕೋಲರಿಜ್, ಮ್ಯಾಥ್ಯೂಆರ್ನಾಲ್ಡ್, ವಾಲ್ಟರ್‌ಸ್ಕಾಟ್, ಡಿಕನ್ಸ್, ಯೂರಿಪಿಡಿಸ್, ಟಾಲ್‌ಸ್ಟಾಯ್ ಮುಂತಾದವರ ಸಾಹಿತ್ಯ ಪರಿಚಿತವಾಯಿತು. ಅನೇಕ ಧಾರ್ಮಿಕ ವ್ಯಕ್ತಿಗಳ ವಿಚಾರಧಾರೆಯ ಜೊತೆಗೆ ರಾಜಕೀಯ ಪ್ರಜ್ಞೆ ಮೂಡತೊಡಗಿತು. ಸಾಹಿತ್ಯದಲ್ಲಿ ಅನೇಕ ಪ್ರಕಾರಗಳು ಹುಟ್ಟಿಕೊಂಡವು. ಭಾರತೀಯರ ಕನಸುಗಳು, ನೋವು ನಲಿವುಗಳು ಅಸ್ಪಷ್ಟ ಭಾವನೆಗಳು ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಅಭಿವ್ಯಕ್ತಗೊಳ್ಳ ತೊಡಗಿದವು. ಈ ಎಲ್ಲ ಸಂಭ್ರಮಗಳ ಒಳಗಡೆಯೇ ಭಾರತೀಯರಿಗೆ 'ತಮ್ಮತನ' ಎನ್ನುವುದು ಮರೆಯಾಗುತ್ತಿದೆ ಎಂಬ ಅರಿವು ಮೂಡಿತು. ಭಾರತೀಯರ ಸ್ವಾಭಿಮಾನ, ಪರಂಪರೆಯ ಪ್ರಜ್ಞೆ ಎಚ್ಚೆತ್ತವು. 'ತಮ್ಮತನ'ದ ಅನ್ವೇಷಣೆಗೆ ತೊಡಗಿದರು. ಜಾನಪದ ಸಾಹಿತ್ಯ, ಸ್ವದೇಶಿ ವಸ್ತುಗಳ ಬಳಕೆ ಮುಂತಾದವುಗಳನ್ನು ತಮ್ಮತನದ ಸಂಕೇತವಾಗಿ ಎತ್ತಿ ನಿಲ್ಲಿಸಿದರು.

ಈ ಶತಮಾನದಲ್ಲಿ ಶೂದ್ರರಿಗೂ ಶಿಕ್ಷಣ ಕಲಿಯುವ ಅವಕಾಶ ದೊರೆತದ್ದೇ ಅನೇಕ ಚಳುವಳಿಗೆ ಕಾರಣವಾಯಿತು. ಹಿಂದು ಸಮಾಜದ ವ್ಯವಸ್ಥೆಯಲ್ಲಿ ದಲಿತರಿಗೆ ಕನಿಷ್ಠ ಸ್ಥಾನಮಾನಗಳೂ ಇರಲಿಲ್ಲ. ಪುರೋಹಿತಶಾಹಿ ಮತ್ತು ಪುರೋಹಿತಶಾಹಿಯ ಕೈಯಲ್ಲಿದ್ದ ಅಧಿಕಾರ ಶಾಹಿಯು ಸಮಾಜದಲ್ಲಿ ಅಸಮಾನತೆಯನ್ನು ವ್ಯವಸ್ಥಿತವಾಗಿ ಕಾಯ್ದುಕೊಂಡಿತ್ತು. ದಬ್ಬಾಳಿಕೆ, ಶೋಷಣೆ ಶೂದ್ರರ ಪಾಲಿಗೆ ಸಹಜವಾಗಿದ್ದವು. ಈ ಶತಮಾನದಲ್ಲಿ ದೊರೆತ ಶಿಕ್ಷಣದಿಂದ ಶೂದ್ರರೂ ಮತ್ತು ಬ್ರಾಹ್ಮಣೇತರರು, ಪ್ರಜ್ಞಾವಂತರು ಭಾರತೀಯ ಹಿಂದೂ

ಧರ್ಮದ ಇತಿಹಾಸವನ್ನು ಜಾಲಾಡ ತೊಡಗಿದರು. ಇದರಿಂದ ಅನೇಕ ಸಂಘರ್ಷಣೆಗಳು ಉಂಟಾದವು. ಈ ಸಂಘರ್ಷಣೆಗಳು ಅನೇಕ ಚಳುವಳಿ ಮತ್ತು ಸಂಘಟನೆಗಳಿಗೆ ಪ್ರೇರಣೆ ನೀಡಿದವು. ಸಮಾಜದಲ್ಲಿ ನಡೆಯುವ ಸಂಘರ್ಷಣೆಗಳು ಪರಿವರ್ತನೆಗೆ ಕಾರಣವಾಗ ತೊಡಗಿದವು. ಇಂಥ ಸಂದರ್ಭದೊಡನೆ ಸಾಹಿತ್ಯವು ತನ್ನನ್ನು ಗುರುತಿಸಿಕೊಳ್ಳುತ್ತ ಹೋಗುವುದು ಸಹಜವೇ. ಬದಲಾಗುವ ಕಾಲದ ವಿಶಿಷ್ಟ ವಿಚಾರಗಳನ್ನು ಸಾಹಿತ್ಯವು ಮರು ಸೃಷ್ಟಿಸುತ್ತ ಹೋಗುತ್ತದೆ.

ರಾಜಕೀಯವಾಗಿ ಹತ್ತೊಂಭತ್ತನೆಯ ಶತಮಾನದಲ್ಲಿ ಜರುಗಿದ ಘಟನೆಗಳು ಸಾಮಾಜಿಕ, ಸಾಂಸ್ಕೃತಿಕ ರಂಗಗಳಲ್ಲಿ ಆದ ಸ್ಥಿತ್ಯಂತರಗಳು ನವ ಸಮಾಜದ ನಿರ್ಮಾಣಕ್ಕೆ ಕಾರಣವಾದವು. ರಾಜಾರಾಂ ಮೋಹನರಾಯ್, ದಯಾನಂದ ಸರಸ್ವತಿ, ವಿವೇಕಾನಂದ, ಈಶ್ವರಚಂದ್ರ ವಿದ್ಯಾಸಾಗರ, ರವೀಂದ್ರನಾಥ ಠಾಕೂರ್, ಬಂಕಿಮಚಂದ್ರ ಮುಂತಾದ ಬಂಗಾಳದ ವಿಚಾರವಂತರು ತಮ್ಮ ವೈಚಾರಿಕತೆಯಿಂದ ಸಾಮಾಜಿಕ ರಂಗದಲ್ಲಿ ತಂದ ಬದಲಾವಣೆಗಳು ಮಹತ್ವ ಪೂರ್ಣವಾದವುಗಳಾದವು. ರಾಜರಾಂ ಮೋಹನರಾಯರು ಅಂಧಶ್ರದ್ಧೆಯಲ್ಲಿದ್ದ ಭಾರತೀಯ ಸಂಸ್ಕೃತಿಯನ್ನು ಪರಿವರ್ತಿಸಲು ಅನೇಕ ರೀತಿಯಲ್ಲಿ ಶ್ರಮಿಸಿದರು. 'ಸತಿ ಪದ್ಧತಿ'ಯಂಥ ಕ್ರೂರ ನಿಯಮವನ್ನು ರದ್ದುಗೊಳಿಸಲು ಬ್ರಿಟಿಷರ ನೆರವಿನೊಂದಿಗೆ ಕಾನೂನು ಬದ್ಧವಾಗಿ ಪ್ರತಿಬಂಧಿಸಿದರು. ಸ್ತ್ರೀಯರಿಗೆ ಅನೇಕ ವಿಷಯಗಳಲ್ಲಿ ಹೆಚ್ಚಿನ ಸ್ಥಾನಮಾನವನ್ನು ಕಲ್ಪಿಸಿದರು. ವಿವೇಕಾನಂದರು ಹಿಂದೂ ಧರ್ಮದ ಪರವಾಗಿದ್ದರೂ ಅದರಲ್ಲಿಯ ಅನೇಕ ಅಮಾನವೀಯ ವಿಷಯಗಳನ್ನು ಖಂಡಿಸಿದರು. ದೀನದಲಿತರ ಪರವಾಗಿ ನಿಂತರು. ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ಬಡತನ, ನಿರುದ್ಯೋಗ ಮುಂತಾದ ಸಮಸ್ಯೆಗಳು ಎದುರಾದರೂ ಭಾರತವು ಪಾಶ್ಚಾತ್ಯರ ಆಧುನಿಕತೆಗೆ ಒಳಗಾಯಿತು. ಕೃಷಿ, ಯಂತ್ರಜ್ಞಾನ, ವ್ಯಾಪಾರ, ಶಿಕ್ಷಣ, ಸಾಹಿತ್ಯ ಮತ್ತು ಜ್ಞಾನಕ್ಕೆ ಸಂಬಂಧಿಸಿದಂತೆ ತ್ವರಿತಗತಿಯಲ್ಲಿ ಪ್ರಗತಿಯಾಗ ತೊಡಗಿತು. ಮಾರ್ಕ್ಸ್‌ವಾದವು ತನ್ನ ಪ್ರಭಾವದಿಂದ ಭಾರತೀಯ ಸಮಾಜದಲ್ಲಿ ಹೊಸ ವಿಚಾರವೊಂದನ್ನು ಹುಟ್ಟು ಹಾಕಿತು. ಆರ್ಥಿಕ ಸಮಾನತೆಯನ್ನು ಸಾರಲು ಪ್ರೇರಣೆ ನೀಡಿತು. ಸೈದ್ಧಾಂತಿಕ ಶಕ್ತಿಯಾಗಿ ಲೋಹಿಯಾರವರು ರಾಜಕೀಯ ಚಳುವಳಿಯಾಗಿ ಆಧುನಿಕ ಭಾರತದ ಮೇಲೆ ಸಾಕಷ್ಟು ಪ್ರಭಾವ ಬೀರಿದರು. ಲೋಹಿಯಾರು ಅವರು ಭಾರತೀಯ ಬ್ರಾಹ್ಮಣೇತರ ಬರಹಗಾರರಿಗೆ ಮುಖ್ಯ ಪ್ರೇರಣೆಯಾದವರು. "ಇಂಗ್ಲಿಷಿನ ಬಗ್ಗೆ, ಜಾತಿ ಪದ್ಧತಿಯ ಬಗ್ಗೆ, ಅಂತಾರಾಷ್ಟ್ರೀಯ ಕಪ್ಪು - ಬಿಳುಪುಗಳ ಬಗ್ಗೆ, ಭಾರತೀಯ ದೇಶ ಭಾಷೆಗಳ ಬಗ್ಗೆ"[1] ಇವರ ಚಿಂತನೆಗಳು ಕನ್ನಡ ಬರಹಗಾರರ ಮೇಲೆ ಸಾಕಷ್ಟು ಪ್ರಭಾವ ಬೀರಿದವು. ಗಾಂಧೀಜಿಯವರ ಅಹಿಂಸಾ ಹೋರಾಟ, ದಲಿತೋದ್ಧಾರ, ದೇಶಿವಸ್ತುಗಳ ಬಳಕೆ ಮತ್ತು ಅವರ ಸರಳ ವ್ಯಕ್ತಿತ್ವವು ಭಾರತೀಯರ ಮೇಲೆ ತುಂಬ ಪರಿಣಾಮವನ್ನುಂಟು ಮಾಡಿದವು. ಗಾಂಧೀಜಿಯವರ ಅಹಿಂಸಾ ಹೋರಾಟ, ದಲಿತೋದ್ಧಾರ, ದೇಶಿ ವಸ್ತುಗಳ ಬಳಕೆ ಮತ್ತು ಅವರ

ಸರಳ ವ್ಯಕ್ತಿತ್ವವು ಭಾರತೀಯರ ಮೇಲೆ ತುಂಬ ಪರಿಣಾಮವನ್ನುಂಟು ಮಾಡಿದವು. ಗಾಂಧೀಜಿಯವರ ಆದರ್ಶದಲ್ಲಿಯೇ ಹರ್ಡೇಕಾರ್ ಮಂಜಪ್ಪ, ಗೋಪಾಲಸ್ವಾಮಿ ಅಯ್ಯರ್, ತಗಡೂರು ರಾಮಚಂದ್ರರಾಯರು, ಕಾರ್ನಾಡ್ ಸದಾಶಿವರಾವ್ ಮುಂತಾದ ಮಹನೀಯರು ಸುಧಾರಣಾ ಚಳುವಳಿ ನಡೆಸಿ ಪ್ರಗತಿಪರ ವಿಚಾರದ ಕಡೆ ಜನರ ಗಮನಹರಿಸಿದರು. ದಲಿತರ ಸ್ವಾಭಿಮಾನದ ಸಂಕೇತವಾಗಿ ಅಂಬೇಡ್ಕರ್ ಅವರು ಭಾರತೀಯ ದಲಿತರ ಮೇಲೆ ಗಾಢವಾಗಿ ಪ್ರಭಾವ ಬೀರಿದರು. ಪ್ರಜ್ಞಾವಂತ ದಲಿತೇತರರಿಗೂ ಅಂಬೇಡ್ಕರರ ವಿಚಾರಗಳು ಚಿಂತನೆಗೆ ಗುರಿ ಮಾಡಿದವು. ದಲಿತ ಬರಹಗಾರರಿಗಂತೂ ಅವರ ಅಚ್ಚಳಿಯದ ಪ್ರೇರಣೆಯಾದರು. ಹಿಂದೂ ಧರ್ಮದ ಅನಿಷ್ಟಗಳನ್ನು, ಅವಮಾನವೀಯತೆಯನ್ನು ಸ್ವತ: ಅನುಭವಿಸಿದ್ದ ಅವರು, ಅದೆಲ್ಲವನ್ನು ಉಗ್ರವಾಗಿ ತಿರಸ್ಕರಿಸುತ್ತ, ಭಾರತದಲ್ಲಿ ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಚಳುವಳಿಯನ್ನೇ ನಡೆಸಿ, ಬ್ರಾಹ್ಮಣ್ಯದ ಸಾಂಸ್ಕೃತಿಕ ಪ್ರಭುತ್ವವನ್ನು ಅಲುಗಾಡಿಸಲು ಕಾರಣರಾದರು. ಬ್ರಾಹ್ಮಣರು ಅಸಮಾನತೆಯನ್ನು ಕಾಯ್ದುಕೊಂಡು, ದಲಿತರನ್ನು ನಿಷ್ಕ್ರಿಯರನ್ನಾಗಿ ಮಾಡಿದ್ದರು. ಅವರಿಗೆ ಅಧಿಕಾರ ದೊರೆಯದಂತೆ ದಿಗ್ಬಂಧನ ಮಾಡಿದ್ದರು. ಮಹಿಳೆಯರಿಗೆ ಸ್ವಾತಂತ್ರ್ಯವನ್ನು ನಿರಾಕರಿಸಿದ್ದುದು ಮುಂತಾದ ವಿಚಾರಗಳನ್ನು ಬಯಲುಮಾಡಿ ಅಂಬೇಡ್ಕರ್ ಹೊಸಯುಗಕ್ಕಾಗಿ ಚಳುವಳಿಯನ್ನು ಹೂಡಿದರು.

ನಂತರ ಹಾವನೂರು ವರದಿ, ಬಸಲಿಂಗಪ್ಪನವರ ಬೂಸಾ ಪ್ರಕರಣದ ಜತೆಗೆ, ದಲಿತರ ತಲೆಯ ಮೇಲೆ ಮಲಹೊರುವುದನ್ನು ನಿಲ್ಲಿಸಲು ಪ್ರಬಲ ಹೇಳಿಕೆ ನೀಡಿದ್ದು ಮುಂತಾದವು ದಲಿತರ ಬದುಕಿನಲ್ಲಿ ಬದಲಾವಣೆಗೆ ದಾರಿ ಮಾಡಿದವು. 'ಜಾತಿ ವಿನಾಶ ಸಮ್ಮೇಳನ' ದಲ್ಲಿ ಕನ್ನಡದ ಮಹತ್ವದ ಲೇಖಕರೆಲ್ಲ ಕೂಡಿ ನಡೆಸಿದ ಸಮ್ಮೇಳನವು, ಹಲವು ಬರಹಗಾರರಿಗೆ ಮತ್ತು ಸಾಮಾನ್ಯರಿಗೆ ಅನೇಕ ರೀತಿಯಲ್ಲಿ ಪ್ರಚೋದನೆ ನೀಡಿತು. ಇವರೆಲ್ಲರ ಹಿಂದೆ ಲೋಹಿಯಾ ವಿಚಾರವಿತ್ತು. ಮುಂದೆ 'ಬರಹಗಾರರ ಮತ್ತು ಕಲಾವಿದರ ಒಕ್ಕೂಟ' ಕ್ಕೆ ದಾರಿಯೂ ಯಿತು. ಶೂದ್ರರ ಚಳುವಳಿಯು ದಲಿತರನ್ನು ಗಮನಕ್ಕೆ ತೆಗೆದುಕೊಳ್ಳಲಾರದ್ದಕ್ಕೆ, ದಲಿತರ ಪ್ರಗತಿಗೆ ಅನೇಕ ದಲಿತ ನಾಯಕರು ಪ್ರತ್ಯೇಕ ಆಂದೋಲನಕ್ಕೆ ನಿಂತರು. 'ಸತ್ಯಶೋಧಕ' ಎಂಬ ಸಂಘಟನೆಯು ಹಿಂದುಳಿದವರ ಉದ್ಧಾರಕ್ಕೆ ಅನೇಕ ಬಗೆಯಲ್ಲಿ ಹೋರಾಟ ನಡೆಸಿತು. ಜ್ಯೋತಿಬಾಫುಲೆ, ಅಂಬೇಡ್ಕರ್, ರಾಮಸ್ವಾಮಿ ನಾಯ್ಕರ್ ದಲಿತರಲ್ಲಿ ಸ್ವಾಭಿಮಾನ, ಆತ್ಮವಿಶ್ವಾಸ ಮೂಡಿಸಲು ಶ್ರಮಿಸಿದರು.

1970ರ ನಂತರ ಅನೇಕ ಬಗೆಯ ಧ್ಯೇಯೋದ್ದೇಶಗಳನ್ನು ಹೊತ್ತ ಸಂಘಟನೆಗಳು ಹುಟ್ಟಿಕೊಂಡವು. ದಲಿತ ಸಂಘರ್ಷ ಸಮಿತಿ — ದಲಿತ ವಿದ್ಯಾರ್ಥಿ ಒಕ್ಕೂಟ — ಸಮುದಾಯ — ದಲಿತ ಮಹಿಳಾ ಒಕ್ಕೂಟ — ದಲಿತ ಕಲಾ ಮಂಡಳಿ — ದಲಿತ ಬರಹಗಾರರ ಯುವ ಸಂಘಟನೆ ಇವು ಮುಖ್ಯವಾದವು. ಶೋಷಣೆರಹಿತ ಸಮಾಜದ ನಿರ್ಮಾಣಕ್ಕೆ ಇವೆಲ್ಲ ಹೋರಾಡಲು ನಿಂತವು. ಸಂಕ್ರಮಣ, ಅನ್ವೇಷಣೆ, ಮುಂಗಾರು, ಬಂಡಾಯ ಸಾಹಿತ್ಯ, ಪಂಚಮ, ಹೊಸ

ದಿಕ್ಕು, ಕೆಂಬಾವುಟ, ಐಕ್ಯರಂಗ ಮುಂತಾದ ಪತ್ರಿಕೆಗಳು ನೇರವಾಗಿಯೇ ಪ್ರಗತಿಪರ ಚಳುವಳಿಗೆ ಬೆಂಬಲವಿತ್ತು ಮುನ್ನಡೆಸಿದವು. ಶೋಷಣೆ ಎಂಬುದು ಈ ದೇಶದಲ್ಲಿ ಸಾವಿರಾರು ವರ್ಷಗಳ ಹಿಂದಿನಿಂದಲೂ ಇತ್ತು. ಹನ್ನೆರಡನೆಯ ಶತಮಾನದಲ್ಲಿ ಬಸವಾದಿ ಶರಣ ಸಮೂಹವು ನಿಬ್ಬೆರಗಾಗುವಂತೆ ಈ ಶೋಷಣೆಯ ವಿರುದ್ಧ ದನಿಯೆತ್ತಿದ್ದರು. ಆ ಶತಮಾನದ ನಂತರ ಇಪ್ಪತ್ತನೆಯ ಶತಮಾನದಲ್ಲಿ ಮಾತ್ರ ಪುನಃ ಸಾಹಿತ್ಯದಲ್ಲಿ ಒಂದು ಸ್ವಲ್ಪವಾಗಿ ಪ್ರತಿಭಟನೆ ಕಾಣಿಸಿತು.

ಬ್ರಾಹ್ಮಣೇತರರಾದ ಶೂದ್ರರಿಗೆ, ದಲಿತರಿಗೆ ಶಿಕ್ಷಣ ದಕ್ಕಿದ ಕಾರಣವಾಗಿ ಚರಿತ್ರೆಯಲ್ಲಿ ತಮಗಾದ ಅನ್ಯಾಯವನ್ನು ಸರಿಪಡಿಸಲು ಈ ಶತಮಾನದ ಹೊತ್ತಿನಲ್ಲಿಯೂ ಪುರಾಣ ಮತ್ತು ಚರಿತ್ರೆಯಲ್ಲಿಯ ವಸ್ತು ವಿಚಾರಗಳನ್ನು ಪುನಾರಚಿಸತೊಡಗಿದರು. ಕುವೆಂಪು ಶೂದ್ರರಾಗಿ ಹುಟ್ಟಿದ ಕಾರಣವಾಗಿ ಅನೇಕ ರೀತಿಯಲ್ಲಿ ಶೂದ್ರರಿಗಾದ ಅನ್ಯಾಯಗಳನ್ನು, ಅವಮಾನಗಳನ್ನು ಅರಿತುಕೊಂಡೇ, ಹಿಂದೂ ಧರ್ಮದಲ್ಲಿದ್ದ ಎಷ್ಟೋ ಅನಿಷ್ಟ ಅಂಶಗಳ ಬಗ್ಗೆ ಬಹಿರಂಗವಾಗಿ ಖಂಡಿಸಿ, ಅನೇಕ ಕೃತಿಗಳನ್ನು, ವೈಚಾರಿಕ ಲೇಖನಗಳನ್ನು ಬರೆದರು. ಪುರಾಣ ಮತ್ತು ಚರಿತ್ರೆಯಲ್ಲಿ ಆದ ಅನ್ಯಾಯವನ್ನು ಬರೀ ಖಂಡಿಸಿ ಕೈಬಿಡಲಿಲ್ಲ (ಶರಣರು ಬರೀ ತೆಗಳಿದರು ಮಾತ್ರ) ಅದೇ ಪುರಾಣ ಮತ್ತು ಚರಿತ್ರೆಯ ವಸ್ತುವನ್ನು ಎತ್ತಿಕೊಂಡು ಪುನರ್ ವ್ಯಾಖ್ಯಾನ ಮಾಡಿದರು. 'ಶೂದ್ರ ತಪಸ್ವಿ', 'ಬೆರಳ್ ಗೆ ಕೊರಳ್' ಒಂದು ಬಗೆಯ ಮರುವ್ಯಾಖ್ಯಾನಕ್ಕೆ ಒಳಗಾದರೆ, ಅವರ ಮಹಾಕಾವ್ಯ 'ರಾಮಾಯಣ ದರ್ಶನಂ' ಇನ್ನೊಂದು ಬಗೆಯದು. ಇದೇ ಧೋರಣೆಯೇ ಇನ್ನೂ ತೀವ್ರವಾಗಿ ಬೆಳವಣಿಗೆ ಹೊಂದಿದ್ದು ಬಂಡಾಯ-ದಲಿತ ಸಾಹಿತ್ಯ ಸಂದರ್ಭದಲ್ಲಿಯೂ ಕಾಣಬಹುದು. ಈ ಒಟ್ಟು ಸಂದರ್ಭದಲ್ಲಿ ಕಾಣುವ ಮುಖ್ಯ ತಾತ್ವಿಕ ನೆಲೆಗಳನ್ನು ಡಾ. ರಹಮತ್ ತರೀಕೆರೆಯವರು ಹೀಗೆ ಗುರುತಿಸುತ್ತಾರೆ: (1) ''ಏಕಲವ್ಯ, ಶಂಬೂಕ, ಧ್ರುವ, ವೇನ, ಕವಷ, ಐಲೂಷ, ಸತ್ಯಕಾಮ, ಶುನಶ್ಯೇಫ, ಕರ್ಣ (ಕನಕದಾಸ) ವಿಶ್ವಾಮಿತ್ರ, ವಾಲಿ, ಅಹಲ್ಯೆ, ಸೀತೆ, ಶೂರ್ಪನಖಿ, ಅಂಬೆ, ದ್ರೌಪದಿ, ರೇಣುಕ, ಬಲಿ, ಹೀಗೆ ಆಳುವ ವ್ಯವಸ್ಥೆಯಿಂದ ಪ್ರಹಾರಕ್ಕೊಳಗಾದ, ಸೋತು ಸಹಿಸಿದ, ಎದುರಿಸಿ ಗೆದ್ದ ಅಥವಾ ಸತ್ತ ಪಾತ್ರಗಳನ್ನು ಪ್ರೀತಿಯಿಂದ ಸಹಾನುಭೂತಿಯಿಂದ ಚಿತ್ರಿಸುವುದು; ಇವರನ್ನು ನಾಯಕರಾಗಿ ನೋಡುವುದು. 2) ಈ ಮೇಲ್ಕಂಡವರನ್ನು ಕೊಂದ ಅಥವಾ ಅದುಮಿದ ರಾಮ, ವಸಿಷ್ಠ, ಜಮದಗ್ನಿ, ಗೌತಮ, ಪರುಶುರಾಮ, ವಾಮನ, ನರಸಿಂಹ, ಹರಿಶ್ಚಂದ್ರ-ಇವರನ್ನು ಆಳುವ ವ್ಯವಸ್ಥೆಯ ದೌರ್ಜನ್ಯದ ಪ್ರತೀಕಗಳಂತೆ ಭಾವಿಸುವುದು. 3) ಯಜ್ಞ-ಯಾಗ, ದೇವತೆ, ಗೋವು ಋಷಿ-ತಪಸ್ಸು, ವೇದ, ಕುರಾನ್, ರಾಜ, ಯಜ್ಞದ ಕುದುರೆ, ದೇವಸ್ಥಾನ, ಮಸೀದಿ ಇತ್ಯಾದಿ ಪವಿತ್ರೀಕರಿಸಿದ ಸಂಗತಿಗಳನ್ನು — ಮಾನವೀಯತೆಯ ಕಾರಣಕ್ಕಾಗಿಯೇ ಅಪವಿತ್ರೀಕರಿಸುವುದು, ಅಮುಖ್ಯಗೊಳಿಸುವುದು.''[2]

ಅಂದರೆ ಒಂದು ಸಂಸ್ಕೃತಿಯ ಒಳಗಡೆ ಸಮಾಜವು ಪರಿವರ್ತನೆಗೊಳ್ಳುವುದೇ ಕಾರಣವಾಗಿದೆ. ವೈಚಾರಿಕ ಸಂಘರ್ಷದಿಂದ ಈ ಶತಮಾನದಲ್ಲಿ ಆದ ಅನೇಕ ಆಂದೋಲನೆಗಳೇ ಪುರಾಣ ಮತ್ತು ಚರಿತ್ರೆಗಳು ಮರುವ್ಯಾಖ್ಯಾನಕ್ಕೆ ಗುರಿಯಾಗಲು ಕಾರಣವಾಗಿದೆ.

ವ್ಯಾಸ ಮಹಾಭಾರತದಲ್ಲಿ ಬರುವ 'ಏಕಲವ್ಯನ ಹೆಬ್ಬೆರಳನ್ನು ದ್ರೋಣ ಪಡೆದನು. ಈ ಪ್ರಸಂಗ-ವನ್ನು 'ಏಕಲವ್ಯನ ಗುರುಭಕ್ತಿ, ತ್ಯಾಗ ಎಂದೆಲ್ಲ ಹೇಳುತ್ತ ಬಂದರು. ಇದು ದ್ರೋಣರ ಅಮಾನವೀಯತೆ ಮತ್ತು ಆಳುವ ವರ್ಗದವರ ದಮನ ಕಾರ್ಯ ಎಂದು ಗ್ರಹಿಸುವ ಈ ಹೊತ್ತಿನ ವಾತಾವರಣ. ಹೀಗೆ ಒಟ್ಟು 'ಏಕಲವ್ಯ ಮತ್ತು ದ್ರೋಣನ ನಡುವೆ ನಡೆದ ಪ್ರಸಂಗವನ್ನು ಎತ್ತಿಕೊಂಡು ಕನ್ನಡದ ಬರಹಗಾರರು ಭಿನ್ನ ಭಿನ್ನ ಆಶಯಗಳೊಂದಿಗೆ ಕೃತಿ ರಚಿಸಿದ್ದಾರೆ. ಗೋವಿಂದ ಪೈ, ಕುವೆಂಪು, ಕೈಲಾಸಂ, ವಜ್ರಮಟ್ಟಿ, ಸಿದ್ದಲಿಂಗಯ್ಯ, ಸತ್ಯಾನಂದ ಪಾತ್ರೋಟ, ಎಸ್.ಎಲ್.ಭೈರಪ್ಪ, ಜ.ಹೊ.ನಾರಾಯಣಸ್ವಾಮಿ ಮುಂತಾದವರ ಕೃತಿಗಳಲ್ಲಿ ವ್ಯಕ್ತವಾಗುವ ಆಶಯಗಳನ್ನು ಗುರುತಿಸುವ ಪ್ರಯತ್ನ ಮುಂದಿನ ಅಧ್ಯಾಯಗಳಲ್ಲಿದೆ.

ಅಡಿ ಟಿಪ್ಪಣಿಗಳು

1) ಡಾ.ಪುರುಷೋತ್ತಮ ಬಿಳಿಮಲೆ: ಬಂಡಾಯ-ದಲಿತ ಸಾಹಿತ್ಯ(1990) ಕರ್ನಾಟಕ ಸಾಹಿತ್ಯ ಅಕಾಡೆಮಿ. ಪುಟ-27

2) ಡಾ.ರಹಮತ್ ತರೀಕೆರೆ : ಕನ್ನಡ ಸಾಹಿತ್ಯದಲ್ಲಿ ಚರಿತ್ರೆ ಮತ್ತು ಪುರಾಣ (1993) (ಲೇಖನ: 'ದಲಿತ-ಬಂಡಾಯ ಸಾಹಿತ್ಯದಲ್ಲಿ ಪುರಾಣದ ಪುನರ ವ್ಯಾಖ್ಯಾನ ಹಾಗೂ ಹೊಸ ಚರಿತ್ರೆಯ ಆಶಯ) ಕರ್ನಾಟಕ ಸಾಹಿತ್ಯ ಅಕಾಡೆಮಿ: ಪುಟ-1992.

ಕನ್ನಡ ಸಾಹಿತ್ಯದಲ್ಲಿ ಪುರಾಣ ಮತ್ತು ಚರಿತ್ರೆಯ ಮರುವ್ಯಾಖ್ಯಾನಗಳು: ಒಂದು ಹಿನ್ನೆಲೆ.

ಹತ್ತನೆಯ ಶತಮಾನದಿಂದ ಪ್ರಾರಂಭವಾಗುವ ಕನ್ನಡ ಸಾಹಿತ್ಯವು ಒಂದಲ್ಲ ಒಂದು ಕಾರಣದಿಂದ ಅದು ಪಡೆದುಕೊಂಡ ವಸ್ತು ಪುರಾಣ ಮತ್ತು ಮಹಾಕಾವ್ಯಗಳಿಂದ ಆಯ್ದು ಕೊಂಡದ್ದಾಗಿದೆ. ಪುರಾಣಗಳು, ರಾಮಾಯಣ, ಮಹಾಭಾರತದಂಥ ಮಹಾಕಾವ್ಯಗಳು ಮನುಷ್ಯ ಸಂಸ್ಕೃತಿಯ ಮುಖ್ಯ ಅಂಗಗಳೇ ಆಗಿವೆ. ಇದರಿಂದ ಒಂದು ಜನಾಂಗವನ್ನು ಅರ್ಥ ಮಾಡಿಕೊಳ್ಳಬೇಕಾದರೆ ಮೊದಲು ಇವುಗಳನ್ನು ಅಧ್ಯಯನ ಮಾಡುವ ಅಗತ್ಯವಿದೆ. ಭಾರತೀಯ ಭಾಷಾ ಸಾಹಿತ್ಯದ ಮೇಲೆ ಪುರಾಣಗಳು ಮತ್ತು ಮಹಾಕಾವ್ಯಗಳು ಅಗಾಧವಾದ ರೀತಿಯಲ್ಲಿ ಪರಿಣಾಮ ಬೀರಿದವು. ಕವಿಗಳ ಸೃಜನಶೀಲ ಸಾಮರ್ಥ್ಯದ ಅಭಿವ್ಯಕ್ತಿಗೆ ಪೂರಕವೂ ಆದವು. ಸವಾಲುಗಳೂ ಆದವು. ಇವುಗಳಿಂದ ಸ್ಫೂರ್ತಿ ಪಡೆಯದೆ ಇರುವ ಯಾವುದೇ ಒಂದು ಜನಾಂಗದ, ಭಾಷಾ ಸಾಹಿತ್ಯದ ಪರಂಪರೆ ಇದೆ ಎಂಬುದಿಲ್ಲ. ಯಾಕೆಂದರೆ ಇವುಗಳಲ್ಲಿ ಕಾಲಮಾನದ ಚಿಂತನೆಗಳಿವೆ. ಬದುಕಿಗೆ ಅಗತ್ಯವಾದ ನೀತಿ, ಆದರ್ಶಗಳ ಮಾದರಿಗಳಿವೆ. ಈ ಕಾರಣದಿಂದ ಇವು ಸಂವಹನಗೊಳ್ಳುತ್ತಲೇ ಬೆಳೆಯುತ್ತಿವೆ.

ನಮ್ಮಲ್ಲಿ ರಾಮಾಯಣ, ಮಹಾಭಾರತಗಳನ್ನು 'ಪುರಾಣ'ಗಳೆಂದೇ ಕರೆಯಲಾಗುತ್ತದೆ. ವಾಲ್ಮೀಕಿ, ವ್ಯಾಸ ಇವರು ಜನಪದರ ಮೌಖಿಕ ಕಥಾಪರಂಪರೆಗಳಿಂದ ವಸ್ತು ಎತ್ತಿಕೊಂಡೇ ತಮ್ಮ ಕಾವ್ಯಗಳನ್ನು ರಚಿಸಿದ್ದಾರೆ. ಸಂಸ್ಕೃತ ಕವಿಗಳಾದ ಭಾಸ, ಕಾಳಿದಾಸರೂ ಕೂಡ ಈ ಮಹಾಕಾವ್ಯಗಳಿಂದಲೇ ವಸ್ತು-ತಂತ್ರಾದಿಗಳನ್ನು ಆಯ್ದುಕೊಂಡು ತಮ್ಮ ಸಾಹಿತ್ಯವನ್ನು ರಚಿಸಿದ್ದಾರೆ. ಭಾರತದ ಎಲ್ಲ ಪ್ರಾದೇಶಿಕ ಭಾಷಾ ಸಾಹಿತ್ಯದಲ್ಲಿ ಈ ಪುರಾಣಗಳು, ಮಹಾಕಾವ್ಯಗಳು ಸಂವಹನಗೊಳ್ಳುತ್ತ ಆಯಾ ಕಾಲದ ಅಗತ್ಯಗಳಿಗೆ ಅನುಗುಣವಾಗಿ ಸೃಷ್ಟಿಯಾಗುತ್ತ ಸ್ವತಂತ್ರ ಕೃತಿಗಳೆನಿಸಿಕೊಂಡಿವೆ, ಸೃಜನಶೀಲ ರಚನೆಗಳೆನಿಸಿಕೊಂಡಿವೆ.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಪಂಪನಿಂದ ಹಿಡಿದು, ಈ ಹೊತ್ತಿನ ಆಧುನಿಕ ಸಾಹಿತ್ಯವನ್ನು ಅವಲೋಕಿಸಿದರೆ, ಪುರಾಣ ಮತ್ತು ಚರಿತ್ರೆಯಿಂದ ವಸ್ತುವನ್ನು ಪಡೆದುಕೊಂಡಿರುವುದು ಕಾಣುತ್ತದೆ. ಪುರಾಣ ಮತ್ತು ಚರಿತ್ರೆಯು ಮತ್ತೆ ಮತ್ತೆ ಸಾಹಿತ್ಯದಲ್ಲಿ ಪುನಾರಚನೆಯಾಗುತ್ತಿರುವುದು ಕುತೂಹಲಕಾರಿಯಾದ ಸಂಗತಿಯಾಗಿದೆ. ನಿರೂಪಣೆ ಮತ್ತು ವ್ಯಾಖ್ಯಾನ ಎರಡೂ ನೆಲೆಯಲ್ಲಿ ಇದು ಅಭಿವ್ಯಕ್ತವಾಗುತ್ತಾ ಮುಂದುವರಿದಿದೆ. ಆದಿಕವಿ ಪಂಪನು ತನ್ನ ಎರಡು ಕಾವ್ಯಗಳಿಗೆ ಆಧರಿಸಿದ ವಸ್ತುವು, ಪುರಾಣ ಮತ್ತು ಮಹಾಕಾವ್ಯಗಳಿಂದಲೇ; 'ಪಂಪಭಾರತ' ಕ್ಕೆ ವ್ಯಾಸನ ಮಹಾಭಾರತವನ್ನು ಆಶ್ರಯಿಸಿದ್ದಾನೆ. ಮಹಾಭಾರತದ 'ವಸ್ತು' ವನ್ನು ಆಧರಿಸಿದ್ದರೂ, ಪಂಪ ತನ್ನ ಯುಗದ ಧರ್ಮವನ್ನು ಪ್ರತಿಪಾದಿಸಿರುವುದರಿಂದ ಅದೊಂದು

ಶ್ರೇಷ್ಠ ಸೃಜನಶೀಲ ರಚನೆಯಾಗಿದೆ. ಪಂಪನ ವೈಶಿಷ್ಟ್ಯವೆಂದರೆ, ಸಮಸ್ತ ಭಾರತವನ್ನು ಹೇಳಿರುವುದು, ತನ್ನ ಕಾಲದ ಮೌಲ್ಯಗಳನ್ನು ಎತ್ತಿ ಹಿಡಿದಿರುವುದು, ಕನ್ನಡ ನಾಡಿನ ಚರಿತ್ರೆಯ ನಾಯಕನಾದ ಅರಿಕೇಸರಿಯನ್ನು ಕಥಾ ನಾಯಕ ಅರ್ಜುನನೊಂದಿಗೆ ಅಭೇದವಾಗಿ ಸಂಯೋಜಿಸಿರುವುದು. ಈ ಮೂರರಲ್ಲಿ ಕೊನೆಯದು ಬಹುಮುಖ್ಯ ಅಂಶ. ಪಾಂಡವರಲ್ಲಿ ನಾಯಕ ಧರ್ಮರಾಯನಾಗಿ ಕಂಡರೂ, ಮಧ್ಯಮ ಪಾಂಡವನಾದ ಅರ್ಜುನನನ್ನೇ ಆಯ್ದುಕೊಂಡು ನಾಯಕನನ್ನಾಗಿ ಮಾಡಿದ್ದು ವಿಶೇಷವಾಗಿದೆ. ಕಾರಣವೆಂದರೆ, ತನ್ನ ಆಶ್ರಯದಾತನಾದ ಅರಿಕೇಸರಿಯ ಸಲುವಾಗಿ. ಅರ್ಜುನನೂ ಪರಾಕ್ರಮಿ, ಅರಿಕೇಸರಿಯೂ ಪರಾಕ್ರಮಿ. ಅರ್ಜುನನಲ್ಲಿ ಅರಿಕೇಸರಿಯನ್ನಿಟ್ಟು 'ವಿಕ್ರಮಾರ್ಜುನ ವಿಜಯ' ಎಂದು ಕರೆಯುತ್ತಾನೆ. ಹೀಗಾಗಿ ಹತ್ತನೆಯ ಶತಮಾನದ ವೀರಯುಗಕ್ಕೆ ಅನುಗುಣವಾಗಿ ಕಾವ್ಯ ಸ್ಪಂದಿಸುತ್ತದೆ. ಕುಲದ ಬಗ್ಗೆ ಕರ್ಣ ತಳೆಯುವ ನಿಲುವೇ ಪಂಪನ ಮುಖ್ಯ ಆಶಯವಾಗಿಯೂ ವ್ಯಕ್ತವಾಗುತ್ತದೆ. ಪಂಪನ ಕಾವ್ಯ ಮಾರ್ಗವನ್ನು ಮುಂದಿನ ರನ್ನ ಮತ್ತಿತರ ಕವಿಗಳು ಅನುಸರಿಸಿದ್ದಾರೆ.

ಜೈನ ಕವಿಯಾದ ಪಂಪ ತನ್ನ ಧರ್ಮವನ್ನು ಪ್ರಸಾರ ಮಾಡಲು ಆಗಮಿಕ ಕಾವ್ಯ 'ಆದಿಪುರಾಣ' ವನ್ನು ಬರೆದನು. ಇದಕ್ಕೆ ಮೂಲ ವಸ್ತು 'ಪೂರ್ವ ಪುರಾಣ' ದಿಂದ ಆಯ್ದುಕೊಂಡದ್ದು. ಜಿನಸೇನಾಚಾರ್ಯರ 'ಪೂರ್ವ ಪುರಾಣ' ವು ಜೈನರಿಗೆ ಪೂಜ್ಯರಾದ ತ್ರಿಷಷ್ಟಿ ಶಲಾಕಾ ಪುರುಷರ ದಿವ್ಯ ಬದುಕನ್ನು ಒಳಗೊಂಡಿದ್ದು. ತ್ರಿಷಷ್ಟಿ ಶಲಾಕಾ ಪುರುಷರಲ್ಲಿ ಇಪ್ಪತ್ನಾಲ್ಕು ಜನ ತೀರ್ಥಂಕರರು ಇರುತ್ತಾರೆ. ಇವರಲ್ಲಿ ಮೊದಲನೆಯ ತೀರ್ಥಂಕರನಾದ ಆದಿನಾಥನ ದಿವ್ಯಚರಿತ್ರೆಯನ್ನು ಪಂಪ ತನ್ನ 'ಆದಿ ಪುರಾಣ'ದಲ್ಲಿ ರಚಿಸಿದ್ದಾನೆ. ಪಂಪ ಸಮರ್ಥ ಕವಿಯಾಗಿರುವುದರಿಂದ ಅದು ಪುರಾಣದ ಕ್ಕಿಂತ, ಅದರ ಕಾವ್ಯ ಗುಣದಿಂದ ಜನಪ್ರಿಯವಾಗಿದೆ. ಕೆಲವು ವಿಮರ್ಶಕರ ದೃಷ್ಟಿಯಲ್ಲಿ 'ಆದಿ ಪುರಾಣ'ವೇ ಶ್ರೇಷ್ಠ ಕಾವ್ಯವಾಗಿದೆ.

ಜೈನ ಕವಿಗಳು ಮಹಾಭಾರತವನ್ನು ಬರೆದಂತೆ ರಾಮಾಯಣಗಳನ್ನು ಬರೆದಿದ್ದಾರೆ. [illegible] ಆಶ್ರಯಿಸುವ ಮೂಲಕ ಅಲ್ಲಿಯ ಧರ್ಮಾಚರಣೆಗಳನ್ನೇ ಆಧರಿಸಿ ವೈದಿಕ ರಾಮಾಯಣಗಳು ರಚಿತವಾಗಿ ಒಂದು ಪರಂಪರೆಗೆ ಕಾರಣವಾದಂತೆ, ಜೈನ ಧರ್ಮದ ಉದ್ದೇಶಕ್ಕನುಗುಣವಾಗಿ ಜೈನ ರಾಮಾಯಣಗಳ ಪರಂಪರೆಯೊಂದಿದೆ. ವಿಮಲಸೂರಿ ಪ್ರಾಕೃತದಲ್ಲಿ ಬರೆದ 'ಪಉಮಚರಿಯ' ಮತ್ತು ಗುಣಭದ್ರಾಚಾರ್ಯರು ಸಂಸ್ಕೃತದಲ್ಲಿ ರಚಿಸಿದ 'ಉತ್ತರ ಪುರಾಣ'. ಕನ್ನಡದಲ್ಲಿ ಈ ಎರಡು ಪುರಾಣಗಳ ಪ್ರಭಾವವೂ ಕಾಣಿಸಿಕೊಂಡಿದೆ. ಅಭಿನವ ಪಂಪ ನಾಗಚಂದ್ರ ರಚಿಸಿದ 'ರಾಮಚಂದ್ರ ಚರಿತ ಪುರಾಣ'ವು ಉಪಲಬ್ಧವಾದ ಮೊಟ್ಟಮೊದಲ ಕನ್ನಡ ರಾಮಾಯಣ. ನಾಗಚಂದ್ರ ವ್ಯಕ್ತಪಡಿಸಿದ ಕ್ರಮವನ್ನು ನೋಡಿದರೆ, ಜೈನ ಕವಿಯಾಗಿ ತನ್ನ ಧರ್ಮದ ಆಶಯಕ್ಕನುಗುಣವಾಗಿ ವ್ಯಾಖ್ಯಾನಿಸಿದ್ದಾನೆ. ಇಲ್ಲಿಯ ಕಥಾನಿರೂಪಣೆ ಮತ್ತು ಪಾತ್ರ ಚಿತ್ರಣಗಳು ವಾಲ್ಮೀಕಿ ರಾಮಾಯಣಕ್ಕಿಂತ ತೀರಭಿನ್ನವಾಗಿವೆ. ಉದಾತ್ತ ರಾಘವನ ಕಥೆಯಾಗಿದೆ.

ಇದರಲ್ಲಿ ರಾಮನು ಜೈನರ ತ್ರಿಷಷ್ಟಿಶಲಾಕಾಪುರುಷರಲ್ಲಿ ಒಬ್ಬನಾದ ಬಲದೇವ-ವಾಸುದೇವನೇ ಲಕ್ಷ್ಮಣ. ರಾವಣನು ಪ್ರತಿ ವಾಸುದೇವ. ರಾಮನು ರಾವಣನನ್ನು ಕೊಲ್ಲುವುದಿಲ್ಲ. ಬದಲಾಗಿ ಲಕ್ಷ್ಮಣನೇ ರಾವಣನನ್ನು ಕೊಲ್ಲುತ್ತಾನೆ. ಸೀತೆಯು ಅಯೋನಿಜೆಯಲ್ಲ. ಪ್ರಭಾಮಂಡಲನ ತಂಗಿ; ಜನಕನ ಔರಸ ಪುತ್ರಿ. ರಾವಣನು ಸೀತೆಯನ್ನು ಬಯಸಿದುದು, ಕೇವಲ ಆಕಸ್ಮಿಕವೇ ಹೊರತು ಇನ್ಯಾವುದೇ ಉದ್ದೇಶದಿಂದಲ್ಲ. ಕೊನೆಯಲ್ಲಿ ರಾವಣನೇ ಸೀತೆಯನ್ನು ರಾಮನಿಗೆ ಒಪ್ಪಿಸಿ ತಪ್ಪಿಗೆ ಪಶ್ಚಾತ್ತಾಪ ಪಡುವ ಮನಸ್ಥಿತಿಯಲ್ಲಿರುವಾಗ, ರಾಮ — ರಾವಣರ ನಡುವೆ ಯುದ್ಧ 'ಏರ್ಪಟ್ಟು, ಲಕ್ಷ್ಮಣನಿಂದ ರಾವಣ ಸಾವಿಗೀಡಾಗುತ್ತಾನೆ. ಸುಗ್ರೀವ ಹನುಮಂತಾದಿಗಳು ಕಪಿಗಳಲ್ಲ, ಕಪಿಧ್ವಜರು. ಇವರು ಸಮುದ್ರವನ್ನು ಆಕಾಶಗಾಮಿನೀ ವಿದ್ಯೆಯಿಂದ ದಾಟುತ್ತಾರೆ. ಈ ಕಪಿಧ್ವಜರು ರಾಕ್ಷಸರ ಬಂಧುಗಳು. ಹನುಮಂತ ರಾವಣನ ತಂಗಿಯ ಅಳಿಯ ಮತ್ತು ಆತ ಸನ್ಯಾಸಿಯಲ್ಲ. ರಾಮನೂ 'ಏಕಪತ್ನಿವ್ರತಸ್ಥನಲ್ಲ — ಈ ಎಲ್ಲ ಸಂಗತಿಗಳಿವೆ. ಅಷ್ಟೇ ಅಲ್ಲ ಪುತ್ರಕಾಮೇಷ್ಠಿಯಾಗ, ಚಿನ್ನ ಜಿಂಕೆಯ ಪ್ರಸಂಗ, ಮಂಥರೆಯ ಪ್ರಸಂಗ ಇವು ಯಾವುವೂ ಇಲ್ಲ. ಹೀಗೆ ಅನೇಕ ಸೂಕ್ಷ್ಮ ವ್ಯತ್ಯಾಸಗಳು ಇಲ್ಲಿ ಇರುವುದರಿಂದ ವಾಲ್ಮೀಕಿ ರಾಮಾಯಣಕ್ಕಿಂತ ಭಿನ್ನವಾದ ಜೈನ ಪರಂಪರೆಯ ರಾಮಾಯಣಗಳನ್ನು ಸಂಸ್ಕೃತ — ಪ್ರಾಕೃತಗಳಲ್ಲಿ ವಿಮಲಸೂರಿ, ರವಿಷೇಣ, ಹೇಮಚಂದ್ರ ಬರೆದಿದ್ದಾರೆ. ನಾಗಚಂದ್ರನು ಇವರ ವಸ್ತುವನ್ನೇ ಎತ್ತಿಕೊಂಡು ಕನ್ನಡದಲ್ಲಿ ರಚಿಸಿದ್ದಾನೆ. ಇಲ್ಲಿ ರಾವಣನ ಪಾತ್ರ ವಿಶೇಷವಾದದ್ದು. ಅವನು ಮಹಾಪುರುಷ ಮತ್ತು 'ಪರಾಂಗನಾವಿರತಿ ವ್ರತ'ವನ್ನು ಕೈ ಹಿಡಿದವನು.

ಇದರಂತೆಯೇ ಜೈನ ದೃಷ್ಟಿಯಿಂದ ಹುಟ್ಟಿಕೊಂಡ ಭಾರತಗಳೂ ಇವೆ. ಹದಿನಾರನೆಯ ಶತಮಾನದ 'ಸಾಳ್ವಭಾರತ'ವು ಮೊದಲ ಜೈನ ಭಾರತವಾಗಿದೆ. ಇದಕ್ಕೆ ಮೂಲವಾದುದು 'ಹರಿವಂಶ ಪುರಾಣ'. ಇದು ಎಂಟನೆಯ ಶತಮಾನದಲ್ಲಿದ್ದ ಜಿನಸೇನಾಚಾರ್ಯನದು. ಹರಿವಂಶ — ಕುರುವಂಶಗಳ ಕತೆ ಇದರಲ್ಲಿ ಜೈನ ದೃಷ್ಟಿಯಿಂದ ನಿರೂಪಿತವಾಗಿದೆ. ಜೈನ ರಾಮಾಯಣಗಳು ಹೇಗೆ ವಾಲ್ಮೀಕಿಯಿಂದ ಭಿನ್ನವಾಗಿ ನಿರೂಪಿತವಾದವೋ ಹಾಗೆಯೇ ಇಲ್ಲಿ ಜೈನರು ಯಥಾಶಕ್ತಿಯಾಗಿ ಬದಲಾವಣೆಗಳನ್ನು ಮಾಡಿಯೇ ರಚಿಸಿದ್ದಾರೆ. 'ಕುರುವಂಶದಲ್ಲಿ ಪ್ರಸಿದ್ಧನಾದ ಪರಾಶರನಿಗೆ ಸತ್ಯವತಿಯಲ್ಲಿ ಯಶೋವಲ್ಲಭನಾದ ವ್ಯಾಸನು ಹುಟ್ಟಿದನು. ವ್ಯಾಸ ಮತ್ತು ಸುಭದ್ರೆಯರಿಗೆ ಧೃತರಾಷ್ಟ್ರ, ಪಾಂಡು, ವಿದುರರೆಂಬ ಮಕ್ಕಳಾದರು. ಪಾಂಡುವಿಗೆ ಕುಂತಿಯಲ್ಲಿ ಮೋಹ ಹುಟ್ಟಿ ವಿದ್ಯಾಧರನೊಬ್ಬನ ಕಾಮಮುದ್ರಿಕೆ ಹುಟ್ಟಿತು. ಆ ಮಗುವನ್ನು ಹೊನ್ನ ಪೆಟ್ಟಿಗೆಯಲ್ಲಿರಿಸಿ ಯಮುನಾ ನದಿಯಲ್ಲಿ ಬಿಟ್ಟಳು. ಆದಿತ್ಯನೆಂಬ ಅರಸ ತನ್ನ ಉಪ್ಪರಿಗೆಯ ಮೇಲೆ ನಿಂತು ತೇಲಿ ಬರುತ್ತಿದ್ದ ಪೆಟ್ಟಿಗೆ

ಯನ್ನು ತರಿಸಿ ತೆಗೆದು ನೋಡಲು ಹೊಳೆಯುತ್ತಿದ್ದ ಮಗುವನ್ನು ನೋಡಿ, ಸಂತೋಷಗೊಂಡು ರಾಣಿಯರನ್ನು ಕರೆಸಿ, ಕಿವಿಹಿಡಿದು ರಾಧೆಯ ಕೈಗೆ ಕೊಡಲು ಕರ್ಣ, ರಾಧೇಯ ಎಂಬ ಹೆಸರು ಬಂದವು."[1] ಇದನ್ನು ನೋಡಿದರೆ ಮಹಾಭಾರತ ತಿಳಿದಿರುವ ಯಾರಿಗೂ ವ್ಯಾಸಭಾರತ ಕಥೆಗೆ ಎಂಥ ಸ್ವರೂಪ ಒದಗಿದೆ ಎಂದು ಆಶ್ಚರ್ಯ ಮತ್ತು ಕುತೂಹಲ ಉಂಟಾಗುತ್ತದೆ; "ಮೂಲ ಪಥ್ಯದ ಪುರಾಣವು, ಸೂಕ್ಷ್ಮ ಪಥ್ಯವಾದ ಸಾಹಿತ್ಯ ಕೃತಿಯಲ್ಲಿ ಬಹುಮುಖ ನೆಲೆಯನ್ನು ಪಡೆಯುತ್ತದೆ"[2] ಈ ಸೂಕ್ಷ್ಮ ಪಥ್ಯಕ್ಕೆ ಕವಿಯ ಪ್ರತಿಭೆಯಷ್ಟೇ ಕಾರಣವಲ್ಲ. ಆ ಕಾಲದ ಚಾರಿತ್ರಿಕ ಸಾಂಸ್ಕೃತಿಕ ಒತ್ತಡಗಳೂ ಕಾರಣವಾಗಿರುತ್ತವೆ.
ಹೀಗೆ ~~[illegible]~~ ಕನ್ನಡ ಪ್ರಾಚೀನ ಕವಿಗಳು ತಮ್ಮ ಸಾಹಿತ್ಯಕ್ಕೆ ಪುರಾಣದಿಂದ ಮಹಾಕಾವ್ಯಗಳಿಂದ ವಸ್ತುವನ್ನು ಒದಗಿಸಿಕೊಂಡರೂ ಅಲ್ಲಿ ಕಾಲದ ಸಾಂಸ್ಕೃತಿಕ ಅಗತ್ಯವನ್ನು ಮನಗಂಡು ಭಿನ್ನ ನೆಲೆಯಿಂದ, ಭಿನ್ನ ಆಯಾಮಗಳಿಂದ ಪುನರ್ ಸೃಷ್ಟಿಸಿದರು.

ಹನ್ನೆರಡನೆಯ ಶತಮಾನದಲ್ಲಿ ಸಾಹಿತ್ಯಕ ವಾತಾವರಣ ತೀರಾ ಬದಲಾಯಿತು. ಶಿವಶರಣರು ವಚನಗಳನ್ನು ಬರೆಯುವದರ ಮೂಲಕ ಸಾಹಿತ್ಯಕ್ಕೆ ಹೊಸ ಆಯಾಮವನ್ನು ಕಲ್ಪಿಸಿದರು. ವಸ್ತು, ಭಾಷೆ ಮತ್ತು ನಿರೂಪಣೆಯ ದೃಷ್ಟಿಯಿಂದ ಹಿಂದಿನ ಸಾಹಿತ್ಯಕ್ಕಿಂತ ಸಮಗ್ರವಾಗಿ ಬದಲಾಯಿತು. ಹಾಗೆ ನೋಡಿದರೆ ಸಾಹಿತ್ಯ ರಚಿಸುವದೇ ಅವರ ಗುರಿಯಾಗಿರಲಿಲ್ಲ. ಶರಣರು ಮನುಷ್ಯ ಬದುಕಿಗೆ ಹೊಸ ಶಕ್ತಿ ಒದಗಿಸುವ ಮೂಲಕ ಒಂದು ಸಾಂಸ್ಕೃತಿಕವಾದ ಒಂದು ಹೊಸ ತಿರುವು ಸೃಷ್ಟಿಸಿದರು. ಅಲ್ಲಿಯವರೆಗಿದ್ದ ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ವಾತಾವರಣಕ್ಕೆ ವಿರುದ್ಧವಾಗಿ ಬೇರೆಯದೇ ಒಂದು ವ್ಯವಸ್ಥೆಯನ್ನು ಹುಟ್ಟುಹಾಕುವ ಸಲುವಾಗಿ, ಹಿಂದಿದ್ದ ಬಹುತೇಕ ಮೌಲ್ಯಗಳನ್ನು ತಿರಸ್ಕರಿಸಿ, ಅವುಗಳ ಸ್ಥಳದಲ್ಲಿ ತಮ್ಮದೇ ಆದ ವ್ಯವಸ್ಥೆಯೊಂದನ್ನು ಸ್ಥಾಪಿಸಲು ಹೆಣಗಿದರು. ಬಸವಣ್ಣನ ನೇತೃತ್ವದಲ್ಲಿ ಅಸಂಖ್ಯಾತ ಜನ ಶರಣರು, ಸಾಮಾಜಿಕ ಬದಲಾವಣೆಗೆ ಶ್ರಮಿಸಿದರು. ವೈದಿಕ ಧರ್ಮವನ್ನೇ ತಿರಸ್ಕರಿಸಿ, ಅದು ಒಳಗೊಂಡಿದ್ದ ಕರ್ಮ ಸಿದ್ಧಾಂತ, ವರ್ಣಾಶ್ರಮ ಪದ್ಧತಿ ಮತ್ತು ವೇದ ಪ್ರಾಮಾಣ್ಯವನ್ನು ನಿರಾಕರಿಸಿದರು. 'ವಿಪ್ರ ಮೊದಲಾಗಿ ಅಂತ್ಯಜ ಕಡೆಯಾಗಿ' ಎಲ್ಲರೂ ಸಮಾನರೆಂದು ಭಾವಿಸಿದರು. ಸ್ತ್ರೀಯರಿಗೆ ಗೌರವದ ಸ್ಥಾನಮಾನ ಕಲ್ಪಿಸಿದರು. ಹೀಗಾಗಿ ಶರಣರು ಸಂಸ್ಕೃತ ಭಾಷೆಯನ್ನು, ವೈದಿಕ ಸಾಹಿತ್ಯವನ್ನು ಬಹಿರಂಗವಾಗಿ ತೆಗಳಿದರು.

"ವೇದಶಾಸ್ತ್ರಗಳು ಪುರಾಣಂಗಳೆಂಬುವ
ಕೊಟ್ಟಣವ ಕುಟ್ಟುತ್ತ ನುಚ್ಚು ತೌಡು ಕಾಣಿಭೋ
ಅವ ಕುಟ್ಟಲೇಕೆ?" — ಅಕ್ಕಮಹಾದೇವಿ

''ಆದಿ ಪುರಾಣ ಅಸುರರಿಗೆ ಮಾರಿ
ವೇದ ಪುರಾಣ ಹೋತಿಂಗೆ ಮಾರಿ
ರಾಮ ಪುರಾಣ ರಕ್ಕಸರಿಗೆ ಮಾರಿ
ಭಾರತ ಪುರಾಣ ಗೋತ್ರಕ್ಕೆ ಮಾರಿ
ಎಲ್ಲ ಪುರಾಣ ಕರ್ಮಕ್ಕೆ ಮೊದಲು'' – ಬಸವಣ್ಣ.

ಶರಣರು ಅಚ್ಚಗನ್ನಡದಲ್ಲಿ ವಚನಗಳನ್ನು ರಚಿಸಿ, ಈ ವಚನಗಳಿಗೆ ಅಂದು ತಾವು ಚಿಂತಿಸಿದ ಚಿಂತನೆಗಳ ವಿಷಯವನ್ನೇ ವಸ್ತುವನ್ನಾಗಿ ಮಾಡಿಕೊಂಡರು. ಬಹು ಕುತೂಹಲಕಾರಿಯಾದ ಸಂಗತಿಯೆಂದರೆ, ವೇದ – ಪುರಾಣ – ರಾಮಾಯಣ–ಮಹಾಭಾರತಗಳನ್ನು ತಿರಸ್ಕರಿಸಿದರು. ತಿರಸ್ಕರಿಸಿದ ಇವರು ಪ್ರತಿ ಸಂಸ್ಕೃತಿಯನ್ನು ನಿರ್ಮಾಣ ಮಾಡಿದರು. ಜೊತೆಗೆ ವೈದಿಕ ಅಥವಾ ಪರಂಪರಾಗತ ಪುರಾಣಗಳನ್ನು ಅಲ್ಲಗಳೆದು ಪ್ರತಿ ಪುರಾಣಗಳನ್ನು ಸೃಷ್ಟಿಸುವತ್ತ ದೃಷ್ಟಿಹರಿಸಿದರು:

'ಎಮ್ಮ ಪುರಾಣ ಶಿವಪುರಾಣ
ಎಮಗೆ ಗುರುಲಿಂಗ ಜಂಗಮತ್ರಯವು ಒಂದೇ
ಎಂದು ತಿಳಿದ ಅಱುವಿನ ಜ್ಞಾನ ಪುರಾಣ ನೋಡಾ' – ಸಿದ್ಧರಾಮ

'ಎಲ್ಲ ಪುರಾಣಕ್ಕೆ ಹೆಸರುಂಟು. ನಮ್ಮ ಪುರಾಣಕ್ಕೆ ಹೆಸರಿಲ್ಲ ನೋಡವ್ವಾ.
ಲಿಂಗದ ಮಹತ್ವದ ಹೇಳಿದಲ್ಲಿ ಲಿಂಗ ಪುರಾಣವೆನಿಸಿತ್ತು,
ಷಣ್ಮುಖನ ಮಹಾತ್ಮ್ಯವ ಹೇಳಿದಲ್ಲಿ ಸ್ಕಂಧ ಪುರಾಣವೆನಿಸಿತ್ತು,
ವೀರಭದ್ರನ ಮಹಾತ್ಮ್ಯವ ಹೇಳಿದಲ್ಲಿ ದಕ್ಷಖಂಡವೆನಿಸಿತ್ತು,
ಶಿವನ ಮಹಿಮೆ, ಕಾಶೀ ಮಹಿಮೆಯ ಹೇಳಿದಲ್ಲಿ ಕಾಶಿ ಪುರಾಣವೆನಿಸಿತ್ತು.
ನಮ್ಮ ಪುರಾಣ ಹೆಸರಿಡಬೇಕೆಂದಡೆ,
ನಿಶ್ಶಬ್ದ ನಿರಮಯ ಪುರಾಣಗಳ ತಾನೆಂತಾಯಿತ್ತು ನೋಡಾ
– ಸಿದ್ಧರಾಮ.

ಇಲ್ಲಿ ಹಳೆ ಪುರಾಣಗಳ ಜಾಗದಲ್ಲಿ ಹೊಸ ಪುರಾಣಗಳ ಉದ್ದೇಶವನ್ನು ಪ್ರಸ್ತಾಪಿಸುತ್ತಾರೆ. ಇದು ಪುರಾಣಗಳ ದೃಷ್ಟಿಯಿಂದ ಮಾತ್ರವಾಗದೆ, ಸಾಹಿತ್ಯದ ದೃಷ್ಟಿಯಿಂದಲೂ ಅನನ್ಯವಾದದ್ದು. ಪುರಾಣದ ರೂಪಕಗಳನ್ನು ತಮ್ಮ ಕಾಲದ ಸಂಸ್ಕೃತಿಯ ನೆಲಗಳಿಂದಲೆ ಎತ್ತಿ ಕಟ್ಟುವುದರ ಮೂಲಕ, ಅದಕ್ಕೊಂದು ಹೊಸ ಆಯಾಮ ಸಾಧ್ಯವಾಗುವಂತೆ ಮಾಡಿದರು. ವಚನಕಾರರು ಹುಟ್ಟು ಹಾಕಿದ ಈ ಹೊಸ ಸಾಧ್ಯತೆಯು ಪಡೆದುಕೊಂಡ ಸ್ವರೂಪದ ಬಗ್ಗೆ ಮಲ್ಲೇಪುರಂ ಜಿ. ವೆಂಕಟೇಶ ಅವರು ಹೀಗೆ ಗುರುತಿಸುತ್ತಾರೆ: ''ಪುರಾಣಗಳ ವಿರೋಧಿ ನೆಲೆಯಲ್ಲಿ ಹುಟ್ಟಿಕೊಳ್ಳುವ 'ಪ್ರತಿ ಪುರಾಣ' ರೂಪಕಗಳು, ಸಂಸ್ಕೃತಿಯ ಅಧ್ಯಯನದ

ಸಂದರ್ಭದಲ್ಲಿ ಮಹತ್ವದ ನೆಲೆಗಳಾಗುತ್ತವೆ. ಮಡಿ ಹೋಗಿ ಮೈಲಿಗೆಯೇ ಪ್ರಾಧಾನ್ಯ ಪಡೆಯುತ್ತದೆ. ಪವಿತ್ರ ಗಂಗಾಜಲವು ಹೋಗಿ 'ಪಾದೋದಕ'ವಾಗುತ್ತದೆ. ಅನ್ನ ಬ್ರಹ್ಮವು ಹೋಗಿ ಪ್ರಸಾದವಾಗುತ್ತದೆ. ಇಂಥವು ಆಚರಣೆಯ ಸಂಸ್ಕಾರವಾದರೂ, ಹೊಸ ಪುರಾಣ ರೂಪಕಗಳಾಗಿ ನಮ್ಮ ಮುಂದೆ ಅವತರಿಸುತ್ತವೆ."[3]

ಬಸವಾದಿ ಶರಣರು ಹುಟ್ಟು ಹಾಕಿದ ಹೊಸ ಮೌಲ್ಯಗಳು, ಸಿದ್ಧಾಂತಗಳು ಮುಂದಿನ ಕವಿಗಳಿಗೆ ಪ್ರೇರಣೆಗಳಾದವು. ಭಕ್ತಿಯೇ ಪ್ರಧಾನ ಮೌಲ್ಯವಾಯಿತು. ಅದರ ಜತೆಗೆ ಶಿವನ ಶರಣರೇ ಕಾವ್ಯದ ನಾಯಕರಾದರು. ಅವರ ಜೀವನ ಸಾಧನೆಗಳೇ ವಸ್ತುವಾಯಿತು. ಇದರಿಂದ ಚರಿತ್ರೆಯೇ ಇಲ್ಲಿ ನಿರೂಪಿತವಾಯಿತು. ಈ ಕಾರಣದಿಂದ ವೀರಶೈವ ಕವಿಗಳಲ್ಲಿ ಯಾರೂ ರಾಮಾಯಣ, ಮಹಾಭಾರತದ ಕಥೆಯನ್ನು ತಮ್ಮ ಕಾವ್ಯಕ್ಕೆ ವಸ್ತುವನ್ನಾಗಿ ಅಳವಡಿಸಿಕೊಳ್ಳಲು ಹೋಗಲಿಲ್ಲ. ಹರಿಹರ, ರಾಘವಾಂಕ, ಚಾಮರಸ, ಭೀಮಕವಿ ಮುಂತಾದವರು ವಚನಗಳಿಂದ ಹಾಗೂ ಶರಣರ ಚರಿತ್ರೆಯಿಂದ ಪ್ರಭಾವಿತರಾಗಿ ತಮ್ಮ ಕಾವ್ಯಧೋರಣೆಯನ್ನು ರೂಪಿಸಿಕೊಂಡರು. ''ಮನುಜರ ಮೇಲೆ ಸಾವವರ ಮೇಲೆ ಕನಿಷ್ಠರ ಮೇಲೆ'' ಕಾವ್ಯವನ್ನು ಬರೆಯಬಾರದೆಂದು ನಿರ್ಧರಿಸಿಕೊಂಡರು. ಇವರ ಕಾಲಕ್ಕಾಗಲೇ ಶಿವಶರಣರ ಬಗೆಗಿನ ಜೀವನ ವೃತ್ತಾಂತಗಳು ಜನ ಸಾಮಾನ್ಯರಲ್ಲಿ ಐತಿಹ್ಯಗಳಾಗಿ ಬಿಟ್ಟಿದ್ದವು. ಇವರು ಚರಿತ್ರೆಯ ಭಾಗವಾಗಿದ್ದರು. ಆದರಿಂದಲೇ ಚಾರಿತ್ರಿಕ ಪುರುಷರು ಪುರಾಣ ಪುರುಷರಾಗಿ ವೈಭವೀಕರಣಗೊಂಡರು. ಇದಕ್ಕೆ ಭಾರತೀಯ ಪುರಾಣಗಳಲ್ಲಿ ಹಿಂದೆ ಮಾನವನನ್ನು ದೈವತ್ವಕ್ಕೇರಿಸುವ ಕ್ರಿಯೆ ನಡೆದದ್ದೂ ಕಾರಣವಿರಬೇಕು. ಮಧ್ಯಕಾಲೀನ ಮಹಾಚೇತನಗಳಂತೆ ಕಾಣುವ ಬಸವ, ಅಲ್ಲಮ, ಸಿದ್ಧರಾಮ, ಅಕ್ಕಮಹಾದೇವಿ, ರಾಮಾನುಜ, ಮಧ್ವಾಚಾರ್ಯರಂಥವರ ಬಗೆಗೆ 'ಪುರಾಣ' ಗಳು ಹುಟ್ಟಿಕೊಂಡು ಇವರನ್ನು ಪುರಾಣದ ಆಶಯಕ್ಕನುಗುಣವಾಗಿ ದೈವತ್ವದ ಪಟ್ಟಕ್ಕೇರಿಸಿದರು.

ಹರಿಹರ ತನ್ನ ರಗಳೆಗಳಿಗೆ ಸಮಕಾಲೀನ ವ್ಯಕ್ತಿಗಳನ್ನು ನಾಯಕರನ್ನಾಗಿ ಮಾಡಿಕೊಂಡು ಬರೆದ 'ಬಸವರಾಜ ದೇವರ ರಗಳೆ'ಯಾಗಲೀ, 'ನಂಬಿಯಣ್ಣನ ರಗಳೆ'ಯಾಗಲೀ ಗಾತ್ರದಲ್ಲಿ ದೊಡ್ಡವಿದ್ದರೂ ಇವುಗಳನ್ನು ವೀರಶೈವರು ಪುರಾಣಗಳೆಂದು ಪರಿಗಣಿಸಿಲ್ಲ. ಹರಿಹರ ತಮಿಳುನಾಡಿನ ಅರವತ್ತು ಮೂರು ಪುರಾತರನ್ನು ಕುರಿತು ರಗಳೆಗಳನ್ನು ಬರೆದಿದ್ದಾನೆ. ಹರಿಹರ ಪಡೆದ ವಸ್ತು, ಪುರಾತನ, ನೂತನ ಎಂಬ ವ್ಯಕ್ತಿಗಳ ಚರಿತ್ರೆಯಾದರೂ, ಆತ ಮೂಲತಃ ಭಕ್ತ ಕವಿ. ತನ್ನ ಪರಿಸರದ ಮಾಹಿತಿಗಳಿಂದಲೇ ಕಾವ್ಯ ವನ್ನು ಕಟ್ಟುತ್ತಾನೆ. ಶಿವ-ಪಾರ್ವತಿ ಮತ್ತು ಶಿವಲೋಕಗಳಿದ್ದರೂ, ಮರ್ತ್ಯಲೋಕದ ಭಕ್ತನನ್ನು ಕುರಿತ ಪರಿಸರ, ಅದು ಹರಿಹರನ ಯುಗಧರ್ಮವಾಗಿಯೇ ಚಿತ್ರಿತವಾಗಿದೆ. 'ಗಿರಿಜ ಕಲ್ಯಾಣ' ವನ್ನು ಕೂಡ ಒಂದು ಪುರಾಣ

ವೆಂದು ವೀರಶೈವರು ಕರೆದಿಲ್ಲ. ಹರಿಹರನಿಗೆ 'ಗಿರಿಜ ಕಲ್ಯಾಣ'ಕ್ಕೆ ಸಿಕ್ಕಿರುವ ಪ್ರೇರಣೆಗಳು, 'ಸ್ಕಂಧ ಪುರಾಣ' ಮತ್ತು ಕಾಳಿದಾಸನ 'ಕುಮಾರ ಸಂಭವ'ದಿಂದ. ಒಂದು ಪುರಾಣ ಕಾವ್ಯ, ಮತ್ತೊಂದು ಅಭಿಜಾತ ಕಾವ್ಯ. ಹರಿಹರ ''ಕುಮಾರ ಸಂಭವದಿಂದ ಕಾವ್ಯ ರೂಪಕಗಳನ್ನು ತೆಗೆದುಕೊಂಡು ಕನ್ನಡ ಸಂದರ್ಭದಿಂದ ಅದಕ್ಕೆ 'ಪ್ರತಿ ವಸ್ತು ಶರೀರ'ವನ್ನು ನಿರ್ಮಿಸುತ್ತಾನೆ. ಪ್ರತಿ ವಸ್ತು ಶರೀರ ಯಾವಾಗಲೂ ದೇಸೀ ರೂಪಕದ ಹೆಮ್ಮೆಯನ್ನು ತನ್ನ ಒಡಲಲ್ಲಿ ಇಟ್ಟುಕೊಂಡಿರುತ್ತದೆ. ಕನ್ನಡ ಕಾವ್ಯ ಸಂಸ್ಕೃತಿಯ ಹಿರಿಮೆ ಇರುವುದೇ ಇಂಥ ನೆಲೆಗಳಲ್ಲಿ.''[4] ಹೀಗಾಗಿ ಶಿವಪುರಾಣದ ಕಥನ ತಂತ್ರಕ್ಕಿಂತ ಬೇರೆಯಾಗಿ, ದೃಷ್ಟಿಯಲ್ಲಿ ಹಾಗೂ ರಚನೆಯಲ್ಲಿ 'ಕುಮಾರ ಸಂಭವ'ಕ್ಕಿಂತ ಭಿನ್ನವಾಗಿ, ಶಿವ-ಪಾರ್ವತಿ, ಗಣಗಳು, ಭಕ್ತರು, ಕುಮಾರಸ್ವಾಮಿ [illegible] ಹರಿಹರನ ಕಾವ್ಯ ಸಂದರ್ಭದಲ್ಲಿ ಮರುಸೃಷ್ಟಿಯಾಗಿದ್ದಾರೆ. ಶಿವನ ಮಹಿಮೆಗಿಂತ ಇಲ್ಲಿ ಹರಿಹರನಿಗೆ ಪಾರ್ವತಿಯ ಭಕ್ತಿ, ನಿಷ್ಠೆ ಮತ್ತು ಛಲಗಳಿಂದ ಶಿವನನ್ನು ಒಲಿಸಿಕೊಳ್ಳುವುದೇ ಮುಖ್ಯ ವಸ್ತುವಾಗಿ ಕಾಣುತ್ತದೆ.

ಈ ಸಂದರ್ಭದಲ್ಲಿ ರಾಘವಾಂಕ ಮತ್ತು ಚಾಮರಸನನ್ನು ಉಲ್ಲೇಖಿಸಬೇಕಾಗಿದೆ. ಮಧ್ಯ ಕಾಲೀನ ಕವಿಗಳಲ್ಲಿ ಇವರು ಮುಖ್ಯರು. ರಾಘವಾಂಕ ಹರಿಹರನ ಸಂಬಂಧ ಮತ್ತು ಶಿಷ್ಯ. ಹೀಗಿದ್ದೂ ಹರಿಹರನ ಕಾವ್ಯ ಮಾರ್ಗದಲ್ಲಿ ಸಾಗಲಿಲ್ಲ. ರಾಘವಾಂಕ ತನ್ನ ಮೊದಲ ಕಾವ್ಯವಾದ 'ಹರಿಶ್ಚಂದ್ರ ಕಾವ್ಯ'ಕ್ಕೆ ವೈದಿಕ ಉಪನಿಷತ್ತುಗಳಿಂದ ಹೆಕ್ಕಿ ತೆಗೆದ ಪ್ರಸಿದ್ಧ ಕತೆ, ಹರಿಶ್ಚಂದ್ರನದು. ಕನ್ನಡದಲ್ಲಿ ಮೊದಲ ಬಾರಿಗೆ ಈ ಹರಿಶ್ಚಂದ್ರನ ವಸ್ತು, ರಾಘವಾಂಕನಿಂದ ಪ್ರಸ್ತಾಪವಾದದ್ದು. ವಸ್ತು ಮತ್ತು ವಸ್ತು ವಿನ್ಯಾಸ ಹಾಗೂ ನಿರೂಪಣಾ ವಿಧಾನಗಳಿಂದ ಈ ಕಾವ್ಯ ಕನ್ನಡದ ಮಧ್ಯಕಾಲೀನ ಕಾವ್ಯಗಳಲ್ಲಿಯೇ ಎದ್ದು ಕಾಣುವ ಉತ್ತಮ ಕೃತಿಯಾಗಿದೆ. ''ಹಿಂದಿನ ಎಲ್ಲ ಆಕರಗಳೊಡನೆ ಇದರ ಸಂವಿಧಾನವನ್ನು ಹೋಲಿಸಿದರೆ ಭಾರತೀಯ ಸಾಹಿತ್ಯದಲ್ಲಿಯೇ ಕಾಣ ದೊರೆಯದ ನೂತನ ಸನ್ನಿವೇಶ ಸೃಷ್ಟಿ, ಕೃತಿಬಂಧ ಇಲ್ಲಿದೆ ಎಂಬುದು ಹೆಮ್ಮೆಯ ಸಂಗತಿ.''[5] ಕಾವ್ಯ ಧೋರಣೆಗನುಗುಣವಾಗಿಯೂ, ಯುಗಧರ್ಮಕ್ಕನುಗುಣವಾಗಿಯೂ ರಾಘವಾಂಕ ಇಲ್ಲಿ ''ಯಥಾ ಪ್ರಕಾರ ವೈದಿಕಕ್ಕೆ ಎದುರಾಗಿ ಅವೈದಿಕ ರೂಪಕಗಳನ್ನು ತರುತ್ತಾನೆ. ಪವಿತ್ರ ಕಾಶಿಯ ಎದುರಾಗಿ ಸುಡುಗಾಡನ್ನು ತರುತ್ತಾನೆ. ಬ್ರಾಹ್ಮಣ್ಯದ ಎದುರಾಗಿ ಹೊಲೆತನ ತರುತ್ತಾನೆ.''.[6]

ಚಾಮರಸನ 'ಪ್ರಭುಲಿಂಗ ಲೀಲೆ'' ತುಂಬ ಪ್ರಸಿದ್ಧವಾದದ್ದು. ಚಾಮರಸನು ಪ್ರಭುದೇವನನ್ನು ತನ್ನ ಕಾವ್ಯದ ನಾಯಕನನ್ನಾಗಿ ಮಾಡಿಕೊಂಡಿದ್ದಾನೆ. ಈಗಾಗಲೆ ಹರಿಹರ, ಸಿಂಗಿರಾಜ, ಶಿವಗಣ ಪ್ರಸಾದಿ ಮುಂತಾದವರು ಅಲ್ಲಮಪ್ರಭುವಿನ ವಿಷಯವಾಗಿ ಕೃತಿ ರಚನೆ ಮಾಡಿದ್ದರು. ಮೇಲಾಗಿ ಚಾಮರಸನಿಗೆ ಅಲ್ಲಮನ ವಿಷಯ ಐತಿಹ್ಯ ರೂಪದಲ್ಲಿ ಲಭ್ಯವಾಗಿತ್ತು. ಅಲ್ಲದೆ ಮೇಲಿನ ಕೃತಿಕಾರರ ಕೃತಿಗಳಿಂದಲೂ ಪ್ರಭಾವಿತನಾಗಿ ಚಾಮರಸ ಈ ಕಾವ್ಯ ಬರೆದಿದ್ದಾನೆ. ಇದು [illegible] ಸಾಂಕೇತಿಕ ಕಾವ್ಯವಾಗಿ ಪುರಾಣದ ಪ್ರತೀಕಗಳನ್ನು ಅಳವಡಿಸಿಕೊಂಡಿದೆ. ಪ್ರಭುದೇವನ ಬದುಕು ಮತ್ತು ವ್ಯಕ್ತಿತ್ವ ವಿಚಿತ್ರವಾಗಿ ಕವಿಗಳಿಗೆ

ಕಂಡಿದೆ. ಇನ್ನು ಆತನ ವಚನಗಳು ರಹಸ್ಯಮಯವಾದವುಗಳು. ''ಎಲ್ಲಿಯೋ ಹುಟ್ಟಿ ಕಾಡಿನಲ್ಲಿ ಕಣಿವೆಗಳಲ್ಲಿ ಮೊರೆದು , ಅನಂತರ ಬಯಲು ಪ್ರದೇಶದಲ್ಲಿ ಶಾಂತವಾಗಿ ಹರಿದು ಅನೇಕ ತೀರ್ಥಗಳನ್ನು ಕಲ್ಪಿಸಿ ಜೀವಜಂತುಗಳನ್ನು ಗದ್ದೆಗಳನ್ನು ತಣಿಸಿ, ಬಳಿಕ ಸಾಗರದಲ್ಲಿ ಲೀನಗೊಳ್ಳುವ ನದಿಯಂತೆ ಅಲ್ಲಮನ ಬಾಳು''[7] ಇಂಥ ವ್ಯಕ್ತಿತ್ವವುಳ್ಳ ವ್ಯಕ್ತಿಯನ್ನು ಕಾವ್ಯಕ್ಕೆ ವಸ್ತುವನ್ನಾಗಿ ಮಾಡಿಕೊಂಡು ನಿಭಾಯಿಸಿರುವುದು ಚಾಮರಸನ ಕಾವ್ಯ ಸಾಮರ್ಥ್ಯಕ್ಕೆ ಸಾಕ್ಷಿಯಾಗಿದೆ. 'ಪ್ರಭುಲಿಂಗಲೀಲೆ' ಒಂದು ಕಾವ್ಯವಾಗಿಯೂ ಪುರಾಣವಾಗಿಯೂ ಜನಪ್ರಿಯವಾಗಿದೆ. ಹರಿಹರನು ಪ್ರಭುದೇವನನ್ನು ' ಸಾಧಕ ಪುರುಷ' ಎಂದು ಚಿತ್ರಿಸಿದರೆ, ಚಾಮರಸನು ' ಸಿದ್ಧಪುರುಷ' ಎಂದು ಚಿತ್ರಿಸುತ್ತಾನೆ. ವರ್ತಮಾನ ಕಾಲದ ಸಂದರ್ಭದಲ್ಲಿಯೇ ಸೃಷ್ಟಿಗೊಳ್ಳುವ ಹೊಸ ಪುರಾಣಗಳಿಗೆ ಅತ್ಯುತ್ತಮ ಪ್ರತೀಕವಾಗಿ ಅಲ್ಲಮಪ್ರಭು ಕಾಣಿಸಿಕೊಳ್ಳುತ್ತಾನೆ. ಒಂದು ಹಿನ್ನೆಲೆಯಿಂದ ನೋಡಿದರೆ, ಪುರಾಣ ಅನ್ನುವುದು ಪುರಾತನ ಹೇಗೋ, ಅದು ಅದ್ಯತನವೂ ಹೌದು. ಕನ್ನಡ ಸಾಹಿತ್ಯದ ಹದಿನಾರನೆಯ ಮತ್ತು ಹದಿನೇಳನೆಯ ಶತಮಾನಗಳು ಅಲ್ಲಮನನ್ನು ಪುರಾಣವಾಗಿ ಕಲ್ಪಿಸುವ ನೆಲೆಯನ್ನು ಸಾಹಿತ್ಯದ ನಡೆಯಲ್ಲಿ ಕಾಣಬಹುದು. ಚಾಮರಸನ ನಂತರ ಬಂದ ಕಾವ್ಯಗಳು ಬರೀ ಪುರಾಣಗಳಾಗಿ ನಿಂತಿವೆ. ವೀರಶೈವ ಕವಿಗಳು ತಮ್ಮ ರಚನೆಗಳನ್ನು ' ಪುರಾಣ'ಕ್ಕೆ ಬದಲು ಚಾರಿತ್ರ,ಚರಿತೆ, ಲೀಲೆ, ಎಂದು ಕರೆದುಕೊಂಡಿದ್ದಾರೆ.

ಮಧ್ಯಯುಗವು ಭಕ್ತಿ ಪಂಥದ ಕಾಲ. ಭಕ್ತಿ ಪರಂಪರೆಯಲ್ಲಿ ಕನ್ನಡದ ಶಿವಶರಣರಂತೆ ಮುಂದೆ ಹರಿದಾಸರು ಬಂದರು. ಶಿವಶರಣರಿಗೆ ಶಿವ ದೈವವಾದರೆ ಹರಿದಾಸರಿಗೆ ಹರಿದೈವವಾಗುತ್ತದೆ. ಭಾಗವತ ಸಂಪ್ರದಾಯದ ಹರಿದಾಸರು ತಮ್ಮ ಕೀರ್ತನೆಗಳಿಗೆ, ಸುಳಾದಿಗಳಿಗೆ ವಸ್ತುವನ್ನು ವೈದಿಕ ಪುರಾಣಗಳಿಂದಲೇ ಪಡೆದರು. ಅಲ್ಲಿಯ ಪ್ರತಿಮೆ, ರೂಪಕ,ಪ್ರತೀಕಗಳನ್ನೇ ಬಳಸಿಕೊಂಡರು. ಕನಕದಾಸ ದಾಸ ಪರಂಪರೆಯಲ್ಲಿಯೇ ಭಿನ್ನವಾಗಿ ಬೆಳೆದು ನಿಂತವನು.

'' ವೇದಶಾಸ್ತ್ರ ಪುರಾಣ ಪುಣ್ಯದ
ಹಾದಿಯನು ನಾನರಿಯೆ — ಎನ್ನುವ ಕನಕನು ತನ್ನ

'ರಾಮಧಾನ್ಯ ಚರಿತೆ'ಯಲ್ಲಿ ನವ ಪುರಾಣ ಸೃಷ್ಟಿ ಮಾಡಲು ಪ್ರಯತ್ನಿಸಿದ್ದಾನೆ

ವೈದಿಕ ಪುರಾಣಗಳಿಂದ ಪ್ರೇರಣೆ ಪಡೆಯುವುದಕ್ಕಿಂತಲೂ ಹೆಚ್ಚಾಗಿ ಭಾಗವತ ಪರಂಪರೆಯಲ್ಲಿ ಬೆಳೆದ ಕುಮಾರವ್ಯಾಸನು ಮಹಾಭಾರತ ಕಥೆಯನ್ನು ತೆಗೆದುಕೊಂಡು ತನ್ನ 'ಕರ್ನಾಟಕ ಕಥಾ ಮಂಜರಿ' ಯನ್ನು ಬರೆದನು. ಇದು ಕುಮಾರವ್ಯಾಸನಿಗೆ ಕೃಷ್ಣ ಕಥೆಯಾಗುತ್ತದೆ. ' ತಿಳಿಯ ಹೇಳುವೆ ಕೃಷ್ಣ ಕಥೆಯನು' ಎಂದೇ ಕಾವ್ಯದ ಆರಂಭಕ್ಕೆ

ಸ್ಪಷ್ಟಪಡಿಸಿ ಬಿಡುತ್ತಾನೆ. ಜೊತೆಗೆ ನೀತಿಬೋಧೆ ಕುಮಾರವ್ಯಾಸ ಭಾರತದ ಮುಖ್ಯ ಉದ್ದೇಶ ಗಳಲ್ಲಿ ಒಂದಾಗಿದೆ. '' ಇದು ವಿಚಾರಿಸೆ ಬರೆಯ ತೊಳಲಿಯ ಉದಕದಂತಿಕೆ ಇಲ್ಲಿ ನೋಳ್ಪುದು ಪದುಮನಾಭನ ಮಹಿಮೆ ಧರ್ಮ ವಿಚಾರ ಮಾತ್ರವನು'';ಕುಮಾರವ್ಯಾಸನ ಭಕ್ತಿ ಇಲ್ಲಿ ಕಾವ್ಯದ ತುಂಬ ವ್ಯಕ್ತವಾಗುತ್ತದೆ.

ಭಾಗವತ ಸಂಪ್ರದಾಯದಲ್ಲಿ ಕುಮಾರವ್ಯಾಸ ಮತ್ತು ಹರಿದಾಸರು ಕೃಷ್ಣ ಮಹಿಮೆಯನ್ನು ಕನ್ನಡ ಸಾಹಿತ್ಯದಲ್ಲಿ ಪ್ರಧಾನವಾಗಿ ಅಭಿವ್ಯಕ್ತಗೊಳಿಸಿದರು. ಪುನಃ ಕೃಷ್ಣನ ಪರವಾದ ಸಾಹಿತ್ಯವು ಮೈಸೂರು ಒಡೆಯರ ಕಾಲದಲ್ಲಿ ಅದು ಶ್ರೀವೈಷ್ಣವರ ದೃಷ್ಟಿಯಿಂದ ಬೆಳೆಯಿತು. ಚಿಕ್ಕದೇವರಾಯನೇ ರಚಿಸಿದ 'ಚಿಕದೇವರಾಜ ಬಿನ್ನಪ,' 'ಗೀತಗೋಪಾಲ' ಇವೇ ಮುಖ್ಯವಾಗಲು ಕಾರಣ '' ಇದುವರೆಗೂ ಯಾವ ಸಾಹಿತ್ಯಾಭಿವ್ಯಕ್ತಿಗೂ ಪ್ರೇರಣೆಯಾಗದಿದ್ದ ಶ್ರೀವೈಷ್ಣವ ಧರ್ಮವು ಚಿಕದೇವರ ಕಾಲದಲ್ಲಿ ಮೊಟ್ಟ ಮೊದಲಿಗೆ ಸಾಹಿತ್ಯಾಭಿವ್ಯಕ್ತಿಗಳಲ್ಲಿ ಮೈದೋರಿದ್ದು ವಿಶೇಷದ ಸಂಗತಿ.... ಅಂತೂ ತಮಿಳು ಹಾಗೂ ಸಂಸ್ಕೃತಗಳಲ್ಲಿ ಮಾತ್ರ ವ್ಯವಹರಿಸುತ್ತಿದ್ದ ಶ್ರೀವೈಷ್ಣವ ಧರ್ಮ ಕಡೆಗೂ ಕನ್ನಡದಲ್ಲಿ ಮಾತನಾಡುವುದನ್ನು ಕಲಿತದ್ದು ಈ ಕಾಲದಲ್ಲಿ.'' [8]

ವಾಲ್ಮೀಕಿ ರಾಮಾಯಣ, ಅದ್ಭುತ ರಾಮಾಯಣ, ಅಧ್ಯಾತ್ಮ ರಾಮಾಯಣ, ವಾಸಿಷ್ಠ ರಾಮಾಯಣ, ಶೇಷರಾಮಾಯಣ ಮುಂತಾದ ವೈದಿಕ ಸಂಪ್ರದಾಯದ ರಾಮಾಯಣಗಳ ಧಾಟಿಯಲ್ಲೇ ಕಥಾ ಸಂದರ್ಭಗಳು ಮತ್ತು ಪೌರಾಣಿಕ ಉಪಾಖ್ಯಾನಗಳು ಹತ್ತೊಂಭತ್ತನೆಯ ಶತಮಾನದ ಅಂತ್ಯ ಭಾಗದಲ್ಲಿ ಮುದ್ದಣ್ಣನಿಂದ ಪುನರ್ ಸೃಷ್ಟಿಯಾದವು. ಅವುಗಳೇ 'ಅದ್ಭುತ ರಾಮಾಯಣ', 'ಶ್ರೀರಾಮ ಪಟ್ಟಾಭಿಷೇಕ' ಮತ್ತು 'ರಾಮಾಶ್ವಮೇಧ' ಎಂಬ ಕೃತಿಗಳು. '' ವೈದಿಕ ಪುರಾಣಗಳ ಹೊಸ ನೆಲೆಗಳು ಆವಿರ್ಭೂತಗೊಂಡದ್ದು ಇಲ್ಲಿಯೇ. ಅವನ ರಚನೆಯಲ್ಲಿ ಭಾಷಿಕ ನುಡಿಗಟ್ಟುಗಳು, ಸನ್ನಿವೇಶ ನಿರ್ಮಾಣಗಳು, ಕಥನದ ಮೌಲ್ಯ ಹೊಸ ಗುರಿಯನ್ನೇ ಪಡೆಯಿತು. ಇದಕ್ಕೆ ಹೊಸ ಸಾಹಿತ್ಯದ ಅರುಣೋದಯ ಕಾಲ ಒಂದಾದರೆ ಯಕ್ಷಗಾನ ಪರಂಪರೆಯ ಸಾಂದರ್ಭಿಕ ನೆಲ ಮತ್ತೊಂದು ಕಾರಣವೆಂದು ಹೇಳಬಹುದು. ಇವೆರಡರ ಹಿನ್ನೆಲೆಯಲ್ಲಿ ಪುರಾಣ'ದ ಪಾರಂಪರಿಕ ನೆಲೆಗಳು ಹೊಸ ವ್ಯಾಖ್ಯಾನಗಳಿಗೆ, ಹೊಸ ಮಾದರಿಗಳಿಗೆ, ಹೊಸ ವೇಷಗಳಿಗೆ ದಾರಿಯಾಯಿತು.'' [9]

ಇಪ್ಪತ್ತನೆಯ ಶತಮಾನದ ಪ್ರಾರಂಭಕ್ಕಾಗಲೇ ಸಾಹಿತ್ಯದ ದಿಕ್ಕು ಬದಲಾಗಿತ್ತು. ಭಾರತೀಯ ಸಮಾಜದ ಮೇಲೆ ಆಧುನಿಕತೆ ದಾಳಿ ನಡೆಸಿತ್ತು. ಮಹಾಕಾವ್ಯಗಳು ಹುಟ್ಟುವ ಸಾಧ್ಯತೆಗಳು ಕಡಿಮೆಯಾದವು. ಮಹಾಕಾವ್ಯಗಳ ಸ್ಥಾನದಲ್ಲಿ ಕಾದಂಬರಿಗಳು ನಿಲ್ಲ ತೊಡಗಿದವು. ಕಾವ್ಯವು ಭಾವಗೀತೆಯ ಸ್ಥಾನಕ್ಕೆ ಬಂದಿತು. ಸಣ್ಣಕತೆ ಮತ್ತು ನಾಟಕಗಳು ಬದಲಾಗುತ್ತಿದ್ದ ಸಮಾಜದಲ್ಲಿ ಉದ್ಭವಿಸುತ್ತಿದ್ದ ಸಾಮಾಜಿಕ ಸಮಸ್ಯೆಗಳನ್ನು ಪ್ರತಿಬಿಂಬಿಸಲು

ವಿಂಗಡಿಸಲಾದವು. ಸಾಹಿತ್ಯದಲ್ಲಿ ಪ್ರಕಾರಗಳ ಸಂಖ್ಯೆ ಬೆಳೆದು ಅವುಗಳೆಲ್ಲಾ ಅವುಗಳದೇ ಆದ ವಸ್ತುವನ್ನು—ವಿಷಯವನ್ನು ಅವುಗಳಿಗಿರುವ ರೀತಿಯಲ್ಲೇ ಬೆಳೆಯ ತೊಡಗಿದವು. ಆಧುನಿಕತೆ ಬೆಳೆದಂತೆ ಅದಕ್ಕೆ ಅದರದೇ ಸಮಸ್ಯೆಗಳು ಹುಟ್ಟಿಕೊಂಡು ಸಾಹಿತ್ಯದ ದಿಕ್ಕನ್ನು ಬದಲಿಸುತ್ತ ಸಾಗಿತು. ಸಾಹಿತ್ಯದಲ್ಲಿ ವಾಸ್ತವಿಕತೆ ಮತ್ತು ವೈಚಾರಿಕತೆಗಳು ಪ್ರಧಾನವಾಗ ತೊಡಗಿದವು. ಈ ಶತಮಾನದ ಪ್ರಾರಂಭದಲ್ಲಿ ಬಂದ ಬಿ.ಎಂ.ಶ್ರೀ, ಡಿ.ವಿ.ಜಿ., ಮಾಸ್ತಿ, ಕುವೆಂಪು, ಬೇಂದ್ರೆ, ದೇವುಡು, ಶ್ರೀರಂಗ, ಪು.ತಿ.ನ., ವಿನಾಯಕ, ಕಾರಂತ ಮುಂತಾದವರು ಸಾಹಿತ್ಯ ರಚನೆಯನ್ನು ಬಹು ವೈವಿಧ್ಯಮಯ ನೆಲೆಯಲ್ಲಿ ಸೃಷ್ಟಿಸ ತೊಡಗಿದರು. ಇವರೆಲ್ಲ ಬೇರೆ ಬೇರೆ ಕಾರಣಗಳಿಂದ ಪುರಾಣ ಮತ್ತು ಚರಿತ್ರೆಯಿಂದಲ್ಲ ಪ್ರೇರಣೆಯನ್ನು ಪಡೆದವರು. ಕುವೆಂಪು ಅವರಿಗೆ ವಾಲ್ಮೀಕಿ ರಾಮಾಯಣದಿಂದ [illegible] ಪಂಪ, ರನ್ನ, ಕುಮಾರವ್ಯಾಸ ಮುಂತಾದವರ ಪುರಾಣ ಕಾವ್ಯಗಳೂ, ಪಾಶ್ಚಾತ್ಯ ಮಹಾಕಾವ್ಯ ಪುರಾಣಗಳೂ ಪ್ರಭಾವ ಬೀರಿವೆ. ಅವುಗಳ ಆಶಯವನ್ನು ಅರಗಿಸಿಕೊಂಡು ತಮ್ಮದೇ ಆದ ವಿಶಿಷ್ಟ ಬಗೆಯ 'ದಾರ್ಶನಿಕ ಕಾವ್ಯ' ವಾಗಿ ಈ ಶತಮಾನದಲ್ಲಿ 'ರಾಮಾಯಣ ದರ್ಶನಂ' ಎಂಬ ಮಹಾಕಾವ್ಯವನ್ನು ಕನ್ನಡ ಸಾಹಿತ್ಯಕ್ಕೆ ನೀಡಿದರು. ಮಹಾಕಾವ್ಯಗಳ ಪರಂಪರೆ ನಿಂತೇ ಹೋಯಿತೆಂದಾಗ ಸೃಷ್ಟಿಯಾದ ಪ್ರಥಮ ಆಧುನಿಕ ಮಹಾಕಾವ್ಯವಿದು. ಮಂಥರೆ, ಊರ್ಮಿಳೆ, ರಾವಣ ಮುಂತಾದ ಪಾತ್ರಗಳು ಪುನರ್ ಸೃಷ್ಟಿಯಾದವು. 'ಪೂರ್ಣ ದೃಷ್ಟಿ'ಯ ನೆಲೆಯಿಂದ ಸೃಷ್ಟಿಯಾದ ಈ ಕಾವ್ಯವು ಭಾರತೀಯ ಪರಂಪರೆಯನ್ನು ಮೀರಿ ಜಾಗತಿಕ ಪರಂಪರೆಯನ್ನು ಹೊಂದಿದ ಮಹಾಕಾವ್ಯವಾಯಿತು. ಪ್ರಕೃತಿ ಪ್ರೇಮಿಯಾದ ಕುವೆಂಪು ರಾಮನನ್ನು ವನವಾಸದ ಕಾಲದಲ್ಲಿ ಕಾನನ ಜೀವಿಯಾಗುವಂತೆ ಚಿತ್ರಿಸಿದರು. 'ದಾರಿದ್ರ್ಯಮಲ್ತೆ ಆ ನಾಗರಿಕ ಜೀವನಂ ಈ ವನ್ಯ ಸಂಸ್ಕೃತಿಯ ಮುಂದೆ' ಎಂದು ರಾಮನಿಗೆ ಅನಿಸುತ್ತದೆ. ಪ್ರಕೃತಿ ಪ್ರೇಮ, ವೈಚಾರಿಕತೆ, ಆಧ್ಯಾತ್ಮ ಮತ್ತು ವಿಜ್ಞಾನ ಎಲ್ಲವನ್ನೂ ಒಳಗೊಂಡಿದೆ.

ಆಧುನಿಕ ಮಹಾಕಾವ್ಯಗಳು ಎಂದು ಈಗಾಗಲೆ ಗುರುತಿಸಿರುವ ಇನ್ನೂ ನಾಲ್ಕು ಕಾವ್ಯಗಳೆಂದರೆ-ಶ್ರೀನಿವಾಸರ ''ಶ್ರೀರಾಮ ಪಟ್ಟಾಭಿಷೇಕ'', ವಿನಾಯಕರ 'ಭಾರತ ಸಿಂಧುರಶ್ಮಿ', ಭೂಸನೂರು ಮಠರ ''ಭವ್ಯ ಮಾನವ'' ಮತ್ತು ಪು.ತಿ.ನ.ರ 'ಶ್ರೀಹರಿ ಚರಿತೆ'; ಮಹಾಕಾವ್ಯಗಳ ಸ್ಥಾನದಲ್ಲಿ ಕಾದಂಬರಿಗಳು ಸೃಷ್ಟಿಯಾಗುತ್ತವೆಂದು ಭಾವಿಸಲಾಗಿತ್ತು. ಆದರೂ ಆಧುನಿಕ ಮಹಾಕಾವ್ಯಗಳ ಸೃಷ್ಟಿಕರ್ತರಲ್ಲಿ ಮೂವರು ಆಗಲೇ ಮಹಾಕಾದಂಬರಿಗಳನ್ನು ರಚಿಸಿಬಿಟ್ಟಿದ್ದರು. ಕುವೆಂಪು, ಮಾಸ್ತಿ, ವಿನಾಯಕ ಇವರಲ್ಲಿ, ಮಾಸ್ತಿಯವರನ್ನುಳಿದು, ಸಾಮಾಜಿಕ ವಸ್ತುವನ್ನಾಧರಿಸಿದ ಮಹಾಕಾದಂಬರಿಗಳನ್ನು ಬರೆದಿದ್ದರು. ಆಧುನಿಕ 'ಎಪಿಕ್' ಎಂದೇ ಕರೆಸಿಕೊಂಡಿರುವ 'ಗ್ರಾಮಾಯಣ' ಕಾದಂಬರಿಯೂ ರಚಿತವಾಗಿತ್ತು.

ಇದೇ ಕಾಲದಲ್ಲಿ ವೈದಿಕ ಪುರಾಣಗಳಿಂದ ವಸ್ತುವನ್ನು ಎತ್ತಿಕೊಂಡು 'ಮಹಾಬ್ರಾಹ್ಮಣ', 'ಮಹಾ ಕ್ಷತ್ರಿಯ' ಮತ್ತು 'ಮಹಾದರ್ಶನ' ಎಂಬ ಗಂಭೀರ ಸ್ವರೂಪದ ದೇವುಡು ಕಾದಂಬರಿಗಳೂ ಕಾರಂತರ 'ದೇವ ದೂತರು', 'ಶ್ರೀರಂಗರ 'ವಿಶ್ವಾಮಿತ್ರ ಸೃಷ್ಟಿ' ಮುಂತಾದ ಕಾದಂಬರಿಗಳೂ ಬಂದಿದ್ದುವು. ಪೌರಾಣಿಕ ಕಲ್ಪನೆಗಳನ್ನು ಕಾರಂತರು ವಿಡಂಬನೆಯಾಗಿ ಬಳಸಿಕೊಂಡರೆ, ವ್ಯಂಗ್ಯ ರೂಪದಲ್ಲಿ ಶ್ರೀರಂಗರು ಬರೆದರು. ಅವು ಅಂದಿನ ಮತ್ತು ಈ ಹೊತ್ತಿನ ಒತ್ತಡಗಳನ್ನೂ, ಸಾಮಾಜಿಕ ಸಮಸ್ಯೆಗಳನ್ನು ಒಳಗೊಂಡಿವೆ. 'ಅವಧೇಶ್ವರಿ' ಎಂಬ ಶಂಕರ ಮೊಕಾಶಿ ಪುಣೇಕರರ ಕಾದಂಬರಿ 'ವೇದಕಾಲೀನ ರಾಜಕೀಯ' ಎಂದೇ ಹೊರಬಂತು. ಅವರೇ ಹೇಳುವಂತೆ '' ನಮಗೆ ಯಾವುದೂ ಹೊಸದಲ್ಲ; ಹೊರತಲ್ಲ. ನಿಷ್ಪನ್ನತೆ ನಿಜಬಾಳ್ವೆ ನಮ್ಮ ಇತಿಹಾಸ ಭೂಗೋಲಗಳಿಂದಲೇ ಪ್ರಾಪ್ತ.'' (ಮುನ್ನುಡಿ) ಪುರಾಣ ಕಾಲದ ಅಯೋಧ್ಯೆಯ ಮೂಲ ಹೆಸರು 'ಅವಧಪುರಿ' ಅಲ್ಲಿನ ಮಹಾರಾಣಿ ಪುರುಕುತ್ಸಾನಿ. ಆಕೆಯ ಸಾಹಸ ಬದುಕನ್ನು ವರ್ಚಸ್ವೀ ವ್ಯಕ್ತಿತ್ವವ ಈ ಕಾದಂಬರಿಯಲ್ಲಿ ಚಿತ್ರಿಸಲಾಗಿದೆ. ಮಹಾಭಾರತದ ಕಥೆಯನ್ನು ಎಸ್.ಎಲ್.ಭೈರಪ್ಪನವರು ತಮ್ಮ 'ಪರ್ವ' ದಲ್ಲಿ ಪೌರಾಣಿಕ ಅಂಶದಿಂದ ಬೇರ್ಪಡಿಸಿ, ಸಮಾಜಶಾಸ್ತ್ರೀಯ ದೃಷ್ಟಿಯಿಂದ ಸಂಸ್ಕೃತಿ ಮತ್ತು ಜನಾಂಗಿಕ ಅಧ್ಯಯನದ ನೆಲೆಯಲ್ಲಿ ವ್ಯಾಖ್ಯಾನಿಸಿದ್ದಾರೆ. 'ಪರ್ವ' ಕಾದಂಬರಿಯು ಕನ್ನಡದಲ್ಲಿ ಒಂದು ಅಪೂರ್ವ ಪ್ರಯೋಗವೇ ಸರಿ.

ಆಧುನಿಕ ಕಾಲದಲ್ಲಿ ಬಳಕೆಗೊಂಡ ಪುರಾಣ ವಸ್ತುಗಳೆಲ್ಲ ಒಂದು ರೀತಿಯಲ್ಲಿ ವ್ಯಾಖ್ಯಾನಗಳೇ; ಅವು 'ಮರು ಸೃಷ್ಟಿ' ಎಂಬ ಮಾತು ನಮ್ಮ ವಿಮರ್ಶೆಯಲ್ಲಿ ಈಗೀಗ ಕಂಡುಬರುತ್ತದೆ ನಿಜ. ಆದರೆ, ಕಳೆದ ನಾಲ್ವತ್ತು ವರ್ಷಗಳ ಸಾಹಿತ್ಯದ ರಚನೆಗಳನ್ನು ನೋಡಿದರೆ, 'ಪುರಾಣ' ದ ವಸ್ತುಗಳು ಅಥವಾ ಪುರಾಣದ ಆಶಯಗಳು ಹೊಸ ವ್ಯಾಖ್ಯಾನಗಳಿಗೆ, ಹೊಸ ಸಂವೇದನೆಗಳಿಗೆ ದಾರಿ ಮಾಡಿಕೊಟ್ಟಿವೆ . ಈ ಹಿನ್ನೆಲೆಯಲ್ಲಿ 'ರಾಮಾಯಣ ದರ್ಶನಂ', 'ಶ್ರೀರಾಮ ಪಟ್ಟಾಭಿಷೇಕ', 'ಭಾರತ ಸಿಂಧುರಶ್ಮಿ' ಇಂಥ ಮಹಾಕಾವ್ಯಗಳನ್ನು ಗಮನಿಸಬೇಕಾಗುತ್ತದೆ. ಹೀಗಾಗಿ ಮಾಸ್ತಿ ಕಾವ್ಯ [illegible] ಬರೆಯುವಾಗ ತಮ್ಮ ಅರಿವಿನ ಸಂವೇದನೆಯಿಂದಲೇ ಬರೆಯಬಲ್ಲರು, ಹೇಳಬಲ್ಲರು. ಮಾಸ್ತಿಯವರು ತಮ್ಮ ಕಥೆಗಳಲ್ಲಿ ಕಾದಂಬರಿಗಳಲ್ಲಿ, ನಾಟಕಗಳಲ್ಲಿಯೂ ಪುರಾಣ ಮತ್ತು ಚರಿತ್ರೆಗಳಿಂದ ವಸ್ತುವನ್ನು ಎತ್ತಿಕೊಂಡು, ಆಧುನಿಕ ಕಾಲದ ತಮ್ಮ ಮನೋಧರ್ಮಕ್ಕನುಗುಣವಾಗಿ ಅವುಗಳನ್ನು ವ್ಯಾಖ್ಯಾನಿಸಿದ್ದಾರೆ. ಅವರ ಕಾವ್ಯ 'ಶ್ರೀರಾಮ ಪಟ್ಟಾಭಿಷೇಕ' ದಲ್ಲಿ ರಾಮಾಯಣದ ಘಟನೆಗಳನ್ನು [illegible] ಪವಾಡ ಸದೃಶ ಸಂದರ್ಭಗಳನ್ನೆಲ್ಲ ಬದಿಗಿರಿಸಿ, ಅವುಗಳನ್ನೆಲ್ಲ ಸರಳವಾಗಿ ವಾಸ್ತವವಾಗಿ ನಿರೂಪಿಸಿದ್ದಾರೆ. ರಾಮಾಯಣದ ಬಗೆಗಿನ ಅವರ ದೃಷ್ಟಿಕೋನ, ಬದುಕನ್ನು ಕುರಿತ ಅವರ ನಿಲುವೂ [illegible]ಗಿದೆ ಎಂಬುದು ವ್ಯಕ್ತವಾಗುತ್ತದೆ. ಅಲ್ಲದೆ ವರ್ತಮಾನದ ವಾಸ್ತವತೆ ಮತ್ತು ವೈಚಾರಿಕತೆಯೊಂದಿಗೆ, ಪರಂಪರೆಯ ಜೊತೆಗೆ [illegible] ನನ್ನ ಸಂಬಂಧವನ್ನು ಗುರುತಿಸಿಕೊಳ್ಳುತ್ತದೆ.

ತಮ್ಮ ಮಹಾಕಾವ್ಯದ   ವಸ್ತುವಿನ ಆಯ್ಕೆಯಲ್ಲಿ ಭಿನ್ನರಾದವರು, ಗೋಕಾಕರು. ಇಂಗ್ಲಿಷ್ ವಿದ್ಯಾಭ್ಯಾಸದಿಂದ ಅವರು ಭಾರತೀಯ ಪಾರಂಪರಿಕ ಮೌಲ್ಯಗಳ ಜತೆಗೆ ಪಾಶ್ಚಾತ್ಯರ ಬದುಕನ್ನು ನೋಡಿದವರು. ಭಾರತದ ಪ್ರಾಚೀನ ಚರಿತ್ರೆಯ ಪ್ರಾರಂಭದ ಕಾಲದ ಕೆಲವು ಸಂಗತಿಗಳಿಂದ ಕೂಡಿದ ಬಂದು ಮಹಾ ಕಥಾನಕವನ್ನೇ ಅವರು ಎತ್ತಿಕೊಂಡರು; ಕ್ರಿ.ಪೂ.1000 ರ ಕಾಲದ ವ್ಯಕ್ತಿಗಳ ಸಮುದಾಯದ ಸ್ವರೂಪ, ಕ್ರಿಯಾಶೀಲತೆಯನ್ನು ತಮ್ಮ ಕಾವ್ಯಕ್ಕೆ ತಂದುಕೊಂಡರು. ಸಾರ್ವತ್ರಿಕತೆ ಮತ್ತು ಸಮಕಾಲೀನತೆಯ ಅಂಶ ಅವರ ಕಾವ್ಯದಲ್ಲಿ ಕಾಣುತ್ತೇವೆ.   ನವ್ಯ ಕಾವ್ಯವನ್ನು ಅದರ ಸಂಕೀರ್ಣತೆಯನ್ನು ಎತ್ತಿ ಹಿಡಿದ ಅವರ ಮನಸ್ಸು, ಆಧುನಿಕ ಮನುಷ್ಯನ ದ್ವಂದ್ವ, ಪರಕೀಯತೆಯನ್ನು ತಮ್ಮ 'ಭಾರತ ಸಿಂಧುರಶ್ಮಿ' ಕಾವ್ಯದಲ್ಲಿನ ನಾಯಕನಾದ ವಿಶ್ವಾಮಿತ್ರನಲ್ಲಿ ಕಂಡುಕೊಂಡರು. ವಿಶ್ವಾಮಿತ್ರನ ಜೀವನ ಸನ್ನಿವೇಶಕ್ಕೆ ಸಂಬಂಧಿಸಿದ ತ್ರಿಶಂಕುವಿನ ಸ್ಥಿತಿ, ಆಧುನಿಕ ಮಾನವನ ಸ್ಥಿತಿಯೂ ಆಗಿದೆ. ಅನಾಥ ಪ್ರಜ್ಞೆ, ನೆಮ್ಮದಿಯನ್ನು ಹುಡುಕುವ ಮನುಷ್ಯನಿಗೆ ತಾನೇ ಸೃಷ್ಟಿಸಿಕೊಂಡ ಆಧುನಿಕತೆ, ಯಾಂತ್ರಿಕ ಬದುಕೇ ಮುಳುವಾಗಿದೆ. ಇದರಿಂದ ಬಿಡುಗಡೆಗೆ ಇರುವ ಮಾರ್ಗೋಪಾಯಗಳತ್ತ ಗೋಕಾಕರ ಮನಸ್ಸು ತುಡಿಯುವ ವಸ್ತುವಾಗಿ, ಅವರು ಅದನ್ನು ವ್ಯಾಖ್ಯಾನಿಸಿದ್ದಾರೆ.

ಹನ್ನೆರಡನೆಯ ಶತಮಾನದಲ್ಲಿದ್ದ ಮಹಾಚೇತನ ಶರಣೆ   ಅಕ್ಕಮಹಾದೇವಿಯನ್ನು ಕುರಿತು ಇನ್ನೊಂದು ಮಹಾಕಾವ್ಯ ಬರೆದ ಭೂಸನೂರು ಮಠರ 'ಭವ್ಯ ಮಾನವ'. ಅಕ್ಕನ ಮೂಲಕ ಮಹಾಮಾನವನು ಮರ್ತ್ಯಲೋಕದ ಮಾನವನಲ್ಲಿಯೇ ಜಾಗೃತಗೊಳ್ಳುವನೆಂಬ ದರ್ಶನದಲ್ಲಿ ಸತ್ಯವಿದೆ ಎಂಬ ಸಂಗತಿಯನ್ನು ಈ ಕಾವ್ಯದಲ್ಲಿ ವ್ಯಕ್ತಪಡಿಸಿದ್ದಾರೆ. ಈ ಮಹಾ ಕಾವ್ಯದಲ್ಲಿ ಬರುವ ಪ್ರಮುಖ ಪಾತ್ರಗಳಾದ ಅಕ್ಕಮಹಾದೇವಿ, ಗುರುಚೆನ್ನಮಲ್ಲ; ಗಿರಿಮಲ್ಲ ಇವರಿಂದ ಸಮಸ್ತ ಮಾನವ ಪ್ರಪಂಚದ ವಿವಿಧ ಮುಖಗಳನ್ನು ತೋರಿಸಿ, ಬದುಕಿನ ಸಮಗ್ರ ಅರ್ಥವನ್ನು ಕೊಡಲು ಪ್ರಯತ್ನಿಸಿದ್ದಾರೆ.

ಪುರಾಣಗಳಿಂದಲೇ ವಸ್ತು-ವಿಷಯವನ್ನು ಎತ್ತಿಕೊಂಡು ಬಿಡಿಕವಿತೆಗಳನ್ನು, ಗೀತ ನಾಟಕಗಳನ್ನು ಬರೆದಿರುವ ಪು.ತಿ.ನ. ಅವರು, 'ಶ್ರೀಹರಿ ಚರಿತೆ' ಎಂಬ ಮಹಾಕಾವ್ಯವನ್ನು ಬರೆದಿದ್ದಾರೆ. ರಾಮಾಯಣ ಮತ್ತು ಭಾಗವತ ಪುರಾಣಗಳಲ್ಲಿ ಸಿಗುವ ಸಂದರ್ಭಗಳನ್ನು ಬಳಸಿ 'ಅಹಲ್ಯೆ' ಮತ್ತು 'ಗೋಕುಲ ನಿರ್ಗಮನ' ಮುಂತಾದ ಗೀತ ನಾಟಕಗಳನ್ನು ಬರೆಯುವುದರ ಹಿಂದಿನ ಉದ್ದೇಶ, ಹಳೆಯ ಕಥಾವಸ್ತುವನ್ನು ಆಯಾ ಕವಿಯ ಚಿಂತನೆ ಮತ್ತು ಕಾಲದ ಸಾಂಸ್ಕೃತಿಕ ಅಗತ್ಯಗಳಿಗೆ ಅನುಗುಣವಾಗಿ ಹೊಸದಾಗಿ ಅರ್ಥೈಸುವ ಪ್ರಯತ್ನ ಇಲ್ಲಿ ನಡೆಯುತ್ತದೆ. 'ಶ್ರೀಹರಿಚರಿತೆ' ಯಲ್ಲಿ ಶ್ರೀಕೃಷ್ಣನ ಬಾಲಲೀಲೆಗಳನ್ನು ಮತ್ತು ಆತನ ಯೌವನಕ್ಕೆ ಸಂಬಂಧಿಸಿದ ವಿವರಗಳನ್ನು ಬಹು ಸೊಗಸಾಗಿ ಪು.ತಿ.ನ. ಚಿತ್ರಿಸಿದ್ದಾರೆ. ಕೃಷ್ಣ

ರಾಧೆಯರ ಅನುರಾಗ ಎಲ್ಲ ಕಾಲ, ದೇಶ ಸಂದರ್ಭಗಳಿಗೆ ಸೇರಿದ ಪ್ರೇಮಿಗಳ, ದಂಪತಿಗಳ ಹೃದಯದಲ್ಲಿ ಮೂಡುವ ಬಗೆ ಈ ಮಹಾಕಾವ್ಯದಲ್ಲಿದೆ. ನಾಯಕನಾಗುವವನು ತನ್ನ ಸಮುದಾಯದ ಜತೆ ತನ್ನ ಕರ್ತವ್ಯವನ್ನು ನಿರ್ವಹಿಸಬೇಕಾದ ಕ್ರಮಕ್ಕೆ ಕೃಷ್ಣ ಸಂಕೇತ-ನಾಗುತ್ತಾನೆ. ಕೃಷ್ಣನ ಜೀವನ ಕ್ರಮ ಆಧುನಿಕ ಸಮಾಜದ ಸಮಸ್ಯೆಗಳಿಗೂ ಪರಿಹಾರ-ವನ್ನು ನೀಡಬಲ್ಲದೆಂಬುದು ಪು.ತಿ.ನ. ಅವರ ಇಂಗಿತ. ಈ ಸಂಗತಿಗಳು 'ಶ್ರೀಹರಿಚರಿತೆ' ಯಲ್ಲಿ ಬರುತ್ತದೆ; ಸಮಕಾಲೀನ ಬದುಕಿನ ಚಿತ್ರಗಳೂ ಸಾಂಸ್ಕೃತಿಕ ಸಂಗತಿಗಳೂ ಒಂದಕ್ಕೊಂದು ತಳುಕು ಹಾಕಿಕೊಂಡು ಬೆಳೆಯುತ್ತವೆ. ಈ ಕಾವ್ಯವು ಭಾಗವತ ಸಂಪ್ರದಾಯದ ಮುಖ್ಯ ನೆಲೆಗಳನ್ನು ಸ್ವೀಕರಿಸಿದ್ದರೂ, ಅದರಾಚೆ ತನ್ನ ಕಾಲದ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯದ ನೆಲೆಯಲ್ಲೂ ಅದನ್ನು ಸ್ವೀಕರಿಸುವ ಸಾಧ್ಯತೆಗಳಿವೆ.

ಅಡಿಗ, ಶಿವರುದ್ರಪ್ಪ, ಕಣವಿ, ಶಿವಪ್ರಕಾಶ, ವೆಂಕಟೇಶಮೂರ್ತಿ ಮುಂತಾದ ಕವಿಗಳು ಪುರಾಣ ಮತ್ತು ಚರಿತ್ರೆಯಿಂದ ಪ್ರೇರಣೆ ಪಡೆದು ಅನೇಕ ಕವಿತೆಗಳನ್ನು ಬರೆದಿದ್ದಾರೆ. ಅಡಿಗರು ತಮ್ಮ 'ಭೂಮಿಗೀತ' ಕವಿತೆಯಲ್ಲಿ ಪುರಾಣಗಳಿಂದ ಅನೇಕ ಉಪಮೆ, ಸಂಕೇತಗಳನ್ನು ಬಳಸಿಕೊಂಡಿದ್ದಾರೆ. ಶಿವಪ್ರಕಾಶ ಅವರು ಚರಿತ್ರೆ, ಚರಿತ್ರೆಯ ವ್ಯಕ್ತಿ ಮತ್ತು ಸಂದರ್ಭಗಳಿಂದಲೇ ಕವಿತೆ ಕಟ್ಟುತ್ತಾರೆ.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಇಪ್ಪತ್ತನೆಯ ಶತಮಾನದ ಪ್ರಾರಂಭದಿಂದಲೇ ನಿಜವಾಗಿ ನಾಟಕ ಪ್ರಕಾರವೊಂದು ಸ್ಪಷ್ಟವಾಗಿ ಕಾಣಿಸಿಕೊಂಡದ್ದು. ಅಭಿನಯ ಪ್ರಧಾನವಾದ ನಾಟಕ ಕಲೆಗೂ ಪುರಾಣಕ್ಕೂ ಪ್ರಾರಂಭದಿಂದಲೇ ನಿಕಟ ಸಂಬಂಧವಿರುವುದು ಕುತೂಹಲಕರವಾದ ಸಂಗತಿ. ಕನ್ನಡ ನಾಡಿನಲ್ಲಿ ಪರಂಪರಾಗತವಾಗಿ ಬಂದ ಜನಪದ ರಂಗಭೂಮಿ ಮತ್ತು ವೃತ್ತಿ ನಾಟಕ ಕಂಪನಿಗಳಲ್ಲಿ ಬಹುಪಾಲು ಪೌರಾಣಿಕ ಘಟನೆಗಳನ್ನಾಧರಿಸಿದ, ದೇವ ದೇವತೆಗಳ ಹಾಗು ರಾಕ್ಷಸರ ಕಥೆಗಳನ್ನು ನಾಟಕಕ್ಕೆ ಬಳಸಿಕೊಂಡು ಆಡುತ್ತ ಬಂದಿದ್ದರು. ಅವು ಜನಮನ್ನಣೆ ಕೂಡ ಗಳಿಸಿದ್ದವು. ಜಾನಪದ ರಂಗ ಭೂಮಿಯಲ್ಲಿಯೂ ಪುರಾಣ, ಐತಿಹ್ಯಗಳಿಂದ ವಸ್ತುವನ್ನಾಧರಿಸಿಯೇ ಪ್ರಯೋಗಗಳು ನಡೆಯುತ್ತಿದ್ದವು. ಇತ್ತೀಚೆಗೆ ಹವ್ಯಾಸಿ ರಂಗ ಕಲಾವಿದರು, ನಾಟಕಕಾರರು ಇದೇ ಪರಂಪರೆಯಲ್ಲಿ ಸಾಗಿದ್ದರೂ ಒಂದು ವ್ಯತ್ಯಾಸವೆಂದರೆ, ವೃತ್ತಿ ರಂಗಭೂಮಿ, ಜನಪದ ರಂಗಭೂಮಿಯಲ್ಲಿ ಪ್ರಯೋಗವಾಗುತ್ತಿದ್ದ ನಾಟಕಗಳು, ಪುರಾಣ, ಚರಿತ್ರೆಯ ನಿರೂಪಣೆಗಳಾಗಿದ್ದವು. ಹವ್ಯಾಸಿ ರಂಗಭೂಮಿಯಲ್ಲಿ ಪ್ರಯೋಗವಾಗುತ್ತಿದ್ದ, ನಾಟಕಗಳು ಪುರಾಣ, ಚರಿತ್ರೆಯ ಮರುವ್ಯಾಖ್ಯಾನಗಳಾಗಿವೆ.

ನಾಟಕ ಕೃತಿಯನ್ನು ರಂಗ ಪ್ರಯೋಗದ ದೃಷ್ಟಿಯಿಂದಲೂ, ಸಾಹಿತ್ಯಕ ದೃಷ್ಟಿಯಿಂದಲೂ ನೋಡುವ ಕ್ರಮ ವಿಮರ್ಶಾಲೋಕದಲ್ಲಿ ಬೆಳೆದು ಬಂತು. ಇತ್ತೀಚೆಗೆ ನಾಟಕ ಕೃತಿಯನ್ನು ರಂಗ ಪ್ರಯೋಗದ ದೃಷ್ಟಿಯಿಂದಲೇ ನೋಡುವುದು ಮುಖ್ಯವಾಗುತ್ತಿದೆ.

ಈ ಶತಮಾನದ ಪ್ರಾರಂಭದಿಂದಲೂ ಕನ್ನಡದ ವಿದ್ವಾಂಸರು ಪ್ರಾಚೀನ ಸಾಹಿತ್ಯವನ್ನು ಶ್ರದ್ಧೆಯಿಂದ ಅಧ್ಯಯನ ಮಾಡುತ್ತಿದ್ದರು ಮತ್ತು, ಸಾಕಷ್ಟು ಪ್ರಮಾಣದಲ್ಲಿ ಪೌರಾಣಿಕ ನಾಟಕಗಳನ್ನು ರಚಿಸುತ್ತಿದ್ದರು. ಬಿ.ಎಂ.ಶ್ರೀಯವರು ಗ್ರೀಕ ರಂಗಭೂಮಿಯಿಂದ ಪ್ರೇರಣೆ ಪಡೆದು 'ಗದಾಯುದ್ಧ', 'ಅಶ್ವತ್ಥಾಮನ್' ಎಂಬ ಪೌರಾಣಿಕ ನಾಟಕಗಳನ್ನು ಹೊಸ ಮಾದರಿಯಲ್ಲಿ ರಚಿಸಿದರು. ಸಾಮಾನ್ಯವಾಗಿ ಕಥಾನಾಯಕ ಸಾವಿನಲ್ಲಿ ಕೊನೆಗೊಳ್ಳುವ ದುರಂತವನ್ನೇ ಅವರು 'ರುದ್ರನಾಟಕ' ಎಂದು ಕರೆದರು. ರನ್ನನ 'ಗದಾಯುದ್ಧ' ಕಾವ್ಯವನ್ನು ಆಧರಿಸಿದ ನಾಟಕವೇ 'ಗದಾಯುದ್ಧ'. ಈ ಕಾಲದಲ್ಲಿ ವೀ.ಸೀ. ಅವರ 'ಅಗ್ರಹ', ಕುವೆಂಪುರವರ 'ಯಮನ ಸೋಲು', 'ಶ್ಮಶಾನ ಕುರುಕ್ಷೇತ್ರ', 'ಮಹಾರಾತ್ರಿ', ಶ್ರೀನಿವಾಸರ 'ಯಶೋಧರಾ', ಶ್ರೀರಂಗರ 'ಕಚ—ದೇವಯಾನಿ', ಸಿ.ಕೆ. ವೆಂಕಟರಾಮಯ್ಯನವರ 'ನಚಿಕೇತ', ಮಂಡೋದರಿ', ಮುಂತಾದ ಕೃತಿಗಳು ಬಂದವು. ಕೈಲಾಸಂ ಅವರು ಇಂಗ್ಲಿಷಿನಲ್ಲಿ ಪೌರಾಣಿಕ ವಸ್ತುವನಾಧರಿಸಿ 'ಕೀಚಕ', 'ಕರ್ಣ', 'ಏಕಲವ್ಯ' ಮುಂತಾದ ನಾಟಕಗಳನ್ನು ಬರೆದರು.

ಕುವೆಂಪು ಅವರು 'ಶೂದ್ರ ತಪಸ್ವಿ', 'ಬೆರಳ್‌ಗೆ ಕೊರಳ್' ಮುಂತಾದ ನಾಟಕಗಳನ್ನು ಬರೆದು ಅನೇಕ ಸವಾಲುಗಳನ್ನು ಎದುರಿಸಿದರು. ಪೌರಾಣಿಕ ವಸ್ತುವೊಂದನ್ನು ಆಧರಿಸಿ ನಾಟಕ ರಚನೆ ಮಾಡುವ ಕ್ಲಿಷ್ಟತೆಗಳು ಹುಟ್ಟಿಕೊಳ್ಳುವುದೇ ಆಯಾ ಕಾಲದ ಸಾಂಸ್ಕೃತಿಕ ಒತ್ತಡದ ಅಗತ್ಯಕ್ಕೆ ಅನುಗುಣವಾಗಿ ಮತ್ತು ಲೇಖಕನ ಮನೋಧರ್ಮಕ್ಕೆ ತಕ್ಕಂತೆ. ''ಪ್ರತಿಮಾ ಪ್ರಪಂಚಕ್ಕೆ ಸೇರಿದ ಪೌರಾಣಿಕ ವಸ್ತುವಿನಿಂದ ನಾಟಕ ರಚನೆ ಮಾಡುವವನು ಪ್ರತಿಕೃತಿಯ (Realistic Reproduction) ವಿಧಾನವನ್ನೇ ಪ್ರಯೋಗಿಸಬೇಕೆಂಬ ಹಟ ಹಿಡಿದರೆ ಅವಿವೇಕವಾಗುತ್ತದೆ'' [9] ಎಂಬ ಕುವೆಂಪು ಅವರ ಧೋರಣೆಯೇ, ಹೊಸ ರೀತಿಯಿಂದ ಆಲೋಚಿಸಲು ತೊಡಗುವ ನಾಟಕಕಾರರಿಗೆ ಪ್ರೇರಕವಾದವು.

ನವ್ಯ ಸಾಹಿತ್ಯ ಸಂದರ್ಭದಲ್ಲಿ ರಚಿತವಾದ ನಾಟಕ ಕೃತಿಗಳು ಬಹು ಆಯಾಮಗಳನ್ನು ಪಡೆದುಕೊಂಡಿವೆ; ವೇದ, ಪುರಾಣ, ಚರಿತ್ರೆ, ಜಾನಪದ ಪುರಾಣ ನಂಬಿಕೆ, ಆಚರಣೆ ಮತ್ತು ಐತಿಹ್ಯಗಳು ಮುಂತಾದ ಮೂಲಗಳಿಂದ ನಾಟಕಕ್ಕೆ ವಸ್ತುವನ್ನು ನವ್ಯರು ಒದಗಿಸಿಕೊಂಡರು. ಆ ಸಂದರ್ಭದ ಜಾಗತಿಕ ಚಿಂತನೆಗಳ ಹಿನ್ನೆಲೆಯಲ್ಲೂ ನವ್ಯ ನಾಟಕಗಳನ್ನು ನೋಡಬಹುದಾಗಿದೆ. ನವ್ಯತೆ, ಅಸಂಗತ, ಫ್ಯಾಂಟಸಿ ಮುಂತಾದ ತಂತ್ರಗಳನ್ನು ಬಳಸಿಕೊಂಡಿದ್ದರೂ ಅವೆಲ್ಲ ವಾಸ್ತವತೆಯನ್ನು ಹೇಳಲೆಂದೇ ಸೃಷ್ಟಿಯಾದವು. ನೇರವಾಗಿ ವಾಸ್ತವವಾದಿ ಮಾರ್ಗದಲ್ಲಿ ಬಂದ ನಾಟಕಗಳಿಗಿಂತ ಹೆಚ್ಚು ಪರಿಣಾಮಕಾರಿಯಾಗಿವೆ. ಗಿರೀಶ ಕಾರ್ನಾಡರ 'ತುಘಲಕ' ನಾಟಕವಾಗಲಿ, ಲಂಕೇಶರ 'ಸಂಕ್ರಾಂತಿ' ನಾಟಕವಾಗಲಿ ಎರಡೂ ಚರಿತ್ರೆಯ ವಿಷಯವನ್ನು

ಒಳಗೊಂಡಿವೆ. ಆ ಕಾಲದ 'ಕ್ರೈಸಿಸ್' ಈ ಯುಗದ ಸಂಕೇತವಾಗಿ ನಿಂತಿದೆ. ನವ್ಯ ಸಾಹಿತ್ಯದ ಸಂದರ್ಭದಲ್ಲಿ ಬರೆದ ಕಂಬಾರರು ಅಪ್ಪಟ ಜಾನಪದ ನೆಲೆಯಲ್ಲೇ ಬರೆದು ಪ್ರಸಿದ್ಧರಾದರು. ಜಾನಪದ ಪ್ರಜ್ಞೆಯಲ್ಲೇ ಅವರ ಪ್ರತಿಭೆ ಅರಳಿದೆ. 'ಸಂಗ್ಯಾ ಬಾಳ್ಯಾ', 'ಜೋಕುಮಾರ ಸ್ವಾಮಿ', 'ಋಷ್ಯಶೃಂಗ' ಮುಂತಾದ ನಾಟಕಗಳು ಜಾನಪದ,ಪುರಾಣ ಪ್ರಪಂಚವನ್ನೆ ಆಧರಿಸಿದ ನಾಟಕಗಳು. ಆದರೆ ಇವರ ಜೊತೆಗೆ ಸಮಕಾಲೀನ ಸಂಗತಿ ಮತ್ತು ಸಂದರ್ಭಗಳನ್ನು ಕಲ್ಪಿಸುತ್ತಾರೆ. ಇವೆರಡರ ಮಧ್ಯ ನಾಟಕದೊಳಗೆ ಮತ್ತೊಂದು 'ಪುರಾಣ ಸಾಹಿತ್ಯ' ಹೊರಬರುತ್ತದೆ. ಈ ಬಗೆಯ 'ಪುರಾಣ ರೂಪಿಕೆಗಳು' ಅವರ ಕಾವ್ಯ, ನಾಟಕ ಮತ್ತು ಕಾದಂಬರಿಗಳಲ್ಲಿ ವ್ಯಕ್ತವಾಗುತ್ತವೆ. ಇದೇ ಕಂಬಾರರ ಅನನ್ಯತೆ.

ಗತಕಾಲದ ಪುರಾಣ ಮತ್ತು ಚರಿತ್ರೆಯನ್ನು ಸಾಹಿತ್ಯ ಕೃತಿಗಳ ಮೂಲಕ ಸಧ್ಯದ ಸಾಂಸ್ಕೃತಿಕ ಅಗತ್ಯಗಳಿಗೆ ಅನುಗುಣವಾಗಿ ಮರುವ್ಯಾಖ್ಯಾನಿಸುವುದು ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಎದ್ದು ಕಾಣುವ ಅಂಶವಾಗಿದೆ. ಈ ಶತಮಾನದ ಆದಿಯಲ್ಲಿ ಕುವೆಂಪು ಅವರು ತಮ್ಮ ತತ್ವಗಳಿಗನುಗುಣವಾಗಿ 'ಬೆರಳ್‌ಗೆ ಕೊರಳ್' ಮತ್ತು 'ಶೂದ್ರ ತಪಸ್ವಿ' ನಾಟಕಗಳನ್ನು ಬರೆದರು. ಇವು ಆ ಸಂದರ್ಭದಲ್ಲಿ ಬಹು ಚರ್ಚಿತವಾದ ಕ್ರಾಂತಿಕಾರಕ ಕೃತಿಗಳಾಗಿಯೇ ಪರಿಣಮಿಸಿದವು. ಇದೇ ಶತಮಾನದ ~~ಆದಿಯಲ್ಲಿ~~ ಮೊದಲಲ್ಲಿ ಕುವೆಂಪು ರಚಿಸಿದ 'ಬೆರಳ್‌ಗೆ ಕೊರಳ್' ನಾಟಕದ ವಸ್ತುವೇ ಈ ಶತಮಾನದ ಕೊನೆಯಲ್ಲಿ ಪುನರ್ ವ್ಯಾಖ್ಯಾನದೊಂದಿಗೆ ಜ.ಹೊ.ನಾರಾಯಣಸ್ವಾಮಿಯವರ 'ಅದಮ್ಯ' ಕೃತಿಯಾಗಿ ಬರೆದಿದೆ. ; 'ಶೂದ್ರ ತಪಸ್ವಿ' ಯು ಆಧರಿಸಿದ ವಸ್ತುವೇ ಮರುವ್ಯಾಖ್ಯಾನದೊಂದಿಗೆ ಮುಳ್ಳೂರು ನಾಗರಾಜರ 'ನೆಲದ ಜೋಗುಳ' ಕೃತಿಯಾಗಿ ಬರೆದಿದೆ. ಇದು ಕುತೂಹಲಕಾರಿಯಾದ ಸಂಗತಿ. ಇದಕ್ಕೆ ಈ ಶತಮಾನದಲ್ಲಿ ಹುಟ್ಟಿಕೊಂಡ ಅನೇಕ ಬಗೆಯ ಆಂದೋಲನಗಳೇ ಕಾರಣವಾಗಿವೆ. ಸುಧಾರಣಾವಾದಿಯಾದ ಕುವೆಂಪು ಅವರಿಗೆ ಪರಮಹಂಸ, ವಿವೇಕಾನಂದ, ಗಾಂಧೀ ಪ್ರಭಾವ ಕಾರಣವಾದರೆ, ಲೋಹಿಯಾ, ರಾಮಸ್ವಾಮಿ ನಾಯ್ಕರ್, ಅಂಬೇಡ್ಕರ್, ನಾರಾಯಣ ಗುರು ಮತ್ತು ಜ್ಯೋತಿಬಾಫುಲೆ ಇವರು ಜ.ಹೊ.ನಾರಾಯಣಸ್ವಾಮಿ, ಮುಳ್ಳೂರ ನಾಗರಾಜ ಅವರಿಗೆ ಪ್ರೇರಕರಾಗಿದ್ದಾರೆ.

ಇಂಥ ಒಟ್ಟು ಕನ್ನಡ ಸಾಹಿತ್ಯ ಸಂದರ್ಭವನ್ನು ಕೆ.ಎಲ್.ಗೋಪಾಲಕೃಷ್ಣಯ್ಯನವರು ತಮ್ಮ 'ಪುರಾಣ' ಕೃತಿಯಲ್ಲಿ ಹೀಗೆ ವ್ಯಕ್ತಪಡಿಸಿದ್ದಾರೆ: ''ಮೂಲರೂಪ ಎಂದು ಭಾವಿಸಿರುವ ಪುರಾಣ ಸಂದರ್ಭಕ್ಕೂ, ಪ್ರಸ್ತುತ ಸಾಹಿತ್ಯ ಕೃತಿಗಳೂ ವ್ಯತ್ಯಾಸಗಳಿರುವುದು ಕಂಡು ಬಂದಾಗ ಇವುಗಳ ಪೈಕಿ ಯಾವುದು 'ಸರಿ' ಯಾವುದು 'ತಪ್ಪು' ಎಂದು ಪ್ರಶ್ನಿಸುವ ಮತ್ತು ಸರಿಯಾದುದನ್ನು ತಿಳಿದುಕೊಳ್ಳಬೇಕೆಂಬ ಮನಸ್ಸಾಗುವುದು ಸಹಜ. ಆದರೆ, ಒಂದು ದೃಷ್ಟಿ

ಯಿಂದ ಇಂಥ ಪ್ರಶ್ನೆಯೇ ಅನಗತ್ಯ. 'ಸರಿ', 'ತಪ್ಪು' ಗಳ ನಿರ್ಣಯವು ಇಲ್ಲಿ ಕೆಲಸಕ್ಕೆ ಬಾರದು. ಏಕೆಂದರೆ, ಸೃಜನಾತ್ಮಕ ತಪ್ಪುಗಳ ರೂಪದಲ್ಲಿಯೇ ಪುರಾಣ ಬದುಕಿ ಬಾಳುತ್ತದೆ. ಕರಾರುವಾಕ್ಕಾದುದನ್ನು ಮಾತ್ರವೇ ಒಪ್ಪಿಕೊಳ್ಳಬೇಕೆಂಬ ಮನೋಧನದಿಂದ ಜನರು 'ತಪ್ಪು' ಗಳನ್ನು ಖಂಡಿಸ ತೊಡಗಿದರೆ, ಸೃಜನಾತ್ಮಕ ಸಾಹಿತ್ಯ ಕ ಸಂವೇದನೆಯು ಬತ್ತಿ ಹೋಗಿ, ಕೇವಲ ಹಳೆಯದರ ನಕಲು ಪ್ರತಿಗಳು ಮಾತ್ರ ಹೊರಬರಲಾರಂಭಿಸುತ್ತವೆ. ಆದ್ದರಿಂದ ಚರಿತ್ರೆಯ ಪಾಂಡಿತ್ಯವನ್ನು ತಮ್ಮ ಮೇಲೆ ಹೇರುವ ತವಕ ಮತ್ತು ಉದ್ದೇಶ ಪೂರ್ವಕವಾದ ಉಪೇಕ್ಷೆಗಳ ಹೊರತಾಗಿ ಪುರಾಣಗಳು ಬೇರೆ ಯಾವುದೇ ಬಗೆಯ 'ಉಪಚಾರ' ವನ್ನು ಒಪ್ಪಿ ಕೊಳ್ಳ ಬಲ್ಲವು. ಉಪೇಕ್ಷೆಯಿಂದ ಪುರಾಣಗಳಿಗೆ ತುಕ್ಕು ಹಿಡಿಯುತ್ತದೆ. ಆದರೆ ಸೃಜನ ಶೀಲರು ಮಾಡುವ ತಪ್ಪುಗಳಿಂದ ಅವು 'ಪುನ: — ಪುರಾಣ' ಗೊಳ್ಳುತ್ತವೆ.'' 10

ಅಡಿ ಟಿಪ್ಪಣಿಗಳು

1. ಜಿ.ಎಸ್.ಸಣ್ಣಯ್ಯ(ಸಂ) ನೇಮಿನಾಥ ಪುರಾಣಂ(1961)ಕವಿಕಾವ್ಯ ವಿಹಾರ. ಪುಟ—14
2. ಮಲ್ಲೇಪುರಂ ಜಿ.ವೆಂಕಟೇಶ;ಸಾಹಿತ್ಯ ಮತ್ತು ಪುರಾಣ(1993) ಕರ್ನಾಟಕ ಸಾಹಿತ್ಯ ಅಕಾಡೆಮಿ. ಪುಟ—18.
3. ಮಲ್ಲೇಪುರಂ ಜಿ.ವೆಂಕಟೇಶ;ಸಾಹಿತ್ಯ ಮತ್ತು ಪುರಾಣ(1993) ಕರ್ನಾಟಕ ಸಾಹಿತ್ಯ ಅಕಾಡೆಮಿ. ಪುಟ—73
4. ಮಲ್ಲೇಪುರಂ ಜಿ.ವೆಂಕಟೇಶ;ಸಾಹಿತ್ಯ ಮತ್ತು ಪುರಾಣ(1993) ಕರ್ನಾಟಕ ಸಾಹಿತ್ಯ ಅಕಾಡೆಮಿ. ಪುಟ—79
5. ರಂ.ಶ್ರೀ.ಮುಗಳಿ; ಕನ್ನಡ ಸಾಹಿತ್ಯ ಚರಿತ್ರೆ (1953) ಉಷಾ ಸಾಹಿತ್ಯ ಮಾಲೆ.ಪುಟ—183
6. ಮಲ್ಲೇಪುರಂ ಜಿ.ವೆಂಕಟೇಶ; ಸಾಹಿತ್ಯ ಮತ್ತು ಪುರಾಣ (1993)ಕರ್ನಾಟಕ ಸಾಹಿತ್ಯ ಅಕಾಡೆಮಿ. ಪುಟ—79.
7. ಎಂ.ಚಿದಾನಂದಮೂರ್ತಿ; ಶೂನ್ಯ ಸಂಪಾದನೆಯನ್ನು ಕುರಿತು,(1990) ಸ್ನೇಹ ಪ್ರಕಾಶನ. ಪುಟ—31
8. ಜಿ.ಎಸ್.ಶಿವರುದ್ರಪ್ಪ; ಕನ್ನಡ ಸಾಹಿತ್ಯ ಸಮೀಕ್ಷೆ(1975) ಬೆಂಗಳೂರು ವಿಶ್ವವಿದ್ಯಾಲಯ ಪುಟ—80.
9. ಮಲ್ಲೇಪುರಂ ಜಿ.ವೆಂಕಟೇಶ; ಸಾಹಿತ್ಯ ಮತ್ತು ಪುರಾಣ (1993) ಕರ್ನಾಟಕ ಸಾಹಿತ್ಯ ಅಕಾಡೆಮಿ. ಪುಟ—91
10. ಕೆ.ಎಲ್.ಗೋಪಾಲಕೃಷ್ಣಯ್ಯ; ಪುರಾಣ(1990)ಕರ್ನಾಟಕ ಸಾಹಿತ್ಯ ಅಕಾಡೆಮಿ. ಪುಟ—71 — 72.

ದೇವನಿಚ್ಛೆಯ ದಿವ್ಯಲೀಲಾ ಪ್ರಯೋಜನಕ್ಕೆ ಕುವೆಂಪುರವರ-'ಬೆರಳ್‌ಗೆ ಕೊರಳ್'

ಕುವೆಂಪು ಅವರು ಇಪ್ಪತ್ತನೆಯ ಶತಮಾನದ ಆದಿಯಲ್ಲಿ ಶೂದ್ರ ಸಮುದಾಯದಿಂದ ಹುಟ್ಟಿ ಬಂದವರು. ಇದರಿಂದ ಅವರಿಗೆ ಪ್ರತಿಷ್ಠಿತ ವೈದಿಕಶಾಹಿ ಸಮುದಾಯದಿಂದ ಈ ದೇಶದಲ್ಲಿದ್ದ ಅಪ್ರತಿಷ್ಠಿತ ಶೂದ್ರ ಮತ್ತು ದಲಿತ ಸಮುದಾಯಗಳ ಮೇಲೆ ಆಗುತ್ತಿದ್ದ ಶೋಷಣೆಗಳ, ಅವಮಾನಗಳ ಅರಿವು ಅವರಿಗಾದುದೇ ಪ್ರತಿಭಟನೆಗೆ ಅವರ ಮನಸ್ಸು ಸಿದ್ಧವಾದದ್ದು. ಆಳುವ ಪ್ರಭುತ್ವ ಪಡೆದುಕೊಂಡಿದ್ದ ವೈದಿಕ ಶಾಹಿಯನ್ನು ವಿರೋಧಿಸಲು, ಅದು ರೂಪಿಸಿಕೊಂಡಿದ್ದ ವರ್ಣಾಶ್ರಮ ಪದ್ಧತಿಯು, ಮನುಷ್ಯರನ್ನು ಒಡೆದು ಆಳುವ ನೀತಿಯನ್ನು ಹೊಂದಿತ್ತು. ಶೂದ್ರರಿಗೆ ಮತ್ತು ದಲಿತರಿಗೆ ಈ ಪದ್ಧತಿಯ ಪ್ರಕಾರ ಅವಮಾನವಿಯ ಸ್ಥಾನ ಕಲ್ಪಿತವಾಗಿತ್ತು. ಇದರಿಂದ ಬೇಸತ್ತ ಕುವೆಂಪು ಈ ದೇಶದ ಇತಿಹಾಸವನ್ನು ಮತ್ತು ಪರಂಪರೆಯನ್ನು ಪ್ರಶ್ನಿಸಿದರು. ಅವನ್ನು ಶುದ್ಧಗೊಳಿಸಲು ಆರೋಗ್ಯಪೂರ್ಣ ಚರ್ಚೆಗೆ ಗುರಿ ಮಾಡಿದರು. ವೈದಿಕ ಧರ್ಮದಲ್ಲಿದ್ದ ಇನ್ನೂ ಅನೇಕ ಬಗೆಯ ಅನಿಷ್ಟಗಳನ್ನು ಬಹಿರಂಗವಾಗಿ ಖಂಡಿಸಿದರು. ಖಂಡಿಸುವುದಷ್ಟೇ ಅವರ ಕೆಲಸವಾಗಲಿಲ್ಲ. ಕೆಟ್ಟದ್ದನ್ನು ಮುರಿದು ಒಳ್ಳೆಯದನ್ನು ಕಟ್ಟುವ ಸಾಹಸಕ್ಕೆ ತೊಡಗಿದರು.

ಕುವೆಂಪು ಬರೆಯಲು ನಿಂತ ಕಾಲವು ರಾಷ್ಟ್ರೀಯ ಆಂದೋಲನದ ಕಾಲವಾಗಿತ್ತು. ರಾಷ್ಟ್ರೀಯತೆಯನ್ನು ಮುಂದು ಮಾಡಿ ಅದರ ವೈಭವೀಕರಣಕ್ಕೆ ಅವರ ಸಮಕಾಲೀನರು ಉತ್ಸಾಹಿಗಳಾಗಿದ್ದರು. ಸಾಂಪ್ರದಾಯಿಕ ಮೌಲ್ಯಗಳನ್ನೇ ಸುಂದರವಾದ ಮಾತುಗಳಲ್ಲಿ ಮೆರೆಸಿ ಉಳಿಸಲು ತೊಡಗಿದ್ದರು. ವೈದಿಕ ಧರ್ಮ ಮತ್ತು ಅದರ ಸಿದ್ಧಾಂತಗಳನ್ನು ಪ್ರತಿಪಾದಿಸುತ್ತ, ಅದನ್ನೇ 'ಭಾರತೀಯ ಸಂಸ್ಕೃತಿ' ಎಂದು (ಹಿಂದೂ ಸಂಸ್ಕೃತಿ) ವೈಭವೀಕರಿಸಲು ತೊಡಗಿದ್ದರು. ಹಿಂದೂ ಧರ್ಮದಲ್ಲಿದ್ದು ಜಾತಿ ಪದ್ಧತಿಯನ್ನು, ಮೂಢನಂಬಿಕೆ, ಸಂಪ್ರದಾಯಗಳನ್ನು ಮತ್ತು ಪುರೋಹಿತಶಾಹಿ ಗುಣಗಳನ್ನು ಪ್ರಶ್ನಿಸಿ ಚರ್ಚೆಗೆ ಎಳೆದದ್ದೇ ಅವರ ಪ್ರತ್ಯೇಕತನ ಇತರ ಸಾಹಿತಿಗಳಿಂದ ಎದ್ದು ಕಾಣುವಂತಾಯಿತು. ಹಿಂದೂ ಧರ್ಮವನ್ನು ಕುವೆಂ ಸಂಪೂರ್ಣ ನಿರಾಕರಿಸಲಿಲ್ಲ. ಅದರ ಸಂಪ್ರದಾಯವನ್ನು ತಿರಸ್ಕರಿಸಿ, ಪರಂಪರೆಯನ್ನು ಮರುವ್ಯಾಖ್ಯಾನಕ್ಕೆ ತೊಡಗಿದರು. ಇದು ಭಾರತೀಯ ಕವಿಗಳಿಗೆ ಮತ್ತು ಕನ್ನಡದ ಕವಿಗಳಿಗೆ ಮೊದಲಿನಿಂದಲೂ ಒಪ್ಪಿತವಾದ ವಿಷಯವಾಗಿತ್ತು. ರಾಮಾಯಣ, ಮಹಾಭಾರತ ಮತ್ತು ಪುರಾಣಗಳಲ್ಲಿ ವೈದಿಕಶಾಹಿಯಿಂದ ಶೂದ್ರರಿಗೂ, ದಲಿತರಿಗೂ ಆದ ಅನ್ಯಾಯಗಳನ್ನು ಸರಿಪಡಿಸಲು ಅವುಗಳನ್ನು ಮರುವ್ಯಾಖ್ಯಾನಕ್ಕೆ ಗುರಿಪಡಿಸಿದರು. ಅದೇ ರಾಮಾಯಣ, ಮಹಾಭಾರತ ಮತ್ತು ಪುರಾಣಗಳ ವಸ್ತುವನ್ನೇ ಎತ್ತಿಕೊಂಡು 'ಶೂದ್ರ ತಪಸ್ವಿ', ಬೆರಳ್ ಗೆ ಕೊರಳ್', 'ಶ್ಮಶಾನ ಕುರುಕ್ಷೇತ್ರ' ಎಂಬ ಕೃತಿಗಳನ್ನು ರಚಿಸಿದರು. ಇಲ್ಲಿ ಕುವೆಂಪು ಅವರ ಸಮಕಾಲೀನರೇ ಆದ ಎರಡು ತಲೆಮಾರಿನವರಿಂದ ಎದ್ದ ಪ್ರತಿಕ್ರಿಯೆಯನ್ನು

ಗಮನಿಸಬೇಕಾದದ್ದೇ.

ಈ ಶತಮಾನದ ಪ್ರಾರಂಭದಲ್ಲಿ ಸಂಪ್ರದಾಯಸ್ಥ ಸಾಹಿತಿಗಳಿಂದ 'ಶೂದ್ರ ತಪಸ್ವಿ' ಯಂಥ 'ಮರುವ್ಯಾಖ್ಯಾನ'ದ ಕೃತಿ ಹೊರ ಬಂದಾಗ ಅದರ ಬಗ್ಗೆ ಕಾಣಿಸಿಕೊಂಡ ಪ್ರತಿಕ್ರಿಯೆಯೆಂದರೆ – "ವಕ್ರ ದೃಷ್ಟಿಯ ಹಿಂದಿನ ಕಥೆಯನ್ನು ತಿದ್ದುವೆವೆಂದು ಹೋಗುವುದು ಬೇರೆಯವರು ಹಾಕಿದ ನೆಲಗಟ್ಟಿನ ಮೇಲೆ ನಮ್ಮ ಮನಸ್ಸಿಗೆ ಒಪ್ಪುವ ಭವನವನ್ನು ಕಟ್ಟುವೆವೆನ್ನುವ ಪ್ರಯತ್ನದಂತೆ. ಇಂದು ನಾವು ಏನು ಮಾಡಿದರೂ ಹಿಂದಿನ ಗೀರು ಇದ್ದೇ ಇರುತ್ತದೆ. ಹೊಸದಾದ ಧರ್ಮವನ್ನು ಹೇಳುವುದಕ್ಕೆ ಹೊಸ ಕಥೆಯನ್ನೇ ಹೇಳುವುದು ಕ್ಷೇಮ....."[1] ಎಂದರು. ಇದಕ್ಕೆ ಕುವೆಂಪು "ಪುರಾಣಗಳನ್ನು ಪ್ರತಿಮಾ ದೃಷ್ಟಿಯಿಂದ ನೋಡದೆ ಪ್ರತಿಕೃತಿಯ ದೃಷ್ಟಿಯಿಂದ ನೋಡಿದರೆ ಈ ತರಹದ ಅನರ್ಥ ವಿಮರ್ಶೆಗೆ ಸಿದ್ಧವಾಗುತ್ತದೆ. ಪುರಾಣಗಳೆಂದರೆ ಸೂಕ್ಷ್ಮತರವಾದ ನಿತ್ಯಸತ್ಯಗಳಿಗೆ ಮಾನವಮತಿ ಕೆತ್ತಿರುವ ಸ್ಥೂಲವೂ ಸದೋಷವೂ ಆದ ಕಥಾ ಪ್ರತಿಮೆಗಳು. ಆದ್ದರಿಂದ ನಿತ್ಯಸತ್ಯಗಳಿಗೆ ಭಂಗಬಾರದಂತೆ ಆ ಕಥಾ ಪ್ರತಿಮೆಗಳನ್ನು ಆಯಾ ಕಾಲದ ಮನೋಧರ್ಮಕ್ಕನುಗುಣವಾಗಿ ತಮ್ಮ ತಮ್ಮ ಶಕ್ತಿ ಸಂಸ್ಕಾರ ಧ್ಯೇಯ ದರ್ಶನಗಳ ಅಭಿವ್ಯಕ್ತಿಗೆ ಅನುಕೂಲವಾಗುವಂತೆ ಕವಿಗಳು ಮಾರ್ಪಡಿಸಿಕೊಂಡು ಸಾಹಿತ್ಯ ಸೃಷ್ಟಿ ಮಾಡುವುದು ಅತ್ಯಂತ ಅವಶ್ಯಕ ಎಂದು ಒತ್ತಿ ಹೇಳ ಬಯಸುತ್ತೇನೆ."[2] ಎಂದು ಸಮರ್ಥನೆ ನೀಡಿದರು. "ರಾಮಾಯಣ ದರ್ಶನಂ", 'ಬೆರಳ್ ಗೆ ಕೊರಳ್', 'ಶ್ಮಶಾನ ಕುರುಕ್ಷೇತ್ರ', 'ಚಂದ್ರಹಾಸ', ಮಹಾರಾತ್ರಿ' ಮುಂತಾದ ಒಂದರ ನಂತರ ಒಂದು ಕೃತಿಗಳಿಗೆ ಪುರಾಣದ ಕಥಾವಸ್ತುವನ್ನೇ ಆಧರಿಸಿ ರಚಿಸಿದರು.

ಎರಡನೆಯ ತಲೆಮಾರಿನವರು ಎನ್ನಬಹುದಾದ ಮತ್ತು ದಲಿತ ಚಳುವಳಿಯಿಂದ ಪ್ರೇರಣೆ ಪಡೆದ 'ದಲಿತ –ಬಂಡಾಯ' ಸಾಹಿತ್ಯಕ ಚಳುವಳಿಯ ಸಂದರ್ಭದಲ್ಲಿ ಕುವೆಂಪು ಅವರನ್ನು, ಅವರ ಸಮಕಾಲಿನರಾದ ತಮಿಳಿನ ಪೆರಿಯರ್ ಹಾಗೂ ಕೇರಳದ ಶೂದ್ರ ಚಳುವಳಿಗಳನ್ನು ನೆನಪಿಸಿ, ಅವರಂತೆ ಕುವೆಂಪು ಹಿಂದೂ ಧರ್ಮವನ್ನು ಸಂಪೂರ್ಣವಾಗಿ ತಿರಸ್ಕರಿಸಲಿಲ್ಲ. ಮತ್ತು ಪರ್ಯಾಯ ಸಂಸ್ಕೃತಿಯನ್ನು ನಿರ್ಮಾಣ ಮಾಡುವುದಾಗಲಿ, ಸೂಚಿಸುವುದಾಗಲಿ ಅವರಿಂದಾಗಲಿಲ್ಲ ಎಂದು ದೂರುತ್ತಾರೆ.

ಈ ಅಭಿಪ್ರಾಯವನ್ನು ಸುಲಭವಾಗಿ ಸರಿಸಿ ಬಿಡುವುದಕ್ಕೆ ಬರುವುದಿಲ್ಲ. ಯಾಕೆಂದರೆ, ಶೋಷಣೆಯ ಸ್ವರೂಪವನ್ನು ಕುವೆಂಪು ನಿಖರವಾಗಿ ಸ್ಪಷ್ಟಪಡಿಸುವುದಿಲ್ಲ. ('ಬೆರಳ್ ಗೆ ಕೊರಳ್', 'ಶೂದ್ರ ತಪಸ್ವಿ' ಮುಂ) ಆಧ್ಯಾತ್ಮವಾದದ ಮುಸುಕಿನಲ್ಲಿ ಮುಚ್ಚಿಸಿಬಿಡುತ್ತಾರೆ. ದ್ರೋಣಾಚಾರ್ಯನು ಶೋಷಕನಾಗಿ ಕಾಣುವುದಿಲ್ಲ. ಇದಕ್ಕೆ ಕಾರಣ ಕುವೆಂಪು ಅವರ ನಿಲುವಾದ ಹಿಂದೂ ಧರ್ಮವನ್ನು ಚಿಕಿತ್ಸೆಗೆ ಗುರಿಪಡಿಸುವುದಾಗಿದೆ. ವೈದಿಕರ ಕರ್ಮ ಸಿದ್ಧಾಂತ, ಭಾರತದ

ಪುನರುಜ್ಜೀವನಕ್ಕೆ ಕಾರಣರಾದ ರಾಮಕೃಷ್ಣ ಪರಮಹಂಸ, ವಿವೇಕಾನಂದರ ಧಾರ್ಮಿಕ ವಿಚಾರಗಳು ಮತ್ತು ಗಾಂಧೀವಾದ ಕುವೆಂಪುರವರ ಮೇಲಾದುದೇ ಕಾರಣವಾಗಿದೆ. (ಕುವೆಂಪು ಅವರ ಸ್ಪಷ್ಟ ವೈಚಾರಿಕತೆ ಅವರ ಸೃಜನೇತರ ಕೃತಿಗಳಲ್ಲಿ ಎದ್ದು ಕಾಣುತ್ತದೆ)
ಕುವೆಂಪು ಅವರ ಬಗ್ಗೆ ಇಷ್ಟು ಹೇಳಲು ಕಾರಣವೆಂದರೆ ಈ ಶತಮಾನದ ಪ್ರಾರಂಭದಲ್ಲಿ ಅವರು ಸುರು ಮಾಡಿದ ವೈಚಾರಿಕತೆ ತುಂಬ ಮಹತ್ವದ್ದು. 'ಶೂದ್ರ ತಪಸ್ವಿ' ಬರೆದಾಗ ಎದ್ದ ವಿವಾದ ಕನ್ನಡ ಸಾಹಿತ್ಯದಲ್ಲಿ ಮಹತ್ವದ ವೈಚಾರಿಕ ಸಂಘರ್ಷವಾಗಿದೆ.
'ಏಕಲವ್ಯ' ನ ಬಗೆಗಿನ ಕೃತಿಗಳ ಅಧ್ಯಯನ ಸುರುಮಾಡುವುದಕ್ಕಿಂತ ಮುಂಚೆ, ವ್ಯಾಸ ಮಹಾಭಾರತದಲ್ಲಿ ಬರುವ 'ಏಕಲವ್ಯನ ಪ್ರಸಂಗವೇ ಎಲ್ಲ ಕೃತಿಗಳಿಗೆ ಮೂಲ ಆಧಾರವಾಗಿದೆ. ಅದಕ್ಕಾಗಿ ಆದಿಪರ್ವದ 123ನೆಯ ಅಧ್ಯಾಯದಲ್ಲಿ ಬರುವ ಈ ಪ್ರಸಂಗ ಹೀಗಿದೆ:
'ಏಕಲವ್ಯ ಹಿರಣ್ಯಧನುಷನ ಮಗ. ಜಾತಿಯಿಂದ ಬೇಡ. ಬಿಲ್ವಿದ್ಯೆಯಲ್ಲಿ ತೀವ್ರ ಆಸಕ್ತಿಯುಳ್ಳವನಾಗಿದ್ದ. ಆಗ ಶಸ್ತ್ರಾಭ್ಯಾಸ ಕಲಿಸುವುದರಲ್ಲಿ ಅಪ್ರತಿಮರಾಗಿದ್ದವರು, ದ್ರೋಣಾಚಾರ್ಯರು. ಕೌರವರಿಗೆ–ಪಾಂಡವರಿಗೆ ಶಸ್ತ್ರಾಭ್ಯಾಸ ಕಲಿಸುವುದರ ಮೂಲಕ ಪ್ರಸಿದ್ಧರಾಗಿದ್ದವರು. ಅವರ ಕೀರ್ತಿಯನ್ನು ಕೇಳಿ 'ಏಕಲವ್ಯ ಅವರಲ್ಲಿ ಶಿಷ್ಯತ್ವವನ್ನು ಪಡೆಯಲು ಭಕ್ತಿ – ಶ್ರದ್ಧೆಯಿಂದ ವಿನಂತಿಸಿಕೊಂಡನು. ಬೇಡನೆಂಬ ಬಲವಾದ ಕಾರಣದಿಂದಲೂ ಮತ್ತು ಮುಕ್ಯಶಿಷ್ಯರಿಗೆ ಗಮನ ಕೊಡಬೇಕೆಂಬ ನೆವದಿಂದಲೂ ದ್ರೋಣರು 'ಏಕಲವ್ಯನ ವಿನಂತಿಯನ್ನು ತಿರಸ್ಕರಿಸಿಬಿಟ್ಟರು. ಆದರೆ ಅಷ್ಟಕ್ಕೆ ನಿರಾಸೆಯಾಗದ ಬೇಡ ಬಾಲಕ 'ಏಕಲವ್ಯ ದ್ರೋಣರನ್ನೇ ಗುರುವೆಂದು ಮನಸ್ಸಿನಲ್ಲಿ ನಿರ್ಧರಿಸಿದನು. ಅವರ ಪ್ರತಿಮೆಯನ್ನು ಸ್ಥಾಪಿಸಿಕೊಂಡು ಬಿಲ್ವಿದ್ಯೆಗೆ ತೊಡಗಿದ ಮಹತ್ವಾಕಾಂಕ್ಷಿ 'ಏಕಲವ್ಯ ಬಹಳ ಶ್ರಮವಹಿಸಿ ಪಾರಂಗತನಾದನು. ವಿಶೇಷವಾಗಿ ಶಬ್ದವೇಧಿ ಬಾಣ ಪ್ರಯೋಗದಲ್ಲಿ ಅನ್ಯಾದೃಶ್ಯ ನೈಪುಣ್ಯತೆಯನ್ನು ಗಳಿಸಿಕೊಂಡಿದ್ದ. ಗುರುವಿಗೆ ತನ್ನನ್ನು ಅರ್ಪಿಸಿಕೊಂಡ ಭಕ್ತಿ – ಶ್ರದ್ಧೆ ಅವನಲ್ಲಿತ್ತು.

ಒಮ್ಮೆ ಕೌರವರು – ಪಾಂಡವರು ಭೇಟೆಗೆಂದು ಅರಣ್ಯಕ್ಕೆ ಪ್ರವೇಶಿಸಿದರು. ಅವರ ಜತೆಗಿದ್ದ ನಾಯಿ ಬೊಗಳುವುದನ್ನು ಕೇಳಿಸಿಕೊಂಡ 'ಏಕಲವ್ಯ, ತನ್ನ ಬಿಲ್ವಿದ್ಯಾ ಸಾಮರ್ಥ್ಯದಿಂದ ಅದರ ಬಾಯಿಯನ್ನು ಕಟ್ಟಿದನು. ಅದನ್ನು ಕಂಡ ಅರ್ಜುನ ನಿಬ್ಬೆರಗಾದನು. ಜೊತೆಗೆ ಅಸೂಯೆ ಪಟ್ಟು ವ್ಯಸನಿಯಾಗಿ ಬಂದು ದ್ರೋಣರಿಗೆ '' ನನ್ನನ್ನೇ ಅಪ್ರತಿಮ ವೀರನನ್ನಾಗಿ ಮಾಡುವೆನೆಂದು ಪಣತೊಟ್ಟಿದ್ದಿರಿ. ಆದರೆ ನನ್ನನ್ನು ಮೀರಿಸುವ ಲೋಕೋತ್ತರ ವೀರನಾದ ಇನ್ನೊಬ್ಬನಿದ್ದಾನಲ್ಲ;'' ತಿಳಿಸಿದನು. '' ಯಾರು ಅವನು ?'' ಎಂದು ಕೇಳಿದರು ದ್ರೋಣರು.
'' ಅವನು ಬೇರಾರೂ ಅಲ್ಲ. ನಿಮ್ಮ ಶಿಷ್ಯ. ನಿಷಾಧ.'' ಅಂದ. ದ್ರೋಣರಿಗೂ ಆಶ್ಚರ್ಯವಾಯಿತು. ಗುರುಕುಲದ ದಿನಗಳಲ್ಲಿ ದ್ರೋಣರಿಗೆ ದ್ರುಪದನು ನೀಡಿದ್ದ ವಚನವನ್ನು ಅನಂತರದ ದಿನಗಳಲ್ಲಿ ಮರೆತು ದ್ರೋಣರು ಹೋದಾಗ ಅಪಮಾನ ಮಾಡುತ್ತಾನೆ. ಇದರಿಂದ ದ್ರೋಣರು ದ್ರುಪದನ ಮೇಲಿನ ಭಯಂಕರ ದ್ವೇಷದಿಂದ ಕುದಿಯುತ್ತಲೇ

ಇದ್ದರು. ಕುರು — ಪಾಂಡವ ಮಕ್ಕಳಿಗೆ ಶಸ್ತ್ರಾಭ್ಯಾಸ ಕಲಿಸುವಾಗ ಅರ್ಜುನನಿಗೆ ವಿಶೇಷ ಪ್ರೀತಿಯಿಂದ ಕಲಿಸಿದರು. ಅದಕ್ಕೆ ಅರ್ಜುನ ದ್ರೋಣರಿಗೆ ಅವಮಾನ ಮಾಡಿದ ದ್ರುಪದನನ್ನು ಸೋಲಿಸಿ ಹೆಡೆಮುರಿ ಕಟ್ಟಿ ತಂದು ಗುರುಗಳಿಗೆ ಕಾಣಿಕೆಯಾಗಿ ಅರ್ಪಿಸಿದನು. ಇದರಿಂದ ಸಂತುಷ್ಟನಾದ ದ್ರೋಣರು, ' ನಿನಗೆ ಎಣೆಯಿಲ್ಲದಂತೆ ನಿನ್ನನ್ನು ಲೋಕೋತ್ತರ ಧನುರ್ಧಾರಿಯನ್ನಾಗಿ ಮಾಡುವೆ' ಎಂದು ವಚನ ನೀಡಿರುವುದು ದ್ರೋಣ ಗಮನಕ್ಕೆ ಬಂದು' ಚಿಂತಿತರಾದರು.

ಏಕಲವ್ಯನನ್ನು ನೋಡಲು ಅರ್ಜುನನೊಡನೆ ದ್ರೋಣರು ಕಾಡಿಗೆ ಬರುತ್ತಾರೆ. ಗುರುವೆಂದರೆ ಪ್ರಾಣ ಬಿಡುವ ಸ್ಥಿತಿಯಲ್ಲಿದ್ದ ಏಕಲವ್ಯ ಗುರುವನ್ನು ಕಂಡು ಧನ್ಯನಾದಂತೆ ಭಾವಿಸುತ್ತಾನೆ. ತನ್ನಲ್ಲಿ ಸಿದ್ಧಿಸಿದ್ಧ ವಿದ್ಯೆಯು ಗುರುವಾದ ತಮ್ಮಿಂದ ಪಡೆದದ್ದೆಂದು ಕೈಮುಗಿದು ನಿಂತನು.

'' ಶಿಷ್ಯನಾದರೆ ಗುರುದಕ್ಷಿಣೆ ಕೊಡು'' ಎಂದು ದ್ರೋಣರು ಕೇಳಿದರು, '' ತಮಗೇನು ಕೊಡಬೇಕೋ ಅದನ್ನು ಕೊಡಲು ಸಿದ್ಧನಾಗಿದ್ದೇನೆ. ಗುರುವಿಗೆ ಕೊಡಬಾರದ ವಸ್ತು ಯಾವುದೂ ಇಲ್ಲ'' ಎಂದು ಭಕ್ತಿಪೂರ್ವಕವಾಗಿ.

'' ಹಾಗಾದರೆ ನಿನ್ನ ಬಲಗೈಯ ಹೆಬ್ಬೆರಳನ್ನು ಕೊಡು'' ಎಂದು ದ್ರೋಣರು ಕೇಳಿದರು. ಆಡಿದ ಮಾತನ್ನು ಉಳಿಸಿಕೊಳ್ಳಲು ಸ್ವಲ್ಪವೂ ಚಿಂತಿಸದೆ ಏಕಲವ್ಯ ಹೆಬ್ಬೆರಳನ್ನು ಕತ್ತರಿಸಿ ಕೊಟ್ಟುಬಿಟ್ಟನು. ಇದರಿಂದ ಅರ್ಜುನನಿಗೆ ಸಂತೋಷವಾಯಿತು.

ವ್ಯಾಸನ ಸಾಗರದಂಥ ಮಹಾಭಾರತದಲ್ಲಿ ಏಕಲವ್ಯನ ಕಥೆ ಒಂದು ಹನಿಯಷ್ಟಿದೆ. ಒಂದು ಕ್ಷಣ ಎಲ್ಲರ ಮನ ಕರಗಿಸಿ ಮರೆಯಾಗುತ್ತದೆ. ಹಿಂದೂ ಧರ್ಮದ ವರ್ಣವ್ಯವಸ್ಥೆಯಲ್ಲಿ ಬೇಡನಾದ ಏಕಲವ್ಯನಿಗೆ ಬಿಲ್ವಿದ್ಯೆ ಕಲಿಯುವ ಹಕ್ಕು ಇರುವುದಿಲ್ಲ; ಬ್ರಾಹ್ಮಣನಾದ ದ್ರೋಣನಿಗೆ ಕಲಿಸುವ ಸ್ವಾತಂತ್ರ್ಯ ಇರಲಿಲ್ಲ. ಹುಟ್ಟು ಪ್ರತಿಭಾವಂತನಾದ ಏಕಲವ್ಯನು ದ್ರೋಣನಿಂದ ನಿರಾಕರಿಸಲ್ಪಟ್ಟದನಾದರೂ, ದ್ರೋಣನನ್ನೇ ಗುರುವೆಂದು ಮನಸ್ಸಿನಲ್ಲಿ ನಿರ್ಧರಿಸಿ, ಗುರುವಿನ ಪ್ರತಿಮೆಯನ್ನು ನಿಲ್ಲಿಸಿಕೊಂಡು ಸಾಧನೆಯಿಂದ ಬಿಲ್ವಿದ್ಯೆಯಲ್ಲಿ ಪಾರಂಗತನಾಗುತ್ತಾನೆ. ಇದು ಗಮನಕ್ಕೆ ಬಂದು ಅರ್ಜುನ ಸಹಿಸದಾಗಿ ದ್ರೋಣರ ಮೂಲಕ ಏಕಲವ್ಯನ ಶಕ್ತಿಯನ್ನು ದಮನ ಮಾಡಲು ಬಯಸುತ್ತಾನೆ. ಅರ್ಜುನ ಅರಸು ಮಗ. ಮೇಲಾಗಿ ದ್ರೋಣನಿಗೆ ಪ್ರೀತಿಯ ಶಿಷ್ಯ. ದ್ರೋಣನಿಗೆ ಅವಮಾನ ಮಾಡಿದ ದ್ರುಪದನನ್ನು ಸೋಲಿಸಿ, ದ್ರೋಣನ ಪಾದದಲ್ಲಿ ತಂದು ಹಾಕಿದ ಕಾರಣವಾಗಿ, ಸಂತೋಷಗೊಂಡ ದ್ರೋಣ '' ನಿನ್ನನ್ನು ಲೋಕೋತ್ತರ ಧನುರ್ಧಾರಿಯನ್ನಾಗಿ ಮಾಡುತ್ತೇನೆ'' ಎಂದು ವಚನ ಕೊಟ್ಟದ್ದೇ ಮುಳುವಾಗಿ, ಏಕಲವ್ಯನ ಹೆಬ್ಬೆರಳು ಗುರುದಕ್ಷಿಣೆಯ ನೆಪದಲ್ಲಿ ಪಡೆಯುತ್ತಾನೆ. ಏಕಲವ್ಯನು ತನ್ನ ಗುರುವಿನ ಮೇಲಿನ ಮುಗ್ಧ ಭಕ್ತಿಯಿಂದಾಗಿ ತನ್ನ ಹೆಬ್ಬೆರಳನ್ನು ಅರ್ಪಿಸಿ ಬಿಡುತ್ತಾನೆ; ಧನ್ಯನೂ ಆಗಿ ಬಿಡುತ್ತಾನೆ.

ಇದು 20ನೇ ಶತಮಾನದವರೆಗೆ ಏಕಲವ್ಯನ 'ಗುರುಭಕ್ತಿ' ಅಥವಾ 'ತ್ಯಾಗ' ಎಂದು ವೈಭವೀಕರಿಸುತ್ತ ಬಂದರು. ಇಲ್ಲಿ ದ್ರೋಣನ ಕ್ರೌರ್ಯವಾಗಲಿ, ಅರ್ಜುನನ ಅಸೂಯೆಯಾಗಲಿ, ಹಿಂದುಧರ್ಮದ ಇಂಥ ನೀತಿಯಾಗಲಿ, ಪ್ರಶ್ನಾತೀತವಾಗಿದ್ದುವು. ಏಕಲವ್ಯನಿಗಾದ ನೋವು, ಅನ್ಯಾಯ, ಅಪಮಾನ, ಇವು ಲೆಕ್ಕಕ್ಕೆ ಬರಲಿಲ್ಲ.

'ಬೆರಳ್‌ಗೆ ಕೊರಳ್' ನಾಟಕದಲ್ಲಿ ಮೂರು ಭಾಗಗಳಿವೆ. ಮೊದಲನೆಯ ಭಾಗದಲ್ಲಿ ಗುರುತತ್ವ, ಎರಡನೆಯದರಲ್ಲಿ ಕರ್ಮತತ್ವ ಹಾಗೂ ಮೂರನೆಯದರಲ್ಲಿ ಯಜ್ಞತತ್ವದ ನೆಲೆಯಲ್ಲಿ ರಚಿತವಾಗಿದೆ:

''ನಮ್ಮ ಭಕ್ತಿಗೆ ಮೆಚ್ಚುವಾ ಸಚ್ಚಿದಾನಂದಮೆ
ಜಗದ್ಗುರು, ಏಕಲವ್ಯ, ಬೇರೆ ಗುರುವುಂಟೆ?
ನರಗುರು ನಿಮಿತ್ತಮಾತ್ರನ್'' ಎಂದು ಒಂದು ಹಂತದಲ್ಲಿ ಈ ಮಾತನ್ನು ದ್ರೋಣಾಚಾರ್ಯ ಏಕಲವ್ಯನಿಗೆ ಹೇಳುತ್ತಾನೆ. ಗುರುತತ್ವದಲ್ಲಿ ಗುರು ಮತ್ತು ಶಿಷ್ಯ ಸಂಬಂಧ ಅನನ್ಯವಾದುದು. ಗುರು ವಿದ್ಯಾ ಶಕ್ತಿಯ ಸಂಕೇತ. ವಿದ್ಯೆಯನ್ನು ಪಡೆಯುವ ಶಿಷ್ಯನು ಗುರುವನ್ನು ಶ್ರದ್ಧಾಭಕ್ತಿಗಳಿಂದ ಆರಾಧಿಸಿ ತನ್ನನ್ನು ಸಮರ್ಪಿಸಿಕೊಂಡಿರಬೇಕು. ನರರೂಪಿ ಗುರುವನ್ನು ಜಗದ್ಗುರು ಸ್ವರೂಪಿಯೆಂದು ಭಾವಿಸಬೇಕು. ವಿದ್ಯೆ ಪಡೆಯುವುದು ಶಿಷ್ಯನ ಮುಖ್ಯ ಗುರಿಯಾದುದರಿಂದ ಇದು ಭಕ್ತಿ ಶ್ರದ್ಧೆಯಿಲ್ಲದೇ ಕೈಗೂಡುವುದಿಲ್ಲ. ಭಕ್ತಿ ಶ್ರದ್ಧೆಯಿಂದಲೇ ಶಿಷ್ಯನಲ್ಲಿ ಆಧ್ಯಾತ್ಮಿಕ ಬೆಂಬಲ ಗಟ್ಟಿಗೊಳ್ಳುತ್ತದೆ. ಶ್ರದ್ಧೆ ನಿಷ್ಠೆಯಿಂದ ಪುಷ್ಟಿಗೊಳ್ಳುವ ಆಧ್ಯಾತ್ಮ ಶಕ್ತಿಯಿಂದಲೇ ಶಿಷ್ಯನಲ್ಲಿ ವಿದ್ಯೆ ಕರಗತವಾಗುತ್ತ ಹೋಗುತ್ತದೆ. ಆಗ ಗುರು ನಿಮಿತ್ತ ಮಾತ್ರವಾಗುತ್ತಾ ಹೋಗುತ್ತಾನೆ. ಗುರು ಕಣ್ಮುಂದೆ ಇರಬೇಕಾಗಿಲ್ಲ. ಗುರುಕೃಪೆ ಬೆನ್ನ ಹಿಂದಿರುತ್ತದೆ. ಶಿಷ್ಯನ ಪ್ರತಿ ಕಾರ್ಯವೂ ಗುರುವಿಗೆ ಪೂಜೆಯಾಗುತ್ತದೆ, ಮಾತು ಪ್ರಾರ್ಥನೆಯಾಗುತ್ತದೆ. ಅಂದರೆ ಶಿಷ್ಯನಿಗೆ ಗುರು ಸ್ವರೂಪವು ''ಬೆಟ್ಟದಿಂದ ಧುಮುಕುವ ಅಬ್ಬಿಯಾಗಿ, ಅಭ್ರಚುಂಬಿಯಾದ ವೃಕ್ಷವಾಗಿ, ಗಗನದಲ್ಲಿ ಮಿನುಗುವ ನಕ್ಷತ್ರವಾಗಿ, ಬೇಸಿಗೆಯ ಆಕಾಶದಲ್ಲಿ ಚಲಿಸುವ ತುಂಡು ಮೋಡವಾಗಿ, ಜಡತನವನ್ನು ಪ್ರತಿಬಿಂಬಿಸುವ ಮೌನಶಿಲೆಯಾಗಿ, ಸೂರ್ಯೋದಯಾಸ್ತಗಳಾಗಿ''[3] ಈ ಬಗೆಯ ನಾನಾ ರೂಪಗಳಲ್ಲಿ ಕಂಡು ಉದ್ಧರಿಸುತ್ತಾನೆ. ಏಕಲವ್ಯನಿಗೆ ದ್ರೋಣನ ಪ್ರತಿಮೆ ಗುರು ಸಂಕೇತವಾದರೂ ಅವನಲ್ಲಿ ಹೆಚ್ಚಿದ ಭಕ್ತಿ ಮತ್ತು ಶ್ರದ್ಧೆಯಿಂದ ಗುರು ಸ್ವರೂಪವು ಪ್ರಕೃತಿಯ ಅನೇಕ ಬಗೆಯ ಬೆರಗುಗಳಲ್ಲಿ ಕಂಡು ವಿದ್ಯಾ ಶಕ್ತಿಯನ್ನು ಸಂಪಾದಿಸಿಕೊಳ್ಳುತ್ತಾನೆ.

" ಜೀವಿಗಳ ಕರ್ಮ ಜಟಿಲತೆ, ಏಕಲವ್ಯ, ಈ
ಕುಟಿಲ ಕಾಂತಾರಂಗಳಿಗೆ ನಮ್ಮನೆ ನಿಯೋಜಿಪುದು,
ದೇವನಿಚ್ಛೆಯು ದಿವ್ಯಲೀಲಾ ಪ್ರಯೋಜನಕೆ" — ದ್ರೋಣನ ಈ ಮಾತಿನಲ್ಲಿಯೇ ಕರ್ಮತತ್ವ ಅಡಗಿದೆ. ವಿಧಿ(ಈಶ್ವರೇಚ್ಛೆ) ನಿಯಮದಂತೆ ಮನುಷ್ಯ ಸಾಗಬೇಕಾಗುತ್ತದೆ. ಮನುಷ್ಯೇಚ್ಛೆಯಂತೆ ಯಾವುದೂ ನಡೆಯುವುದಿಲ್ಲ. ವಿಧಿನಿಯಮದ ಮುಂದೆ ಮನುಷ್ಯ ಪ್ರತಿಭಟಿಸಿ ಗೆಲ್ಲುವುದಿಲ್ಲ. ಸೋಲು ಶತಃಸಿದ್ಧ. ಕರ್ಮದ ಮರ್ಮ ಮನುಷ್ಯನ ಅಪೂರ್ಣ ದೃಷ್ಟಿಗೆ ಗೋಚರಿಸಲಾರದು.

ಪಡೆವುದೆಲ್ಲ ಕೊಡುವುದಕ್ಕಲ್ತೆ, ಅಯ್ಯ? ಪೇಳ್
ಪೂರ್ಣಮಂ ಕೊಡದೆ ಪಡೆದಪೆವೆಂತು ಪೂರ್ಣಮಂ?

" ಭಗವದರ್ಪಿತಮಾಗೆ ಸಾವುದಂ ಬಾಳ್ಕೆವೋಲ್ ಶ್ರೇಯಸ್ಕರಂ" — ಈ ಮಾತುಗಳಲ್ಲಿ ಯಜ್ಞತತ್ವದ ಅರ್ಥ ವ್ಯಕ್ತವಾಗುತ್ತದೆ. ಯಜ್ಞತತ್ವದಲ್ಲಿ ನಿಷ್ಕಾಮವಾದ ಅರ್ಪಣೆಯೇ ಮುಖ್ಯ. ಯಜ್ಞ ಸೃಷ್ಟಿಗೂ ಮೂಲ. ಮನುಷ್ಯ ತನ್ನದೆಂದು ಹೇಳಿಕೊಳ್ಳುವ ಯಾವ ಗುರುತು ಇರುವುದಿಲ್ಲ. ಮನುಷ್ಯ ಬದುಕಿಗಾಗಿ ಗಳಿಸುವ ಹಣ, ಮುಕ್ತಿಗಾಗಿ ಮಾಡುವ ತಪಸ್ಸು ಎಲ್ಲಕ್ಕೂ ಈ ಯಜ್ಞವೇ ಕಾರಣ. ಕೊನೆಗೆ ಎಲ್ಲವೂ ಅದರಲ್ಲಿಯೇ ಲಯಹೊಂದಬೇಕು.

'ಬೆರಳ್ ಗೆ ಕೊರಳ್' ನಾಟಕದಲ್ಲಿ ಅಡಗಿರುವ ಈ ಮೂರು ತತ್ವಗಳಲ್ಲಿ ದ್ರೋಣ ಏಕಲವ್ಯರ ಸಂಬಂಧವನ್ನು ಕುವೆಂಪು ಚಿತ್ರಿಸಿದ್ದಾರೆ. ಏಕಲವ್ಯ ಸಾಧನಾ ಪ್ರವೃತ್ತಿಯುಳ್ಳ, ಯುವಕ. ತನ್ನ ಜಾತಿಗನುಗುಣವಾಗಿ ಬಿಲ್ವಿದ್ಯೆಯನ್ನು ಕಲಿತು ಅದರಲ್ಲಿ ನಿಸ್ಸೀಮನಾಗಬೇಕೆಂಬ ಹೆಬ್ಬಯಕೆ. ಅದನ್ನು ಪಡೆದುಕೊಳ್ಳುವುದಕ್ಕೆ ಗುರುಬೇಕು. ಸಮರ್ಥ ಗುರುವೆಂದು ಪ್ರಸಿದ್ಧ ಹೊಂದಿದ ದ್ರೋಣನೇ ತನಗೆ ಗುರು ಎಂದು ಏಕಲವ್ಯನಿಗೆ ಅನ್ನಿಸುತ್ತದೆ. ಕುರು — ಪಾಂಡವರಿಗೆ ಬಿಲ್ವಿದ್ಯೆ ಕಲಿಸುವುದರ ಮೂಲಕ ದ್ರೋಣನು ಕೀರ್ತಿಗಳಿಸಿರುತ್ತಾನೆ. ಏಕಲವ್ಯ ದ್ರೋಣನ ಹತ್ತಿರ ಕಲಿಯಲು ಹೋಗುವುದಕ್ಕೆ ತಂದೆಯ ಅಪ್ಪಣೆ ಪಡೆಯಲು ನಿಂತಾಗ
" ಅವರ್ ಪಾರ್ವರ್,
ಬಿದಯರ್ಗೆ ಓಜುಗೆಯ್ಯಲ್ಕೆ ಒಪ್ಪರ್,
ನಿನ್ನನೆ ಗಹಗಹಿಸಿ ನಕ್ಕು ನೂಂಕುವರ್" — ಎಂದು ತಂದೆಯಿಂದ ಈ ಮಾತು ಬರುತ್ತದೆ. ವೈದಿಕ ಧರ್ಮದ ನಿಯಮದಂತೆ ಶೂದ್ರರಿಗೆ ವಿದ್ಯೆ ನಿಷಿದ್ಧ. ಮುಗ್ಧ ಏಕಲವ್ಯನಿಗೆ ಇದು

ಅರ್ಥವಾಗುವುದಿಲ್ಲ. ಆದರೂ ತಂದೆಯ ಅಪ್ಪಣೆ ಪಡೆದು ಹೋಗುತ್ತಾನೆ. ಕಾಡಾಡಿ ಏಕಲವ್ಯನಿಗೆ ನಾಡಾಡಿಗಳ ಸಂಪರ್ಕವು ಹಿತವೆನಿಸುವುದಿಲ್ಲ. ದ್ರೋಣನ ಮಗ ಅಶ್ವತ್ಥಾಮ ಗೆಳೆಯನಾಗಿ ಸಿಗುತ್ತಾನೆ. ಅವನಿಂದ ದ್ರೋಣನನ್ನು ಭೇಟಿಯಾಗುವುದು ಸಾಧ್ಯವಾಗುತ್ತದೆ. ತನ್ನ ಅದಮ್ಯ ಬಯಕೆಯನ್ನು ಮುಂದಿಡುತ್ತಾನೆ. ದ್ರೋಣನು ಒಪ್ಪುತ್ತಾನೆ. ಆದರೆ ಅರಸು ಮಕ್ಕಳು ಇದನ್ನು ಸಹಿಸುವುದಿಲ್ಲ. ದ್ರೋಣನ ಪ್ರೀತಿಯ ಶಿಷ್ಯನಾದ ಅರ್ಜುನನು ಏಕಲವ್ಯನ ಬಿಲ್ಲೋಳ್ಗೆಯನ್ನು ಕಂಡು ಕರುಬಿ, '' ಶೂದ್ರನೊಡನೆಮಗೆ ಸಮಚರ್ಯೆ ಸಲ್ಲದು'' ಎಂದು ಮುನಿಯುತ್ತಾನೆ. ವಿಪ್ರನಾದ ದ್ರೋಣನು ಶೂದ್ರನಾದ ಏಕಲವ್ಯನಿಗೆ ವಿದ್ಯೆ ಕೊಡಲು ಒಪ್ಪಿದ್ದರಿಂದ, ಅರಸು ಮಕ್ಕಳ ಅಸೂಯೆ ಕಂಡು '' ಶೂದ್ರನಾದೊಡಮೇನ್? ಸಮರ್ಥನ್, ವಿನಯಶಾಲಿ, ಕಲ್ತವೋಲಿಂ ಬಳಿಂ ನಿಮಗೆ ಸಲ್ವನ್, ನಿಮ್ಮ ಸೇವೆಯೊಳ್ ನಿಲ್ವನ್'' ಎಂದು ಹೇಳುತ್ತಾನೆ. ಆದರೂ ಶೂದ್ರನೊಬ್ಬ ತಮಗಿಂತ ಸಮರ್ಥನಾಗಿರುವ ವ್ಯಕ್ತಿಯನ್ನು ಅರಸು ಮಕ್ಕಳು ಸಹಿಸುವುದಿಲ್ಲ. ಗುರು ದ್ರೋಣನ ಮಾತನ್ನೇ ಕಡೆಗಣಿಸಿದರು. ದ್ರೋಣ ಅರಸು ಮಕ್ಕಳ ಈ ನೀತಿಗೆ ಮರುಗಿ ಏಕಲವ್ಯನನ್ನು ''ಅಳಲದಿರ್, ಆಸೆಗೆಡದಿರು'' ಎಂದು ತಮ್ಮಲ್ಲಿಯೇ ಉಳಿಸಿಕೊಳ್ಳುತ್ತಾನೆ. ಆದರೆ ತಂದೆಯ ಮರಣದ ಸುದ್ದಿ ಕೇಳಿ ತನ್ನ ಕಾಡಿಗೆ ಮರಳುತ್ತಾನೆ. ಪುನಃ ದ್ರೋಣನ ಬಳಿ ಹೋಗುವುದಿಲ್ಲ. ದ್ರೋಣನ ವಿಗ್ರಹದ ಮುಂದೆ ಭಕ್ತಿಯಿಂದ ಗುರುವೆಂದು ಆರಾಧಿಸಿ ಬಿಲ್ವಿದ್ಯೆ ಸುರುಮಾಡಿ ಪಾರಂಗತನಾಗುತ್ತಾನೆ:

'' ನನಗರಿಯದಭ್ಯಾಸಮಂ ಕನಸಿನೊಳ್ ಬಂದು ಬೋಧಿಸಿದನಾ ದಿವ್ಯಗುರು;
ಎಂತೆಂತಪ್ಪ ಬಿಜ್ಜೆಗಳೋ ಕೈಸಾರ್ದುವೆನಗೆ;
ಶಬ್ದವೇಧಿಯುಮದರೊಳೊಂದು.''[1] ಎಂದು ಏಕಲವ್ಯ ತನ್ನ ತಾಯಿಗೆ ಹೇಳುವ ಮಾತಿನಲ್ಲಿ ಗುರುನಿಷ್ಠೆಯಿಂದ ಪಡೆದ ವಿದ್ಯೆ ಅದೆಂದು ಹೇಳುತ್ತಾನೆ.

ಒಮ್ಮೆ ಕೌರವ – ಪಾಂಡವರು ಭೇಟಿಯಾಡಲು ಅರಣ್ಯಕ್ಕೆ ಬಂದಾಗ, ಅವರ ನಾಯಿಯ ಕೂಗನ್ನು ಕೇಳಿ ಏಕಲವ್ಯ ಬಾಣ ಹೂಡಿ ಅದರ ಬಾಯಿಗೆ ಗಾಯವಾಗದ ತೆರದಿ ಬಾಯಿ ಮುಚ್ಚಿಸುತ್ತಾನೆ. ಏಕಲವ್ಯನ ಈ ಕೈಚಳಕ ಕಂಡು ನಿಬ್ಬೆರಗಾದವನು ಅರ್ಜುನ. ಮತ್ಸರದೊಂದಿಗೆ ಈ ವಿಷಯವನ್ನು ಗುರುದ್ರೋಣನಿಗೆ ಅರುಹುತ್ತಾನೆ. ಜತೆಗೆ, ತನಗೆ ಕೊಟ್ಟ ವಚನವನ್ನೂ ನೆನಪಿಸುತ್ತಾನೆ. ದ್ರೋಣರಿಗೆ ಉಭಯ ಸಂಕಟವಾಗುತ್ತದೆ. ಧರ್ಮಸಂಕಟಕ್ಕೊಳಗಾದ ದ್ರೋಣನು ಅಂತರ್ಮುಖಿಯಾಗಿ ಬಿಡುತ್ತಾನೆ. ಒಂದು ಕಡೆ ಅರ್ಜುನನಿಗೆ ಕೊಟ್ಟಿರುವ ವಚನ ರಕ್ಷಣೆ, ಮತ್ತೊಂದು ಕಡೆ ವಚನ ಉಳಿಸಿಕೊಳ್ಳುವುದಕ್ಕಾಗಿ ನಿಷ್ಕಳಂಕನೂ ನಿರಪರಾಧಿಯೂ ಆದ ಏಕಲವ್ಯನಿಗೆ ಒದಗಲಿರುವ ದುರಂತವನ್ನು ನೆನೆದು, ಇಷ್ಟೆಲ್ಲ ಅನಾಹುತಕ್ಕೆ ಮೂಲಕಾರಣ ತನ್ನ ಅಹಂಕಾರವೆಂಬುದನ್ನು ಅರಿತುಕೊಂಡು ತನ್ನ ಬಗ್ಗೆ ತಾನೇ ಹಳಿದುಕೊಳ್ಳುತ್ತಾನೆ.

''ಅಂದು ಆ ಅರ್ಜುನನ ಕೈಯಿಂದಮಾ ದ್ರುಪದನಂ
 ಭಂಗಿಸಿದ ಕತದಿಂದಮಾತಂಗೆ ನಾನಿಂದು
ಋಣಿಯಾಗಿ ಕೈಗೊಂಡೆನೀ ಹೇಯ ಕಾರ್ಯಮಂ;
ನನ್ನ ಹಂಕಾರದಾ ಫಲಮೆ ಮರಿಯಿಕ್ಕಿದುದು
ಪಾರ್ಥನ ಅಹಂಕಾರದೀ ಕ್ರೂರ ಈರ್ಷ್ಯೆಯಂ''

ತಂದೆಯ ಸಂಕಟಕ್ಕೆ ಕಾರಣವನ್ನು ತಿಳಿಯದ ಅಶ್ವತ್ಥಾಮ, ''ಏಕೆ ಅಸ್ಥಿರರಾಗಿ ತೋರ್ಪಿರಿ, ಆರ್ಯ?' ಎಂದು ಕೇಳುತ್ತಾನೆ. ದ್ರೋಣನು ಮಗನಿಗೆ ಎಲ್ಲವನ್ನು ವಿವರವಾಗಿ ಹೇಳುತ್ತಾನೆ. ಆಗ ಅಶ್ವತ್ಥಾಮ ತನ್ನ ಗೆಳೆಯನಿಗೆ ಎಂಥಕೇಡು ಬರುವುದೋ ಎಂದು ಸಿಡಿಮಿಡಿಗೊಳ್ಳುತ್ತಾನೆ; ''ತಡೆವೆನನ್ಯಾಯಮಂ' ಎಂದು ನುಡಿಯುತ್ತಾನೆ. ದ್ರೋಣನು ಅಲ್ಲಿ ಧರ್ಮ ಸಂಕಟದಿಂದ ಪಾರಾಗದಂತಹ ಕರ್ಮದ ತೊಡಕಿಗೆ ಸಿಕ್ಕು ಬಿದ್ದಿರುವುದನ್ನು ತಿಳಿಸುತ್ತಾನೆ.

''ಕೊಳ್ ಮಿಣಿಯ ಪಿಡಿದಿರ್ಪುದಾ ಬಿದಿಯ ಕಯ್ತೆ;
ನೂಂಕುತಿಹುದನಿಬರಂ ತನ್ನ ಲೀಲಾರ್ಥಂ.
ಅಂತಲ್ಲದಿರೆ, ನಮ್ಮನೆತ್ತಣಿಂದಲೊ ಕರೆದು
ಒಯ್ದು ತಂದೀ ನೃಪಾಲರೊಳಿಗಕೆ ತಳ್ಳುತಿರ್ಪುದೆ
ಈಶ್ವರೇಚ್ಛಾರೂಪದೆಮ್ಮ ಕರ್ಮಪಾಶಂ? — ವಿಧಿ ನಿಯಮದಂತೆ, ದ್ರೋಣನು

'ಏಕಲವ್ಯನಲ್ಲಿಗೆ ಹೋಗಲೇ ಬೇಕಾದ ಅನಿವಾರ್ಯತೆ ತಿಳಿಸಿ, 'ಏಕಲವ್ಯನಿಗೆ' ಪೆರಕೇಡು' ಒದಗದಂತೆ ನೋಡುತ್ತೇನೆಂದು ಹೇಳುತ್ತಾನೆ.

ಗುರುವನ್ನು ಕಂಡು 'ಏಕಲವ್ಯ ಧನ್ಯನಾದೆನೆಂದು ತೃಪ್ತಿಪಡುತ್ತಾನೆ. 'ಏಕಲವ್ಯನ ಬಿಲ್ವಿದ್ಯೆಯನ್ನು ಕಂಡು 'ಕಾಣೆನಾನ್ ಶ್ರದ್ಧೆಯೊಳ್ ನಿನಗೆಣೆಯನ್' ಎಂದು ದ್ರೋಣರೂ ಹೇಳುತ್ತಾರೆ; 'ಏಕಲವ್ಯನ ಸಂತೋಷಕ್ಕೆ ತುದಿ ಮೊದಲಿಲ್ಲದಂತಾಗುತ್ತದೆ. ಒಳಗೆ ದ್ರೋಣನಿಗೆ ಭಯವಾಗುತ್ತದೆ. ಅರ್ಜುನನ ಅಸೂಯೆ ತಣ್ಣಗಾಗಿಸಲು 'ಏಕಲವ್ಯನ ಹೆಬ್ಬೆರಳು ಕೇಳಬೇಕಾಗಿದೆ. ಆದರೆ ನೇರವಾಗಿ ಕೇಳುವುದಕ್ಕೆ ಬದಲು ಪರೀಕ್ಷೆಗೆ ಸಿಕ್ಕಿಸುತ್ತಾನೆ. ಮುಗಿಲ ಹಕ್ಕಿಗೆ ಗುರಿಯಿಟ್ಟು ಹೊಡೆದು ತೋರಿಸೆಂದು ಹೇಳಿದಾಗ, 'ಏಕಲವ್ಯ ಯೋಚಿಸಿ,

''ಅಪರಾಧಮಿಲ್ಲದಾ ಸಾಧುವಂ ಕೊಲಲ್ಕಲ್ತು
ಆಚಾರ್ಯ, ಆ ವಿದ್ಯೆಯಂ ನೀನಿತ್ತುದೆನಗೆ.
ಮುನಿಗುಂ ಮಂತ್ರಾಧಿದೇವತೆ; ಮೇಣ್,
ದಿವ್ಯ ವಿದ್ಯಾ ಬಲದಿ ಪಾಪಕಾರ್ಯವನೆಸಗೆ'' ಎಂದು ನುಡಿಯುತ್ತಾನೆ. ಒಂದು

ಕಡೆ ತತ್ತರಿಸುವಂತಾದರೆ, ಮತ್ತೊಂದು ಕಡೆ ಶಿಷ್ಯ 'ಏಕಲವ್ಯನ ಮಾನನೀಯತೆಗೆ ಬೆಚ್ಚುವಂತಾಗುತ್ತದೆ.

'' ನಿನೆ ಬರ್ದುಕಿ ನನ್ನನುಂ ಬರ್ದುಕಿಸಿದಂತು;

ನಿನಗಲ್ತದು ಪರೀಕ್ಷೆ, ನನಗುಂ ಕಣಾ'' ಎಂದು ಅಶಾಂತುಕನಾಗುತ್ತಾನೆ; ನಿಟ್ಟುಸಿರುಬಿಡುತ್ತಾನೆ. ಗುರುವಿನ ನಿಟ್ಟುಸಿರಿನಲ್ಲಿ ಏನೋ ಬಾಯಿಬಿಟ್ಟು ಹೇಳಲಾರದ ಸಂಗತಿ ಇದೆಯೆಂದು ಏಕಲವ್ಯನಿಗೆ ಅರಿವಾಗುತ್ತದೆ. ಏಕಲವ್ಯನೇ ಪುನಃ ಪುನಃ ಗುರುವನ್ನು ಕೇಳುತ್ತಾನೆ. ಆಗ ದ್ರೋಣನು ಅರ್ಜುನನಿಗೆ ವಚನಕೊಡುತ್ತಾ –

'' ಲೋಕತ್ರಯಂಗಳೊಳ್ ನಿನಗೆ ಸಮನಿಲ್ಲದೊಲ
ನಿನಗಾಂ ಧನುರ್ವಿದ್ಯೆಯಂ ಕಲಿಪನೆಂಬುದು
ಅರ್ಜುನಂಗಾನಿತ್ತ ವಚನಂ.'' ಎಂದು ಹೇಳುತ್ತಾನೆ. ಈಗ ಅವನನ್ನು ಮೀರಿಸುವ ಏಕಲವ್ಯ ಒಬ್ಬನಿದ್ದುದು ಅರ್ಜುನನ ಅಸೂಯೆಗೆ ಕಾರಣವಾಗಿರುವುದು. ಅದೇ ದ್ರೋಣನ ಸಂಕಟಕ್ಕೆ ಕಾರಣವಾಗಿದೆ. ಆಗ ಏಕಲವ್ಯ ಗುರುವಿನ ಸಂಕಟ ನಿವಾರಿಸಲು,'

' ನಿನ್ನಿಂದ ಕಲ್ತನಧ್ಯಾತ್ಮವಂ
ಪಡೆವುದೆಲ್ಲಂ ಕೊಡವುದಕ್ಕಲ್ತೆ, ಆರ್ಯ? ಮೇಣ್,
ಪೂರ್ಣವಂ ಕೊಡದೆ ಪಡೆದಪೆಯೆಂತು ಪೂರ್ಣವಂ?
ಬೇಳ್ಪಂತೋನ ವೇಳ್ಕುವಾ ದಕ್ಷಿಣೆಯನೊರೆ, ತೊರೆದು
ದಾಕ್ಷಿಣ್ಯವಂ' ಎಂದು ಸಿದ್ಧನಾಗುತ್ತಾನೆ. ದ್ರೋಣ ಹೆಬ್ಬೆರಳು ಕೇಳುತ್ತಾನೆ; ಆದಕ್ಕೆ ಪುನಃ ದ್ರೋಣನೆ, ''ಏಕಲವ್ಯ, ಈ ಕುಟಿಲ ಕಾರ್ಯಂಗಳಿಗೆ ನಮ್ಮನೆ ನಿಯೋಜಿಪ್ಪುದು, ದೇವನಿಚ್ಛೆಯು ದಿವ್ಯಲೀಲಾ ಪ್ರಯೋಜನಕೆ'' ಎಂದು ನುಡಿಯುತ್ತಾನೆ. ದ್ರೋಣನ ಸಂಕಟ ನಿವಾರಣೆಗಾಗಿ ಭಕ್ತಿಪೂರ್ವಕವಾಗಿ ಏಕಲವ್ಯನು ತನ್ನ ಹೆಬ್ಬೆರಳನ್ನು ಗುರುದಕ್ಷಿಣೆಯಾಗಿ ಕತ್ತರಿಸಿ ಅರ್ಪಿಸಿಬಿಡುತ್ತಾನೆ. ದ್ರೋಣನಿಗೆ ಅದರಿಂದ ಪಶ್ಚಾತ್ತಾಪವಾಗಿ ರಕ್ತ ಮಡುಗಟ್ಟಿ ನಿಂತಿದ್ದ ಕಡೆ ಬಂದು ಬಗ್ಗಿ ನೋಡುತ್ತಾರೆ. ಅಲ್ಲಿ ತನ್ನ ಮುಖ ಕಾಣಿಸುತ್ತದೆ. ಅಲ್ಲಿ ಖಡ್ಗ ಮುಷ್ಟಿಯ ಭೀಮಹಸ್ತವೊಂದು ಅವನ 'ಪಡಿನೆಳಲಿಕೊರಳು' ಕತ್ತರಿಸಿದಂತೆ ಭಾಸವಾಗಿ ಭಯಗ್ರಸ್ತನಾಗುತ್ತಾನೆ;

' ನಿನ್ನೀ ಬೆಳಗೆ
ಕೊಳ್ವುದೆಂದೇ ತೋರ್ಪುದಾ ಬಿದಿ
ನನ್ನ ಕೊರಳಂ.....
ಅಂತೆ ಕರ್ಮದ ಪಾಂಗು: ಮರಿಗೆ ಮರಿ; ಮರಿಗೆ ಮರಿ:
ಬೆರಳ್ ಗೆ ಕೊರಳ್'' ಎಂದು ನುಡಿಯುತ್ತಾನೆ;

ಏಕಲವ್ಯನಿಗೊದಗಿದ ಈ ದುರವಸ್ಥೆಯನ್ನು ಕಂಡ ತಾಯಿಯು ಸಂಕಟ ತಾಳದೆ,

' ಆರ್ಗೊ ಬಲಿ ನನ್ನ ಕಂದನ ಬೆರಳ್
ಬಲಿಯಕ್ಕೆ ಆ ಪಾಪಿಯ ಕೊರಳ್' ಎಂದು ಶಪಿಸಿಬಿಡುತ್ತಾಳೆ. ತಾಯಿಯ ಈ

ಬಗೆಯ ಶಾಪ ಕಂಡು ಏಕಲವ್ಯ ಮರುಗುತ್ತ, ಗುರುವಿನ ಕ್ಷಮೆಗಾಗಿ ಪ್ರಾರ್ಥಿಸುತ್ತಾನೆ.

ಹೀಗೆ ಇಡೀ ನಾಟಕ ಗುರು, ಕರ್ಮ, ಯಜ್ಞತ್ವಗಳ ಮೇಲೆ ನಿರೂಪಿತವಾಗಿದೆ. ಏಕಲವ್ಯನ ತಾಯಿಯಿತ್ತ ಶಾಪವು ಮಹಾಭಾರತದಲ್ಲಿ ದೃಷ್ಟದ್ಯುಮ್ನನು ದ್ರೋಣನ ಕೊರಳನ್ನು ತೆಗೆಯುವುದನ್ನು ಸೂಚಿಸುತ್ತದೆ; ಈ ಕರ್ಮ ಪರಂಪರೆ ಮುಂದುವರೆಯುವುದು ಮಹಾಭಾರತದ ಯುದ್ಧ ಮಹಾಭಾರತದ ಕಥೆಯನ್ನು ಆಧರಿಸಿ 'ಬೆರಳ್ ಗೆ ಕೊರಳ್' ನಾಟಕ ರಚಿತವಾಗಿರುವುದರಿಂದ, ಇಲ್ಲಿಯೂ ಏಕಲವ್ಯನ ಹೆಬ್ಬೆರಳು ಉಳಿಯುವುದಿಲ್ಲವಾದರೂ, ಕುವೆಂಪು ಕಂಡುಕೊಂಡ 'ದರ್ಶನ'ದ ನೆಲೆಯಲ್ಲಿ ಇದನ್ನು ಬಗೆಹರಿಸುತ್ತಾರೆ. ಕರ್ಮದ ದೆಸೆಯಿಂದಾಗಿ ದ್ರೋಣರ ಕೊರಳು ಉಳಿಯುವುದಿಲ್ಲ. ಪುರಾಣದಲ್ಲಿ ಬರುವ 'ಬಲಿ' ಯನ್ನು ಇಲ್ಲಿಯೂ ಬಳಸಿ ನಾಟಕಕ್ಕೆ ಅರ್ಥಪೂರ್ಣ ಶಕ್ತಿಯನ್ನು ತುಂಬಿದ್ದಾರೆ. ಅಂದರೆ ನಾಟಕದಲ್ಲಿ ಬರುವ ಈ ದುರಂತ ದರ್ಶನವು ಧ್ವನಿಸುವುದು, ಕೇವಲ ಏಕಲವ್ಯ ಮತ್ತು ದ್ರೋಣರ ಸಂಬಂಧಿಯಾಗಿಯೇ ಅಲ್ಲ. 'ಕರ್ಮದ ಪಾಂಗು ಮರಿಗೆ ಮರಿ, ಬೆರಳ್ಗೆ ಕೊರಳ್' ಇದು ಮುಂದೆ ಮಹಾಭಾರತದ ಉದ್ದಕ್ಕೂ ಪ್ರತಿಧ್ವನಿಸುವಂತಿದೆ.

ವೈದಿಕ ವರ್ಣಧರ್ಮದ ಪ್ರಕಾರ ಶೂದ್ರನಿಗೆ ವಿದ್ಯೆ ಕಲಿಯುವ ಹಕ್ಕಿಲ್ಲ. ಆದರೆ ಬಿಲ್ವಿದ್ಯೆಯಲ್ಲಿ ಕ್ಷತ್ರಿಯರಂತೆ ಏಕಲವ್ಯ ಧನುರ್ಧಾರಿಯಾದುದೇ ಆ ಕಾಲದ ಪ್ರತಿಷ್ಠಿತ ವೈದಿಕಶಾಹಿ ಸಮಾಜಕ್ಕೆ ಸಹಿಸದಾಗಿತ್ತು. ಕಲಿಕೆ ಮತ್ತು ತಪಸ್ಸು ಎರಡು ಮೇಲ್ವರ್ಗದವರಿಗೆ ಮಾತ್ರ ಮೀಸಲಾಗಿದ್ದುದನ್ನು ಮುರಿದು ಬಿಲ್ವಿದ್ಯೆಯಲ್ಲಿ ಏಕಲವ್ಯನು (ತಪಸ್ಸಿನಲ್ಲಿ ಶಂಭೂಕನು) ಪರಿಣತಿಯನ್ನು ತೋರಿಸಿದ್ದೇ ಅಂದಿನ ವರ್ಣವ್ಯವಸ್ಥೆಯ ಪ್ರಕಾರ ಅಪರಾಧವೆಂದು ತಿಳಿಯಲಾಯಿತು. ಅದಕ್ಕಾಗಿ ಇಂಥ 'ಶಕ್ತಿ'ಗಳನ್ನು ದಮನ ಮಾಡುವುದು ವೈದಿಕಶಾಹಿಯ ನೀತಿಯಾಗಿತ್ತು. ಕುವೆಂಪು ಅವರಿಗೆ ವೈದಿಕರ ಈ ಬಗೆಯ ನೀತಿಯನ್ನು ಪ್ರಶ್ನಿಸಬೇಕಾಗಿತ್ತೆಂದು ತೋರುತ್ತದೆ. ಅದಕ್ಕಾಗಿ ಅವರು 'ಬೆರಳ್ ಗೆ ಕೊರಳ್' (ಮತ್ತು 'ಶೂದ್ರ ತಪಸ್ವಿ') ನಾಟಕವನ್ನು ಬರೆದರು. ಆದರೆ 'ಬೆರಳ್ ಗೆ ಕೊರಳ್' ನಾಟಕದಲ್ಲಿ ದ್ರೋಣ ವೈದಿಕಶಾಹಿಯ ಪ್ರತಿನಿಧಿಯಂತೆ ಚಿತ್ರಿತನಾಗಿಲ್ಲ. ಕುವೆಂಪು ದ್ರೋಣನ ಪರವಾಗಿಯೇ ಇರುವಂತೆ ಅನ್ನಿಸುತ್ತದೆ. ಮಹಾಭಾರತದ ದ್ರೋಣನು ವೈದಿಕನಾಗಿ, ಅರಸರ ಅಧೀನವಾಗಿರುತ್ತಾನೆ. ಏಕಲವ್ಯನ ಹೆಬ್ಬೆರಳನ್ನು ಕ್ರೂರವಾಗಿಯೇ ಕಿತ್ತುಕೊಳ್ಳುತ್ತಾನೆ. 'ಬೆರಳ್ ಗೆ ಕೊರಳ್' ನಾಟಕದಲ್ಲಿಯೂ ದ್ರೋಣನು ಏಕಲವ್ಯನ ಹೆಬ್ಬೆರಳನ್ನೇನೂ ಉಳಿಸುವುದಿಲ್ಲ. ಆದರೆ ಇಲ್ಲಿ ದ್ರೋಣನ ಸಂಕಟವಿದೆ. ಈ ಸಂಕಟದ ಹಿಂದೆ ಅನೇಕ ಬಗೆಯ ಸಂಗತಿಗಳು ಅಡಗಿವೆ. ಎಲ್ಲವನ್ನು ರಾಜಕೀಯ ವ್ಯವಸ್ಥೆ ನಿಯಂತ್ರಿಸುತ್ತಿದೆ ಎಂಬುದು ಇಲ್ಲಿ ವ್ಯಕ್ತವಾಗುತ್ತದೆ. ದ್ರೋಣನಿಗೆ ಅರಸರ ಮೇಲಿನ ಸಿಟ್ಟು ನಾಟಕದಲ್ಲಿ ಅನೇಕ ಪ್ರಸಂಗಗಳಲ್ಲಿ ವ್ಯಕ್ತವಾಗುತ್ತದೆ. ಏಕಲವ್ಯ ವಿದ್ಯಾರ್ಥಿಯಾಗಿ ಬಿಲ್ವಿದ್ಯೆ ಕಲಿಯಲು ಬಂದಾಗ ದ್ರೋಣನು ನಿರಾಕರಿಸುವುದಿಲ್ಲ. ಶೂದ್ರನೆಂದು ಬಗೆಯದೆ ಪ್ರೀತಿಯಿಂದ ತನ್ನ ಬಳಿ ಇರಲು ಸಮ್ಮತಿಸುತ್ತಾನೆ. ಆದರೆ ಅರಸು ಮಕ್ಕಳ ಅಸೂಯೆಯೇ ಏಕಲವ್ಯನಿಗೆ ಮುಳುವಾಗುತ್ತದೆ. 'ಶೂದ್ರನೊಡನೆಮಗೆ ಸಮಚರ್ಯ ಸಲ್ಲದು' ಎಂದು ಅರ್ಜುನ ತಕರಾರು ತೆಗೆಯುತ್ತಾನೆ. ದ್ರೋಣನಿಗೆ

ರಾಜಪ್ರಭುತ್ವದ ಮೇಲಿನ ಅಸಹನೆ ಹೆಚ್ಚಾಗುತ್ತದೆ. 'ಏಕಲವ್ಯನ ಬೆರಳು ತೆಗೆಯಲೇ ಬೇಕಾಗಿ ಬಂದ ಪ್ರಸಂಗದಲ್ಲಿ ಸಂಕಟವಾಗುತ್ತದೆ. ಧರ್ಮಸಂಕಟ, ಏಕಲವ್ಯನ ಮೇಲಿನ ಪ್ರೀತಿ, ಅರ್ಜುನನಿಗೆ ನೀಡಿದ ವಚನ ಪಾಲನೆಗಾಗಿ ಬಲಿ ಕೇಳುವ ಸಂಕಟ ಇವುಗಳಿಂದ ದ್ರೋಣನ ಆಕ್ರೋಶವೂ ಹೆಚ್ಚುತ್ತದೆ. ಈ ಆಕ್ರೋಶ ಧರ್ಮದ ಮೇಲೆಗಿಂತ ಅಥವಾ ವೈದಿಕಶಾಹಿಯ ಮೇಲೆಗಿಂತ, ಹೆಚ್ಚಾಗಿ ರಾಜಶಾಹಿಯ ಮೇಲಿದೆ. 'ಅರಸು ಮಕ್ಕಳೊಗ್ಗಮಜುಗೆಯ್ವುದುಂ, ಮೇಣ್, ಸಿರಿಮದ್ದನೆರೆವುದುಂ ಎರಡುಮೊಂದೆ' ಎಂದು ದ್ರೋಣ ವ್ಯಕ್ತಪಡಿಸುತ್ತಾನೆ. ದ್ರೋಣನ ಮಾನವೀಯತೆ ನಾಟಕದಲ್ಲಿ ಎದ್ದು ಕಾಣುತ್ತದೆ ನಿಜ. ಆದರೆ ದ್ರೋಣ ಕರ್ಮ ಸಿದ್ಧಾಂತದ ನೆಲೆಯಲ್ಲಿ ನಿಂತು, '' ಕರ್ಮದ ಪಾಂಗು: ಮರಿಗೆ ಮರಿ ಮರಿಗೆ ಮರಿ' ಎಂದು ಪಶ್ಚಾತ್ತಾಪ ಪಡುತ್ತಾನೆ. ಅಲ್ಲಿಯವರೆಗೆ ರಾಜಕೀಯ ವ್ಯವಸ್ಥೆಯ ಮೇಲೆ ಸಿಟ್ಟು ತೋರಿಸಿದ ದ್ರೋಣನು, ಕರ್ಮ ಸಿದ್ಧಾಂತಕ್ಕೆ ಬಂದುದೇ ದ್ರೋಣನ ಪಾತ್ರದಲ್ಲಿ ಇರಬಹುದಾಗಿದ್ದ ಮೊನಚು ಕಮ್ಮಿಯಾಗಿಬಿಡುತ್ತದೆ. 'ಜೀವಿಗಳ ಕರ್ಮಜಟಿಲತೆಗೆ ಏಕಲವ್ಯ ಈ ಕುಟಿಲ ಕಾರ್ಯಂಗಳಿಗೆ ನಮ್ಮನೆ ನಿಯೋಜಿಪುದು ದೇವನಿಚ್ಛೆಯು ದಿವ್ಯಲೀಲಾ ಪ್ರಯೋಜನಕೆ' ಎಂಬ ನಿಲುವಿಗೆ ಬಂದಾಗಲೇ, ಮನುಷ್ಯನ ಶಕ್ತಿ-ಸಾಮರ್ಥ್ಯಗಳು ಮರೆಯಾಗಿ, ಕರ್ಮದ ಪಾತ್ರ ಹೆಚ್ಚಾಗುತ್ತದೆ. ಹೀಗಾಗಿ 'ಏಕಲವ್ಯನ ರಕ್ಷಣೆ ಯಾರಿಂದಲೂ, ಯಾವುದರಿಂದಲೂ ಸಾಧ್ಯವಾಗುವುದಿಲ್ಲ. ಹೀಗಾದಾಗ ಕುವೆಂಪು ಏಕಲವ್ಯನಿಗೆ ನ್ಯಾಯ ಹೇಗೆ ಒದಗಿಸಬಲ್ಲವರಾದರೆಂದರೆ, 'ಏಕಲವ್ಯನ ತಾಯಿಯ ಶಾಪದಲ್ಲಿ ಅದು ಅಡಗಿದೆ.

'ಆರ್ಗೆ ಬಲಿ ನನ್ನ ಕಂದನ ಬೆರಳ್

ಬಲಿಯಕ್ಕೆ ಆ ಪಾಪಿಯ ಕೊರಳ್' ಎಂಬಲ್ಲಿ. ಇದು ಕುವೆಂಪುರವರ 'ದರ್ಶನ' ದ ನೆಲೆಯೆಂದರೆ, ಬಲಿ ತೆಗೆದುಕೊಂಡ ದ್ರೋಣನ ಕೊರಳೂ ಉಳಿಯುವುದಿಲ್ಲ ಎಂಬುದು.

ಕುವೆಂಪು ಯಾಕೆ ಮುಖ್ಯರಾಗುತ್ತಾರೆ ಎಂದರೆ, ನಮ್ಮ ಪುರಾಣ ಪರಂಪರೆಯ ರಚನೆಗಳಲೆಲ್ಲಲ್ಲ ಮೇಲ್ವರ್ಗದ ವೈದಿಕರು ಮತ್ತು ಕ್ಷತ್ರಿಯರು ವಿಶೇಷವಾದ ಸ್ಥಾನ ಪಡೆದುಕೊಂಡಿರುತ್ತಾರೆ. 'ಬೆರಳ್ ಗೆ ಕೊರಳ್' ಹಾಗೂ 'ಶೂದ್ರ ತಪಸ್ವಿ' ನಾಟಕಗಳೂ ಅಲ್ಲದೆ ಇನ್ನಿತರ ಕುವೆಂಪು ಕೃತಿಗಳಲ್ಲಿ ಮೇಲ್ವರ್ಗದವರಿಗೆ ಅಂಥ ಸ್ಥಾನವಿರುವುದಿಲ್ಲ. ಅರ್ಜುನ(ಬೆರಳ್ ಗೆ ಕೊರಳ್) 'ಶೂದ್ರ ತಪಸ್ವಿ' ಯಲ್ಲಿ ಬರುವ ವೈದಿಕಶಾಹಿಯ ಪ್ರತಿನಿಧಿಗಳನ್ನು ಕಾಣುತ್ತೇವೆ. ಆದರೂ ಕುವೆಂಪುರವರು ಮೇಲ್ವರ್ಗದ ಮಹಾನ್ ವ್ಯಕ್ತಿಗಳ ಬಗ್ಗೆ ಉದಾರ ನಿಲುವು ತಾಳುವುದನ್ನು ಕಾಣುತ್ತೇವೆ. ಉದಾ: ರಾಮ (ಶೂದ್ರ ತಪಸ್ವಿ) ದ್ರೋಣ (ಬೆರಳ್ ಗೆ ಕೊರಳ್) ಹೀಗಾಗಿ '' ವರ್ಗ ಸಮುದಾಯವೊಂದರ ಅಪವಾದವಾಗಿ ಬರುವ ಈ ಬಗೆಯ ಒಬ್ಬಬ್ಬ ವ್ಯಕ್ತಿಗಳು ಶೋಷಣೆಯ ಉಗ್ರತೆಯನ್ನು ಕಡಿಮೆ ಮಾಡಲು ಸಾಧ್ಯವಾಗುವುದಿಲ್ಲವೆಂಬುದೇ ಅವರ ನೀತಿಯಾಗಿರುವಂತಿದೆಯಾದರೂ ಶೋಷಣೆಯ ಸ್ವರೂಪವನ್ನು ಕುರಿತು ಕುವೆಂಪುರವರ ದೃಷ್ಟಿ ನಿಚ್ಚಳವಾಗಿ ಕಂಡು ಬರುವುದಿಲ್ಲ.'';[3] ಕುವೆಂಪು ಅವರ ನಿಲುವು ಹಿಂದೂಧರ್ಮದ ಮೂಢನಂಬಿಕೆಗಳನ್ನು, ಅನಿಷ್ಟ ಆಚರಣೆಗಳನ್ನು, ಪದ್ಧತಿಗಳನ್ನು ಕಿತ್ತುಹಾಕುತ್ತ, ಅದನ್ನು ಸುಧಾರಿಸುವುದಾಗಿದೆ. ವೈದಿಕರ ಕರ್ಮ ಸಿದ್ಧಾಂತವನ್ನು ಒಪ್ಪಿಕೊಂಡಂತೆ ಕಾಣುವ ಕುವೆಂಪುರವರು ರಾಮಕೃಷ್ಣ ಪರಮಹಂಸ, ವಿವೇಕಾನಂದ, ಗಾಂಧೀಜಿಯವರಲ್ಲಿ ಕಾಣುವ ಸುಧಾರಣಾ

ಕಮ.

ಪ್ರವೃತ್ತಿಯನ್ನು ಇಲ್ಲಿ ನಿತ್ಯಗೊಳಿಸಿದೆ. ಇದರಿಂದ ವೈದಿಕಶಾಹಿಯ ಬಗ್ಗೆ ಆಕ್ರೋಶ ಕಂಡು ಬರುತ್ತದೆಯಾದರೂ, ರಾಜಪ್ರಭುತ್ವದ ವ್ಯವಸ್ಥೆಯನ್ನು ತಿರಸ್ಕರಿಸಿದಂತೆ ಹಿಂದೂಧರ್ಮವನ್ನು ಅವ ತಿರಸ್ಕರಿಸುವುದಿಲ್ಲ. ದಲಿತರ ಬಗ್ಗೆ ಅಪಾರ ಪ್ರೀತಿಯಿದ್ದಂತೆ ಕಂಡರೂ ಅವರಿಗೆ 'ನ್ಯಾಯ' ಒದಗಿಸುವ ಧೈರ್ಯ ತೋರಿಸುವುದಿಲ್ಲ. ಕುವೆಂಪು ಅವರ ಹಿಂದಿರುವ ಆದರ್ಶವಾದಿ ನಿಲುವಿನಿಂದಲೇ ತಾರತಮ್ಯ ವ್ಯವಸ್ಥೆಗಳ ಮಧ್ಯ ನಡೆದಿರುವ ಶೋಷಣೆಗೆ ಒಳಗಾಗುವ ಶೂದ್ರ, ದಲಿತರಿಗೆ ನಿಜವಾದ ನ್ಯಾಯ ಸಿಗುವುದಿಲ್ಲ. ಇಂಥ ಪರಿಸ್ಥಿತಿ ಇಂದಿಗೂ ಬದಲಾಗಿಲ್ಲ.

ಸರ್ವೋದಯ — ಸಮನ್ವಯ ಹಾಗೂ ಪೂರ್ಣ ದೃಷ್ಟಿ — ಈ ಕುವೆಂಪುರವರ ತಾತ್ವಿಕ ನಿಲುವುಗಳು; ಇವು ಹಿಂದೂಧರ್ಮದ ಬಗ್ಗೆ ಸಂಪೂರ್ಣ ತಿರಸ್ಕಾರವಿಲ್ಲದೆ, ಅದರ ಅಮಾನವೀಯ ಗುಣಗಳನ್ನು ಕಿತ್ತುಹಾಕಿ, ಸುಧಾರಿಸುವುದಾಗಿದೆ. ಹೀಗಾಗಿ 'ಬೆರಳ್ ಗೆ ಕೊರಳ್' ನಾಟಕದಲ್ಲಿ ದ್ರೋಣನ ಅಮಾನವೀಯ ನಿಲುವು ಕಾಣದೆ, ಬದಲು ಅಲ್ಲಿ 'ಏಕಲವ್ಯನಿಗಾಗಿ ಮಿಡಿಯುವ ದ್ರೋಣ ಎದುರು ಕಾಣುತ್ತಾನೆ. 'ಸಹನೀಯ' ಎನಿಸುವಂತೆ ಚಿತ್ರಿಸುತ್ತಾನೆ. 'ಏಕಲವ್ಯನ ಹೆಬ್ಬೆರಳನ್ನು ಅನ್ಯಾಯವಾದ ಒತ್ತಡದಿಂದ ಕತ್ತರಿಸಿಕೊಳ್ಳುವ ದ್ರೋಣನೂ, ಆ ಕರ್ಮದಿಂದ ಬಿಡುಗಡೆಯಾಗದೆ, ಮುಂದೊಂದು ದಿನ ಅದಕ್ಕೆ ಪ್ರತಿಯಾಗಿ ದ್ರೋಣನ ಕೊರಳು ಹೋಗಲಿದೆ — ಎಂಬ ತರ್ಕವನ್ನು 'ದರ್ಶನ'ದ ನೆಲೆಯಲ್ಲಿ ಕುವೆಂಪು ಕಾಣಿಕೆಯಾಗಿ ನೀಡುತ್ತಾರೆ.

<u>ಅಡಿ ಟಿಪ್ಪಣಿಗಳು.</u>

1. ಕುವೆಂಪು: ಶೂದ್ರ ತಪಸ್ವಿ (1987) ಉದಯರವಿ ಪ್ರಕಾಶನ, ಪುಟ—45.
2. ಕುವೆಂಪು: ಶೂದ್ರ ತಪಸ್ವಿ (1987) ಉದಯರವಿ ಪ್ರಕಾಶನ. ಪುಟ—47
3. ಕೆ.ಮರುಳಸಿದ್ದಪ್ಪ: ಆಧುನಿಕ ಕನ್ನಡ ನಾಟಕ (198[illegible]) ಪ್ರಿಂಟರ್ಸ್ ಪ್ರಕಾಶನ, ಪುಟ—168.

ಆರ್ಯ-ಅನಾರ್ಯರ ಸಂಘರ್ಷದ ಕಥನವಾಗಲೆಳಸುವ-'ಹೆಬ್ಬೆರಳು'

ಮೂಲ ಮಹಾಭಾರತದ 'ಏಕಲವ್ಯನ ಪ್ರಸಂಗವನ್ನೇ ಆಧರಿಸಿದ ನಾಟಕವಿದು. ಈ ನಾಟಕದಲ್ಲಿ ಬದಲಾಗಿರುವ ಅಂಶವೆಂದರೆ, ಮೂಲ ಕಥೆಯಲ್ಲಿ 'ಏಕಲವ್ಯನ ತಂದೆ ಹಿರಣ್ಯಧನು. ಇಲ್ಲಿ ಏಕಲವ್ಯನ ತಂದೆ ತೀರಿಕೊಂಡಿದ್ದಾನೆ. ಚಿಕ್ಕಪ್ಪನಿದ್ದಾನೆ. ಆತನೇ ಹಿರಣ್ಯಧನು. ಗ್ರೀಕ ನಾಟಕಗಳಲ್ಲಿ ಮೇಳದವರು ಇರುವಂತೆ ಇಲ್ಲಿ ಗೊಂದಳದವರಿದ್ದಾರೆ. ಗೊಂದಳದವರು ನಾಟಕದಲ್ಲಿ ಕಥಾನಕದ ಚಲನೆಗೆ ಸಹಾಯಕರಾಗಿದ್ದಾರೆ. ಮಧ್ಯ ಮಧ್ಯ ತಿಳಿಯಬೇಕಾದ, ತಿಳಿಸಬೇಕಾದ ವಿಚಾರಗಳನ್ನು ವ್ಯಕ್ತಪಡಿಸುತ್ತಾ, ಸಾಗುವರು. ನಾಲ್ಕು ನೋಟ (ಅಂಕ)ಗಳಿಂದ ಕೂಡಿದ ನಾಟಕ.

ಇನ್ನು ಕುವೆಂಪುರವರ 'ಬೆರಳ್ ಗೆ ಕೊರಳ್' ನಾಟಕದಲ್ಲಿರುವ ಅಬ್ಬೆಯ ಪಾತ್ರ ಈ ನಾಟಕದಲ್ಲಿಲ್ಲ. ಇಲ್ಲಿ ಅಬ್ಬೆಯ ಪಾತ್ರದ ಸ್ಥಾನವನ್ನು ಹಿರಣ್ಯಧನು (ಚಿಕ್ಕಪ್ಪ) ನಿರ್ವಹಿಸಿದ್ದಾನೆ. ಇಲ್ಲಿ ಅಶ್ವತ್ಥಾಮನ ಪಾತ್ರವಿಲ್ಲ.

ಬಿಲ್ಲರ ಹಳ್ಳಿಯಲ್ಲಿ ಬಿಲ್ಲರ ಒಡೆಯನಾಗಿ ಹಿರಣ್ಯಧನುವಿದ್ದಾನೆ. ಈತನ ಅಣ್ಣನ ಮಗನೇ 'ಏಕಲವ್ಯ. 'ಏಕಲವ್ಯನ ತಂದೆ ಆರ್ಯರ ಹೋರಾಟದಲ್ಲಿ ಮಡಿದಿದ್ದಾನೆ. ಅಂದಿನಿಂದ 'ಏಕಲವ್ಯ ಚಿಕ್ಕಪ್ಪ ಹಿರಣ್ಯಧನುವಿನೊಂದಿಗೆ ಇದ್ದಾನೆ. ತಂದೆಯಿಂದ ಬಿಲ್ವಿದ್ಯೆಯನ್ನು ಕಲಿತು "ಗೆಳೆಯರ ಕೈಯಲ್ಲಿಯ ಮಿಣ್ಣನೆ ನೆಲ್ಲಿಯನಸಿಯಲಿ ಕೆಯ್ತಗಲದೆ ಕೊಯ್ವ" ಸಾಮರ್ಥ್ಯವನ್ನು ಪಡೆದಿದ್ದಾನೆ. ಆದರೂ ಇನ್ನೂ ಕಲಿಯಬೇಕೆಂಬ ಅದಮ್ಯ ಬಯಕೆಯಿಂದ, ಕಲಿಸಲು ತಕ್ಕ ಗುರು ದ್ರೋಣಾಚಾರ್ಯನೆಂದು ಅರಿತುಕೊಂಡು ಅಲ್ಲಿಗೆ ಹೋಗಲಿಚ್ಛಿಸಿದ್ದಾನೆ. ಅದಕ್ಕಾಗಿ ಚಿಕ್ಕಪ್ಪನಾದ ಹಿರಣ್ಯಧನುವಿನ ಮುಂದೆ ಅನುಮತಿಗಾಗಿ ನಿಲ್ಲುತ್ತಾನೆ.

"ಮೊದಲೇ ಆರ್ಯಂ, ಮೇಲೆ ಪಾರ್ವನಾತಂ, ನಮಗೆ
ಕರಿಯ ಭಿಲ್ಲರನಾರ್ಯರಿಗೆ ವಿದ್ಯೆ ಹೇಳುವನೆ?
ಹದುಂ ಹೊದಿಸುವದೆ ಕಬ್ಬಕ್ಕಿ ಮರಿಯಂ? — ಎಂದು ಹಿರಣ್ಯಧನು ಕೇಳುತ್ತಾನೆ.

ಅನಾರ್ಯರಿಗೆ ವಿದ್ಯೆ ಕಲಿಯುವ ಸ್ವಾತಂತ್ರ್ಯ ಇರಲಿಲ್ಲ., ಆದಕ್ಕಾಗಿ ಆರ್ಯನೂ, ಪಾರ್ವನೂ ಆದ ದ್ರೋಣ ವಿದ್ಯೆ ಕಲಿಸುವುದಿಲ್ಲ, ಮಾತ್ರವಲ್ಲ 'ಏನಾದರೂ ಅಪರಾಧ ಹೊರಿಸಿ ಕೆಡಕನ್ನುಂಟು ಮಾಡಬಹುದು ಎಂಬ ಅನುಮಾನ ಬಂದು ಚಿಂತೆಗೀಡಾಗುತ್ತಾನೆ. ಸಾಕುಮಗನಿಗೆ ಪರಿಪರಿಯಾಗಿ ಹೇಳಿದರೂ ಕೇಳುವುದಿಲ್ಲ. ಕೊನೆಗೆ 'ಏಕಲವ್ಯನ ಉತ್ಸಾಹ ಕಂಡು ಆಶೀರ್ವಾದ ಮಾಡಿ ಕಳಿಸುತ್ತಾನೆ.

ದ್ರೋಣನಲ್ಲಿಗೆ ಬಂದು ತನ್ನ ಮನದಾಸೆಯನ್ನು 'ಏಕಲವ್ಯ ಮುಂದಿಡುತ್ತಾನೆ, ಆಗ ದ್ರೋಣನು,

"ನಿಷಾಧಗಮುಮಾ ಧನುರ್ವೇದವೇ?

ಕ್ಷತ್ರಧಾರಕರ ಸಹವಾಸದೊಳೆ ಶಿಕ್ಷಣವೆ?

ರಾಜಭಕ್ತಿಯಿಂದಲೇ ಪೊರೆಯೋದರ? '' — ಎಂದು ದ್ರೋಣನು 'ಏಕಲವ್ಯನನ್ನು ತಿರಸ್ಕರಿಸುತ್ತಾನೆ. ಕುರುಕುಲದ ಬಾಲಕರಿಗೆ ವಿದ್ಯೆ ಕಲಿಸುವುದು ಒಂದು ಅಭಿಮಾನ, ಗೌರವದ ಸಂಗತಿಯಾಗಿದೆ ದ್ರೋಣನಿಗೆ. ಅದರಲ್ಲೂ ಅರ್ಜುನನಿಗೆ ಬಿಲ್ವಿದ್ಯೆ ಕಲಿಸುವುದರಿಂದ ತನ್ನ ಕೀರ್ತಿ ಜಗತ್ತಿಗೆ ಹಬ್ಬುತ್ತದೆಂಬ ಅಹಂಕಾರದ ಅಭಿಮಾನ:

'' ಉದಾತ್ತನಾ ಗಾನಂದೆ ಕರ್ಣಾಕರ್ಣಿ
ಯಾಗಿ ಪಸರಿಪ ಸಾಮವೇದದಂತಿರದೆನೆವ
ದಿವ್ಯಾಸ್ತ್ರದಿಂದಂತೆಂ ಕಾಲರ್ಕಕಂ ನೆಗಳ್ವಂತೆ,
ಹೋಮವಾಗ್ನಿ ಪೂರ್ಣಾಹುತಿಯನುಜ್ಜ್ವಲಿಸುವಂತೆ
ನಿನ್ನ ಧಾನುಷ್ಕತೆಯಿನಾಂ ಜಗದಿ ಜಸವಡೆವೆ

'ಏಕಲವ್ಯನ ಅದಮ್ಯ ಉತ್ಸಾಹ, ಆತನ ಸಾಮರ್ಥ್ಯವನ್ನು ಅರಿಯದೆ ಆತನ ಬೇಡಿಕೆಗೆ,

' ನೀ ಭಿಲ್ಲ ಬಾಲಕಂ, ನೀನನಾರ್ಯಕಿಶೋರ,
ನಿನಗೆ ಪಂಚಮ ವೇದವಂ ಕಲಿಸಲಾರೆ' — ಎಂದು ನುಡಿಯುತ್ತಾನೆ.

'ಏಕಲವ್ಯ ತನ್ನ ಮುಗ್ಧತೆಯಿಂದಲೇ ' ಅ: ಅಂತೆನೆ ಅನಾರ್ಯರು ಮನುಷ್ಯರಲ್ಲವೆ ಜೀಯಾ?' ಎಂದು ಕೇಳುತ್ತಾನೆ. 'ಏಕಲವ್ಯನ ಮಾತಿನಲ್ಲಿ, ನಾವ್ ಸಾರ್ಯರಿಸಬಹುದು; ನಿಮ್ಮ ಸಹವಾಸದಿಂದ ನಮಗೂ ಉತ್ತಮಿಕೆ ಬರಬಹುದಲ್ಲ—ಎಂಬುದು ವ್ಯಕ್ತವಾದಾಗ ದ್ರೋಣ ಕೋಪಗೊಳ್ಳುತ್ತಾನೆ. ಬ್ರಾಹ್ಮಣನಾಗಿ ವರ್ಣಧರ್ಮವನ್ನು ಅಧೋಗತಿಗೆ ತಳ್ಳಲೇನು? ಶಾಸ್ತ್ರವನ್ನು ನೀರಿಗೆ ಎಸೆಯಲೇನು? '' ವರ್ಣಸಂಕರವಾಗದಂತೆ ಪಾಲಿಪ ರಾಜ ನೀತಿಗಾಂ ವ್ಯಾಘಾತ ಒಡ್ಡಲೆ? '' ಎಂದು ವೈದಿಕ ಧರ್ಮದ ರೀತಿ ನೀತಿಗಳನ್ನು ಪಾಲಿಸುವುದು, ರಾಜಪ್ರಭುತ್ವದ ಕೃಪೆಗೆ ಪಾತ್ರನಾಗಿರುವುದು ಕ್ಷೇಮವೆಂದು ದ್ರೋಣ ಹೇಳುತ್ತ, 'ಏಕಲವ್ಯನ ಬೇಡಿಕೆಯನ್ನು ಕಡೆಗಣಿಸುತ್ತಾನೆ. ಕೊನೆಗೆ 'ಏಕಲವ್ಯ '' ತಾವೆನಗೆ ಕಲಿಸದಿರಿ, ತಮ್ಮಡಿಯೊಳಿಗದೊಳೆಡೆ ಇತ್ತರದೆ ಸಾಕು'' ಎಂದು ಕೇಳುತ್ತಾನೆ . ಆರ್ಯ ಧರ್ಮದ ನಿಯಮವನ್ನು, '' ನಾನತಿಕ್ರಮಿಸೆ'' ಎಂದು ದ್ರೋಣ ನಿರ್ಧರಿಸುತ್ತಾನೆ; 'ಏಕಲವ್ಯ '' ನಲ್ನುಡಿದೆನ್ನ ಕಳುಹಿಸೈ'' ಎಂದು ಬೇಡಿಕೊಂಡಾಗ, '' ಕಾಮಿತಾರ್ಥವ ನಿನ್ನ ಪೂರೈಸಲೀಶ್ವರಂ' ಎಂದು ಹರಸುತ್ತಾನೆ.

'' ಬಿಲ್ಲಾಜ್ಞನಾಗು, ಜಸವಡೆಯು ಜಗದಲಿ ಕಂದ'' ಎಂದು ದ್ರೋಣನು ನುಡಿದುದೇ 'ಏಕಲವ್ಯನಿಗೆ, '' ಇದೇ ನನ್ನ ಬಿಲುವಿದ್ಯೆಗೋನಾಮ'' ಎಂದು ತನ್ನೂರಿಗೆ ಬಂದು ಬಿಡುತ್ತಾನೆ. ದ್ರೋಣನ ಮಣ್ಣಿನ ಬೊಂಬೆಯ ಸಮ್ಮುಖದಲ್ಲಿ ಬಿಲ್ವಿದ್ಯೆಯ ಅಭ್ಯಾಸವನ್ನು ಮಾಡಿ ಪಾರಂಗತನಾಗುತ್ತಾನೆ. ಅದು ಗುರುವಿನಿಂದ ಬಂದುದೆಂದು, ಗುರುವಿನ ಮೇಲಿನ ಅಪಾರ ಭಕ್ತಿ, ವಿಶ್ವಾಸದಿಂದ ಗುರುವನ್ನು ಕಂಡು ನಮಿಸಿ ಕೈಗಾಣಿಕೆ ಕೊಡಬೇಕೆಂದು ನಿರ್ಧರಿಸಿಕೊಳ್ಳುತ್ತಾನೆ. ಇದನ್ನರಿತ ಹಿರಣ್ಯಧನು ಭಯಗೊಳ್ಳುತ್ತಾನೆ. 'ಏಕಲವ್ಯನಿಗೆ,

" ಸಾಲದೇ ಕಂಡ ಹಾವಿನ ಬಿಲದ ಬಳಿಗೈದು

ಸೋರೆಯನ್ನಾಡಿದುದೆ? ಇನ್ನದರೊಳಗೆ ಕೋಲ

ಕುಕ್ಕಿ ಕೆಣಕಿಸಬೇಕೆ? ಕೈಗಾಣಿಕೆಯನೀವೆ

ಕೈಯ ಕಾಣಿಕೆ ಕೇಳಲೇವೆ? " ಎಂದು ಕೇಳುತ್ತಾನೆ. ಏಕಲವ್ಯನು ತನ್ನ ಗುರುವಿನ ಮೇಲಿನ ಶ್ರದ್ಧೆ – ಭಕ್ತಿಯಿಂದ,

" ಬಿಲ್ಲಾವನದೊ ತಾತ ಕೈಯಾತನದೆ.

..... ಬಿಲುವಿದ್ಯೆ ಕಲಿತಂದೆ

ಇತ್ತನವನಿಗೆ ಕೈಯನೊತ್ತೆ, ಇನಿದು ನನ್ನದಲ್ಲ " ಎಂದು

ತನ್ನನ್ನೇ ಗುರುವಿಗೆ ಅರ್ಪಿಸಿಕೊಂಡದ್ದು ಕಂಡ ಹಿರಣ್ಯಧನು ಏಕಲವ್ಯನಿಗೆ ಏನಾಗುವುದೋ ಅಯ್ಯ ಪಾರ್ವರಿಂದ ಎಂದು ತಳಮಳಗೊಳ್ಳುತ್ತಾನೆ. " ಕೈಗೆ ಬರುವುದೋ? ಕಂಗೆ ಬಹುದೋ? ಜೀವಕೆ ಬಹುದೋ? " ಎಂಬ ಅನುಮಾನ, ಭಯದಿಂದ ತತ್ತರಿಸಿಬಿಡುತ್ತಾನೆ.

ಏಕಲವ್ಯ ಹೀಗೆ ಯೋಚಿಸುತ್ತಿರುವಾಗಲೇ ದ್ರೋಣನೇ ಕುರುಕುವರರನ್ನೊಡಗೂಡಿ ಬೇಟೆಗೆಂದು ಕಾಡಿಗೆ ಬರುತ್ತಾನೆ. ಕುರುಕುವರರು ಬೇಟೆಗೆ ತೊಡಗಿದಾಗ, ದ್ರೋಣನು ಕುರು ಪಾಂಡವರ ಮಧ್ಯ ದಿನದಿನಕ್ಕೆ ಹೆಚ್ಚುತ್ತಿರುವ ದ್ವೇಷ ಅಸೂಯೆಯ ಬಗ್ಗೆ ಚಿಂತಿಸುತ್ತ, ಅರಳಿ ಮರದ ಕೆಳಗೆ ಕುಳಿತಾಗ, ಅರ್ಜುನ ಜೋಲುಮೋರೆ ಹಾಕಿಕೊಂಡು ಬಂದು ~~ನಿಂತನು~~ ನಿಲ್ಲುತ್ತಾನೆ; ತಮ್ಮ ಬೇಟೆ ನಾಯಿಗೆ ಏಕಲವ್ಯ ಹೂಡಿದ ಬಾಣಗಳು, ಅವನೊಬ್ಬ ಲೋಕೋತ್ತರ ಧನುರ್ಧಾರಿ ಎಂಬುದು ಸಾರಿ ಹೇಳುತ್ತದೆ. ಅವನು ತಮ್ಮ ಶಿಷ್ಯನಾಗಿದ್ದಾನೆ – ಎಂಬ ಸಂಗತಿ ಹೇಳಿದಾಗ ದ್ರೋಣನು " ಎಂ ಜಗದಿ ಪಾರ್ಥನನ್ನತಿ ಪ್ರಾ ರ್ಥಿಸುವನೊಳನೆ? " ಎಂದು ಬೆಚ್ಚಿಬೀಳುತ್ತಾನೆ, ಏಕಲವ್ಯನ ಕಡೆ ಬಂದಾಗ ಅಲ್ಲಿ ತನ್ನ ಮೂರ್ತಿಯನ್ನು ಕಂಡು ಬೆರಗಾಗುತ್ತಾನೆ. ಏಕಲವ್ಯ ಗುರುವನ್ನು ಕಂಡು ಪರಮಾನಂದದಿಂದ ಪೊಡಮಡುತ್ತಾ, " ತಾವೆಂದು ತಿಳಿಯದೆ ತಮ್ಮ ನಾಯ್ಗಳಲಿ ಕೈಗೈದ ತಪ್ಪಿಗೆನ್ನನು ಕ್ಷಮಿಸಿ ದೇವ " ಎಂದು ಬೇಡುತ್ತಾನೆ. " ಮೆಚ್ಚಿದೆನು ನಿನ್ನತುಲ ಧಾನುಷ್ಕತೆಗೆ " ಎಂದು ಹೇಳಲು, " ಎಲ್ಲವಿದು ದೇವ ತಮ್ಮಡಿಯರುಳೆ " ಎಂದು ಸಮರ್ಪಣಾ ಭಾವದಿಂದ ನುಡಿಯುತ್ತಾನೆ. ದ್ರೋಣನು –

" ಅಂತಾಗೆ ನಿನ್ನ ಗುರು ನಾನೆ? "

"... ಗುರುದಕ್ಷಿಣೆಯ ನೀಡಬೇಡಾ ಕಂದ? " ಎಂದು ಕೇಳಿದಾಗ,

" ಹೆಸರಿಸಿರಿ ದೇವ ದಕ್ಷಿಣೆಯ, ತಮ್ಮಲಿ ಕಲಿತ

ವಿದ್ಯೆಗೀ ಜೀವವನೆ ಮಾರಿತ್ತೆ " ಎಂದು ಭಕ್ತಿಯಿಂದ ನುಡಿಯುತ್ತಾನೆ.

" ಏನೆಂಬೆ ನಿನ್ನ ಬಲಗೈಯ ಹೆಬ್ಬೆರಳಿನೀ ಎನೆ ಕಂದ? " ಎಂದು ಕೇಳಿದ ತಕ್ಷಣವೇ, " ಇತ್ತೆನಿದೊ ಗುರುದೇವ " ಎಂದು ಹೆಬ್ಬೆರಳನ್ನು ಕತ್ತರಿಸಿ ಅರ್ಪಿಸಿಬಿಡುತ್ತಾನೆ. ಅದನ್ನು ಕಂಡು ದ್ರೋಣ, ಅರ್ಜುನ ಇಬ್ಬರು ಬೆಚ್ಚಿಬೀಳುತ್ತಾರೆ. ಹಿರಣ್ಯಧನು ಬಂದು ನೋಡಿ ದುಃಖತಪ್ತನಾಗಿ ದ್ರೋಣನನ್ನು ನಿಂದಿಸ ತೊಡಗುತ್ತಾನೆ.

“ ನಂಬು ನೀ ನಂಬಿದಿರು,

ಪರಿಹಾಸಕೆಂದೆ ನಾ ಬೆರಳ ಕೇಳಿದೆ, ಮಾತು

ಮುಗಿವ ಮುನ್ನವೆ ನಿನ್ನ ಮಗನದಂ ತರಿದಿತ್ತ” ಎಂದು ಮರುಗಿ ಹೇಳುತ್ತಾನೆ. ಆದರೆ ಹೆತ್ತಕರುಳಿನಂತೆ ಹಿರಣ್ಯಧನು ದು:ಖಿತನಾಗಿ 'ಏಕಲವ್ಯನನ್ನು ಸಂತಯಿಸತೊಡಗುತ್ತಾನೆ. ದ್ರೋಣನು 'ಏಕಲವ್ಯನ ಕ್ಷಮೆಯಾಚಿಸುತ್ತಾನೆ. “ಗುರುನಮಸ್ಕಾರಂ.... ಮುಂದು ... ಮನೆಯೊಳೆ... ನಿಂದು...ಎಡೆಗೆಯ್ಯೊಳೆ...ಸಿರಳೊಡುವೆನು” ಎಂದು 'ಏಕಲವ್ಯ ನುಡಿಯುತ್ತಾನೆ. ಅವನಿಗೆ ಗುರುದ್ರೋಣರ ಮೇಲೆ ಸ್ವಲ್ಪವೂ ಸಿಟ್ಟಿಲ್ಲ. ಮುನಿಸಿಲ್ಲ. ನೋವು ನುಂಗಿ ಗುರುವನ್ನೇ ದೈವವೆಂದು ನಂಬಿಬಿಟ್ಟಿರುತ್ತಾನೆ. 'ಏಕಲವ್ಯನಿಗಾದ ಆ ಸ್ಥಿತಿ ಕಂಡು ಅರ್ಜುನನಿಗೂ ತೀವ್ರ ದು:ಖವಾಗುತ್ತದೆ. ಆಗ ದ್ರೋಣ ಅರ್ಜುನನಿಗೆ,

“ ಯಾವುದೆಂದು ಕೆಲಸವನ್ನೆಸಗಲೆಸಗಿದ ಕೆಡುಕೆ

ಕೊನೆಗದು ಮುಳುವೆಂದ ಭಿಲ್ಲರಾಣ್ಮನ ಮಾತು

ಕೇಳಿದೆಯ? ಅರ್ಥವಾಯಿತೆ ಪಾರ್ಥ?” ಎಂದು ಕೇಳಿ, ಅದು ಅರ್ಜುನನಿಗೆ ತಿಳಿಯದೇ ಹೋದಾಗ ದ್ರೋಣನು “ಕೇಳಾರ್ಯರಿನನ್ನುಮನಾರ್ಯರನು ತಮ್ಮೊಳೊಳ್ಕೊಳ್

ದಿರಲವನ ಮಾತೆ ಈಡೇರಲಿದೆ: ಅಕಟಕಟ

ಭಾರತಂ ನಿ:ಕ್ಷತ್ರವಾಗಲಿದೆ” ಎಂದು ಭವಿಷ್ಯತ್ತಿನಲ್ಲಿ ಒದಗುವ ವಿಪತ್ತಿನ ಬಗ್ಗೆ ನುಡಿಯುತ್ತಾನೆ.

ಈ ನಾಟಕದ ಕೊನೆಯಲ್ಲಿ ಗೊಂದಳದವರು, 'ಏಕಲವ್ಯನ ಗುರುಭಕ್ತಿ ಅಥವಾ ಆ ಬಲಿ ತ್ಯಾಗದ ಸಾರ್ಥಕತೆಗೆ ಕಾರಣವಾಗಬಹುದಾದ ಭವಿಷ್ಯತ್ ಚಿಂತನೆಗಳನ್ನು, ವ್ಯಕ್ತಪಡಿಸುತ್ತಾರೆ. [illegible] ದೊಡ್ಡವರೆಂದು ಕರೆಸಿಕೊಳ್ಳುವವರು ನಿಜವಾಗಿ ದೊಡ್ಡವರೆನಿಸಬೇಕಾದರೆ ತಮ್ಮಂತೆ ಇತರರನ್ನೂ ಎತ್ತರಕ್ಕೆ ಬೆಳೆಯಲು ಬಿಡಬೇಕು. ಇತರರನ್ನು ತಾರತಮ್ಯದಿಂದ ನೋಡಿ ತುಳಿಯಲು ಪ್ರಯತ್ನಿಸುವವರು ನಿಜವಾಗಿಯೂ ದುಷ್ಟರಾಗಿರುತ್ತಾರೆ. ಮೇಲು — ಕೀಳು ಎಂಬ ಭೇದ ಮರೆತು ಸಮಾನತೆಯಲ್ಲಿ ಬದುಕುವುದೇ ಮಾನವ ಜನಾಂಗಕ್ಕೆ ಶ್ರೇಯಸ್ಕರವಾದ ನೀತಿ. ಯಾರು ತಮ್ಮ ಮುಂದೆ ಪರರನ್ನು ಬೆಳೆಯುವುದಕ್ಕೆ ಬಿಡಲಾರರೋ ಅವರು ತಮ್ಮ ಸುತ್ತ ಬೇರೆ ಬೀಜಗಳನ್ನು ಮೊಳೆಯಲು ಬಿಡದ ಬಿದಿರುಮೆಳೆಯಂತೆ ಆಗಿ ಕೊನೆಗೆ ತನ್ನೊಳಗಿನ ತಿಕ್ಕಾಟದಿಂದ ಸುಟ್ಟು ಹೋಗುವಂತೆ, ಅಂತರ್ಯುದ್ಧದಿಂದ ನಶಿಸಿ ಹೋಗುವರು. ಇದರಿಂದ ನಮ್ಮ ನೆಲ ಪರತಂತ್ರವಾದೀತು. ಇದು ಪೂರ್ಣ ಸತ್ಯ. ಅದಕ್ಕಾಗಿ ನಮ್ಮಲ್ಲಿರುವ ಮೇಲು — ಕೀಳಿನ ತಾರತಮ್ಯವನ್ನು ಮರೆತು ಸಮಾನತೆಯಿಂದ ಆತ್ಮೀಯತೆಯಿಂದ ಬಾಳಬೇಕು. ಹೀಗಾದಾಗ ಮಾತ್ರ 'ಏಕಲವ್ಯನ ತ್ಯಾಗಕ್ಕೆ ದೊರೆತ ಫಲವಾದೀತು — ಇದು ಈ ನಾಟಕದಿಂದ ನಾಟಕಕಾರ ಸೂಚಿಸುವ ಅಭಿಪ್ರಾಯವೂ ಆಗಿದೆ.

ಗೋವಿಂದ ಪೈ ಅವರ ಈ ನಾಟಕದ ಬಗ್ಗೆ ಜಿ.ಪಿ.ರಾಜರತ್ನಂ ಹೀಗೆ ವ್ಯಕ್ತಪಡಿಸಿದ್ದಾರೆ: ''ಹಿಂದೆ ಆರ್ಯ ಅನಾರ್ಯ ಎಂಬ ಸ್ಪೃಶ್ಯಾಸ್ಪೃಶ್ಯ ಭೇದವಿದ್ದಾಗ, ಆರ್ಯರು ಉಳಿಯಬೇಕಾದರೆ ಅನಾರ್ಯರನ್ನು ಬಳಸಿಕೊಳ್ಳಬೇಕೆಂದು ಆರ್ಯನಾದ ದ್ರೋಣನಿಗೂ ತೋರಿತು. ಕೈಯ ಹೆಬ್ಬೆರಳು ಉಳಿದ ಬೆರಳುಗಳಿಗಿಂತ ತಗ್ಗಿನಲ್ಲಿದ್ದರೂ ಉಳಿದವಕ್ಕಿಂತ ದೂರವಾಗಿ ನಿಂತಿದ್ದರೂ ಆ ಹೆಬ್ಬೆರಳನ್ನು ಕಳೆದುಕೊಂಡ ಹೊರತು ಉಳಿದ ನಾಲ್ಕು ಕೃತ ಕೃತ್ಯವಾಗವು – ಎಂಬುದನ್ನು ಈ 'ಏಕಲವ್ಯನ ನಾಟಕದ ವ್ಯಾಜದಿಂದ ಮುಟ್ಟಿ ಹೇಳಿದ್ದಾರೆ...''[1]

'ಹೆಬ್ಬೆರಳು' ನಾಟಕದಲ್ಲಿ ದ್ರೋಣನು ಸ್ಪಷ್ಟ ವರ್ಣಧರ್ಮದ ಪ್ರತಿನಿಧಿಯಾಗಿ ಕಾಣುತ್ತಾನೆ. ಬಿಲ್ವಿದ್ಯೆ ಕಲಿಸೆಂದು ಏಕಲವ್ಯ ಬಂದಾಗ, ದ್ರೋಣನು ಆಡುವ ಮಾತುಗಳನ್ನು ಗಮನಿಸಿದರೆ, ದ್ರೋಣನು ವರ್ಣಧರ್ಮದ ಪಾಲಕ ಪೋಷಕನಾಗಿ ಕಾಣುತ್ತಾನೆ. ಅರಸರ ಬಗ್ಗೆ ತೀವ್ರವಾದ ಭಯವಿದೆ. 'ಕ್ಷತ್ರೋಪ ಜೀವಿ' – ಎಂದು ತನಗೆ ತಾನೇ ಹೇಳಿಕೊಳ್ಳುತ್ತಾನೆ. ವಿದ್ಯಾರ್ಥಿಯಾಗಿ ಬಂದ ಏಕಲವ್ಯ ನ ಅದಮ್ಯ ಆಸೆಯನ್ನಾಗಲಿ, ಶ್ರದ್ಧಾಭಕ್ತಿಯನ್ನಾಗಲಿ ಗುರುತಿಸದೆ ಧರ್ಮಾಂಧನಾಗಿ ವರ್ತಿಸುತ್ತಾನೆ. (ಆರ್ಯ, ಅನಾರ್ಯರಿಗಿರುವ ವ್ಯತ್ಯಾಸವನ್ನು 'ಏಕಲವ್ಯನಿಗೆ ತಾನೇ ಹೇಳಿಕೊಡುತ್ತಾನೆ.)

'' ಮೊದಲೊಳಾಂ
ಬ್ರಾಹ್ಮಣಂ, ವರ್ಣಧರ್ಮವನದಃ ಪಾಲಿಸಲೆ?
ಶಾಸ್ತ್ರವಂ ಗಂಗೆಗೆಸೆಯಲೆ? ದ್ವಿಜರ ವಿದ್ಯೆಯಂ
ಭಿಲ್ಲಗೊರೆಯಲೆ? ಮೇಲೆ ಕ್ಷತ್ರೋಪಜೀವಿಯಾಗಿ,
ವರ್ಣಸಂಕರವಾಗದಂತೆ ಪಾಲಿಪ ರಾಜ
ನೀತಿಗಾಂ ವ್ಯಾಘಾತ ಒಡ್ಡಲೆ?

......ಸಾಕು, ಸಾಕು, ಮಾ, ಮಾ, ಬಲ್ಲೆ'' ಎಂದು ನುಡಿಯುವ ದ್ರೋಣ, ವೈದಿಕ ಧರ್ಮದ ವ್ಯವಸ್ಥೆಗೆ ತನ್ನನ್ನು ಕಟಿಬದ್ಧಗೊಳಿಸಿಕೊಂಡಂತೆ ಕಾಣುತ್ತಾನೆ. ಅನಾರ್ಯನೆಂದು ಇದ್ದ 'ಏಕಲವ್ಯನನ್ನು ಯಾವುದೇ ಕಾರಣದಿಂದಲೂ ಮಾಸವೀಯತೆಯ ನೆಲೆಯಿಂದ ನೋಡುವುದಿಲ್ಲ. ಇಂಥ ಪರಿಸ್ಥಿತಿ 19ನೆಯ ಶತಮಾನದವರೆಗೂ ನಡೆದುಕೊಂಡು ಬಂದಿತ್ತು. ಆದ್ದರಿಂದಲೇ ಸ್ವಾಮಿ ವಿವೇಕಾನಂದ ಹೇಳುವ ಮಾತುಗಳು ನೆನಪಾಗುತ್ತವೆ: ''ಜ್ಞಾನಕ್ಕೆ ಮೀಸಲಾಗಿದ್ದ ಹಾರುವ ವರ್ಗ, ವೇದೋಪ ನಿಷತ್ತುಗಳನ್ನು 'ಓದಿ ಅದರ ಸಾರವನ್ನು ಹೀರಲಾರದೆ, ಹೀರಲು ಅನ್ಯರಿಗೆ ಅವಕಾಶವೀಯದೆ ಇಡೀ ದೇಶದ, ಜನಾಂಗದ ಸವಲತ್ತನ್ನು ತಿಂದುಂಡು ಕ್ರೂರ ನಿಯಮಗಳಿಂದ ಸಮಾಜವನ್ನು ಬಂಧಿಸಿ ಸ್ವೇಚ್ಛಾ ಪ್ರವೃತ್ತಿಗೆ ತೊಡಗಿ ತಾವು ಹಾಳಾಗುವುದಲ್ಲದೆ ಇಡೀ ದೇಶವನ್ನು ಕನಿಷ್ಠತೆಗಿಳಿಸಿದ್ದರು''.[2] ಇದ್ದಕ್ಕಿದ್ದ ಹಾಗೆ ದ್ರೋಣನ ಪಾತ್ರದಲ್ಲಿ ಬದಲಾವಣೆ ಕಾಣಿಸಿಕೊಳ್ಳುತ್ತದೆ.

'' ಜಾತ್ಯಭಿಮಾನ
ಉತ್ತಮಾಧಮರೆಂಬ ಭೇದ ಕೆಯ್ಯಾರುತಿದೆ

ದ್ವಿಜರು ತಮ್ಮಯ ವಿದ್ಯೆಯಂ ದ್ವಿಜೇತರರಿಗೆ

ಧ್ಯಾಪಿಸರು'' ವೇಣವರೊಡನೆ ಹೊಕ್ಕು ಬಳಕೆಯಿಂ

ವರ್ತಿಸರು'' ಎಂದು ವ್ಯಸನ ಪಡುತ್ತಾನೆ. ಹೀಗೆ ಯೋಚಿಸಲು ತೊಡಗಿದ ಮೇಲೆ ಯಾವ ದ್ರೋಣ 'ಏಕಲವ್ಯನ ಬಿಲ್ವಿದ್ಯೆಯ ಸಾಮರ್ಥ್ಯ ಕಂಡು ಸಂತೋಷಪಡಬೇಕಾಗಿತ್ತು. ''ಕೋಗಿಲೆಯ ಕುಹು ಕೇಳಿ ಕಾಗೆ ಇನ್ನೆನಲೆ?'' ಎಂದು ಕೊಂಡ ದ್ರೋಣನೇ ಇದ್ಯಾವದನ್ನು ಕ್ರಿಯೆಯಲ್ಲಿ ತಂದುಕೊಳ್ಳದೇ 'ಗುರುದಕ್ಷಿಣೆ' ಯನ್ನು ಕೇಳಿ ಹೆಬ್ಬೆರಳನ್ನು ಕಿತ್ತಿಕೊಂಡು ಬಿಡುತ್ತಾನೆ. ಹಿರಣ್ಯಧನು ನಿಂದಿಸಲು ನಿಂತಾಗ ''ಪರಿಹಾಸಕೆಂದು ನಾನು ಬೆರಳ ಕೇಳಿದೆ'' ಎಂದು ಹೇಳುತ್ತಾನೆ. ಇದರಿಂದ ಇಲ್ಲಿ ದ್ರೋಣನ ಹಾಸ್ಯಾಸ್ಪದ ನೀತಿ, ವಿರೋಧ್ಯಾ ಎದ್ದು ಕಾಣುತ್ತದೆ. ''ಬೆರಳನ್ನು ಹಿಂದುಮುಂದು ನೋಡದೆ ಕತ್ತರಿಸಿಕೊಟ್ಟು ಪ್ರಮಾದವೆಸಗಿದನೆಂಬುದು ಗೋವಿಂದ ಪೈರವರು ಮಾಡಿಕೊಂಡಿರುವ ಮಾರ್ಪಾಟು. ಈ ಕಲ್ಪನೆಯ ಅಸಂಭಾವ್ಯತೆಯೊತ್ತಟ್ಟಿಗಿರಲಿ, ಪುರಾಣ ಕಥೆಯ ಸಾಂಕೇತಿಕತೆಯನ್ನು ಐತಿಹಾಸಿಕ ಮಹತ್ವವನ್ನು ಇದು ಮರೆ ಮಾಡಲು ಯತ್ನಿಸಿರುವುದು ಸ್ಪಷ್ಟವಾಗಿದೆ''[3] ; ಕುವೆಂಪುರವರ 'ಬೆರಳ್ ಗೆ ಕೊರಳ್' ನಾಟಕದ ದ್ರೋಣ, ವಿಪ್ರನಾದರೂ ಆತನಿಗೆ ಮೊದಲಿಂದಲೇ ಅರಸರ ಬಗ್ಗೆ ಸಿಟ್ಟಿದೆ. 'ಏಕಲವ್ಯನಿಗೆ ವಿದ್ಯೆ ಕಲಿಸಲು ನಿರಾಕರಿಸುವುದಿಲ್ಲ. ಅರಸು ಮಕ್ಕಳು ಒಪ್ಪದಿದ್ದಾಗಲೂ ದ್ರೋಣ ತನ್ನ ಮನೆಯಲ್ಲಿರಿಸಿಕೊಂಡು ಕಲಿಸಲು ತೊಡಗುತ್ತಾನೆ. 'ಏಕಲವ್ಯನ ಬಿಲ್ವಿದ್ಯೆಯ ಸಾಮರ್ಥ್ಯವನ್ನು ಕಂಡು ಅರ್ಜುನ ಅಸೂಯೆ ಪಡುವುದಕ್ಕೂ ಮತ್ತು 'ಏಕಲವ್ಯನ ಪೆರ ಬೆರಳು ಪಡೆಯುವುದಕ್ಕೂ ತಾನೇ ಕಾರಣವೆಂದು ದ್ರೋಣನು ಅರಿತುಕೊಂಡಿರುತ್ತಾನೆ. ಹೀಗಾಗಿ ಕುವೆಂಪು ಚಿತ್ರಿಸಿದ ದ್ರೋಣನ ವ್ಯಕ್ತಿತ್ವ ಹಿರಿದಾಗಿ ಕಾಣುತ್ತದೆ. ಆತನ ಪಶ್ಚಾತ್ತಾಪ ತುಮುಲಗಳಿಗೆ ಅರ್ಥವಿರುತ್ತದೆ. ಆದರೆ 'ಹೆಬ್ಬೆರಳು' ನಾಟಕದಲ್ಲಿ ಬರುವ ದ್ರೋಣನ ವ್ಯಕ್ತಿತ್ವವೇ ವಿಚಿತ್ರವಾಗಿದೆ. ದ್ರೋಣ ಇಲ್ಲಿ 'ಏಕಲವ್ಯನ ಬೆರಳು ಪಡೆದ ಮೇಲೆ ಮರುಗುತ್ತಾನೆ, ಪಶ್ಚಾತ್ತಾಪ ಪಡುತ್ತಾನೆ. ಇದಕ್ಕೆ ಸರಿಯಾದ ಬೆಂಬಲವಿಲ್ಲದೆ ಕಪಟಿಯಾಗಿ ಕಾಣುತ್ತಾನೆ. ''ನೀನನಾರ್ಯ ಕಿಶೋರ'' ಎಂದು 'ಏಕಲವ್ಯನಿಗೆ ಜರೆದು ಕಳಿಸಿದ ದ್ರೋಣನೇ ಕೊನೆಗೆ ''ಕೇಳಾರ್ಯರಿನ್ನು ಮನಾರ್ಯರನು ತಮ್ಮೊಳೊಳ್ಳಕೊಳ್ಳದಿರಲವನ ಮಾತೆ ಈಡೇರಿಲಿದೆ'' ಎಂದು ನುಡಿಯುತ್ತಾನೆ. ಇದಕ್ಕೆ ದ್ರೋಣನ ವ್ಯಕ್ತಿತ್ವದಲ್ಲಾದ 'ಬದಲಾವಣೆ'' ಎನ್ನಲೂ ಬರುವುದಿಲ್ಲ. ಯಾಕೆಂದರೆ ನಾಟಕದೊಳಗೆ ದ್ರೋಣನ ವ್ಯಕ್ತಿತ್ವದ ಬೆಳವಣಿಗೆಗೆ ಕಾರಣವಾಗುವ ಘಟನೆಗಳಾಗಲಿ, ಸನ್ನಿವೇಶಗಳಾಗಲಿ ಗೋವಿಂದ ಪೈನವರು ಸೃಷ್ಟಿಸುವುದಿಲ್ಲ. ಹೀಗಾಗಿ ದ್ರೋಣನಾಡುವ ಮಾತುಗಳು ಸುಧಾಕರ ಅವರು ಹೇಳುವಂತೆ 'ಬಾಯಲ್ಲಿ ಬೊಮ್ಮ ಜ್ಞಾನ, ಎದೆಯಲ್ಲಿ ಗುಮ್ಮ ಜ್ಞಾನ'[4] ಎನ್ನುವಂತಾಗಿದೆ. 'ಹೆಬ್ಬೆರಳು' ನಾಟಕದಲ್ಲಿ ಬರುವ ಹಿರಣ್ಯಧನುವಿನ ಪಾತ್ರ ಗಟ್ಟಿಯಾದುದು. ಸಾಕುಮಗ 'ಏಕಲವ್ಯನ ಬಗ್ಗೆ ವ್ಯಕ್ತಪಡಿಸುವ ಮಾತುಗಳೆಲ್ಲ ಹೆತ್ತ ಕರುಳಿನಂತೆಯೇ ಇವೆ. ವೈದಿಕಧರ್ಮದ ವರ್ಣಾಶ್ರಮ ನೀತಿಯಿಂದ ಶೂದ್ರನಾಗಿರುವ (ಅನಾರ್ಯ)

ಈ 'ಹೆಬ್ಬೆರಳು' ನಾಟಕದಲ್ಲಿ ಗೊಂದಳದವರು (ಗ್ರೀಕ್ ನಾಟಕದಲ್ಲಿರುವ ಮೇಳದಂತೆ) ಸೂತ್ರಧಾರಿಗಳಂತೆ ಕಥೆಯ ಚಲನೆಗೆ ಕಾರಣವಾಗುತ್ತಾರೆ. ವಿಮರ್ಶಕರಾಗುತ್ತಾರೆ. '' ನಾಟಕಕಾರರ ಮನೋಧರ್ಮವನ್ನು ಪ್ರತಿಬಿಂಬಿಸುವ ಪ್ರತಿರೂಪರಾಗಿ ನಾಟಕಕ್ಕೆ ಕಳೆ ತಂದಿದ್ದಾರೆ''[6] ಆದರೆ ಗೊಂದಳದವರು ಮೊದಲನೆಯ ನೋಟದಲ್ಲಿಯೇ ಎರಡು ಗುಂಪುಗಳಾಗಿ ಒಡೆದು '' ನಾಳೆ ಇಂಥವರಿಗೆಂದೆ ಕಾದಿರಿಸಿದ್ದಾ ಮುಡುಪುಗಡ'' ಎಂದು ಒಂದು ಗುಂಪು ಅಂದಾಗ, ''ಮುಂದೇನಹುದೋ ಮುಂದೆ ಬಲ್ಲದಾ ಮರ್ಮ'' ಎಂದು ಇನ್ನೊಂದು ಗುಂಪು ಅನ್ನುತ್ತದೆ. ಇದು 'ಏಕಲವ್ಯ ದ್ರೋಣನ ಬಳಿ ಬಿಲ್ವಿದ್ಯೆ ಕಲಿಯಲೆಂದು ಹೋಗಲು ನಿರ್ಧರಿಸಿದಾಗಲೆ ಹೇಳುವ ಮಾತುಗಳು. ಅಲ್ಲಿಂದ ನಿರಾಶೆಯಿಂದ ಬಂದಮೇಲೆ ಮಣ್ಣಿನಗೊಂಬೆಯ ಸಮ್ಮುಖದಲ್ಲಿ ಬಿಲ್ವಿದ್ಯೆ ಕಲಿತ ಮೇಲೆ '' ಮುಂದೆ ಏನಪ್ಪುದೋ ದೇವಾ, ನೀನೆಬಲ್ಲೆ'' ಎಂದು ನುಡಿಯುತ್ತಾರೆ ಗೊಂದಳದವರು. ಇದು 'ಏಕಲವ್ಯನಿಗೆ ಒದಗುವ ದುರಂತವನ್ನು ಸೂಚಿಸುವಂತೆ ಕಾಣುತ್ತದೆಯಾದರೂ ನಾಟಕದ ಪೂರ್ವಸೂಚಿತವನ್ನು ಸೂಚಿಸುತ್ತದೆ.

ನಾಟಕದ ಕೊನೆಯಲ್ಲಿ ಗೊಂದಳದವರು ವ್ಯಕ್ತಪಡಿಸುವ,

ಅಂತರ್ಗರಿನ್ನಾದೊಡಮೆನಾಂತರ್ಗರನೊನ್ನಳಕ್ಕೈಸಿ
ಇಬ್ಬರೊಂದಿಗೆ ಸಿತಾಸಿತೆಯಂತೆ ಹರಿಯಲೆಮ
'ಏಕಲವ್ಯನ ಬೆರಳ ಬೆಲೆ ಬಂತು ಅಂತಹುದೆ?
ಆತನೊಸೆದೆಸಗಿದಾತ್ಮಾರ್ಪಣಂ ಸಫಲಿಪುದೆ? — ಈ ವಿಚಾರಗಳು ಹಾಗೂ

ಕೇಳಾಂತರ್ಗರಿನ್ನುಮನಾಂತರ್ಗರನು ತಮ್ಮೊಳಗೊಳಕೊಳ್ಳ
ದಿರಲವನ ಮಾತೆ ಈಡೇರಲಿದೆ; ಅಕಟಕಟ
ಭಾರತಂ ನಃಕ್ಷತ್ರವಾಗಲಿದೆ — ದ್ರೋಣನು ವ್ಯಕ್ತಪಡಿಸುವ ಈ ವಿಚಾರವು ಅಷ್ಟು

ಸಮಂಜಸ ಅನ್ನಿಸುವುದಿಲ್ಲ. ಯಾಕೆಂದರೆ ಮಹಾಭಾರತದ ಯುದ್ಧ ನಡೆಯುವುದು ಕುರು — ಪಾಂಡವರ ಮಧ್ಯದ ದ್ವೇಷಾಸೂಯೆಯ ಫಲವಾಗಿಯೇ ಹೊರತು, ವರ್ಣ ಅಥವಾ ಜಾತಿ ವೈಷಮ್ಯದಿಂದಲ್ಲ; '' ಕೌರವ — ಪಾಂಡವರೊಳಗೆ ನಡೆಯುವ ಯುದ್ಧ ಹೇಗೆ ವರ್ಣಸಂಘರ್ಷವಾಗುತ್ತದೆ ಎಂಬುದು ನಿರೂಪಿತವಾಗಿಲ್ಲ ಅಥವಾ ವರ್ಣ ಸಂಘರ್ಷ ಅನಿಸಿಕೊಳ್ಳುವ ಯುದ್ಧದ ರೀತಿ ಎಂತಹದು ಎನ್ನುವುದನ್ನು ಲೇಖಕರು ಹೇಳಿಲ್ಲ. ಯಾಕೆಂದರೆ ಮುಂದಿನ ಕುರುಕ್ಷೇತ್ರ ಯುದ್ಧಕ್ಕೆ 'ಏಕಲವ್ಯನಂತೂ ಜವಾಬ್ದಾರನಲ್ಲ. ಕರ್ಣ ಆಗಿರಬಹುದಾದರೂ ನಾಟಕದಲ್ಲಿ ಅದರ ವಿವರ ಇಲ್ಲ. ಹೀಗಾಗಿ ಇದೊಂದು ಕಲಾತ್ಮಕ ಕೊರತೆಯೇ ಆಗಿರುತ್ತದೆ''[7]

ಗೋವಿಂದ ಪೈಯವರು ಈ ನಾಟಕದಲ್ಲಿ ಕೊನೆಗೆ ವರ್ಣವೈಷಮ್ಯದ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಿಸುವ ನಿಲುವೇನೋ ಆರೋಗ್ಯಕರವಾದುದೇ. ಆದರೆ 'ಏಕಲವ್ಯನ ಪ್ರಸಂಗದ ಮೂಲಕ ಮಹಾಭಾರತದ ಕಲಹವನ್ನು (ಕುರು — ಪಾಂಡು ಮಕ್ಕಳ ಮಧ್ಯ ದಾಯಾದಿ

ಮತ್ಸರ ಬೆಳೆಯುತ್ತದೆ. ಇದು ಮುಂದೆ ಯುದ್ಧಕ್ಕೆ ಕಾರಣವೆಂಬುದು ನಿಶ್ಚಯ – ಎಂದು ದ್ರೋಣರೇ ಯೋಚಿಸುತ್ತಾರೆ) ವರ್ಣವೈಷಮ್ಯ ಎಂದು ಕರೆಯುವುದು ಸೂಕ್ತವೆಂದು ಅನ್ನಿಸುವುದಿಲ್ಲ. ಭಾರತದ ಚರಿತ್ರೆಯ ಸಂದರ್ಭದಲ್ಲಿ ಹೇಳಿದ್ದರೆ ಹೆಚ್ಚು ಅರ್ಥ ಪೂರ್ಣವಾಗುತ್ತಿತ್ತು. ಆರ್ಯ, ಅನಾರ್ಯರು ಹೊಂದುಗೂಡದೆ ಇರುವುದರಿಂದ ಚರಿತ್ರೆಯ ಉದ್ದಕ್ಕೂ ವರ್ಣ ಸಂಘರ್ಷಗಳು ಉಂಟಾಗುತ್ತಲೇ ಇವೆ. ಗೋವಿಂದ ಪೈ ಅವರ ಆಶಯವು ತುಂಬಾ ಆರೋಗ್ಯಕರ ನಿಲುವೇ ಸರಿ. ಆ ಆಶಯವನ್ನು ವಿಸ್ತರಿಸಿ ನೋಡುವುದಾದರೆ, ಇದು ಇಂದೂ – ಮನುಷ್ಯರ ಐಕ್ಯದ ಅವಶ್ಯಕತೆಯನ್ನು ಸೂಚಿಸಬಲ್ಲದೋ ಏನೋ?

ಅಡಿ ಟಿಪ್ಪಣಿಗಳು:

1. ಜಿ.ಬಿ. ರಾಜರತ್ನಂ: ಕವಿ ಗೋವಿಂದ ಪೈ (1949) ಜೀವನ ಕಾರ್ಯಾಲಯ, ಬೆಂಗಳೂರು. ಪುಟ-65
2. ಸ್ವಾಮಿ ವಿವೇಕಾನಂದರ ಕೃತಿ ಶ್ರೇಣಿ : ಸ್ವಾಮಿ ವಿವೇಕಾನಂದ. ಸಂಪುಟ-6, ಪುಟ-66
3. ಕೆ. ಮರುಳಸಿದ್ದಪ್ಪ: ಆಧುನಿಕ ಕನ್ನಡ ನಾಟಕ(1983) ಪ್ರಿಂಟರ್ಸ್ ಪ್ರಕಾಶನ. ಪುಟ-172
4. ಎಂ.ಸಿ.ವಸಂತಕುಮಾರ (ಸಂ): ಕುವೆಂಪು ನಾಟಕ ಸಮೀಕ್ಷೆ(197?) ಸುರುಚಿ ಪ್ರಕಾಶನ. ಪುಟ-63
5. ಕೆ. ಮರುಳಸಿದ್ದಪ್ಪ: ಆಧುನಿಕ ಕನ್ನಡ ನಾಟಕ (1983 ಪ್ರಿಂಟರ್ಸ್ ಪ್ರಕಾಶನ. ಪುಟ-172
6. ಎಂ.ಸಿ.ವಸಂತಕುಮಾರ(ಸಂ): ಕುವೆಂಪು ನಾಟಕ ಸಮೀಕ್ಷೆ (197? ಸುರುಚಿ ಪ್ರಕಾಶನ. ಪುಟ-64
7. ಆರ್.ಬಿ.ಭಂಡಾರಿ: ಸಮಾಜವಾದಿ ವಾಸ್ತವ(1989) ರಾಘವೇಂದ್ರ ಪ್ರಕಾಶನ. ಪುಟ-35 –36.

'ಕರ್ಮಣಾ ಪರಾರ್ಥ'ದ ಆಶಯವುಳ್ಳ-'ದಿಪರ್ಪಸ್'

ಈ ಶತಮಾನದ ಪ್ರಾರಂಭದಲ್ಲಿ ರಂಗಭೂಮಿಯ ಮೇಲೆ ಪೌರಾಣಿಕ ನಾಟಕಗಳು ಪ್ರದರ್ಶನವಾಗುತ್ತಿದ್ದುವು. ಸಾಮಾಜಿಕ ವಸ್ತುವನ್ನು ಅದರಲ್ಲೂ ಸಾಮಾಜಿಕ ಸಮಸ್ಯೆಗಳ ವಸ್ತುವುಳ್ಳ ನಾಟಕವನ್ನು ರಂಗಭೂಮಿಯನ್ನು ಹತ್ತಿಸಿ ಹೊಸದೊಂದು ಯುಗವನ್ನೇ ಪ್ರಾರಂಭಿಸಿದ ಸಾಹಸಿಗರು, ಕೈಲಾಸಂ ಅವರು. ಇವರು ತಮ್ಮ 'ಟೊಳ್ಳುಗಟ್ಟಿ' ನಾಟಕವನ್ನು ಒಂದು ಸಾಮಾಜಿಕ ಪ್ರಹಸನವೆಂದೇ ಪ್ರಯೋಗಿಸಿದರು. ಯಾಕೆಂದರೆ ಅಂದಿನ ರಂಗ ಪ್ರದರ್ಶನಗಳಲ್ಲಿ ಪೌರಾಣಿಕ ನಾಟಕಗಳು ರಾತ್ರಿಯಿಡೀ ವೈಭವದಿಂದ ಪ್ರದರ್ಶನವಾಗುತ್ತಿದ್ದುವು. ಜಗಜಗಿಸುವ ಸೆಟ್ಟುಗಳು, ಬರ್ಜರಿ ವೇಷಭೂಷಣವುಳ್ಳ ಪಾತ್ರಗಳು, ಪ್ರೌಢ ಭಾಷೆಯ ಸಂಭಾಷಣೆಗಳುಳ್ಳ ನಾಟಕಗಳ ಪಕ್ಕದಲ್ಲಿಯೇ ಕೈಲಾಸಂ ಅವರ ಸಾಮಾನ್ಯ ಪಾತ್ರಗಳಾದ ರಂಗಣ್ಣ, ಅಹೋಬಲ್ಲ, ನಾಗತ್ತೆ, ಸುಬ್ಬಮ್ಮ, ಪಾತು, ಸಾತು, ನರಸಿಂಹಯ್ಯ, ಪೋಸ್ಟಮನ್, ಗಡಷ್ಖಾನ್, ಪೋಲೀಕಿಟ್ಟಿ, ಕಣ್ಣಪ್ಪ ಮುಂತಾದವರು ರಂಗಭೂಮಿಯನ್ನು ಹತ್ತಿದರು. ಇವರ ಮಾತಿನ ಧಾಟಿ, ಹಾಸ್ಯಮಯ ವಿವಾದಗಳು, ವಿಚಿತ್ರ ಸನ್ನಿವೇಶಗಳು ಜನರನ್ನು ದಂಗು ಬಡಿಸಿದವು. ಈ ವಿಚಿತ್ರ ಪಾತ್ರಧಾರಿಗಳು ಅವರ ನಡೆ ನುಡಿಗಳು ಆಕರ್ಷಿಸಿದವು. ಪ್ರೇಕ್ಷಕರು ಹುಚ್ಚೆದ್ದು ನೋಡ ತೊಡಗಿದರು. ಕನ್ನಡ ನಾಟಕ ರಂಗಕ್ಕೆ ಹತ್ತಿದ್ದ 'ಪೌರಾಣಿಕ ತೆವಲು' ನಿಧಾನವಾಗಿ ಮಾಯವಾಯಿತು. ಜನಸಾಮಾನ್ಯರ ದಿನನಿತ್ಯದ ಬದುಕಿನಲ್ಲಿ ಕಾಣಿಸಿಕೊಳ್ಳುತ್ತಿದ್ದ ಸಣ್ಣತನ, ವಂಚನೆ, ಅಟ್ಟಹಾಸ, ಧಿಮಾಕು, ಅಸಹಾಯಕತೆ ಮುಂತಾದವುಗಳೆಲ್ಲ ರಂಗಭೂಮಿಯ ಮೇಲೆ ಬಯಲಾದವು. ಇವು ಸಾಮಾನ್ಯ ಜನರ ಕಣ್ಣು ತೆರೆಸಿದವು. ಇಂಥ ವೈವಿಧ್ಯಮಯ ಬದುಕಿನ ಕ್ಷಣಗಳು ನಟನೆಯಲ್ಲಿ ಆಕರ್ಷಿಸಿದವು. ಇಂಥ ಶ್ರೀಸಾಮಾನ್ಯರ ಮುಂದೆ ದೇವಮಾನವರ ಆರ್ಭಟಗಳು ಸಪ್ಪೆ ಎನಿಸಿದವು. ಹುಸಿ ಎನಿಸಿದವು. ಇದರಿಂದ ಕನ್ನಡ ಸಾಮಾಜಿಕ ನಾಟಕಗಳ ಹೊಸಯುಗ ಪ್ರಾರಂಭವಾಯಿತು. ಇದಕ್ಕೆ ಕೈಲಾಸಂ ಕೊಡುಗೆ ಗಣನೀಯವಾದುದು.

ಕೈಲಾಸಂ ಅವರು ಸಾಮಾಜಿಕ ನಾಟಕಗಳನ್ನು ಬರೆದಿದ್ದಾರೆ. ಪೌರಾಣಿಕ ವಸ್ತುವನ್ನು ಧರಿಸಿದ ನಾಟಕಗಳನ್ನು ಬರೆದಿದ್ದಾರೆ. ಸಾಮಾಜಿಕ ನಾಟಕಗಳನ್ನು ಕನ್ನಡದಲ್ಲಿ ಬರೆದರೆ, ಪೌರಾಣಿಕ ವಸ್ತುವುಳ್ಳ ನಾಟಕಗಳನ್ನು ಇಂಗ್ಲಿಷನಲ್ಲಿ ಬರೆದಿದ್ದಾರೆ. ಜಿ.ಎಸ್.ಆಮೂರ ಹೇಳುವಂತೆ, ''ಕೈಲಾಸಂರ ಪ್ರತಿಭೆ ಕನ್ನಡದಲ್ಲಿ ತನ್ನ ಸಂಪೂರ್ಣ ಅಭಿವ್ಯಕ್ತಿಯನ್ನು ಪಡೆಯಲಿಲ್ಲ. ಅವರ ಕೆಲವು ಉತ್ಕೃಷ್ಟ ಕೃತಿಗಳು ಇಂಗ್ಲಿಷಿನಲ್ಲಿವೆ ಹಾಗೂ ಆ ಬಗೆಯ ಕೃತಿಗಳನ್ನು ಅವರು ಕನ್ನಡದಲ್ಲಿ ಬರೆಯಲಿಲ್ಲ" ಒಳ್ಳೆಯ ಅಥವಾ ಒಳ್ಳೆಯಗಲ್ಲದ ನಾಟಕಗಳೆಂದು ಹೇಳುವ ಬದಲು ಕೈಲಾಸಂ ಗಂಭೀರ ವಸ್ತುವುಳ್ಳ, ಪೌರಾಣಿಕ ನಾಟಕಗಳನ್ನು ಇಂಗ್ಲಿಷಿನಲ್ಲಿ ಬರೆಯಲು ಕಾರಣವನ್ನು ಅವರೇ ಹೇಳಿದ್ದಾರೆ. '' ಈ

ಪಾತ್ರಗಳ ನಿರೂಪಣೆ, ಸಂಭಾಷಣೆ ಇವುಗಳನ್ನು ನನಗೆ ತೃಪ್ತಿಯಾಗುವಂತೆ ರಚಿಸಲು ನನಗೆ ತಕ್ಕಷ್ಟು ಕನ್ನಡ ಭಾಷಾಜ್ಞಾನ ಇಲ್ಲ. ಇಂಗ್ಲಿಷು ಭಾಷೆಯನ್ನು ಹೆಚ್ಚಾಗಿ ಅಭ್ಯಾಸ ಮಾಡಿದ್ದೇನೆ. ಈ ಪುರಾಣದ ಪಾತ್ರಗಳು ಆದರ್ಶ ಪಾತ್ರಗಳು. ಅವರು ಆಡುವ ಭಾಷೆಯೂ ನನಗೆ ತೀರ ಹತ್ತಿರದ ಭಾಷೆಯಾಗಿರಬಾರದು. ಸಾತು, ಪಾತು, ಬೋರ, ನರಸಿಂಹಯ್ಯ ಮುಂತಾದವರನ್ನು ಮಾತಾಡಿಸುವಂತೆ ಅವರನ್ನು ಮಾತಾಡಿಸಬಾರದು. ಆದ್ದರಿಂದಲೇ ಇಂಗ್ಲಿಷ ಭಾಷೆಯನ್ನು ಅವಲಂಬಿಸಿದ್ದೇನೆ'' [2]

'The Burden ' (1933) Fulfilment (1933) The purpose (1944) Karna (1946) Keechaka (1949) ಕೈಲಾಸಂ ಇಂಗ್ಲಿಷಿನಲ್ಲಿ ಬರೆದ ನಾಟಕಗಳಿವು. ಇವು ಒಂದಲ್ಲ ಒಂದು ಕಾರಣಗಳಿಂದ ದುರಂತ ನಾಟಕಗಳಾಗಿವೆ. ಇಂಗ್ಲಿಷ ವಿದ್ಯಾಭ್ಯಾಸಕ್ಕೆ ಹೆಚ್ಚು ಒಲಿದಿದ್ದ ಕೈಲಾಸಂ, ಪಾಶ್ಚಾತ್ಯರೆಲ್ಲಾ ಇದ್ದ ಮಹಾಕಾವ್ಯಗಳನ್ನು ಮರುವ್ಯಾಖ್ಯಾನ ಮಾಡುವ ಪರಂಪರೆಯನ್ನು ಗಮನಿಸಿದ್ದರು. ಹೋಮರನ ಮಹಾಕಾವ್ಯಗಳು ದುರಂತ ನಾಟಕಗಳಿಗೂ, ಕಾವ್ಯ ಕಾದಂಬರಿಗಳಿಗೂ ವಸ್ತುವನ್ನೊದಗಿಸುತ್ತಲೇ ಮುಂದುವರಿದುದು ಮತ್ತು ಭಾರತೀಯರಲ್ಲಿಯೂ ಈ ಕ್ರಮವಿದ್ದುದು ಅರಿತಿದ್ದ ಕೈಲಾಸಂ, ಅನುಸರಿಸಿದ್ದು ಮಾತ್ರ ಪಾಶ್ಚಾತ್ಯ ದುರಂತ ನಾಟಕ ಪರಂಪರೆಯನ್ನೇ. ನಮ್ಮ ರಾಮಾಯಣ, ಮಹಾಭಾರತದಲ್ಲಿ ದುರಂತ ನಾಯಕರು ಬಹಳ ಇದ್ದಾರೆ. ಇವರ ಪಾತ್ರಗಳಿಗೆ ಕೈಲಾಸಂ ತಮ್ಮದೇ ಆದ ಹೊಸ ವ್ಯಕ್ತಿತ್ವವನ್ನು ಹೊಸ ತಾತ್ವಿಕ ಆಯಾಮವನ್ನು ರೂಪಿಸಿ ಚಿತ್ರಿಸಿದ್ದಾರೆ. ಕೈಲಾಸಂ ಚಿತ್ರಿಸಿದ ಇಂಥ ಪಾತ್ರಗಳಲ್ಲಿ 'ಏಕಲವ್ಯನೂ ಒಬ್ಬ. 'The Purpose' ನಾಟಕದಲ್ಲಿ 'ಏಕಲವ್ಯನದು ದುರಂತ ಪಾತ್ರ. ಎರಡೇ ಅಂಕಗಳುಳ್ಳ ನಾಟಕ 'The Purpose' ನಾಟಕದಲ್ಲಿ ಭೀಷ್ಮನಿದ್ದಾನೆ. ನಕುಲ ಸಹದೇವರಿದ್ದಾರೆ. 'ಬೆರಳ ಗೆ ಕೊರಳ', 'ಹೆಬ್ಬೆರಳು' ನಾಟಕದಲಿಲ್ಲ. ಆದರೆ ಈ ಎರಡು ನಾಟಕಗಳಲ್ಲಿ ಬರುವ ಹಿರಣ್ಯಧನು, ಅಬ್ಬೆಯ ಪಾತ್ರಗಳು 'The Purpose ' ನಾಟಕದಲಿಲ್ಲ. ಈ ನಾಟಕದಲ್ಲಿ 'ಏಕಲವ್ಯನಿಗೆ ತಾಯಿಯಿದ್ದರೂ ಆಕೆ ಎಲ್ಲೂ ಕಾಣಿಸಿಕೊಳ್ಳುವುದಿಲ್ಲ. ಎರಡೇ ಅಂಕಗಳುಳ್ಳ ನಾಟಕ.

ತಾಯಿಯ ಅಪ್ಪಣೆಯ ಮೇರೆಗೆ ದ್ರೋಣನಲ್ಲಿಗೆ ಬಿಲ್ವಿದ್ಯೆ ಕಲಿಯಲು ಬಂದ 'ಏಕಲವ್ಯನು, ಪಾಂಡವರಿಗೆ ಬಿಲ್ವಿದ್ಯೆ ಕಲಿಸುತ್ತಿರುವುದನ್ನು ಮರೆಯಲ್ಲಿ ನಿಂತು ನೋಡುತ್ತಿರುತ್ತಾನೆ. ದ್ರೋಣರಿಗೆ ಮೆಚ್ಚಿನ ಶಿಷ್ಯನಾದ ಅರ್ಜುನನಿಗೆ ಕಲಿಸುತ್ತ ಹೇಳುವ ಮಾತುಗಳನ್ನು 'ಏಕಲವ್ಯ ಗ್ರಹಿಸುತ್ತ ಮನನ ಮಾಡಿಕೊಳ್ಳುತ್ತಾನೆ. ''ಬಾಣ ಬಿಡುವಾಗ ಹಿಮ್ಮಡಿಯನ್ನು ಜಾರದೆ ಹಿಂದಕ್ಕೂ ಮುಂದಕ್ಕೂ ಬಳ್ಳಿಯಂತೆ ಬಳುಕಿ ಶರೀರ ಭಾರವನ್ನು ಸದುಪಯೋಗಪಡಿಸಿಕೊಳ್ಳುವ ಅಸ್ತ್ರ ವಿದ್ಯೆಯ ಅಸ್ತಿಭಾರದ ಪೂರ್ಣ ಅರಿವು, 'ಏಕಾಗ್ರಚಿತ್ತನಾಗುವ ಸಂಕಲ್ಪ ಶಕ್ತಿ,

ಶಿಷ್ಯನಿಗೆ ತನ್ನ ಗುರುವಿನಲ್ಲಿ ಗಾಢವಾದ ಪರಿಶುದ್ಧ ಪ್ರೇಮ; ಶಿಷ್ಯನಿಗೆ ಕಲಿಸಬೇಕೆಂಬ ಗುರುವಿನ ಮನಃ ಪೂರ್ವಕ ಸಂಕಲ್ಪ; ಕೊನೆಯದಾಗಿ ಸತತವಾದ ಅಭ್ಯಾಸಗಳೇ ಯಾವ ಜಾತಿಯವನೇ ಆಗಲಿ ಅಪ್ರತಿಮ ಧನುರ್ಧರನಾಗಲು ಅನುಸರಿಸಬೇಕಾದ ಐದು ಅಂಶಗಳು'' ದ್ರೋಣನ ಈ ಬಗೆಯ ಮಾತುಗಳನ್ನು ಕೇಳಿಸಿಕೊಳ್ಳುತ್ತಲೇ ತನ್ನ ಬಿಲ್ವಿದ್ಯೆಯ ಕಲಿಕೆಗೆ ಒಳ್ಳೆಯ ತಳಪಾಯವನ್ನು ಹಾಕಿಕೊಳ್ಳುತ್ತಾನೆ 'ಏಕಲವ್ಯ. ಆದರೆ 'ಏಕಲವ್ಯನಿಗೆ ಒಂದರ ಕೊರತೆ ಇದೆ. ಅದ್ಯಾವುದೆಂದರೆ, '' ವಿದ್ಯಾನ್ವೇಷಣಾರ್ಥಿಗೆ ಕಲಿಸಲು ಗುರುವಿನ ಕಡೆಯಿಂದ ಇರಬೇಕಾದ ಮನಃಪೂರ್ವಕವಾದ ಸಂಕಲ್ಪ''; ಅದಕ್ಕಾಗಿ ದ್ರೋಣನನ್ನು ಕಂಡು ತನ್ನ ಬೇಡಿಕೆ ಸಲ್ಲಿಸುತ್ತಾನೆ. '' ಜಗತ್ತಿನಲ್ಲೆಲ್ಲ ಅಪ್ರತಿಮ ಧನುರ್ಧರನಾಗುವಂತೆ ನನಗೆ ಸಹಾಯ ಮಾಡುವಿರಾ?'' ಎಂದು 'ಏಕಲವ್ಯ ಕೇಳಿದಾಗ ದ್ರೋಣನಿಗೆ ಆಶ್ಚರ್ಯವಾಗುತ್ತದೆ. ಆದರೂ ಬಾಲಕ 'ಏಕಲವ್ಯನ ಮುಗ್ಧತೆಗೆ ದ್ರೋಣ ಮಾರುಹೋಗುತ್ತಾನೆ. ಒಡನೆ ಒಳಗೆ '' ಏನೂ? ಪಾರ್ಥನಿಗೊಬ್ಬ ಪ್ರತಿಸ್ಪರ್ಧಿಯೆ?'' ಎಂದು ಕೊಳ್ಳುತ್ತಾನೆ. ಪುನಃ ಗಟ್ಟಿಯಾಗಿ ನಗುತ್ತ '' ಇಂದೇಕೋ.... ಭೂಮಂಡಲದ ಪ್ರತಿಯೊಬ್ಬ ಬಾಲಕನೂ ಅಪ್ರತಿಮ ಧನುರ್ಧರನಾಗಬೇಕೆಂದು ಬಯಸುವಂತೆ ಕಾಣುತ್ತದೆ'' ಎನ್ನುತ್ತಾನೆ. ಆಗಲೇ ದ್ರೋಣನು ಬಿಲ್ವಿದ್ಯೆಯನ್ನು ಕಲಿಸುತ್ತಿರುವಾಗ, ಅರ್ಜುನ ''ನನ್ನನ್ನು ನೀವು ಜಗತ್ತಿನಲ್ಲೇ ಅಪ್ರತಿಮ ಧನುರ್ಧಾರಿಯಾಗಿ ಮಾಡುವಿರಿ....ಅಲ್ಲವೇ?'' ಎಂದು ಕೇಳಿದಾಗ '' ಖಂಡಿತವಾಗಿ'' ಎಂದು ವಚನ ನೀಡಿರುತ್ತಾನೆ.

'' ನನ್ನ ಹೆಸರು 'ಏಕಲವ್ಯನೆಂದು ಸ್ವಾಮಿ; ನಮ್ಮ ತಂದೆ ಹಿರಣ್ಯಧನಸ್ಸು...ನಿಷಾದ ಜನಾಂಗಕ್ಕೆ ನಾಯಕ. ಒಬ್ಬನೇ ಅಧಿಪತಿ. ಇಂದಿನವರೆಗೆ ಎಂದೂ ಆಗಿ ಹೋಗಿರದಂತಹ ಅಧಿಪತಿ'' ಎಂದು 'ಏಕಲವ್ಯ ಹೆಮ್ಮೆಯಿಂದ ಹೇಳಿಕೊಳ್ಳುತ್ತಾನೆ.

'' ಈಗ ನೀನು ಕಲಿಯಬೇಕೆಂದ ಧನುರ್ವಿದ್ಯೆ, ನಿನ್ನ ತಂದೆಯ ಸಾವಿಗೆ ಪ್ರತೀಕಾರ ಮಾಡಲೋ?'' ಎಂದು ದ್ರೋಣ ಪ್ರಶ್ನಿಸಿದಾಗ,'ಏಕಲವ್ಯ ನೊಂದುಕೊಳ್ಳುತ್ತಾನೆ. ಅವನ ಉದ್ದೇಶವೇ ಬೇರೆ ಇರುತ್ತದೆ. ತನ್ನ ಅರಣ್ಯದಲ್ಲಿ ಜಿಂಕೆ, ಹುಲ್ಲೆ ಮುಂತಾದ ಸಾಧು ಪ್ರಾಣಿಗಳನ್ನು ಹಿಂಸಿಸಿ ಕೊಂದು ತಿನ್ನುವ ತೋಳಗಳನ್ನು ಕೊಂದು ಹಾಕುವುದಕ್ಕೆ ಧನುರ್ಧಾರಿಯಾಗಲು ಬಂದಿರುವುದಾಗಿ ನಿವೇದಿಸುತ್ತಾನೆ. ದ್ರೋಣನು ಇವನ ಉದ್ದೇಶಕ್ಕೆ ಮೆಚ್ಚಿಕೊಂಡು '' ಕರ್ಮಣಾ ಪರಾರ್ಥ; ನೋಡಿದರೆ ಇವನು ನಿಷಾದ; ಆಶ್ಚರ್ಯ;'' ಎಂದು ಬೆರಗಾಗುತ್ತಾನೆ. ಅರ್ಜುನನ ಉದ್ದೇಶ ಇವನಷ್ಟು ಉದಾತ್ತವಾದುದಲ್ಲ ಎಂದು ದ್ರೋಣರಿಗೆ ಗೊತ್ತು. ಅದಕ್ಕಾಗಿಯೇ '' ತನ್ನ ಕರ್ಮವು ಸ್ವಾರ್ಥವನ್ನು ಸಫಲಗೊಳಿಸುವ ಸಾಧನ ಮಾತ್ರ ಎಂದು ತಿಳಿದ ಮನುಷ್ಯ

'' ಕರ್ಮಣಾಸ್ವಾರ್ಥ:'' ಇವನನ್ನು ಅಧಮ ಎನ್ನಬಹುದು. ಕರ್ಮವೇ ಕೊನೆಯ ಧ್ಯೇಯ ಎಂದು ತಿಳಿದವನು. ' ಕರ್ಮ 'ಏವ ಅರ್ಥ' ಇವನನ್ನು ಮಧ್ಯಮ ಎನ್ನಬಹುದು. ಪರಾರ್ಥಕ್ಕಾಗಿಯೇ ಕರ್ಮ ಎಸಗುವವನು ' ಕರ್ಮಣಾ ಪರಾರ್ಥ:' ಇವನನ್ನು ಉತ್ತಮ ಎನ್ನಬಹುದು- ಎಂದೆಲ್ಲ ಅರ್ಜುನನಿಗೆ ದ್ರೋಣನೇ ತಿಳುವಳಿಕೆ ಕೊಟ್ಟಿರುತ್ತಾನೆ. 'ಏಕಲವ್ಯನ

ಉದ್ದೇಶ '' ಕರ್ಮಣಾ ಪರಾರ್ಥ'' ವಾಗಿದ್ದರೂ '' ಕೇಳು ಮಗೂ.. ಕೇಳು... ನೀನು, ನಿನ್ನ ಜಾತಿ,ನಿನ್ನ ಹೆಬ್ಬಯಕೆ... ಇದೇ ನನ್ನ ಯೋಚನೆ'' ಎಂದು ಹಿಂಜರಿಯುವುದು ಕಂಡ ಏಕಲವ್ಯನಿಗೆ ದು:ಖವಾಗುತ್ತದೆ. '' ನನ್ನ ಕುರಿತು ಯೋಚಿಸಬೇಡಿ ಸ್ವಾಮಿ ನಾನು, ನನ್ನ ಕೀಳು ಜಾತಿ... ಅದನ್ನು ಮೀರಿದ ಈ ಹೆಬ್ಬಯಕೆ- ಹೀಗೆ ಯೋಚಿಸಿಕೊನೆಗೆ ನೀವು ನನಗೆ ಕಲಿಸುವ ಯೋಚನೆಯನ್ನೇ ಬಿಟ್ಟುಬಿಡಬಹುದಾಗಿದೆ. ನನ್ನನ್ನು ಬಿಡಿ: ಯೋಚಿಸುವುದಾದರೆ ಆ ಬಡ ಹುಲ್ಲೆಗಳನ್ನು ಕುರಿತು ಯೋಚಿಸಿರಿ'' ಎಂದು ಕೇಳಿದರೂ, '' ಮಗು ನನಗೆ ನಿಜವಾಗಿ ವ್ಯಥೆಯಾಗುತ್ತದೆ... ಆಗುವುದಿಲ್ಲ ಎನ್ನಬೇಕಲ್ಲಾ ಎಂದು... ನೋಡು...ನನ್ನಿಂದ ಕಲಿತು ಕೊಳ್ಳಲು ಆಗಲೆ ನೂರಾರಕ್ಕೂ ಮಿಕ್ಕಿದ್ದಾರೆ ಇಲ್ಲಿ. ಇವರ ಶಿಕ್ಷಣ ಮುಗಿಸಲೇ ಬೇಕಾಗಿದೆ. ಮೊದಲು... ಬಹುಶ: ಇಲ್ಲಿ ಮುಗಿದ ಮೇಲೆ... ನಿನಗೆ'' ಎಂದು ಹೇಳುತ್ತಾನೆ.

'' ಆದರೆ.. ಇಲ್ಲಿ ತಾವು ಎಂದೆಂದಿಗೂ ಮುಗಿಸುವ ಹಾಗೇ ಇಲ್ಲ ಸ್ವಾಮಿ'' ಎಂದು ಏಕಲವ್ಯ ಹೇಳುತ್ತಾನೆ. ಅದೇ ಹೊತ್ತಿಗೆ ಬಿಲ್ವಿದ್ಯೆಯ ಅಭ್ಯಾಸದಲ್ಲಿ ತೊಡಗಿದ್ದ ಅರ್ಜುನ ಮಾಡುವ ತಪ್ಪನ್ನು ಏಕಲವ್ಯ ತೋರಿಸುತ್ತಾನೆ. ಅದನ್ನು ಕೇಳಿ ಅರ್ಜುನ ಬಂದು ಏಕಲವ್ಯನ ಬಗ್ಗೆ ತಿಳಿದುಕೊಂಡು ಅವನನ್ನು ಹೀಯಾಳಿಸುತ್ತಾನೆ. ಏಕಲವ್ಯ ಜಾತಿ, ಅವನ ಹೆಬ್ಬಯಕೆ ಎಲ್ಲ ಕಂಡು ನಗುತ್ತಾನೆ. '' ಕೇಳಿಲ್ಲಿ.. ನೂರಾರು ಜನ ರಾಜಕುಮಾರರು ಬೇಕಾದಷ್ಟು ವಜ್ರ ವೈಢೂರ್ಯ, ಐಶ್ವರ್ಯ, ಕೊಡಬಲ್ಲರು.. ಅಂಥವರಿಗೇ ವಿದ್ಯೆ ಕಲಿಸಲು ನಿರಾಕರಿಸಿದ್ದಾರೆ. ಅಂಥವರು, ಹರಕು ಚಿಂದಿಯ ಬಡ ನಿಷಾದ, ಪೋರ... ಏನೂ ಗುರುದಕ್ಷಿಣೆ ಕೊಡಲಾರದ ಬಡವ... ಇಂಥ ನಿನ್ನನ್ನು ಶಿಷ್ಯನಾಗಿ ಅಂಗೀಕರಿಸುವರೇನು?'' ಎಂದು ಹೀಗಳಿಯುತ್ತಾನೆ. ಅದಕ್ಕೆ ಏಕಲವ್ಯ ಗುರುವಿನ ಮೇಲಿನ ಅಪಾರ ಪ್ರೀತಿಯನ್ನು ವ್ಯಕ್ತಪಡಿಸುತ್ತಾನೆ.

'' ನಾನು ಚಿಂದಿಯುಟ್ಟಿರಬಹುದು, ಬಡವನೂ ಆಗಿರಬಹುದು... ಮಾನ್ಯ ಆಚಾರ್ಯರು ನನ್ನನ್ನು ಶಿಷ್ಯನಾಗಿ ಅಂಗೀಕರಿಸಿದ್ದಾದರೆ.. ಅಸಹಾಯಿಗಳನ್ನು ಸಾವು ನೋವಿನಿಂದ, ಭಯದಿಂದ ರಕ್ಷಿಸುವ ಸತ್ಕಾರ್ಯಕ್ಕೆ ನನ್ನನ್ನು ಅನುವುಗೊಳಿಸಿದ್ದಕ್ಕಾಗಿ ನನ್ನ ಜೀವಮಾನವೆಲ್ಲ ದುರ್ಬಲ ಪ್ರಾಣಿಗಳನ್ನು ಕಾಪಾಡಿದ್ದರಿಂದ ಆರ್ಜಿಸಿದ ತಪಸ್ಸಿನ ಬಹುಭಾಗವೆಲ್ಲ ಅವರಿಗೇ ಸೇರುತ್ತದೆ. ಬ್ರಾಹ್ಮಣರಾದ್ದರಿಂದ ಅವರು, ಧನಕನಕಾಭರಣಾದಿಗಳಿಗಿಂತ ತಪಸ್ಸೇ ಹೆಚ್ಚೆಂದು ಆದರದಿಂದ ಸ್ವೀಕರಿಸುವರು'' ಎಂದು ಹೇಳುತ್ತಾನೆ. ಅರ್ಜುನನಿಗೆ ಭಯ ಸುರುವಾಗಿರುತ್ತದೆ. ತನಗಿಂತ ಬಿಲ್ವಿದ್ಯೆಯಲ್ಲಿ ಏಕಲವ್ಯ ತುಂಬ ಸಮರ್ಥನಾಗಬಲ್ಲ ಎಂಬ ಅಳುಕು. ಅದಕ್ಕಾಗಿ ದ್ರೋಣನು ತನಗೆ ನೀಡಿದ ವಚನವನ್ನು ಮತ್ತೆ ಮತ್ತೆ ನೆನಪಿಸಿ, '' ಈ ನಿಷಾಧ ಬಾಲಕನನ್ನು ನಿಮ್ಮ ಶಿಷ್ಯನನ್ನಾಗಿ ಈಗ ಸ್ವೀಕರಿಸಿದರೆ... ತಾತಾಜಿಯವರಿಗೆ (ಭೀಷ್ಮನಿಗೆ) ಅದು ಒಪ್ಪಿಗೆಯಾಗದಿರದು''. ಎನ್ನುತ್ತಾನೆ.

'' ಅವರಿಗೆ (ಭೀಷ್ಮ) ನಾನೊಂದು ವಚನಕೊಟ್ಟಿದ್ದೇನೆ. ಈ ಅರಸುಕುವರರ ಶಿಕ್ಷಣ ಪೂರ್ಣವಾಗುವವರೆಗೆ ನಾನಾರನ್ನೂ ಶಿಷ್ಯನಾಗಿ ಅಂಗೀಕರಿಸೆನೆಂದು... ಈಗ ನಾನವರಿಗೆ ಕೊಟ್ಟ ಭಾಷೆಯನ್ನು.... ತಪ್ಪುವಂತೆ...ನೀನು ಮಾಡೆ... ಹೌದಲ್ಲ?'' ಎಂದು ಏಕಲವ್ಯನಿಗೆ ದ್ರೋಣನೇ ಹೇಳಿಬಿಡುತ್ತಾನೆ. ಕೊನೆಗೆ ಗುರುಗಳ ಮನ:ಪೂರ್ವಕ ಒಪ್ಪಿಗೆ ಕಲಿಸಲು ಇತ್ತೆಂದು ಗುರುಗಳಿಂದಲೇ ಖಚಿತಪಡಿಸಿಕೊಂಡು, ಅದೇ ಸಾಕೆಂಬ [illegible] ಹಿಂದಿರುಗುತ್ತಾನೆ.

ಏಳು ವರ್ಷಗಳ ನಂತರ ದ್ರೋಣ, ಅರ್ಜುನ ಇಬ್ಬರು ಏಕಲವ್ಯನನ್ನು ಕಾಡಿನಲ್ಲಿ ಭೇಟಿ ಮಾಡುತ್ತಾರೆ. ಕಾಡಿನಲ್ಲಿ ಓಡಿ ಹೋಗುತ್ತಿರುವ ತೋಳದ ನೆತ್ತಿಗೆಗೆ ಒಂದಾದ ಮೇಲೊಂದು ಸುಂಯಿ ಎಂದು ಬಂದು ನೆಟ್ಟುಕೊಳ್ಳುವ ಬಾಣಗಳನ್ನು ಕಂಡು, ಹೀಗೆ ಬಾಣ ಹೂಡುವವನ ಕೈಚಳಕ ಕಂಡು ಬೆರಗಾಗುತ್ತಾರೆ. ''ಮೂವತ್ತು ಹೆಜ್ಜೆ ಅದಿಡುವುದರೊಳಗಾಗಿ ನೂರು ಬಾಣ ಬಿಟ್ಟಿದ್ದಾನೆ.... ಅಬ್ಬ; ಆಶ್ಚರ್ಯ... ಭಲೆ; ಪರಮಾಶ್ಚರ್ಯ ಪಾರ್ಥ.. ಅಸಾಧ್ಯವಿದು ನನಗೆ;'' ಎನ್ನುತ್ತಾನೆ ದ್ರೋಣ. ಯಾರೆಂದು ನೋಡಿ ಅವನಿಗೆ ''ನಿನ್ನ ಅಸ್ತ್ರವಿದ್ಯೆ... ಆಶ್ಚರ್ಯಕರ;'' ಎಂದು ಅರ್ಜುನ ಅಂದಾಗ, ಏಕಲವ್ಯ ''ಅದೇನು ಮಹಾ; ಅದರರ್ಧ ಹೊತ್ತಿನಲ್ಲಿ ಅದರೆಡರಷ್ಟು ಬಾಣಗಳನ್ನು ಬಿಡಬಲ್ಲೆ, ಲೀಲಾಜಾಲವಾಗಿ'' ಎಂದು ಸಹಜವಾಗಿ ನುಡಿಯುತ್ತಾನೆ. ಅವನು ಯಾರೆಂಬ ಕುತೂಹಲ ಒಡೆದು ಏಕಲವ್ಯನಾಗಿರುತ್ತಾನೆ. ಅವನಿಗೂ ಇವರಿಬ್ಬರ ಪರಿಚಯವಾಗುತ್ತದೆ. ಗುರುವನ್ನು ಕಂಡು ಆನಂದ ಹೊಂದುತ್ತಾನೆ. ''ನನ್ನ ನೋಡಿದಿರಲ್ಲ ನೀವೀಗ.. ಬಿಲ್ಲು ಬಾಣ ಕೈಯಲ್ಲಿದ್ದಾಗ? ಈ ಬಡಪಾಯಿಗೆ ನೀವು ಕಲಿಸಿದ್ದು, ನೀವು ಅನುಗ್ರಹಿಸಿ ಪಾಠ ಹೇಳಿದ್ದು ಒಳ್ಳೆಯದೆನಿಸುತ್ತದೆಯೆ ಗುರುವರ್ಯ? ಇನ್ನೇನು ಇನ್ನೊಂದೇ ತೋಳ, ಈ ಕಾಡಿನಲ್ಲಿ ಉಳಿದಿದೆ. ಅದನ್ನೂ ಸಂಹರಿಸಿದರೆ ಈ ಕಾಡು ಕ್ರೂರ ಮೃಗಗಳಿಂದ ಮುಕ್ತವಾಗಿ ಬಿಡುವುದೆಂದು ನಾನೆಂದರೆ.. ನೀವು ಅನುಗ್ರಹಿಸಿ ಹೇಳಿಕೊಟ್ಟ ಶಿಕ್ಷಣಕ್ಕೆ ಅರ್ಹನಾಗಲೂ ಎಷ್ಟು ಹೆಣಗಿದ್ದೇನೆಂದು ನಿಮಗೆ ಗೋಚರವಾದೀತು ಗುರುವರ್ಯ'' ಎಂದು ಹೇಳಿದಾಗ ದ್ರೋಣರಿಗೆ ನಂಬದಾಗುವುದಿಲ್ಲ. ''ನಿನ್ನ ಸಾನ್ನಿಧ್ಯವನ್ನು ಅನುಭವಿಸದೆಯೆ ನಿನಗೆ ಕಲಿಸಿದೆನೆ ನಾನು?'' ಎಂದು ಕೇಳಿದಾಗ, ಏಕಲವ್ಯನು ಗುರುದ್ರೋಣನ ಮೃಣ್ಮೂರ್ತಿಯನ್ನು ಮಾಡಿಕೊಂಡು ಅದನ್ನೇ ಗುರುವೆಂದು ಭಾವಿಸಿ ಬಿಲ್ವಿದ್ಯೆ ಕಲಿತದ್ದೆಂದು ಮನಗಾಣಿಸುತ್ತಾನೆ. ಇದನ್ನು ಕಂಡ ಅರ್ಜುನನಿಗೆ ಅಸೂಯೆಯುಂಟಾಗುತ್ತದೆ. ''ಗುರುಗಳೇ, ನಿಮ್ಮ ವಚನವೇನಾಯಿತು?'' ಎಂದು ಕೇಳುತ್ತಾನೆ. ದ್ರೋಣ ನಿ:ಸಹಾಯಕನಾಗುತ್ತಾನೆ. ''ಈ ಮಗುವಿಗೆ ಕಲಿಸಿದ್ದೆಲ್ಲ ನಾನೇ, ನನಗೆ ತಿಳಿಯದೆಯೆ ಕಲಿಸಿದೆ. ಎಂಬುದು ನನಗೀಗ ಮನವರಿಕೆಯಾಗಿದೆ. ಆದರೆ ನನ್ನನ್ನೂ ಮೀರಿಸುವ ಧನುರ್ಧರ ಇವನಾಗುವನ್. ನಾನು ಹೇಗೆ ಸಹಾಯ ಮಾಡಬಲ್ಲೆನಾದೆ, ಎಂಬುದೇ ಇನ್ನೂ ಬಿಡದ ಒಗಟಾಗಿದೆ'' ಎಂದು ದಿಕ್ಕುಗೆಡುತ್ತಾನೆ. ಆಗ ಏಕಲವ್ಯ ತನ್ನ ತಾಯಿ ಕಲಿಸಿದ ಒಂದು ಮಾತು, ''ಶಿಷ್ಯನು ಗುರುವಿಗಿಂತ ಹೆಚ್ಚಿನ ಕೌಶಲವನ್ನು ಗುರುವಿನಿಂದಲೆ ಕಲಿಯಬಲ್ಲನು... ಆ ಗುರುವು ತನ್ನ ಗುರುವಿನಿಂದ ಕಲಿಯುವಾಗಿಟ್ಟುಕೊಂಡ ಉದ್ದೇಶಕ್ಕಿಂತ, ಈ ಶಿಷ್ಯನ ಉದ್ದೇಶವು ಹೆಚ್ಚು ಉದಾತ್ತವಾಗಿದ್ದಾಗ, ಖಂಡಿತ ಹೆಚ್ಚು ಕಲಿಯಬಲ್ಲನು'' ಎಂಬುದಾಗಿ ಹೇಳುತ್ತಾನೆ.

ಅರ್ಜುನನ ಕಲಿಕೆಯ ಉದ್ದೇಶ ''ಧನುರ್ಧರನೆಂಬ ಕೀರ್ತಿ ಸಂಪಾದಿಸಬೇಕು, ಅಪ್ರತಿಮನೆಂದು ಹೆಸರು ಗಳಿಸಬೇಕು'' ಇಷ್ಟೇ. ಏಕಲವ್ಯನ ಉದ್ದೇಶ ಇದಕ್ಕಿಂತಲು ಎಷ್ಟೋ ಉತ್ತಮವೆಂದು ದ್ರೋಣ ಹೇಳುತ್ತಾನೆ. ಅರ್ಜುನನಿಗೆ ಇದು ಬೇಕಾಗಿರಲಿಲ್ಲ. ಅವನ ಅಸೂಯೆ ಕ್ಷಣಕ್ಷಣಕ್ಕೂ ಹೆಚ್ಚಾಗುತ್ತದೆ. ಕೊನೆಗೆ ಗುರು ದ್ರೋಣನಿಗೆ ''ಘನವಂತ ದ್ರೋಣಾಚಾರ್ಯರು ವಚನ

ಭ್ರಷ್ಟರಾದರೆಂದು" ಪ್ರಪಂಚಕ್ಕೆ ಚಿತ್ರಿಸುತ್ತೇನೆಂದು ಹೇಳುತ್ತಾನೆ. "ನನ್ನನ್ನು ತಡೆಯುತ್ತಾರೋ ಯಾರು? ಬರಲಿ ನೋಡುತ್ತೇನೆ" ಎಂದು ಸವಾಲೆಸೆಯುತ್ತಾನೆ. ಗುರುವಿಗೆ ಒದಗುವ ಈ ಕಳಂಕಕ್ಕೆ ನಾನೇ ಕಾರಣ, ನನ್ನ ಬಿಲ್ವಿದ್ಯೆಯ ಸಾಮರ್ಥ್ಯವೇ ಕಾರಣ ಎಂದು ಅರಿತುಕೊಂಡ ಏಕಲವ್ಯ ಭಕ್ತಿಯ ಆವೇಶದಲ್ಲಿ "ಗುರುಗಳೇ, ನೀವು ವಚನವನ್ನು ಪಾಲಿಸಿಯೇ ಪಾಲಿಸುವಿರಿ. ಅವನ ಬಾಯನ್ನು ಎಂದೆಂದಿಗೂ ನಾನು ಮುಚ್ಚುವೆ" ಎಂದು, ನಾನೇ ನನ್ನ ಹೆಬ್ಬೆರಳನ್ನು ಕತ್ತರಿಸಿ, ನನ್ನ ಬಿಲ್ವಿದ್ಯೆಗೆ ಕಾರಣವಾದ ಅರ್ಪಿಸುತ್ತಾನೆ. ನಂತರ ಗುರುದ್ರೋಣ, ಅರ್ಜುನರು ಹೋಗುತ್ತಾರೆ. ಏಕಲವ್ಯನಿಗೆ ಅರಿವಾಗುತ್ತದೆ. "ನನ್ನ ಹುಲ್ಲೆ – ಜಿಂಕೆಗಳು ವಿಪತ್ತಿಗೆ ಸಿಕ್ಕಿವೆ. ನಾನು ಏನನ್ನೂ ಮಾಡಲಾರದವನಾಗಿದ್ದೇನೆ" ಎಂದು ಪಶ್ಚಾತ್ತಾಪ ಪಡುತ್ತಾ, ಗುರುವನ್ನು ನಿಂದಿಸತೊಡಗುತ್ತಾನೆ!

ಕೈಲಾಸಂ ಈ ನಾಟಕಕ್ಕೆ 'The Purpose' (ಉದ್ದೇಶ) ಎಂದು ಕರೆದಿರುವುದು ಯಾಕೆಂದು ಗೊತ್ತಾಗುವುದು ಎರಡು ಸಂದರ್ಭದಲ್ಲಿ ಅಥವ ಎರಡು ವ್ಯಕ್ತಿಗಳಲ್ಲಿ. ನಾಟಕದ ಮೊದಲ ಅಂಕದಲ್ಲಿಯೇ ಭೀಷ್ಮನು, ಮನುಷ್ಯ ಜೀವನದ ಉದ್ದೇಶ ಒಂದಿರುತ್ತದೆ. ಆದರೆ ಅದರ ಪರಿಣಾಮ ಆ ಮನುಷ್ಯನಿಗೆ ಗೊತ್ತಾಗುವುದಿಲ್ಲ. ಅದು ದೇವರಿಗೆ ಗೊತ್ತಾಗಬೇಕು ಎನ್ನುತ್ತಾನೆ; "ನನ್ನ ವಂಶದ ರಕ್ಷಣೆ. ನನ್ನ ಜೀವನದ ಒಂದೇ ಕರ್ತವ್ಯ. ನನ್ನ ವಂಶದ ಅಭಿವೃದ್ಧಿ ನನ್ನ ದೀರ್ಘ ಜೀವನದ ಒಂದೇ ಕಾರಣ" ಎನ್ನುವ ಭೀಷ್ಮನಿಗೆ ಅರಸೊತ್ತಿಗೆಯನ್ನು ರಕ್ಷಣೆ ಮಾಡಬೇಕಾಗಿದೆ. ವರ್ಣಧರ್ಮವನ್ನು ನೋಡಿಕೊಂಡು ಹೋಗಬೇಕಾಗಿದೆ. ಇದರಿಂದಾಗುವ ಪ್ರಯೋಜನದ ಬಗ್ಗೆ ಭೀಷ್ಮನಿಗೆ ಅರಿವಾಗದು. "ಉತ್ತಮವದು, ಬಿತ್ತುವುದು ಮಾತ್ರವೇ ನನ್ನ ಕಾರ್ಯ" ಎಂಬ ನಿರ್ಧಾರ ಆತನದು. ಆದರೆ ಅರಸು ಮಕ್ಕಳ ಅಸೂಯೆ ತಡೆಯಲಾರದವನಾಗಿದ್ದಾನೆ. ಅಸೂಯೆಯಿಂದಾಗುವ ಯುದ್ಧ ರಕ್ತಪಾತ ತಡೆಯದವನಾಗಿದ್ದಾನೆ. ಈ ಭೀಷ್ಮನಂತೆ ಏಕಲವ್ಯನಿಗೂ ಒಂದು ಉದ್ದೇಶವಿದೆ. ತನ್ನ ಕಾಡಿನಲ್ಲಿರುವ ಸಾಧು ಪ್ರಾಣಿಗಳಾದ ಜಿಂಕೆ, ಹುಲ್ಲೆಗಳನ್ನು ಕೊಂದು ತಿನ್ನುವ ತೋಳಗಳನ್ನು ಸರ್ವನಾಶ ಮಾಡುವುದಕ್ಕಾಗಿ ಬಿಲ್ವಿದ್ಯೆ ಕಲಿಯುತ್ತೇನೆ – ಎಂಬುದೇ ಏಕಲವ್ಯನ ಉದ್ದೇಶ. ಇಲ್ಲಿ ಧ್ವನಿತವಾಗುವ ವಿಷಯವೆಂದರೆ, ಭೀಷ್ಮನು ಹೇಗೆ ಅರಸು ಮಕ್ಕಳ ಮಧ್ಯದ ಅಸೂಯೆಯನ್ನು ತಡೆಯಲಾರದವನಾಗಿದ್ದಾನೋ, ಮಹಾಭಾರತದ ಯುದ್ಧವನ್ನು ತಡೆಯಲಾರದಾಗಿದ್ದಾನೋ ಹಾಗೆಯೇ, ಭೀಷ್ಮನಾಗಲಿ, ದ್ರೋಣನಾಗಲಿ ಏಕಲವ್ಯನ ಹೆಬ್ಬೆರಳು ಹೋಗುವುದನ್ನು ತಡೆಯಲಾರರು. ಅಷ್ಟೇ ಅಲ್ಲ ಉದ್ದೇಶದಿಂದಾಗುವ ಫಲಕ್ಕೆ ಯಾರು ಯಾರಿಗೆ ಕಾರಣವಾಗಬೇಕಿಲ್ಲ ಎಂಬುದೂ ಇಲ್ಲಿ ವ್ಯಕ್ತವಾಗುತ್ತದೆ. ವಿಧಿವಾದ ಇಲ್ಲವೇ ಕರ್ಮತತ್ವವನ್ನು ಕೈಲಾಸಂ ಪ್ರತಿಪಾದಿಸುವಂತೆ ಕಾಣುತ್ತಾರೆ.

ಕೈಲಾಸಂ ದ್ರೋಣನಲ್ಲಿ ಯಾವುದೇ ವಿಶೇಷತೆಯನ್ನು ತಂದಿಲ್ಲ. ದ್ರೋಣನಿಗೆ ಇಲ್ಲಿ ಒಂದು ಜವಾಬ್ದಾರಿ ಇದೆ ಎಂದು ಕೂಡ ಅನ್ನಿಸುವುದಿಲ್ಲ. ಕುವೆಂಪು 'ಬೆರಳ್ ಗೆ ಕೊರಳ್' ನಲ್ಲಿ ದ್ರೋಣನಿಗೆ ಜವಾಬ್ದಾರಿಯಿದೆ. 'ಏಕಲವ್ಯನನ್ನು ಅರಸು ಮಕ್ಕಳು ತಿರಸ್ಕರಿಸಿದರೂ, ದ್ರೋಣ ತನ್ನ ಮನೆಯಲ್ಲಿ ಇರಿಸಿಕೊಂಡು ಬಿಲ್ವಿದ್ಯೆ ಕಲಿಸಲು ಮುಂದಾಗುತ್ತಾನೆ. ಇಲ್ಲಿ ಕೈಲಾಸಂ ದ್ರೋಣನನ್ನು ಅರ್ಜುನನ ಕೈಗೊಂಬೆಯಂತೆ ಮಾಡಿದ್ದಾರೆ. 'ನೀವು ನಿಷಾಧ ಬಾಲಕನನ್ನು ನಿಮ್ಮ ಶಿಷ್ಯನನ್ನಾಗಿ ಈಗ ಸ್ವೀಕರಿಸಿದರೆ ತಾತಾಜಿಯವರಿಗೆ (ಭೀಷ್ಮ) ಇದು ಒಪ್ಪಿಗೆಯಾಗದಿರಬಹುದು ನಾನವರಿಗೆ ತಿಳಿಸಿದರೆ....'' ಎಂದು ಅರ್ಜುನ ಬೆದರಿಕೆ ಹಾಕಿದ ಕೂಡಲೆ, 'ಏಕಲವ್ಯನನ್ನು ನಿರಾಕರಿಸಿಬಿಡುತ್ತಾನೆ. ಮುಂದೆ 'ಏಕಲವ್ಯ ಅರ್ಜುನನಿಗಿಂತ ಬಿಲ್ವಿದ್ಯೆಯಲ್ಲಿ ಸಮರ್ಥನಾದಾಗ, ದ್ರೋಣನು ತನಗೆ ನೀಡಿದ ವಚನ ಭಂಗವಾಗಿದ್ದುದು ಕಂಡ ಅರ್ಜುನ,' ಏನಾದರೂ ಮಾಡಿ ತನ್ನನ್ನೇ ಅಪ್ರತಿಮನಾಗಿ ಮಾಡಬೇಕು. ಇಲ್ಲದಿದ್ದರೆ ದ್ರೋಣರು ವಚನ ಭ್ರಷ್ಟರೆಂದು ಪ್ರಪಂಚಕ್ಕೆ ಸಾರುತ್ತೇನೆಂದು ಬೆದರಿಕೆ ಒಡ್ಡುತ್ತಾನೆ. ದ್ರೋಣನಿಗೆ ಯಾವುದೇ ನಿರ್ಣಯ ತೆಗೆದುಕೊಳ್ಳಲು ಅಸಮರ್ಥನಾಗಿ ಕಂಡು ಬರುತ್ತಾನೆ. ಕೈಲಾಸಂ ದ್ರೋಣನನ್ನು ಹೀಗೆ ಮಾಡುವುದರ ಉದ್ದೇಶವೇ, ಗುರುವಿನ ಬಗ್ಗೆ ಅಪಾರ ಮಮಕಾರ ಉಳ್ಳವನಂತೆ 'ಏಕಲವ್ಯನನ್ನು ಚಿತ್ರಿಸಿ, ತಾನೇ ತನ್ನ ಬಲಗೈ ಹೆಬ್ಬೆರಳನ್ನು ಕಡಿದುಕೊಂಡು ಬಿಡುತ್ತಾನೆ. 'ಏಕಲವ್ಯನ ಬೆರಳು ಈ ಕಾರಣದಿಂದ ಉಳಿಸಲಾಗುವುದಿಲ್ಲ.'' ಇಲ್ಲಿ ಕೈಲಾಸಂ ಕುವೆಂಪು ಅವರ ಉದಾತ್ತೀಕರಣಕ್ಕಿಂತಲೂ ಮುಂದೆ ಹೋಗಿದ್ದಾರೆ. ಕುವೆಂಪು ಅವರ 'ಬೆರಳ್ ಗೆ ಕೊರಳ್' ನಾಟಕದಲ್ಲಿ ದ್ರೋಣನು ಹೆಬ್ಬೆರಳಿನ ಗುರುದಕ್ಷಿಣೆ ಕೇಳುವಷ್ಟು ವಾಸ್ತವತೆಯನ್ನಾದರೂ, ಮಾನವ ದೌರ್ಬಲ್ಯವನ್ನಾದರೂ ತೋರಿಸುತ್ತಾನೆ.'[3] ಗೋವಿಂದಪೈ ಅವರ 'ಹೆಬ್ಬೆರಳು' ನಾಟಕದಲ್ಲಿ ಬರುವ ದ್ರೋಣನಾದರೋ ವರ್ಣಾಶ್ರಮ ಪದ್ಧತಿಗೆ ಬದ್ಧನಾಗಿ, 'ಕ್ಷತ್ರೋಪ ಜೀವಿಯಾಗಿ ಇರುವವನು.

ಕುವೆಂಪುರವರಾಗಲಿ, ಗೋವಿಂದಪೈ, ಕೈಲಾಸಂ ಎಲ್ಲರೂ ಒಂದು ರೀತಿಯಲ್ಲಿ 'ಏಕಲವ್ಯನ ತ್ಯಾಗವನ್ನು ಮತ್ತು ದ್ರೋಣನ ಔದಾರ್ಯವನ್ನು ತೋರಿಸಲು ಪ್ರಯತ್ನಿಸಲು ತೊಡಗುತ್ತಿರುವಾಗಲೇ, ಅಪ್ರಜ್ಞಾಪೂರ್ವಕವಾಗಿ ಅರ್ಜುನನನ್ನು ಅಲ್ಪನನ್ನಾಗಿ ಮಾಡಿಬಿಟ್ಟಿದ್ದಾರೆ. ವ್ಯಾಸನ ಮಹಾಭಾರತದಲ್ಲಿ ಅರ್ಜುನ ಮನುಷ್ಯ ಸಹಜ ಸ್ವಭಾವದ ಮಹತ್ವಾಕಾಂಕ್ಷಿ. ಅವನಿಗೂ ಸ್ವಂತ ಸಾಮರ್ಥ್ಯವಿರುತ್ತದೆ. ಆ ಸಾಮರ್ಥ್ಯದ ಫಲವಾಗಿಯೇ ಪ್ರತಿಸ್ಪರ್ಧಿ 'ಏಕಲವ್ಯನ ಮೇಲೆ ಈರ್ಷ್ಯೆಗೊಳ್ಳುವುದು ಸಹಜ ಅನ್ನಿಸುತ್ತದೆ. ಅವನ ಈರ್ಷ್ಯೆಯ ಜತೆಗೆ ಅಲ್ಲಿ ವರ್ಣ ಭೇದ ಸೇರಿಕೊಳ್ಳುತ್ತದೆ. ಆದರೆ ಕೈಲಾಸಂರು ಅರ್ಜುನನನ್ನು ತೀರ ಕೆಟ್ಟ ಶಿಷ್ಯನನ್ನಾಗಿ ಚಿತ್ರಿಸಿದ್ದಾರೆ. ದ್ರೋಣಾಚಾರ್ಯನು ವಚನ ಭ್ರಷ್ಟರಾದರೆಂದು ಈ ಪ್ರಪಂಚಕ್ಕೆ ಸಾರುತ್ತೇನೆಂದು — ಅನ್ನುತ್ತಾನೆ. 'ಏಕಲವ್ಯ ಬಿಲ್ವಿದ್ಯೆ ಕಲಿಯಲು ದ್ರೋಣನಲ್ಲಿಗೆ ಬಂದಾಗ ಅರ್ಜುನ '' ಆರ್ಯನೆಂದರೆ ಆರ್ಯನೇ.... ನಿಷಾಧನೆಂದರೆ ಕೀಳುಜನ್ಮ ನಿಷಾಧನೆ — ಎಂದು ಅವಮಾನಿಸಿ ನುಡಿಯುತ್ತಾನೆ. ಇಲ್ಲಿ ಇಂಥ ಅರ್ಜುನನನ್ನು ಕಾಣುತ್ತೇವೆ. ದ್ರೋಣಾಚಾರ್ಯನನ್ನು ಉದಾತ್ತೀಕರಿಸಲು ಹೋಗಿ ಕ್ಷತ್ರಿಯನಾದ ಅರ್ಜುನನನ್ನು ಅರಿವಿಲ್ಲದಂತೆ ಕ್ಷುದ್ರನನ್ನಾಗಿ ಮಾಡಿದ್ದಾರೆ. ಅರ್ಜುನನ ವಿಷಯವಾಗಿ ಪೋಲಂಕಿ ರಾಮಮೂರ್ತಿ ಹೇಳುವ ಮಾತು ನೆನಪಿಸಿಕೊಳ್ಳಬಹುದು: '' ಇದಂತೂ ಮಹಾಭಾರತದ ಸಾಂಯುಕಸೇ ಆದ, ಘನತೆ ಗಂಭೀರತೆಗಳ ಉದಾತ್ತತೆ ಅನುಕಂಪ, ಅಂತ:ಕರಣಗಳ, ಮಹಾನುಭಾವನಾದ ಅರ್ಜುನನನ್ನು ಒಬ್ಬ ಕ್ಷುಲ್ಲಕನನ್ನಾಗಿ ಮಾಡುವ ಯತ್ನವು ಕಾರ್ಯ. ಮಹಾಭಾರತದ ಇಂಥ ಮರ್ಯಾದ್ಯ ಹೃದಯೀ ಅರ್ಜುನನು, ಬಂಧು ಮಿತ್ರರನ್ನೂ, ಗುರುಹಿರಿಯರನ್ನೂ ಕೊಲ್ಲಲು ಹಿಂಜರಿದು ಗಾಂಡೀವವನ್ನು ಎಸೆದು ಸನ್ಯಾಸನ್ಯಾಸ ಮಾಡುದರಿಂದಲೇ ಅವನಿಗೆ ಕೃಷ್ಣನಿಂದ ಗೀತೋಪದೇಶವಾಗುತ್ತದೆ. ವಿಶ್ವರೂಪ ದರ್ಶನವಾಗುತ್ತದೆ. ಮುಂದೂ ಅವನು ಭೀಷ್ಮನನ್ನು ಕೊಲ್ಲಲು ಕೈಬಾರದವನಾಗಿ, ನನಗೆ ರಾಜ್ಯ ಬೇಡ ಎನ್ನುತ್ತಾನೆ. ಭೀಷ್ಮನನ್ನು ಹಾಗೆಯೇ ಕೊಲ್ಲದೆ ಹೊತ್ತರು ಹೇಳುತ್ತಾನೆ.'[4]

' ಬೆರಳ ಗೆ ಕೊರಳ್' ನಾಟಕದಲ್ಲಿ ದ್ರೋಣನು ಏಕಲವ್ಯನಿಗೆ, ಗುರುದಕ್ಷಿಣೆಯಾಗಿ ಪೆರಬೆರಳು ಪಡೆಯುವ ಮುನ್ನ ತನ್ನೆಲ್ಲ ಸಂಕಟವನ್ನು ತೋಡಿಕೊಳ್ಳುತ್ತಾನೆ ಅದಕ್ಕೆ ಕಾರಣವಾದ ಧರ್ಮ ಸಂಕಟ, ಉಭಯ ಸಂಕಟ (ಒಂದು ಕಡೆ ಪ್ರೀತಿಯ ಅರ್ಜುನ. ಇನ್ನೊಂದು ಕಡೆ ಅಪಾರವಾದ ಭಕ್ತಿ ಪ್ರೇಮವಿಟ್ಟಿದ್ದ ಏಕಲವ್ಯ)ಗಳ ಮಧ್ಯೆ '' ಜೀವಿಗಳ ಕರ್ಮಜಟಿಲತೆ.... ಕುಟಿಲ ಕಾರ್ಯಂಗಳಿಗೆ ನಮ್ಮನೆ ನಿಯೋಜಿಪುದು'' ಎಂದು ಎಲ್ಲವನ್ನು ತೆರೆದಿಟ್ಟು ಬಿಡುತ್ತಾನೆ. ನಂತರವೇ ಏಕಲವ್ಯನ ಪೆರಬೆರಳು ಹೋಗುವುದು. ' ಹೆಬ್ಬೆರಳು' ನಾಟಕದಲ್ಲಿ ದ್ರೋಣನು ಏಕಲವ್ಯನ ಹೆಬ್ಬೆರಳನ್ನು ನಿರಾಯಾಸವಾಗಿ ಕೇಳಿಬಿಡುತ್ತಾನೆ . ಅಷ್ಟೇ ನಿರಾಯಾಸವಾಗಿ ಕತ್ತರಿಸಿಕೊಡುತ್ತಾನೆ. ಯಾವುದೇ ರೀತಿಯ ಗಂಭೀರ ವಾತಾವರಣವೇ ಅವರ ಮಧ್ಯೆ ಏರ್ಪಡುವುದಿಲ್ಲ. 'The Purpose' ನಾಟಕದಲ್ಲಿ ಏಕಲವ್ಯನ ಬಗ್ಗೆ ಅನುಕಂಪವೇನೋ ಇರುತ್ತದೆ. ಏಕಲವ್ಯನ ಗುರುವಿನ ಮೇಲಿನ ಭಕ್ತಿ ಪ್ರೇಮವುಗಳೇ ಅಧಿಕವಾಗಿ, ಅರ್ಜುನನ ಜತೆ ಸವಾಲಾಗಿನಿಂತು (ಗುರು ವಚನ ಭ್ರಷ್ಟನಾದನೆಂದು ಪ್ರಪಂಚಕ್ಕೆ ಢಂಗುರು ಸಾರುತ್ತೇನೆಂದ ಅರ್ಜುನನ ಮಾತನ್ನು ಸುಳ್ಳಾಗಿಸುವುದಕ್ಕೆ) ತಾನೇ ಹೆಬ್ಬೆರಳನ್ನು ಕತ್ತರಿಸಿಕೊಂಡು ಬಿಡುತ್ತಾನೆ. ದ್ರೋಣನಿಗೆ ಒಂದು ವ್ಯಕ್ತಿತ್ವವೇ ಇಲ್ಲದಂತಾಗಿದೆ. ಏಕಲವ್ಯನಾದರೋ ಬೆರಳು ಕೊಟ್ಟು ಆಮೇಲೆ ತನ್ನ ಉದ್ದೇಶವನ್ನೇ ಮರೆತದ್ದಕ್ಕೆ ಪಶ್ಚಾತ್ತಾಪ ಪಡುತ್ತ ರೋಧಿಸುತ್ತಾನೆ. ಗುರುವನ್ನು ನಿರ್ದಯವಾಗಿ ಖಂಡಿಸತೊಡಗುತ್ತಾನೆ.

'The Purpose' ನಾಟಕದಲ್ಲಿ ಏಕಲವ್ಯನ ಪಾತ್ರವನ್ನು ಕೈಲಾಸಂ ಭಿನ್ನವಾಗಿ ಕಂಡಿದ್ದಾರೆ. ಅವನಿಗೆ ತನ್ನ ಕಾಡಿನ ಚಿಂತೆ, ಕಾಡಿನಲ್ಲಿರುವ ನಿರುಪದ್ರವಿ ಜಿಂಕೆ, ಹುಲ್ಲೆಗಳ ಚಿಂತೆ. ಇವುಗಳನ್ನು ತಿಂದು ಹಾಕುವ ತೋಳಗಳನ್ನು ಸರ್ವನಾಶ ಮಾಡದ ಹೊರತು ಅವನಿಗೆ ಸಮಾಧಾನವಿಲ್ಲ. ಇಲ್ಲಿ ಅವನ ಧ್ಯೇಯ ಸರಿಯಾದುದು. ಜಿಂಕೆ, ಹುಲ್ಲೆಗಳನ್ನು ರಕ್ಷಿಸಬೇಕಾದರೆ ಎರಡು ದಾರಿಗಳಿವೆ. ಒಂದು: ತನ್ನ ಕಾಡಿನ ಪಕ್ಕದ ಇನ್ನೊಂದು ಕಾಡಿನಲ್ಲಿ ತೋಳಗಳು ಜಿಂಕೆ, ಹುಲ್ಲೆಗಳನ್ನು ಕೊಂದು ಹಿಂಸಿಸುವುದಿಲ್ಲ. ಅದಕ್ಕೆ ಕಾರಣ ಅಲ್ಲೊಬ್ಬ ಋಷಿಯಿದ್ದಾನೆ. ಅವನ ತಪಸ್ಶಕ್ತಿಯೇ ತೋಳಗಳ ದುಷ್ಟ ಸ್ವಭಾವವನ್ನು ಮರೆಸಿಬಿಡುತ್ತದೆ. ಏಕಲವ್ಯನಿಗೆ ಆ ಋಷಿಯಂತೆ ತಪಸ್ಶಕ್ತಿಯನ್ನು ಗಳಿಸಲಾರದವನಾಗಿದ್ದಾನೆ. ಏಕೆಂದರೆ ಅವನು ನಿಷಾಧ, ಅನಾರ್ಯ; ಅವನ ತಾಯಿ '' ಈ ಜನ್ಮದಲ್ಲಲ್ಲ, ಮಗೂ; ಈಗ ನೀನು ಹುಟ್ಟು ನಿಷಾಧ. ಆದರೆ ನಿನ್ನ ಕುಲಧರ್ಮಕ್ಕೆ ತಕ್ಕಂತೆ ನೀನು ನಿನ್ನ ಕರ್ತವ್ಯ ಕರ್ಮ ನೆರವೇರಿಸಿ ಜೀವನ ದಾಟಿದರೆ ಆಗ ನಮ್ಮ ನೆರೆಯ ಋಷಿ ಯಂತೆ ನೀನೂ ಮುಂದಿನ ಯಾವುದಾದರೊಂದು ಜನ್ಮದಲ್ಲಿ ಆರ್ಯನಾಗಿ ಹುಟ್ಟಬಹುದು. ಆತನಂತೆ ತಪಸ್ಸಕ್ತಿ ಗಳಿಸಲು ಬಹುದು'' ಎಂದು ಹೇಳಿರುತ್ತಾಳೆ, ಆಗ ತಪಸ್ಸು ಮಾಡುವ ಸ್ವಾತಂತ್ರ್ಯ ಇಲ್ಲದಾದ ಮೇಲೆ ತನ್ನ ಕುಲಧರ್ಮಕ್ಕೆ ತಕ್ಕಂತೆ ಅಪ್ರತಿಮ ಧನುರ್ಧಾರಿಯಾದರೆ, ಜಿಂಕೆ, ಹುಲ್ಲೆಗಳನ್ನು ತೋಳಗಳಿಂದ ರಕ್ಷಿಸಬಹುದು, ಎಂಬ ಧ್ಯೇಯ ಅವನದಾಗುತ್ತದೆ. '' ಹೀಗೆ ಮಾಡಿದರೆ ಈ ನಿಷಾಧ ಜನ್ಮದಲ್ಲಿಯೆ ಬೇಕಾದ ಆರ್ಯ ಋಷಿಗಿಂತ ಶ್ರೇಷ್ಠನೆನ್ನಿಸಬಲ್ಲೆ'' ಎನ್ನುವುದು ಅವನ ತಿಳುವಳಿಕೆ. ಇಂಥ ಉದ್ದೇಶ ಸಾಧನೆಗಾಗಿ ಗುರುವನ್ನಾಗಿ

ಸ್ವೀಕರಿಸಲು ದ್ರೋಣನಲ್ಲಿಗೆ ಹೋಗುತ್ತಾನೆ. ಮುಂದೆ ತಾನಾಗಿಯೇ 'ಏಕಲವ್ಯ ಗುರುವಿಗೆ ಹೆಬ್ಬೆರಳನ್ನು ಕತ್ತರಿಸಿ ಕೊಟ್ಟಾಗ, ತನ್ನ ಕಾಲಮೇಲೆ ತಾನೇ ಕಲ್ಲು ಹಾಕಿಕೊಂಡಂತೆ ನರಳ ತೊಡಗುತ್ತಾನೆ. ವಿಶ್ವಾಸ ಭಂಗವಾದುದಕ್ಕೆ ಗುರುವನ್ನೇ ನಿಂದಿಸುತ್ತಾನೆ. ಬೆರಳು ಹೋದ ಮೇಲೆ ಜಿಂಕೆ, ಹುಲ್ಲೆಗಳು ವಿಪತ್ತಿಗೆ ಸಿಕ್ಕು ಅವುಗಳ ಆಕ್ರಂದನ ಕೇಳಿ, ಕೆಲವೊಂದು ರಕ್ಷಿಸಬಲ್ಲ ತಮ್ಮ ರಕ್ಷಕ 'ಏಕಲವ್ಯನ ಬಳಿಗೆ ಬಂದಾಗ, '' ನನ್ನನ್ನು ಮುಟ್ಟಬೇಡಿ. ನಾನು ದೂಷಿತ. ನನ್ನ ಮನಸ್ಸು ದೂಷಿತ, ನನ್ನ ಶರೀರ ದೂಷಿತ. ನಿಮ್ಮನ್ನು ಕೈಯಿಂದ ಮುಟ್ಟುವ, ಕಣ್ಣಿಂದ ನೋಡುವ ಯೋಗ್ಯತೆ ನನಗಿಲ್ಲ.... ಈ ವಿಶ್ವಾಸ ಘಾತುಕನಿಗೆ ಇಲ್ಲ. ಒಂದೇ ಒಂದು ಕ್ಷಣ ನಿಮ್ಮನ್ನು ಮರೆತು ಬಿಟ್ಟನಲ್ಲ; ಹುಚ್ಚೆದ್ದು ನಿಯ ಗುರುಭಕ್ತಿಯ ಆವೇಶದಲ್ಲಿ ಅವರಿಗೆ ದಕ್ಷಿಣೆ ಯಾಗಿ ಕೊಟ್ಟನಲ್ಲ; 'ಏನನ್ನು ಕೊಟ್ಟೆ ಬಲ್ಲಿರಾ? ನನ್ನದಲ್ಲದುದನ್ನು — ನಿಮ್ಮ ಸೊತ್ತಾದುದನ್ನು, ನನ್ನ ಧನುರ್ವಿದ್ಯೆಯ ಉದ್ದೇಶ... ಪುರುಷಾರ್ಥ, ಅದನ್ನೇ ಕೊಟ್ಟುಬಿಟ್ಟೆ; ಗುರು ಭಕ್ತಿಯಿಂದ ಉನ್ಮತ್ತನಾಗಿ ನಿಮ್ಮನ್ನು ಮರೆತು ಬಿಟ್ಟೆ'' ಎಂದು ತನ್ನನ್ನೇ ಹಳಿದುಕೊಳ್ಳುತ್ತಾನೆ

ಕೊನೆಗೆ 'ಏಕಲವ್ಯ,'' ನನ್ನ ಗುರುವಿಗೆ ಗೊತ್ತಿತ್ತು. ಗೊತ್ತಿರಲೇ ಬೇಕಿತ್ತು. ಗೊತ್ತಿತ್ತು ಅವರಿಗೆ, ಅವರು ತಡೆಯಬೇಕಿತ್ತು ನನ್ನನ್ನು; ತಡೆಯಬೇಕಿತ್ತು... ಅವರು ನನ್ನನ್ನು ಹಾಂ.. ? ನಾನು ಹಾಗೆ ಮಾಡುವಾಗ ನೀವು ನಿಷ್ಕ್ರಿಯರಾಗಿ ನೋಡುತ್ತ ಹೇಗೆ ನಿಂತಿದ್ದಿರಿ? ಇಂತಹ ಕೆಲಸಕ್ಕೆ ನಿಮಗೆ ಈ ಧೈರ್ಯವಾದರೂ ಹೇಗೆ ಬಂದಿತು, ಗುರುವೆ; ಹೇಗೆ, ಹೇಗೆ ಬಂದಿತೂ ಊ ಊ?'' ಎಂದು ಗುರುವನ್ನೇ ನಿಂದಿಸುತ್ತ ಪರಿತಪಿಸುತ್ತಾನೆ.

'ಏಕಲವ್ಯನಿಗೆ ಇಂಥ ಸ್ಥಿತಿಯಲ್ಲಿ ಅವನನ್ನು ಸಂತಯಿಸಲು ಇಲ್ಲಿ . ಯಾರಿಲ್ಲ. ತಾಯಿ ಯಿದ್ದರೂ ಆಕೆ ಕಾಣಿಸಿಕೊಳ್ಳುವುದಿಲ್ಲ. 'ಬೆರಳ ಗೆ ಕೊರಳ'ನಲ್ಲಿ 'ಏಕಲವ್ಯನಿಗಾಗಿ ಮಿಡಿಯುವ ಅಬ್ಬೆಯಿದ್ದಾಳೆ. 'ಹೆಬ್ಬೆರಳು' ನಾಟಕದಲ್ಲಿ ತಾಯಿಯ ಸಮಾನವಾದ ಸಾಕು ತಂದೆ ಹಿರಣ್ಯ ಧನುವಿದ್ದಾನೆ. 'ಏಕಲವ್ಯನ ಸಂಕಟವನ್ನು 'The Purpose' ನಲ್ಲಿ ಕೇಳಲು, ಸಂತೈಸಲು ಯಾರೂ ಇಲ್ಲ. ಬೆರಳ ಗೆ ಕೊರಳ' ಮತ್ತು 'ಹೆಬ್ಬೆರಳ' ನಾಟಕಗಳಲ್ಲಿ ಬೆರಳು ಹೋದರೂ 'ಏಕಲವ್ಯನ ಗುರುಭಕ್ತಿ; ಗುರುವಿನ ಮೇಲಿನ ಅಪಾರ ಭಕ್ತಿ ವಿಶ್ವಾಸ ಕಿಂಚತ್ ಕಮ್ಮಿಯಾಗುವುದಿಲ್ಲ. ಇಲ್ಲಿ 'ಏಕಲವ್ಯ ಗುರುವನ್ನು ಮನಸಾರೆ ಹಳಿಯುತ್ತಾನೆ, ನನ್ನನ್ನು ಬೇಡ ನನ್ನ ಜಿಂಕೆ, ಹುಲ್ಲೆಗಳನ್ನು ನೋಡಬೇಕಾಗಿತ್ತು ಎಂದು.

ವ್ಯಕ್ತಿ ಒಂದು ಉದ್ದೇಶವನ್ನು ಹೊಂದಿರಬಲ್ಲ. ಅದರ ಪರಿಣಾಮ ಅವನಿಗೆ ಗೊತ್ತಿಲ್ಲ. '' ಉದ್ದೇಶ ತಿಳಿಯುವುದೆಂದರೆ ದೇವರನ್ನೇ ತಿಳಿದಂತೆ. 'ಏಕೆಂದರೆ ಇದರ ಉದ್ದೇಶ್ಯವೆಲ್ಲ ಆತನಿಗೆ ಮಾತ್ರವೇ ಅರಿವು.... ನಮಗೆಲ್ಲ'' ಎಂಬ ಭೀಷ್ಮನ ಮಾತೇ ಈ ನಾಟಕದ ಧ್ವನಿಯಾಗಿದೆ.

ಅಡಿಟಿಪ್ಪಣಿಗಳು

1. ಬಿ.ಎಸ್.ರಾಮರಾವ್: 'ಏಕಲವ್ಯ(ಅನು)(1969)(ಲೇಖನ:ಕೈಲಾಸಂ ಇಂಗ್ಲಿಷ್ ನಾಟಕಗಳು) ಪುಟ—73.
2. ಅ.ರಾ.ಮಿತ್ರ: ಕೈ ಲಾಸಂ(1983 (ಸಂಗ್ರಹ.ಕೆ.ಸಂಪದ್ಗಿರಿರಾಯರು.ಉದ್ಧೃತ:ಕೈಲಾಸಂ) ಬೆಂಗಳೂರು ವಿಶ್ವವಿದ್ಯಾಲಯ. ಪುಟ—19
3. ಪೋಲಂಕಿ ರಾಮಮೂರ್ತಿ: ಪ್ರಬುದ್ಧ ಕರ್ನಾಟಕ (260ನೆಯ ಕೈಲಾಸಂ ಸಂಚಿಕೆ—1984) ಮೈಸೂರು ವಿಶ್ವವಿದ್ಯಾಲಯ, ಪುಟ—332.
4. ಪೋಲಂಕಿ ರಾಮಮೂರ್ತಿ: ಪ್ರಬುದ್ಧ ಕರ್ನಾಟಕ (260ನೆಯ ಕೈಲಾಸಂ ಸಂಚಿಕೆ—1984) ಮೈಸೂರು ವಿಶ್ವವಿದ್ಯಾಲಯ, ಪುಟ—336.

ವರ್ಗಹೋರಾಟದ ಎಚ್ಚರದ ಪ್ರತೀಕವಾಗಿ- 'ಎಚ್ಚೆತ್ತ ಏಕಲವ್ಯ'

ಕುವೆಂಪು ಅವರ 'ಬೆರಳ್ ಗೆ ಕೊರಳ್', ಗೋವಿಂದಪೈ ಅವರ 'ಹೆಬ್ಬೆರಳು' ಮತ್ತು ಕೈಲಾಸಂ ಅವರ 'The Purpose' ಈ ಮೂರು ನಾಟಕಗಳಿಗಿಂತ ಭಿನ್ನವಾದುದು 'ಎಚ್ಚೆತ್ತ 'ಏಕಲವ್ಯ.' ಈ ಮೂರು ನಾಟಕಗಳು ರಚಿತವಾದ 25 ವರ್ಷಗಳ ಮೇಲೆ 'ಎಚ್ಚೆತ್ತ 'ಏಕಲವ್ಯ' (1981) ರಚಿತವಾಗಿದೆ. ಆಧುನಿಕ ಕನ್ನಡ ಸಾಹಿತ್ಯದ ಮೊದಲ ಘಟ್ಟವಾದ ನವೋದಯ ಸಾಹಿತ್ಯ ಪಂಥ ಮುಗಿದು, 2ನೇ ಘಟ್ಟವಾದ ನವ್ಯ ಸಾಹಿತ್ಯ ಚಳುವಳಿಯೂ ಮುಗಿದು ಹೋದ ಸಂದರ್ಭದಲ್ಲಿ ಬಂಡಾಯ – ದಲಿತ – ಸಾಹಿತ್ಯ ಚಳುವಳಿ ಆರಂಭವಾದ ಕಾಲದಲ್ಲಿ ಈ ನಾಟಕ ರಚನೆಯಾಗಿ ಹೊರ ಬಂದಿದೆ. ಆದರೆ ಈ ನಾಟಕದ ರಚನಕಾರರಾದ ಪಿ.ವಿ.ವಜ್ರಮಟ್ಟಿ ಅವರು ಪ್ರಗತಿಶೀಲ ಸಾಹಿತ್ಯಕ ಚಳುವಳಿಯ ಮುಂಚೂಣಿಯಲ್ಲಿದ್ದರು. ಸಹಜವಾಗಿಯೇ ಇವರು ಎಡಪಂಥೀಯ ಧೋರಣೆಗೆ ಬದ್ಧರಾದವರು. ತಮ್ಮ ಕೃತಿಗಳಲ್ಲಿ ಪರಿವರ್ತನೆಯ ಒತ್ತಾಸೆಗಳನ್ನು ವ್ಯಕ್ತಪಡಿಸಿದ್ದಾರೆ. ಸಮಾಜ ಬದಲಾವಣೆ ಮತ್ತು ಸಾಹಿತ್ಯದ ಸಂಬಂಧವನ್ನು ಅರಿತಿರುವ ಇವರು ಸಾಮಾಜಿಕ ಕಾಳಜಿಯುಳ್ಳ ಸಮಕಾಲೀನ ಬದುಕಿಗೆ ಸ್ಪಂದಿಸುವವರಾಗಿದ್ದಾರೆ. ಸಮಾಜ ಮತ್ತು ಸಂಸ್ಕೃತಿಯ ಪರಂಪರೆಯನ್ನು ಪುನರ ಸೃಷ್ಟಿ ಮಾಡುವ ಇವರ ಉದ್ದೇಶ 'ಎಚ್ಚೆತ್ತ 'ಏಕಲವ್ಯ' ನಾಟಕದಲ್ಲಿ ಕಾಣಬಹುದು.

ಕುವೆಂಪು, ಗೋವಿಂದಪೈ, ಕೈಲಾಸಂ ಅವರ ನಾಟಕಗಳಿಗೆ ವ್ಯಾಸಭಾರತದ ಆದಿಪರ್ವದ 123ನೇಯ ಅಧ್ಯಾಯ 'ಏಕಲವ್ಯನ ಉಪಾಖ್ಯಾನವೇ ಮೂಲ. 'ಎಚ್ಚೆತ್ತ 'ಏಕಲವ್ಯ' ನಾಟಕಕ್ಕೆ ಅದೇ ವ್ಯಾಸಭಾರತದ ದ್ರೋಣಪರ್ವದಲ್ಲಿ ಬರುವ ಕೃಷ್ಣಾರ್ಜುನರ ಪ್ರಾಸಂಗಿಕ ಸಂವಾದದಲ್ಲಿ 'ಏಕಲವ್ಯನ ಬಗೆಗೆ ಪ್ರಸ್ತಾಪವಾಗಿರುವ ವಿಷಯವೆಂದರೆ,

ಜರಾಸಂಧಶ್ಚೇದಿರಾಜೋ ಮಹಾತ್ಮಾ ಮಹಾಭಾಗಶ್ಚೈಕಲವ್ಯೋ ನಿಷಾದ:।
'ಏಕೈಕಶೋ ನಿಹತಾ: ಸರ್ವ ಏವೇ ಯೋಗೈಸ್ತೈಸ್ತ್ವದ್ಧಿತಾರ್ಥಂ ಮಯೈವ।

(ಜರಾಸಂಧ, ಶಿಶುಪಾಲರನ್ನು ಹೇಗೋ ಹಾಗೆ 'ಏಕಲವ್ಯನನ್ನೂ ನಾನೇ ಸ್ವತ: ಯುಕ್ತಿಯಿಂದ ಪಾರ್ಥನ ಹಿತಾರ್ಥವಾಗಿ ಹತಮಾಡಿದನೆಂದು ಆ ಕೃಷ್ಣ ಹೇಳುತ್ತಾನೆ)

ಜರಾಸಂಧಶ್ಚೇದಿರಾಜೋ ನೈಷಾದಿಶ್ಚ ಮಹಾಬಲ:
ಯದಿಸ್ಯುರ್ನ ಹತಾ: ಪೂರ್ವ ಮಿದಾನೀಂ ಸ್ಯುರ್ಭಯಂಕರಾ:।

(ಜರಾಸಂಧ, ಶಿಶುಪಾಲ ಮತ್ತು 'ಏಕಲವ್ಯರು ಮಹಾಶಕ್ತಿ, ಸಂಪನ್ನರು, ಇವರು ಮುಂದೇ ಹತರಾಗಿ ಹೋಗದಿದ್ದರೆ ಇಂದು ಭಯಂಕರರಾಗುತ್ತಿದ್ದರು)

'ಏಕಲವ್ಯಂ ಹಿ ಸಾಂಗುಷ್ಠಮಶಕ್ತಾ ದೇವದಾನವಾ:।

ಸರಾಕ್ಷಸೋರಗಾ; ಪಾರ್ಥ ವಿಜೇತುಂ ಯುಧಿ ಕರ್ಹಿಚಿತ್।

ಕಿಮು ಮಾನುಷಮಾತ್ರೇಣ ಶಕ್ಯ: ಸ್ಯಾತ್ ಪ್ರತಿವೀಕ್ಷಿತುಮ್।

(ಒಂದು ವೇಳೆ 'ಏಕಲವ್ಯನ ಬಲ ಹೆಬ್ಬೆರಳು ಉಳಿದು, ದುರ್ಬಲನಾಗದೇ ಹೋಗಿದ್ದರೆ, ದೇವದಾನವರು, ರಾಕ್ಷಸೋರಗರೆಲ್ಲರೂ ಸೇರಿಕೊಂಡು ಅವನನ್ನು ಜಯಿಸುವುದಾಗುತ್ತಿರಲಿಲ್ಲ. ಇನ್ನು ಮಾನವರ ಪಾಡೇನು?)

ತ್ವದ್ಧಿತಾರ್ಥಂ ಚ ನೈಷಾದಿರಂಗುಷ್ಠೇನ ವಿಯೋಜಿತ:

ದ್ರೋಣೇನಾಚಾರ್ಯಕಂ ಕೃತ್ವಾ ಛದ್ಮನಾ ಸತ್ಯವಿಕ್ರಮ

(ಅರ್ಜುನನ ಹಿತಕ್ಕಾಗಿ ಸತ್ಯವಿಕ್ರಮನಾದ ಆ ನೈಷಾದಿಗೆ ಛದ್ಮಯೋಜನೆಯಿಂದ ದ್ರೋಣನನ್ನು ಗುರುವನ್ನಾಗಿ ಮಾಡಿ, ಅವನ ಹೆಬ್ಬೆರಳು ಹೋಗಲಾಡಿಸಿದೆ)

ದೃಢಮುಷ್ಟಿ: ಕೃತಿ ನಿತ್ಯ ಮಸ್ಯ ಮನೋ ದಿವಾನಿಶಮ್:

ತ್ವದ್ಧಿತಾರ್ಥಂ ತು ಸ ಮಯಾ ಹತ: ಸಂಗ್ರಾಮ ಮೂರ್ಧನಿ

(ಆ 'ಏಕಲವ್ಯ, ದೃಢಮುಷ್ಟಿಯುಳ್ಳವ, ಹಗಲುರಾತ್ರಿಯೆನ್ನದೆ ಸದಾಕಾಲ ಅಭ್ಯಾಸ ಮಾಡಿದವ, ಆದ್ದರಿಂದ ಎಲೈ ಪಾರ್ಥನೇ, ನಿನ್ನ ಹಿತಕ್ಕಾಗಿ ಕುರುಕ್ಷೇತ್ರ ಯುದ್ಧಕ್ಕಿಂತ ಮೊದಲೇ ಅವನನ್ನು ಕೊಂದುಹಾಕಿದೆ)

ಈ ಕೃಷ್ಣಾರ್ಜುನರ ಪ್ರಾಸಂಗಿಕ ಸಂವಾದದಲ್ಲಿ ಬರುವ ಈ ಮಾತುಗಳೇ 'ಎಚ್ಚತ್ತ 'ಏಕಲವ್ಯ' ನಾಟಕಕ್ಕೆ ಆಧಾರ. ವ್ಯಾಸ ಭಾರತದಲ್ಲಿ ಕುರುಕ್ಷೇತ್ರ ಯುದ್ಧದಲ್ಲಿ 'ಏಕಲವ್ಯ ಮಡಿಯುತ್ತಾನೆ. ಆದರೆ ಈ ನಾಟಕದಲ್ಲಿ ಕುರುಕ್ಷೇತ್ರ ಯುದ್ಧಾನಂತರದ ವಸ್ತುವಾಗಿದೆ. ವಜ್ರಮಟ್ಟಿಯವರೆ ಈ ನಾಟಕದ ಪ್ರಸ್ತಾವನೆಯಲ್ಲಿ "'ಎಚ್ಚತ್ತ 'ಏಕಲವ್ಯ'ದ ಕಥಾವಸ್ತು ಹೊಸದು. ಮೂಲ ಕಥೆಯ ಚೌಕಟ್ಟನ್ನು ಮೀರಿ ಸೃಷ್ಟಿಸಿಕೊಂಡದ್ದು. ಆದರೂ ಮೂಲ 'ಏಕಲವ್ಯೋಪಾಖ್ಯಾನ ಇದಕ್ಕೆ ಕಾಂಡ — ಬೇರು. ಕಡಿದ ಗಿಡಾ — ಮರಾ ಮತ್ತೆ ಚಿಗಿತಂತೆ. ತುಳಿದ ಹೂಬಳ್ಳಿ ಮತ್ತೆ ಮಾಡಿದಂತೆ, 'ಕತ್ತರಿಸಿದ ಕಡಿ ನಾಲ್ಯ ಚಿಗುರು ನಿಂತ ಹೊಸಾ ಕತಿ' ಯಾಗಿ ರೂಪುಗೊಂಡಿದೆ." ಎಂದು ಹೇಳಿದ್ದಾರೆ. ಅಲ್ಲದೆ ''ಏಕಲವ್ಯನ ಮೂಲ ಕಥೆಯನ್ನು ಚಾರಿತ್ರಿಕ ದ್ವಂದ್ವಾತ್ಮಕ ಭೌತಿಕವಾದಿ ದಾರ್ಶನಿಕ ದೃಷ್ಟಿಕೋನದಿಂದ ಪರಿಶೀಲಿಸಿದರೆ ಇದೊಂದು ಅಪ್ಪಟ ವರ್ಗ ಹೋರಾಟದ ಜ್ವಲಂತ ಉದಾಹರಣೆ ಎಂಬುದು ಸ್ಪಷ್ಟವಾಗುತ್ತದೆ. ದ್ರೋಣ, ಕೃಷ್ಣ, ಭೀಷ್ಮ, ಯುಧಿಷ್ಠಿರರಂಥ ಆಭ್ಯಸ್ತರೆಲ್ಲ ಸೇರಿಕೊಂಡು ತಮ್ಮ ವರ್ಗ ಹಿತಾಸಕ್ತಿಯ ಹಿನ್ನೆಲೆಯಲ್ಲಿ ಏಕಲವ್ಯನಂಥ ಅಮಾಯಕನನ್ನು ಇಲ್ಲ ಮಾಡುವಲ್ಲಿ ಪರೋಕ್ಷಾಪರೋಕ್ಷವಾಗಿ ಕಾರಣವಾಗಿದ್ದಾರೆ. "The History of all hitherto existing Society is the history of class struggles". ಜಗತ್ತಿನ ಈವರೆಗಿನ ಸಮಗ್ರ ಸಮಾಜ

ಜೀವನದ ಇತಿಹಾಸವು, ವರ್ಗ ಹೋರಾಟದ ಇತಿಹಾಸವಾಗಿದೆ. 'ಎಚ್ಚತ್ತ ಏಕಲವ್ಯ' ಈ ಮಾತಿಗೆ ರುಜುವಾತಾಗಿ ಮೂಡಿ ಬಂದ ನಾಟಕವಾಗಿದೆ'' (ಮುನ್ನುಡಿ).

'ಎಚ್ಚತ್ತ ಏಕಲವ್ಯ' ನಾಟಕವು ಎಂಟು ಮುಖ್ಯ ದೃಶ್ಯ ಮತ್ತು ನಾಟಕದ ಮೊದಲೊಂದು, ಕೊನೆಗೊಂದು ಎರಡು ಉಪದೃಶ್ಯಗಳಿಂದ ಕೂಡಿದೆ. ಏಕಲವ್ಯನ ಹೆಬ್ಬೆರಳನ್ನು ದ್ರೋಣಾಚಾರ್ಯ ಗುರುದಕ್ಷಿಣೆಯಾಗಿ ಪಡೆದಿದ್ದಾನೆ. ಅದರಿಂದ ಏಕಲವ್ಯನಿಗೆ ಪಶ್ಚಾತ್ತಾಪವಿಲ್ಲ. ಬದಲಾಗಿ ಗುರುದ್ರೋಣನ ಮೇಲೆ ಇನ್ನೂ ಅಪಾರ ಭಕ್ತಿಪ್ರೇಮವನ್ನು ಇಟ್ಟುಕೊಂಡಿದ್ದಾನೆ. ದ್ರೋಣನ ಮೂರ್ತಿಯ ಮುಂದೆ ಕುಳಿತು ತನ್ನ ತಾಯಿ ದ್ರೋಣನಿಗಿತ್ತ ಶಾಪದ ಬಗ್ಗೆ ''ನನ್ನ ಪರಿಶುದ್ಧವಾದ ಗುರುಭಕ್ತಿ ಕಲಂಕಿತವಾಗಿ ಹೋಯಿತು. ನನ್ನ ಸರ್ವಸ್ವ ನಿರರ್ಥಕವಾಗಿ ಹೋಯಿತು'' ಎಂದು ನೊಂದುಕೊಳ್ಳುತ್ತಿದ್ದಾನೆ. ಏಕಲವ್ಯ ತನ್ನ ಶಕ್ತಿ ಕಳೆದುಕೊಂಡದ್ದಕ್ಕೆ ಮನೆಯಲ್ಲಿ ತಾಯಿ ಮತ್ತು ತಂಗಿ ಉಪವಾಸವಿದ್ದಾರೆ. ಅವರು ಉಪವಾಸ ತಡೆಯದೆ ಬಳಲಿದರೆ, ಏಕಲವ್ಯನಿಗೆ, ''ನನ್ನ ಗುರುವಿನ ಕೊರಳ ಹೂಮಾಲೆ ಎಷ್ಟು ಬಾಡಿ ಹೋಗಿದೆ. ಹೂಪತ್ರಿ ಒಣಗಿಹೋಗಿದೆ'' ಎಂಬ ಚಿಂತೆ. ತಂಗಿ ಬಾಲು ಅಣ್ಣನ ಸ್ಥಿತಿ ಕಂಡು ದುಃಖಿತಳಾಗಿದ್ದಾಳೆ. ಗುರುವಿನ ಮೇಲೆ ಸಿಟ್ಟಿದೆ. ''ಇದ್ದ ಬಲವನ್ನೇ ಕಸಿದುಕೊಂಡ ಗುರು ನಿನಗೆ ಯಾವ ಬಲ ಕೊಡುತ್ತಾನೆ ಎಂಬ ಬಾಲುನ ಮಾತು ಸೇರುವುದಿಲ್ಲ. ತನ್ನ ಬೆರಳು ಹೋದ ಮೇಲೆಯೂ ''ಕೈಯಲ್ಲಿ ಬಿಲ್ಲಿದೆ, ಬಾಣದೆ, ಗುರುಭಕ್ತಿಯ ಧೀಮರಕ್ಷೆಯಿದೆ. ಈಗಂತೂ ನಾನು ಅಜೇಯ; ನನ್ನ ಗುರುಭಕ್ತಿ ಈಗ ಮತ್ತೊಮ್ಮೆ ಪುಟ್ಟವಿಟ್ಟ ಚಿನ್ನ'' ಎಂದು ನಂಬಿಕೊಂಡಿದ್ದಾನೆ. ಆದರೆ, ಜಿಂಕೆಮರಿಯನ್ನು ಬೆನ್ನಟ್ಟಿದ್ದ ಹುಲಿಗೆ ಎಡಗೈಯಿಂದ ಬಾಣ ಹೂಡುತ್ತಾನೆ. ಗುರಿ ತಪ್ಪುತ್ತದೆ. ಕಾಡುಕೋಣಕ್ಕೆ ನಾಟಿ, ಅದು ಏಕಲವ್ಯನ ಮೇಲೆ ಬಿದ್ದು ಗಾಯಗೊಳಿಸಿ ಬಿಡುತ್ತದೆ. ''ಆ ನಿನ್ನ ಪರಬ್ರಹ್ಮಸ್ವರೂಪಿ ಗುರು ಇದ್ದಾನಲ್ಲ. ಆತ ಕಾಪಾಡುತ್ತಾನೆ'' ಎಂದು ತಾಯಿ ಹಂಗಿಸುತ್ತಾಳೆ. ಗುರುದ್ರೋಣನ ಮೇಲೆ ಭಯಂಕರ ಕೋಪ ವ್ಯಕ್ತಪಡಿಸುತ್ತಾಳೆ. ಭ್ರಮಾತ್ಮಕ ಭಕ್ತಿಯಿಟ್ಟುಕೊಂಡ ಮಗ ಏಕಲವ್ಯನ ಮೇಲೆ ಸಿಟ್ಟಿದ್ದರೂ ಮರುಗುತ್ತಾಳೆ. ಹೀನ ಕುಲದಲ್ಲಿ ಹುಟ್ಟಿದ್ದಕ್ಕಾಗಿ ಎಲ್ಲವನ್ನು ಕಳೆದುಕೊಳ್ಳಬೇಕಾಯಿತು. ''ನಿನ್ನದು ಕೆಳಗಿನ ಜಾತಿ, ನಿನ್ನಾಸೆ ನಿನ್ನ ಕೈಯಲ್ಲಿಲ್ಲ. ಅದು ಉಚ್ಚಕುಲದವರ ಗುತ್ತಿಗೆಯಾಗಿದೆ'' ಎಂದು ಮೇಲ್ವರ್ಗದವರನ್ನು ಬಯ್ಯುತ್ತಾಳೆ. ಏಕಲವ್ಯ ಎಡಗೈಯಿಂದ ಬಾಣ ಹೂಡುವುದನ್ನು ಕಲಿಯಲು ತೀವ್ರ ಪ್ರಯತ್ನ ಮಾಡಿ ಅಭ್ಯಾಸಗೊಳ್ಳುತ್ತಾನೆ. ಕೈಗೂಡದಾದಾಗ ನಿರಾಸೆಯಾಗುತ್ತಾನೆ. ತಂಗಿಯ ಬಗ್ಗೆ ಕಾಳಜಿ ವಹಿಸಬೇಕೆನ್ನುತ್ತಾನೆ. ತಾಯಿಯನ್ನು ಸಾಕಬೇಕೆನ್ನುತ್ತಾನೆ. ಹೆಬ್ಬೆರಳು ಕಳೆದುಕೊಂಡ ಕಾರಣ ಏನೂ ಮಾಡಲಾಗದ ಅಸಹಾಯಕನಾಗುತ್ತಾನೆ. ''ನಿನ್ನ ತಂಗಿ ಆ ಕುಲವಂತರ ಮನೆಯ ದಾಸಿ. ನಮ್ಮಿಬ್ಬರನ್ನು ಎಂಜಲುಕೂಳು ತಿನಿಸಿ ಬದುಕಿಸುತ್ತಿರುವ ದಯಾವಂತೆ ತಿಳೀತೆ?'' ಎಂದು ತಾಯಿ ಮಗನಿಗೆ ಹೇಳುತ್ತಾಳೆ. ಏಕಲವ್ಯನ ತಂಗಿ ಉಳ್ಳವರ ಸ್ವತ್ತಾಗಿ ಹೋಗಿದ್ದಾಳೆ.

"ಅದೆಲ್ಲ ನಮ್ಮ ಕರ್ಮ" ಎನ್ನುತ್ತಾನೆ, ಏಕಲವ್ಯ. ಅದಕ್ಕೆ ತಾಯಿ ಒಪ್ಪುವುದಿಲ್ಲ. ಅದು ನಮ್ಮಂಥ ಕುಲೀನರನ್ನು ತುಳಿದು ಬದುಕುವ ಮಾರ್ಗ ಅವರದು ಎನ್ನುತ್ತಾಳೆ. ಏಕಲವ್ಯನಿಗೆ ತಾಯಿಯ ವೈಚಾರಿಕ ಮಾತುಗಳೇ ಅರ್ಥವಾಗುವುದಿಲ್ಲ. ಆಕೆ ಮೇಲ್ವರು ಸೃಷ್ಟಿಸಿಕೊಂಡಿರುವ ನೀತಿಯನ್ನು ಬಿಚ್ಚಿಡುತ್ತಾಳೆ. ಆದರೆ ಅವನಿಗೆ ತಾನು ಗುರುವಿಲ್ಲದೆ ಹೋಗಿದ್ದರೆ ಅನುತ್ತರ ಧನುರ್ಧರನಾಗುತ್ತಿರಲಿಲ್ಲ ಎಂಬ ಭಾವನೆಗೆ "ವಿದ್ಯೆ, ಬುದ್ಧಿ, ಕಲೆಗಳು ಪ್ರಕೃತಿದತ್ತ ಶಕ್ತಿಗಳು. ಗುರು ನಿಮಿತ್ತ ಮಾತ್ರ" ಎಂದು ಹೇಳುತ್ತಾಳೆ. ಮಗನ ಬಿಲ್ವಿದ್ಯೆಯ ಸಾಮರ್ಥ್ಯವು ಅದು ಅವನಿಗೆ ಹುಟ್ಟಿನಿಂದ ಬಂದುದು. ದ್ರೋಣನೇ ಕಲಿಸಿದ್ದರೆ, ದ್ರೋಣನ ಎಲ್ಲ ಶಿಷ್ಯರೂ ಏಕಲವ್ಯನ ಹಾಗೆ ಅಪ್ರತಿಮರಾಗುತ್ತಿದ್ದರಲ್ಲ? ಎಂದು ಮಗನ ಭಾವನೆಯನ್ನು ಕಳೆಯಲು ಪ್ರಯತ್ನಿಸುತ್ತಾಳೆ. ಗುರು ದ್ರೋಣ ತನ್ನನ್ನು ರಾಜರಿಗೆ ಮಾರಿಕೊಂಡಿದ್ದ. ಅದಕ್ಕಾಗಿಯೇ ನಿನ್ನನ್ನು ತಿರಸ್ಕರಿಸಿದ. ರಾಜರು ಮತ್ತು ಪುರೋಹಿತರು ಕೂಡಿಯೇ ಕೆಳವರ್ಗದವರನ್ನು ಸಾವಿರಾರು ವರ್ಷಗಳಿಂದ ಶೋಷಿಸುತ್ತ ಬಂದಿದ್ದಾರೆಂದು ಹೇಳುತ್ತಾಳೆ. ಏಕಲವ್ಯನಿಗೆ ಮೆಲ್ಲಮೆಲ್ಲನೆ ಪ್ರಜ್ಞೆ ಎಚ್ಚರವಾಗುತ್ತದೆ. ಮೇಲ್ವರ್ಗದವರ ಶೋಷಕ ಗುಣ ಅರ್ಥವಾಗುತ್ತದೆ. "ಅಬ್ಬ, ನಾನೀಗ ಎಚ್ಚೆತ್ತ ಏಕಲವ್ಯ!" ಎಂದು ಹೊಸ ಮನುಷ್ಯನಾದಂತೆ ಉತ್ಸಾಹಗೊಳ್ಳುತ್ತಾನೆ.

ಸತತ ಇಪ್ಪತ್ತು ವರ್ಷಗಳ ಕಾಲ ಎಡಗೈಯಿಂದ ಬಿಲ್ವಿದ್ಯೆ ಕಲಿಯುತ್ತ ಬರುತ್ತಾನೆ. ಆದರೆ ಬಿಲ್ವಿದ್ಯೆ ಕರಗತವಾಗುವುದಿಲ್ಲ. ಒಮ್ಮೆ ಬಾಣ ಹೂಡಿದಾಗ ಗುರಿ ತಪ್ಪಿ ಗುರುದ್ರೋಣನ ಮೂರ್ತಿಗೆ ಬೀಳುತ್ತದೆ. ಕುತ್ತಿಗೆ ಕತ್ತರಿಸಿ ಹೋಗುತ್ತದೆ. ನಿರಾಸೆ ಹೊಂದಿ ತನ್ನಿಂದ ಪುನ: ಬಿಲ್ವಿದ್ಯೆ ಕಲಿಯಲಾಗಲಿಲ್ಲವೆಂದು ಬದುಕಿನ ಬಗ್ಗೆ ಜುಗುಪ್ಸೆಪಟ್ಟು ಸಿಜ್ಞ ಮಾಡದ ದಾರಿಗುಂಟ ಹೊರಟು ಹೋಗುತ್ತೇನೆಂದು ನಿರ್ಧರಿಸಿಕೊಳ್ಳುತ್ತಾನೆ. ನಿರಾಶೆಯೇ ಮರಣ; ಹೋರಾಟವೇ ಜೀವನ — ಎಂದು ತಂಗಿ ಬುದ್ಧಿವಾದ ಹೇಳಿ ಪುನ: ಸಾಂತ್ವನ ಮಾಡಿಸುತ್ತಾಳೆ. ಸ್ವಪ್ನ ಸದೃಶ್ಯವಾದ ಒಂದು ಸನ್ನಿವೇಶದಲ್ಲಿ ಪ್ರತಿಮೆಯೊಂದು, ಏಕಲವ್ಯನ ಅಧೋಗತಿಗೆ ಅವನ ಅಪ್ರತಿಮ ಧನುರ್ವಿದ್ಯೆಯೇ ಕಾರಣ. ಅದರಿಂದ ಮುಂದೆ ಪಾಂಡವರ ನಾಶಕ್ಕೂ ಕಾರಣನಾಗಬಹುದೆಂದು ಕೃಷ್ಣನೇ ಏಕಲವ್ಯನ ಅಧೋಗತಿಗೆ ಕಾರಣನಾಗಿರುವನೆಂದು ತಿಳಿಸುತ್ತದೆ. "ಶೂದ್ರ ಮುಂದೇನು; ನಿನ್ನಲ್ಲಿ ಎಲ್ಲಾ ಯೋಗ್ಯತೆಗಳಿವೆ. ಆದರೆ ಅವುಗಳ ಪರಿಜ್ಞಾನ ಮಾತ್ರ ಇಲ್ಲ" ಎಂದು ಎಚ್ಚರಿಸಿ ಹೋಗುತ್ತದೆ.

ಏಕಲವ್ಯ ತಾಯಿಯಿಂದ, ತಂಗಿಯಿಂದ, ಜ್ಯೋತಿ(ಪ್ರತಿಮೆಯಿಂದ) ಶೂದ್ರರ ನಾಶಕ್ಕೆ ಮೇಲ್ವರ್ಗದ ರಾಜರು, ಪುರೋಹಿತರು ಕಾರಣವೆಂಬುದು ಅರಿತು ಎಚ್ಚತ್ತು, ಪುನ: ಎಡಗೈಯಿಂದ ಬಿಲ್ವಿದ್ಯೆ ಕಲಿತು ಪಾರಂಗತನಾಗುತ್ತಾನೆ. ಆದರೆ ತಾಯಿಗೆ ಮಗನ ಮೇಲೆ ನಂಬಿಕೆ

ಬರುವುದಿಲ್ಲ. ರಾಜರು, ಪುರೋಹಿತರು ಮಗನ ಬಿಲ್ವಿದ್ಯೆಯ ಸಮಾಚಾರ ಕೇಳಿ ಬಂದು, " ಬೆರಳಷ್ಟೇ ಅಲ್ಲ, ಕೊರಳನ್ನೇ ಹಾಡು ಹಗಲೇ ಕತ್ತರಿಸಿ ಹಾಕುತ್ತಾರೆಂದು" ಚಿಂತೆ. ಆಗ ಎಚ್ಚತ್ತ ಏಕಲವ್ಯ, "ಅದು ದಕ್ಷಿಣಾಂಗುಷ್ಠ ಬಲ. ಮೋಸ ಹೋಯಿತು. ಆದರೆ ಇದು ವಾಮಾಂಗುಷ್ಠ ಬಲ. ಇದನ್ನು ಮೋಸದೊಳಿಸುವುದು ಯಾರಿಗೂ ಸಾಧ್ಯವಿಲ್ಲ" ಎಂದು ನಂಬಿಕೆ ಹುಟ್ಟಿಸುತ್ತಾನೆ.

' ನಿನಗಾಗಿ ಆ ಸಿಂಹಾಸನ, ಆ ಕಿರೀಟ, ಆ ರಾಜ್ಯ ವೈಭವ ಕಾದು ಕುಳಿತಿದೆ" ಎಂದು ಏಕಲವ್ಯನನ್ನು ಹುಡುಕಿಕೊಂಡು ಅಶ್ವತ್ಥಾಮ ಬರುತ್ತಾನೆ. ಉಪಪಾಂಡವರನ್ನು ಕೊಂದ ಕಾರಣಕ್ಕಾಗಿ ಅವನು ಕೃಷ್ಣನ ಶಾಪದಿಂದ ಮೂರು ಸಾವಿರ ವರ್ಷ ಕೀವು ರಕ್ತ ಸೋರುವ ದೇಹದೊಂದಿ ಅರಣ್ಯದಲ್ಲಿ ಅಜ್ಞಾತವಾಗಿ ಅಲೆಯಬೇಕಾಗಿ ಬಂದ ಅವಸ್ಥೆಯಲ್ಲೇ ಏಕಲವ್ಯನಲ್ಲಿಗೆ ಬಂದಿರುತ್ತಾನೆ. " ಆ ನೀಲದೇಹಿಗೆ ಶೂದ್ರ ಶಕ್ತಿಯ ಮಹಿಮೆ ತೋರಿಸಬೇಕಾಗಿದೆ. ಈಗ ಅತಿಮಾನಿ ಏಕಲವ್ಯನೆದುರು ನಿಲ್ಲುವ ಬಲ ಯಾರಿಗೂ ಉಳಿದಿಲ್ಲ. ಇದೊಂದು ಸದವಕಾಶ. ಎಲ್ಲಾ ಅಭಿಜಾತರನ್ನು ಹುರಿದು ಹುರಿದು ಹಾಕಬೇಕಾಗಿದೆ." ಎಂದು ಅಶ್ವತ್ಥಾಮ ಹೇಳುತ್ತಾನೆ. ಅವರಿದ್ದಲ್ಲಿಗೆ ಕಿರೀಟವನ್ನು ಬಾಯಿಯಲ್ಲಿ ಕಚ್ಚಿಕೊಂಡು ನಾಯಿ ಬರುತ್ತದೆ. ಅದನ್ನು ಬೆನ್ನತ್ತಿ ಅರ್ಜುನ ಬರುತ್ತಾನೆ. ಏಕಲವ್ಯನನ್ನು ಗುರುತಿಸುತ್ತಾನೆ. ವಾದ ಶುರುವಾಗುತ್ತದೆ. ಏಕಲವ್ಯ ಅರ್ಜುನನ ಬಿಲ್ಲು ಬಾಣ ಕತ್ತರಿಸಿ ಹಾಕುತ್ತಾನೆ. ಅರ್ಜುನ ಸ್ನೇಹ ಬಯಸುತ್ತಾನೆ. " ಈ ಸ್ನೇಹ ಈ ಸಮಾನತೆ. ಆಗೇಕೆ ಬರಲಿಲ್ಲ. ಪಾಪ ನೀನೀಗ ನಿರಾಧಾರ" ಎಂದು ನಿರಾಕರಿಸುತ್ತಾನೆ. " ಬಿರುಗಾಳಿ ಬೀಸಿದಂತೆ, ಎಲ್ಲಾ ನಡೆದು ಹೋಯಿತು. ಗುರು ಸ್ವರ್ಗವಾಸಿಯಾದ. ಕೃಷ್ಣ ಗಾಂಧಾರಿಯ ಶಾಪಕ್ಕೆ ನಿಸ್ತೇಜನಾದ. ಯುಧಿಷ್ಠಿರ ವಿಷಾದಗೊಂಡ. ಭೀಮ ಹದ್ದು ಮೀರಿದ. ನಕುಲ ಸಹದೇವ ಅತೋತ್ಸಾಹಿಗಳಾದರು. ಎಲ್ಲಾ ದೈವಲೀಲೆ" ಎಂದು ಅರ್ಜುನ ಹೇಳುತ್ತಾನೆ.

" ಹಾಗಾದರೆ ನನ್ನ ಪ್ರಭುತ್ವಕ್ಕೆ ಒಪ್ಪಿಕೊಳ್ಳುತ್ತೀಯಾ?" ಎಂದು ಏಕಲವ್ಯ ಕೇಳಿದಾಗ, " ಪ್ರಭುತ್ವಕ್ಕೆ ಕೇವಲ ಪೌರುಷವೊಂದೇ ಸಾಲದು, ದೈವಾನುಗ್ರಹ ಬೇಕು. ಅದು ಕ್ಷತ್ರಿಯರಿಗೆ ಮಾತ್ರ ಸಾಧ್ಯ" ಎಂದು ಅರ್ಜುನ ಹೇಳುತ್ತಾನೆ. ಅಲ್ಲಿಗೆ ಅಶ್ವತ್ಥಾಮ ನಾಯಿಯಿಂದ ಕಿರೀಟ ಕಸಿದುಕೊಂಡು ಬರುತ್ತಾನೆ. ಭೀಮ, ಕೃಷ್ಣ ಬರುತ್ತಾರೆ. " ಈ ಪಾಂಡು ಕುಲದ ಕಿರೀಟದ ಮೇಲೆ ಪಾಂಡವರದೇ ಹಕ್ಕು" ಎಂದು ಭೀಮ ತನ್ನ ಸಾಮರ್ಥ್ಯ ತೋರಿಸಲು ಬಂದು, ಏಕಲವ್ಯನ ಬಾಣದ ಏಟಿನಿಂದ ತತ್ತರಿಸಿ ಹೋಗುತ್ತಾನೆ. ಏಕಲವ್ಯನಿಗೆ ಕಿರೀಟ ತೊಡಿಸಲು ಅಶ್ವತ್ಥಾಮ ಹೋದಾಗ ಸಣ್ಣ ಯುದ್ಧವೇ ನಡೆಯುತ್ತದೆ. ಅಶ್ವತ್ಥಾಮ ಕೊನೆಗೆ ಕಿರೀಟವನ್ನು ಕಾಲಿನಿಂದ ತುಳಿದು ಹಾಕುತ್ತಿರುವಾಗ ಭೀಮ, ಅರ್ಜುನ, ಕೃಷ್ಣ ಮೂವರು ಮೇಲೇರಿ ಬರುತ್ತಾರೆ. ಆ ಕ್ಷಣ ಏಕಲವ್ಯ ಆ ಮೂವರನ್ನು ಉದ್ದೇಶಿಸಿ " ಎಚ್ಚರಿಕೆ ಪೀತಗಳೆ, ಅಲುಗಾಡಿದರೆ ನಾಕು ಕತ್ತರಿಸಿ ಹಾಕೇನು" ಎಂದು ಅವರ ಶಕ್ತಿ ಅಣಗಿಸುತ್ತಾನೆ.

'ಎಚ್ಚತ್ತ ಏಕಲವ್ಯ' ನಾಟಕ ವರ್ಗ ಹೋರಾಟದ ಹಿನ್ನೆಲೆಯಲ್ಲಿ ರಚಿತವಾಗಿದೆ. ಕುವೆಂಪು, ಗೋವಿಂದಪೈ, ಕೈಲಾಸಂ ಅವರ ನಾಟಕಗಳ ಆಶಯಕ್ಕಿಂತ ಬೇರೆಯಾದುದು. ಪ್ರಗತಿಶೀಲ ಸಾಹಿತ್ಯ ಚಳುವಳಿಯ ಚಿಂತನೆಯ ಹಿನ್ನೆಲೆಯಿರುವ ಈ ನಾಟಕವು ತುಳಿತಕ್ಕೊಳಗಾದ ಕೆಳವರ್ಗದ ಪರವಾಗಿಯೂ, ಶೋಷಕರಾದ ಮೇಲ್ವರ್ಗದ ವಿರೋಧವಾಗಿಯೂ ರಚಿತವಾಗಿದೆ. 'ಏಕಲವ್ಯ ಇಲ್ಲಿ ತುಳಿತಕ್ಕೊಳಗಾದ ಶೂದ್ರನಾಗಿ ಚಿತ್ರಿತವಾದರೆ, ಮೇಲ್ವರ್ಗದವರಾದ ದ್ರೋಣ, ಕೃಷ್ಣ ಅರ್ಜುನ, ಭೀಮ ಮುಂತಾದವರು ರಾಜ ಪ್ರಭುತ್ವದ, ಪುರೋಹಿತಶಾಹಿ ರಕ್ಷಕರಾಗಿ ಕಾಣುತ್ತಾರೆ. ಈ ನಾಟಕದಲ್ಲಿ ಭೀಷ್ಮನ   ಪ್ರಸ್ತಾಪವಿದೆಯಾದರೂ ನಾಟಕದಲ್ಲಿ ಎಲ್ಲೂ ಕಾಣಿಸಿಕೊಳ್ಳುವುದಿಲ್ಲ.

'ಏಕಲವ್ಯನು ಬೆರಳು ಕಳೆದುಕೊಂಡರೂ ವ್ಯಥೆ ಪಡದ, ಪಶ್ಚಾತ್ತಾಪವಾಗದೆ, ಗುರುದ್ರೋಣನ ಮೇಲೆ ಮೊದಲಿನ ನಿಷ್ಠೆಯನ್ನೇ ಹೊಂದಿದವನಾಗಿದ್ದಾನೆ. ಆದರೆ ಯಾವುದಕ್ಕೂ ಬಾರದ ನಿಸ್ಸಹಾಯಕನಾಗಿದ್ದಾನೆ. ಅವನಿಗೆ ತಂಗಿ ಬಾಲು, ತಾಯಿ ಇದ್ದಾರೆ. ಅವರನ್ನು ಸಾಕಿ ಸಲಹಬೇಕಾಗಿದೆ. ತಂಗಿಯನ್ನು ಸುಖ ಸಂಸಾರಕ್ಕೆ ಹೊಂದಿಸುವ ಜವಾಬ್ದಾರಿಯಿದೆ. ಆದರೆ ಬೆರಳು ಕಳೆದುಕೊಂಡ 'ಏಕಲವ್ಯನಿಗೆ ಇದ್ಯಾವುದು ಸಾಧ್ಯವಾಗುವುದಿಲ್ಲ. ಆದ್ದರಿಂದ ತಂಗಿ ಬಾಲು ಉಳ್ಳವರ ಸೇವಕಿಯಾಗಿ ನಿಂತಾಗಲೂ ಅವನು ಅಸಹಾಯಕ. ತಂಗಿ, ತಾಯಿ ಇಬ್ಬರು ಎಡೆಬಿಡದೆ ಉಳ್ಳವರ ಮೋಸ, ವಂಚನೆ, ಶೋಷಕ ಗುಣಗಳ ಬಗ್ಗೆ ಎಚ್ಚರಿಸುತ್ತಲೇ ಬರುತ್ತಾರೆ. ಒಂದು ರೀತಿಯಲ್ಲಿ 'ಏಕಲವ್ಯ 'ಏನೂ ಅರಿಯದ ಮುಗ್ಧ;   ಅಸಹಾಯಕ. ಇದು ಮೊದಲ ಏಳು ದೃಶ್ಯಗಳು ಏಕಲವ್ಯನನ್ನು ಬಾಲು, ತಾಯಿ ಮತ್ತು ಆಕೃತಿ (ಪ್ರತಿಮಾ ರೂಪದ ವ್ಯಕ್ತಿ) ತಮ್ಮ ಹರಿತವಾದ ವೈಚಾರಿಕತೆಯಿಂದ ಎಚ್ಚರಿಸುವುದನ್ನು ನೋಡಿದರೆ ಗೊತ್ತಾಗುತ್ತದೆ. ಹೀಗಾಗಿ ನಾಟಕದಲ್ಲಿ 'ಏಕಲವ್ಯನ ಪಾತ್ರ ತನ್ನ ಲವಲವಿಕೆಯನ್ನು ಕಳೆದುಕೊಂಡು, ನೀರಸವಾಗಿದೆ. ಬೆಳವಣಿಗೆ ಕಾಣುವುದಿಲ್ಲ. ಬಾಲು, ತಾಯಿ, ಆಕೃತಿ ಇವರ ಉಪದೇಶದಿಂದ ಉತ್ಸಾಹಗೊಂಡರೂ ಅವು ಯುದ್ಧಭೂಮಿಯಲ್ಲಿ ಕತ್ತಿಕೊಟ್ಟು ನಿಲ್ಲಿಸಿದಂತಾಗಿದೆ. ಪ್ರಗತಿಶೀಲ ಸಾಹಿತ್ಯದಲ್ಲಿ ಬರುವ, ಉಳ್ಳವರ ಭೋಗಕ್ಕೆ ತುತ್ತಾದ ಹೆಂಗಸಿನ ಪಾತ್ರದಂತೆ ಬಾಲು ಕಾಣಿಸಿಕೊಳ್ಳುತ್ತಾಳೆ. 'ಏಕಲವ್ಯನನ್ನು ಎಚ್ಚರಿಸುವ ತಾಯಿ ತನ್ನ ಪ್ರಖರ ವೈಚಾರಿಕತೆಯಿಂದ ಉಳ್ಳವರ ಶೋಷಣೆಯನ್ನು ಖಂಡಿಸುತ್ತಾ ಬರುತ್ತಾಳೆ. ಇಲ್ಲಿ ತಾಯಿಯ ಪಾತ್ರವೇ ಜೀವಂತವಾಗಿ ಕಾಣದೆ, (ನಾಟಕದ ಆರಂಭದ ವಾಕ್ಯವಾಗಿ) ನಾಟಕಕಾರರ ಮುಖವಾಣಿಯಾಗಿ ಬಿಡುತ್ತಾಳೆ. ನಾಟಕದಲ್ಲಿ ಬರಿ ಸಂಭಾಷಣೆಗಳ ಆರ್ಭಟ ಮುಂದಾಗಿ ಕ್ರಿಯೆ ಕಾಣುವುದೇ ಇಲ್ಲ. ಕ್ರಿಯೆ ಕಾಣಿಸಿಕೊಳ್ಳುವುದು ಸ್ವಲ್ಪಮಟ್ಟಿಗೆ ಎಂಟನೆಯ ದೃಶ್ಯದಲ್ಲಿ ಮಾತ್ರ. ಮೊದಲಿನಿಂದ ಕೊನೆಯವರೆಗೆ ಏಕಲವ್ಯನಿಗೆ ಉಪದೇಶ ಮಾಡುವುದರಲ್ಲೇ ತಾಯಿ ಉಳಿಯುವುದರಿಂದ ಇಲ್ಲಿ ತಾಯ್ತನ ಕಾಣಿಸುವುದಿಲ್ಲ. ಆಕೆ ವ್ಯಕ್ತಪಡಿಸುವ ವೈಚಾರಿಕತೆ ಆಕೆಯ ಪ್ರಜ್ಞಾಬೆಳವಣಿಗೆಯ ಹಿನ್ನೆಲೆಯಲ್ಲಿ ಭಾರವಾಗಿದೆ. ''ಏಕಲವ್ಯನ ತಾಯಿ

ಅಬ್ಬಯ ಪಾತ್ರ ನಿಬ್ಬೆರಗಾಗುವ ಹಾಗಿದೆಯಾದರೂ ಆ ಬಾಹ್ಯಿಕ ಪ್ರಶ್ನೆಯ ಜವಾಬ್ದಾರಿಯನ್ನು ತೆಗೆದುಕೊಳ್ಳುವ ತಾಕತ್ತು ಸದ್ಯದ ಬೆಳವಣಿಗೆಯಲ್ಲಿ ಇಲ್ಲ" [1]

ಉದಾಹರಣೆಗೆ ತಾಯಿಯ ಮಾತುಗಳನ್ನು ಗಮನಿಸಬಹುದು:

"ನಿನ್ನದು ಕೆಳಗಿನ ಜಾತಿ. ನಿನ್ನಾನೆ ನಿನ್ನ ಕೈಯಲ್ಲಿಲ್ಲ. ಅದು ಉಚ್ಚಕುಲದವರ ಗುತ್ತಿಗೆಯಾಗಿದೆ"

"ಕರ್ಮ? ಹೌದು ಕುಲವಂತರೆಂಬವರು ತಾವು ಮಾಡುವ ಕ್ರೂರ ಅನ್ಯಾಯಗಳಿಗೆ ಅಸ್ತು ಹೇಳಿ, ನಮ್ಮಂಥ ತುಳಿಸಿಕೊಂಡವರ ತೇಜೋವಧೆ ಮಾಡುವ ಭಂಡ ಸಿದ್ಧಾಂತ ಕರ್ಮ"

"ಎದ್ದವನದು ಧರ್ಮ, ಬಿದ್ದವನದು ಕರ್ಮ. ಈ ಜಗತ್ತಿನ ರೀತಿಯೇ ಹೀಗೆ. ಜಾತಿ, ಕರ್ಮ, ದೈವ, ಇವೆಲ್ಲ ಯಾರು ಮಾಡಿದ್ದು? ಯಾಕೆ ಮಾಡಿದ್ದು ಗೊತ್ತೆ?"

"ಹಾಂ, ಇದನ್ನೇ ನಾನು ಹೇಳುತ್ತಿರೋದು, ಜಾತಿ, ಕುಲಗೋತ್ರಾದಿಗಳ ನೀರಾಳ ಇಷ್ಟೇ. ಆಳುವವರದು ಉಚ್ಚಜಾತಿ. ಆಳಿಸಿಕೊಳ್ಳುವವರದು ನೀಚ ಜಾತಿ. ಬಿದ್ದವನು ಕುಲಹೀನ. ಎದ್ದವನು ಕುಲವಂತ"

"ಯುದ್ಧ ಮಾಡೋದು, ಕಂಠಮಟ್ಟ ತಿಂಬೋದು. ಕಂಡಕಂಡ ಹೊಸಹೊಸ ಹೆಣ್ಣುಗಳನ್ನು ಎಳೆದು ತಂದು ಸುಖಿಸೋದು, ಭಟ್ಟಂಗಿಗಳ ಬಾಯಿಯಿಂದ ಸಂಸ್ಕೃತದಲ್ಲಿ ಸ್ತುತಿ ಪಾಠ ಕೇಳೋದು, ಆಯಿತು. ಇಲ್ಲಿಗೆ ಕ್ಷತ್ರಿಯ ರಾಜರ ಬುದ್ಧಿ ಮುಗೀತು. ಮುಂದೆ ಎಲ್ಲಾ ಪುರೋಹಿತರದ್ದೇ"

"ಹಾಂ ನಿನ್ನ ಇಂಥ ಕಾಡು ಸ್ವಭಾವ ಅವರಿಗೆ ಮೊದಲೇ ಗೊತ್ತಿತ್ತು. ಸಮಾನತೆಯನ್ನು ನಂಬಿರುವ ಈ ಕಾಡು ಶಬರ ಒಂದಿಲ್ಲೊಂದು ದಿನ ಪುರೋಹಿತರ ಗುಟ್ಟುಗಳನ್ನು ಅರಿತುಕೊಳ್ಳುತ್ತಾನೆ. ಕೊನೆಗೊಂದು ದಿನ ಸಿಡಿದು ನಿಲ್ಲುತ್ತಾನೆ. ಯಾವತ್ತೂ ಕುಲೀನರನ್ನು ಲೀಲಾಜಾಲವಾಗಿ ಜಜ್ಜಿಹಾಕುತ್ತಾನೆ; ಇದೇ ಕಾರಣಕ್ಕಾಗಿ ದ್ರೋಣ, ಕೃಷ್ಣ, ಅರ್ಜುನ, ಧರ್ಮ, ಭೀಮ, ಭೀಷ್ಮಾದಿಗಳು ನಿನ್ನ ಹೆಬ್ಬೆರಳನ್ನು ಚತುರೋಪಾಯದಿಂದ ಕತ್ತರಿಸಿ ಹಾಕಿದರು" 'ನಿನ್ನದು', 'ನಿನ್ನಾನೆ', 'ನಿನ್ನ ಕೈಯಲ್ಲಿಲ್ಲ' — ಎಂಬ ತಾಯಿಯ ಮಾತುಗಳಲ್ಲಿ ಹೊಂದಾಣಿಕೆಯೇ ಇಲ್ಲ. [illegible] ಹೊರಗಿನಿಂದ ಹೇಳಿದಂತಿದೆ.

ರಾಜ ಪ್ರಭುತ್ವ ವ್ಯವಸ್ಥೆಯ ಪ್ರತಿನಿಧಿಗಳಾಗಿ ಅರ್ಜುನ, ಭೀಮ, ಕೃಷ್ಣ ಕಾಣಿಸಿಕೊಳ್ಳುತ್ತಾರೆ. ಕುರು – ಪಾಂಡವರು ತಮ್ಮ ತಮ್ಮಲ್ಲಿಯ ದಾಯಾದಿ ಮತ್ಸರಕ್ಕೆ ಬಲಿಯಾಗಿ ಕುರುಕ್ಷೇತ್ರ ಯುದ್ಧಕ್ಕೆ ಕಾರಣರಾಗುತ್ತಾರೆ. ಪಾಂಡವರು ಕೌರವರನ್ನು ನಾಶ

ಮಾಡಿಬಿಡುತ್ತಾರೆ. ಈ ನಾಟಕದಲ್ಲಿ ಕೊನೆಯ ದೃಶ್ಯ ಮುಖ್ಯವಾಗಿದೆ. ಇಲ್ಲಿ ಸೂದ್ರ ಶಕ್ತಿಯಾದ ಏಕಲವ್ಯನನ್ನು ನಾಶ ಮಾಡುವ ತಾಕತ್ತು, ಪಾಂಡವರಿಗೆ ಸಾಧ್ಯವಾಗುವುದಿಲ್ಲ. ಈಗಾಗಲೆ ಹೆಬ್ಬೆರಳು ಕಳೆದುಕೊಂಡಿದ್ದರೂ ಈಗ ಅವನು 'ವಾಮಾಂಗುಷ್ಠ ಬಲ'ವುಳ್ಳವನು. ಎಡಪಂಥೀಯ ಚಿಂತನೆ ಇಲ್ಲಿ ವ್ಯಕ್ತವಾಗುತ್ತದೆ. ಅಶ್ವತ್ಥಾಮನು ಕಿರೀಟವನ್ನು ಏಕಲವ್ಯನಿಗೆ ತೊಡಿಸಲು ಬರುವುದು ರಾಜ್ಯಭಾರ ಶೂದ್ರರ ಕೈಯಿಗೆ ಬರಬೇಕೆಂಬ ಉದ್ದೇಶ ಇಲ್ಲಿ ವ್ಯಕ್ತವಾಗುತ್ತದೆ. ಈ ಕಾರಣದಿಂದ ಈ ನಾಟಕ ಸಮಕಾಲೀನ ಸಮಸ್ಯೆಗೆ ಸ್ಪಂದಿಸುವಂತೆ ಮೂರ್ಪಟಿಸಿರುವುದು ಶಕ್ತವಾಗಿ ವ್ಯಕ್ತವಾಗುತ್ತದೆ. ''ಅದು ದಕ್ಷಿಣಾಂಗುಷ್ಠ ಬಲ. ಮೋಸ ಹೋಯಿತು. ಆದರೆ ಇದು ವಾಮಾಂಗುಷ್ಠ ಬಲ ಇದನ್ನು ಮೋಸಗೊಳಿಸುವುದು ಯಾರಿಗೂ ಸಾಧ್ಯವಿಲ್ಲ'' ಎಂಬ ಏಕಲವ್ಯನ ಮಾತೇ ನಾಟಕದ ಆಶಯವಾಗಿದೆ. 'ಎಚ್ಚೆತ್ತ ಏಕಲವ್ಯ' ಉಳ್ಳವರನ್ನು ಬಗ್ಗುಬಡಿಯುವುದು, ಅಶ್ವತ್ಥಾಮನು ಕೊನೆಗೆ ಕಿರೀಟವನ್ನು ಕಾಲಿನಿಂದ ತುಳಿದು ಒದೆಸುವುದು ಇವು ಧ್ವನಿಪೂರ್ಣವಾಗಿವೆ. ವರ್ಗ ಹೋರಾಟದಲ್ಲಿ ಸಮಾನತೆಗೆ ಸ್ಥಾನವಿದೆ. ರಾಜಪ್ರಭುತ್ವಕ್ಕೆ ಸ್ಥಾನವಿಲ್ಲ. ಕೆಳವರ್ಗದವರು ಶೋಷಣೆಗೆ ಒಳಗಾಗದೆ ಎಚ್ಚೆತ್ತಿರುವುದು ವ್ಯಕ್ತವಾಗುತ್ತದೆ.

ವಜ್ರಮಟ್ಟಿಯವರ 'ಎಚ್ಚೆತ್ತ ಏಕಲವ್ಯ' ನಾಟಕದ ಆಶಯವೇ ಪ್ರಧಾನವಾದ ನಾಟಕವಾಗಿರುವುದರಿಂದ ಇಲ್ಲಿ ಕಲಾತ್ಮಕತೆಯ ಕೊರತೆ ಎದ್ದು ಕಾಣುತ್ತದೆ. ವೈಚಾರಿಕತೆಯು ಇಲ್ಲಿ ಒಳಗಿನಿಂದ ಹುಟ್ಟುವುದಿಲ್ಲ. ಬದಲಾಗಿ ಹೊರಗಿನಿಂದ ಹೇರಲಾಗಿದೆ. ಇದರಿಂದಲೇ ಪಾತ್ರಗಳು ಜೀವಂತವಾಗಿ ಕಾಣದೇ ಸೂತ್ರದ ಗೊಂಬೆಗಳಾಗಿಬಿಟ್ಟಿವೆ.

<u>ಅಡಿ ಟಿಪ್ಪಣಿಗಳು</u>

1. ಆರ್.ವಿ.ಭಂಡಾರಿ: ಸಾಮಾಜಿಕವಾಸ್ತವ(1989) ರಾಘವೇಂದ್ರ ಪ್ರಕಾಶನ, ಪುಟ-100.

ಸಿದ್ಧಲಿಂಗಯ್ಯನವರ 'ಏಕಲವ್ಯ'
ಕಾಡು ನಾಡುಗಳ ಸಾಂಸ್ಕೃತಿಕ ಮುಖಾಮುಖಿ

ಆಧುನಿಕ ಕನ್ನಡ ಕಾವ್ಯ ಪರಂಪರೆಯಲ್ಲಿ ನವ್ಯಕಾವ್ಯ ತನ್ನ ಶಕ್ತಿ ಕಳೆದುಕೊಂಡು ಜಡವಾಗುತ್ತಿದ್ದ ಹೊತ್ತಿನಲ್ಲಿ, ಅದಕ್ಕೆ ಭಿನ್ನ ಆಯಾಮ ಒದಗಿಸಿದ ಕವಿ ಸಿದ್ಧಲಿಂಗಯ್ಯ. ತಮ್ಮ ವಿಶಿಷ್ಟ ಅನುಭವದ ಅಭಿವ್ಯಕ್ತಿಯಿಂದ ಕಾವ್ಯಲೋಕಕ್ಕೆ ಕಾವು ಕೊಟ್ಟವರು. ಸಾಂಸ್ಕೃತಿಕವಾಗಿ ದೂರಿಟ್ಟ ಕಡೆಗಣಿಸಿದ್ದ ದಲಿತರ ನೋವಿಗೆ ಕಾವ್ಯದ ಮೂಲಕ ದನಿಕೊಟ್ಟ, ನಿರ್ಲಕ್ಷ್ಯಕ್ಕೀಡಾಗಿದ್ದ ದಲಿತರ ವೇದನೆಯ ಅಭಿವ್ಯಕ್ತಿಗೆ ಇವರ ಕಾವ್ಯ ದಾರಿಯಾಯಿತು. ಅದಕ್ಕೊಂದು ತಾತ್ವಿಕ ಹಿನ್ನೆಲೆಯನ್ನು, ಕಲಾತ್ಮಕತೆಯನ್ನು ಕೊಡುವುದರ ಮೂಲಕ ಸಿದ್ಧಲಿಂಗಯ್ಯನವರು ಒಂದು ಜೀವಂತ ಸಂಸ್ಕೃತಿಯ ನೋವು, ನಲಿವುಗಳನ್ನು ಎತ್ತಿತೋರಿಸಿದರು. ಅವರ 'ಏಕಲವ್ಯ' ಜೀವಂತ ಸಂಸ್ಕೃತಿಯ ದು:ಖದುಮ್ಮಾನದ ಪ್ರತಿನಿಧಿಯಾಗಿದ್ದಾನೆ.

'ಎಚ್ಚೆತ್ತ ಏಕಲವ್ಯ' ನಾಟಕದಲ್ಲಿ ವಜ್ರಮಟ್ಟಿಯವರು ಏಕಲವ್ಯನನ್ನು ಪ್ರಗತಿಶೀಲ ಸಾಹಿತ್ಯ ಚಳುವಳಿಯ ಧ್ಯೇಯೋದ್ದೇಶಗಳಿಗೆ ಅನುಗುಣವಾಗಿ ನೋಡಿರುವುದರಿಂದ ಅದು ಆಶಯ ಪ್ರಧಾನವಾದ ನಾಟಕವಾಗಿದೆ. ಸಿದ್ಧಲಿಂಗಯ್ಯನವರು 'ಏಕಲವ್ಯ' ನಾಟಕದಲ್ಲಿ ಏಕಲವ್ಯನನ್ನು ದಲಿತ ಚಳುವಳಿಯ ಹಿನ್ನೆಲೆಯಲ್ಲಿ, ದಲಿತರ ಸಾಂಸ್ಕೃತಿಕ ಮೌಲ್ಯಗಳೊಂದಿಗೆ ತಮ್ಮ ಅಸ್ತಿತ್ವವನ್ನು ಹೇಗೆ ಸ್ಥಾಪಿಸಿಕೊಳ್ಳಬೇಕೆಂಬ ಚಿಂತನೆ ಇಲ್ಲಿದೆ. ಪ್ರಗತಿಪರ ಆಲೋಚನೆಗಳು, ವೈಚಾರಿಕತೆಯು ಈ ನಾಟಕದಲ್ಲಿ ತಾತ್ವಿಕವಾಗಿ, ಕಲಾತ್ಮಕವಾಗಿ ವ್ಯಕ್ತವಾಗಿದೆ. 'ಎಚ್ಚೆತ್ತ ಏಕಲವ್ಯ' ನಾಟಕದಲ್ಲಿ ವೈಚಾರಿಕತೆ ಇದ್ದರೂ ಅದು ನಾಟಕದ ಒಳಗಿನಿಂದ ಬರದುದಾಗಿಲ್ಲ. ಬದಲಾಗಿ ಹೊರಗಿನಿಂದ ಹೇರಿದಂತಿದೆ. ಸಿದ್ಧಲಿಂಗಯ್ಯನವರ 'ಏಕಲವ್ಯ' ದಲ್ಲಿ ವೈಚಾರಿಕತೆ ಕೃತಿಯ ಒಳಗಿನಿಂದ ಹುಟ್ಟುತ್ತದೆ. ಇದಕ್ಕೆ ಕೃತಿಕಾರರ ಸಾಂಸ್ಕೃತಿಕ ಸಂದರ್ಭಗಳೂ ಕಾರಣವಾಗಿವೆ. ಹಾಗೆ ನೋಡಿದರೆ ಸಿದ್ಧಲಿಂಗಯ್ಯನವರ ಮೇಲೆ ಒಂದಂಶದಲ್ಲಿ 'ಎಚ್ಚೆತ್ತ ಏಕಲವ್ಯ' ನಾಟಕದ ಪ್ರಭಾವವಿದೆ ಎನ್ನಿಸುತ್ತದೆ. ಗುರುದಕ್ಷಿಣೆಯಾಗಿ ಹೆಬ್ಬೆರಳು ಕೊಟ್ಟ ಮೇಲೆಯೂ ಏಕಲವ್ಯನ ಕಥೆ ವಿಶಿಷ್ಟವಾಗಿ ಮುಂದುವರೆದಿರುವುದನ್ನು ವಜ್ರಮಟ್ಟಿಯವರ ನಾಟಕದಲ್ಲಿ ಕಾಣುತ್ತೇವೆ. ಇದು ಸಿದ್ಧಲಿಂಗಯ್ಯನವರ ನಾಟಕದಲ್ಲಿಯೂ ಕಾಣುತ್ತೇವೆ. ವ್ಯಾಸ ಭಾರತದಲ್ಲಿ ಏಕಲವ್ಯನು ಕುರುಕ್ಷೇತ್ರದಲ್ಲಿ ಕೌರವರ ಪರವಾಗಿ ನಿಂತು ಯುದ್ಧಮಾಡಿದ ಪ್ರಸ್ತಾಪವಿದೆ. ಆದರೆ ಬೆರಳು ನೀಡಿದ ಮೇಲೆ ಈ ಎರಡು ನಾಟಕಗಳಲ್ಲಿ ಏಕಲವ್ಯನು ಕುರುಕ್ಷೇತ್ರ ಯುದ್ಧಕ್ಕೇ ಹೋಗುವುದಿಲ್ಲ. ಆದರೆ ಕೌರವ — ಪಾಂಡವರ ಬಗ್ಗೆ ಸಿದ್ಧಲಿಂಗಯ್ಯನವರ 'ಏಕಲವ್ಯ' ತೆಗೆದುಕೊಳ್ಳುವ ನಿರ್ಧಾರ ಬೇರೆ. 'ಎಚ್ಚೆತ್ತ ಏಕಲವ್ಯ' ದಲ್ಲಿ ವಜ್ರಮಟ್ಟಿಯವರು ಸೂಚಿಸುವ ನಿಲುವೇ ಬೇರೆ. ಇಲ್ಲಿ ಸೂಕ್ಷ್ಮ ವ್ಯತ್ಯಾಸವಿದೆ. ವರ್ಗ ಹೋರಾಟವೇ ಎರಡು ನಾಟಕಗಳಲ್ಲಿ ಮುಖ್ಯವಾಗಿ ಕಂಡರೂ, ವಜ್ರಮಟ್ಟಿಯವರ ದೃಷ್ಟಿಯಲ್ಲಿ 'ಏಕಲವ್ಯ' ಶೂದ್ರನಾಗಿ ಕಾಣಿಸುತ್ತಾನೆ. ಸಿದ್ಧಲಿಂಗಯ್ಯನವರ ದೃಷ್ಟಿಯಲ್ಲಿ 'ಏಕಲವ್ಯ' ದಲಿತನಾಗಿ ಕಾಣುತ್ತಾನೆ. ಇಲ್ಲಿ ಏಕಲವ್ಯನ ಮೇಲೆ

ಸಿದ್ಧಲಿಂಗಯ್ಯನವರಿಗೆ ಒಳಗಿನ ಪ್ರೀತಿಯಿದೆ. ವಜ್ರಮುಟ್ಟಿಯವರಿಗೆ ಹೊರಗಿನ ಪ್ರೀತಿಯಿದೆ. ಕುವೆಂಪು, ಸಿದ್ಧಲಿಂಗಯ್ಯ ಅವರಿಗೆ ಪ್ರಕೃತಿಯ ಮೇಲೆ ಅಗಾಧವಾದ ಪ್ರೀತಿಯಿದೆ. ಕಾಡಾಡಿ ಏಕಲವ್ಯನೇ ಕುವೆಂಪು ಆಗಿಬಿಡುತ್ತಾರೆ. ಈ ತಾದಾತ್ಮ್ಯ ಸಿದ್ಧಲಿಂಗಯ್ಯನವರಿಗೆ ಇಲ್ಲದಿದ್ದರೂ ಈ ಹೊತ್ತಿನ ಕಾಡಿನ ಮಹತ್ವ ಅರಿತ ಪ್ರಜ್ಞಾವಂತರಾಗಿ ಕಾಣುತ್ತಾರೆ.

ಸಿದ್ಧಲಿಂಗಯ್ಯನವರ ''ಏಕಲವ್ಯ'' ನಾಟಕ ಪ್ರಾರಂಭವಾಗುವುದೇ ಘೋಷಣೆಯಿಂದ. ಪ್ರಕೃತಿ ಸಹಜ ಮುಗ್ಧತೆ ಮತ್ತು ಸಕಲ ಜೀವ ಚೈತನ್ಯವನ್ನು ಉಳಿಸುವ ಹುಟ್ಟುಗುಣದ ಕಾಡಾಡಿ ಏಕಲವ್ಯ ಮತ್ತು ಅವನ ಒಡನಾಡಿಗಳು ಒಂದು ಕಡೆಯಾಗಿ, ಸ್ವಾರ್ಥ, ಕ್ರೌರ್ಯ, ಅಹಂಕಾರ ತುಂಬಿದ ನಗರ ನಾಗರಿಕರೆಂದು ಕರೆಸಿಕೊಳ್ಳುವ ರಾಜ ಮತ್ತು ಅವನ ಹಿಂಬಾಲಕರು ಇನ್ನೊಂದು ಕಡೆಯಾಗಿ ನಿಂತಾಗ ಏರ್ಪಡುವ ಸಂಘರ್ಷ ನಾಡಾಡಿ ಮತ್ತು ಕಾಡಾಡಿಗಳ ಸಂಬಂಧದ ಸ್ವರೂಪ ಎಂಥದ್ದು ಎಂದು ಗೊತ್ತಾಗುತ್ತದೆ. ನಾಗರಿಕರ ವಿದ್ಯೆ ವಿನಾಶಕ್ಕೆ ಕಾರಣವಾಗುತ್ತದೆ. ಕಾಡಾಡಿಗಳ ವಿದ್ಯೆ ಪ್ರಕೃತಿಯನ್ನು, ಸಕಲಜೀವಗಳ ಸಂರಕ್ಷಣೆಗಾಗಿ ಎಂಬುದು ಧ್ವನಿತವಾಗುತ್ತದೆ. ಕುರು – ಪಾಂಡವರೆಂಬ ನಗರ ನಾಗರಿಕರು ವಿದ್ಯೆ ಕಲಿಯುವುದು ಸ್ವಾರ್ಥಕ್ಕಾಗಿ, ದಾಯಾದಿಗಳ ಕಗ್ಗೊಲೆಗೆ, ಸಾಮಾನ್ಯರ ಅವನತಿಗೆ. ಕಾಡಾಡಿ ಏಕಲವ್ಯನು ವಿದ್ಯೆ ಕಲಿಯುವುದು ಪರಾರ್ಥಕ್ಕಾಗಿ; ಜೀವ ಸಂಕುಲಗಳ ರಕ್ಷಣೆಗಾಗಿ. ಅದಕ್ಕಾಗಿಯೇ ಪ್ರಾರಂಭದಲ್ಲಿ ಬರುವ ಹಾಡು ನಾಡಿಗೆ ಹೋರಾಡಿ ಪ್ರಾಣವ ಕೊಟ್ಟಂಥ–

ವೀರರ ಕಥೆಯು
ಕಾಡಿಗೆ ಹೋರಾಡಿ ಕಣ್ಣಾದ ವೀರನ
ಕಥೆಯಿದು
ಹೆಣ್ಣಿನ ಹುಚ್ಚಿನ ಜೂಜಿನ ಮೋಜಿನ
ಕದನದ ಮದದಲ್ಲಿ ಮೆರೆಯುವ ರಾಜರ
ಒಳಜೀವ ವೈರಕ್ಕೆ ಮಿಡಿಯುತಲಿತ್ತು.
ಅಣ್ಣ ತಮ್ಮನ ಕೊಂದು ಮಗನು ಅಪ್ಪ ನಕೊಂದು,
ಗುರುವನು ಶಿಷ್ಯ ಎದುರಿಸಿ ರಣದಲ್ಲಿ
ಪ್ರಾಣವ ಮಣ್ಣಿನ ಕಣವಾಗಿ ಹೋಯಿತು.

ಇದು ಕುರು – ಪಾಂಡವರ ಕಥೆ, ವ್ಯಥೆ. ಈ ಹೊತ್ತಿನ ಸಂದರ್ಭದಲ್ಲಿ ಪ್ರಸ್ತುತವಾಗುವ ಅಂಶವೆಂದರೆ ಬುಡಕಟ್ಟುಗಳನ್ನು ಸರಕಾರಿ ವ್ಯವಸ್ಥೆ ಹೇಗೆ ಹಿಂಸಿಸುತ್ತಿದೆ ಎಂಬುದು. ಬುಡಕಟ್ಟು ಜನಾಂಗಗಳು ತಲೆತಲಾಂತರದಿಂದ ಜನ್ಮವೆತ್ತಿ, ಜನ್ಮಸವೆಸಿ ಬಾಳುವುದು ಕಾಡುಗಳಲ್ಲಿ. ಅವರಿಗೆ ಈ ಕಾಡೆ? ಆಸ್ತಿ, ಪ್ರಾಣ, ಸರ್ವಸ್ವ. ಬೇರೆ ಗತಿಯಿರದ ಈ ಜನರನ್ನು ಸರಕಾರ ಸಂರಕ್ಷಿಸದೆ, ಅವರಿಗೆ ಸರಿಯಾದ ಸೌಲಭ್ಯ ಕಲ್ಪಿಸದೆ, ಅವರನ್ನು ಅರ್ಥಮಾಡಿಕೊಳ್ಳದೆ ಅವರ ಒಡನಾಡಿಯಾದ ಕಾಡಿನಿಂದ ಬೇರ್ಪಡಿಸುವ ನೀತಿ ಸರಕಾರದ್ದಾಗಿದೆ. ಇದರಿಂದ ಈ ಜನಾಂಗ

ಅಸ್ತವ್ಯಸ್ತಗೊಂಡಿದೆ. ನಾಟಕದ ಮೊದಲ ಅಂಕದಲ್ಲಿ ಕಾಡಾಡಿ, ನಾಡಾಡಿಗಳ ಸಂಬಂಧ ಮತ್ತು ಅದರ ಸ್ವರೂಪ ಗೊತ್ತಾಗುತ್ತದೆ.

''...ನಂ ಕಾಡಿಗೆ ಬಂದು ನಮ್ಗೇ ಎದುರ್ ಬೀಳ್ತಾರಲ್ಲೋ''

''ಈ ಕಾಡು ನಿಮ್ದಲ್ಲ...ಮಹಾರಾಜರದು. ಅವ್ರೇ ನಮ್ಮನ್ನೂ ನಿಮ್ಮನ್ನೂ
ಸಾಕಿ ಸಲಹ್ತಾ ಇರೋರು.
ಅವರು ಮನಸ್ಸು ಮಾಡದೇ 'ಏನೂ ನಡೆಯೋಲ್ಲ. ಒಂದೆ ಹಕ್ಕಿ ಕೂಡ ಹಾರಲ್ಲ.
ಒಂದು ಹೂವು
ಕೂಡ ಅರಳಲ್ಲ... ರಾತ್ರೀಲಿ ಪ್ರಜೆಗಳಿಗೆ ಕನಸು ಕೂಡಾ ಬೀಳಲ್ಲ''

ಎರಡನೆಯ ದೃಶ್ಯದಲ್ಲಿ ನಗರ ನಾಗರಿಕ ಪುಂಡರು ಕಾಡಿಗೆ ದಾಳಿಯಿಟ್ಟು, ಕಾಡಾಡಿಗಳನ್ನು, ಕಾಡನ್ನು, ನಿರುಪದ್ರವಿ ಜೀವಿಗಳನ್ನು ಧ್ವಂಸ ಮಾಡಿ ಹೋಗುತ್ತಾರೆ. 'ಏಕಲವ್ಯ ಈಗ ತನ್ನಲ್ಲಿದ್ದ ಬಿಲ್ವಿದ್ಯೆ ಸಾಮರ್ಥ್ಯ ಸಾಲದಾಗಿ '' ಅಪ್ಪನ ಕಾಲದ ಬಿಲ್ಲಿಗೆ ಮಗನ ಕಾಲಕ್ಕೆ ಮುಪ್ಪಾವಗಿತೇ? '' ಎಂದು ಪರಿತಪಿಸುತ್ತಾನೆ ಮತ್ತು ಪ್ರಶ್ನಿಸಿಕೊಳ್ಳುತ್ತಾನೆ. ಇಂದಿನ ಸ್ಪರ್ಧಾತ್ಮಕ ಪ್ರಪಂಚದಲ್ಲಿ ಅಲ್ಲದೆ ರಾಜಶಾಹಿ, ಪುರೋಹಿತಶಾಹಿ ವಾಸನೆ ಉಳಿಸಿಕೊಂಡಿರುವ ಜಗತ್ತಿನಲ್ಲಿ ದಲಿತನಾದವನು ಜಿಗಿದು ಮೇಲೇಳ ಬೇಕಾಗಿದೆ. ಅದಕ್ಕಾಗಿ ಅವನು ಹೆಚ್ಚು ಶ್ರಮಿಸಬೇಕಾಗಿದೆ ಎಂಬುದನ್ನು ಧ್ವನಿಸುತ್ತದೆ. ಅದಕ್ಕಾಗಿ ಏಕಲವ್ಯ ಸಮರ್ಥ ಬಿಲ್ವಿದ್ಯೆಗಾರನಾಗಲು ದ್ರೋಣನಲ್ಲಿಗೆ ಹೋಗುತ್ತಾನೆ. ಇಲ್ಲಿಯವರೆಗೆ ನಾಟಕ ಹೊಸ ಹೊಳಪುಗಳನ್ನು ಬಿಚ್ಚಿಕೊಳ್ಳುತ್ತ ಬಂದು ನಂತರ ಪುರಾಣದ ವಸ್ತುವನ್ನೇ ಅನುಸರಿಸಿ ಬಿಡುತ್ತದೆ. ಈ ನಾಟಕದಲ್ಲಿ ಬರುವ ತಾಯಿ ಮತ್ತು ಮಾವ ('ಏಕಲವ್ಯನ ತಾಯಿಯ ಅಣ್ಣ) ಇಬ್ಬರು, 'ಬೆರಳ್ಗೆ ಕೊರಳ್' ದ ಅಬ್ಬೆಯನ್ನು, 'ಹೆಬ್ಬೆರಳು' ನಾಟಕದ ಹಿರಣ್ಯಧನುವಿನನ್ನು ಹೋಲುತ್ತಾರೆ. ಅಲ್ಲಿ ಅವರು ನಿರ್ವಹಿಸುವ ಕೆಲಸವನ್ನು ಇಲ್ಲಿ ನಿರ್ವಹಿಸುತ್ತಾರೆ. ಇದರಿಂದ ಸಿದ್ಧಲಿಂಗಯ್ಯನವರು ''ಏಕಲವ್ಯ' ನಾಟಕದಲ್ಲಿ ತಾಯಿ ಮತ್ತು ಮಾವ ಪಾತ್ರಗಳ ಕಡೆ ವಿಶೇಷವಾದ ಗಮನ ಕೊಡದೇ ಚಿತ್ರಿಸಿದ್ದಾರೆ. ತಾಯಿಗೆ, 'ಏಕಲವ್ಯ ಗುರುದ್ರೋಣರಲ್ಲಿಗೆ ವಿದ್ಯೆ ಕಲಿಯಲು ಹೋಗುವಂತೆ ಹೇಳುತ್ತಾಳೆ. ಮಾವನು ನಿರಾಕರಿಸುತ್ತಾನೆ. '' ಅದು ಬೇಡರು ಹೋಗೋ ಜಾಗ ಅಲ್ಲ. ಬೇಡರು ಹೋದರೆ ಆ ಮಣ್ಣುಗೂ ಮೈಲಿಗೆ ಆಗ್ತದಂತೆ'' ಎಂದು ತಿಳಿಸಿದರೂ, ತಾಯಿಯ ಬೆಂಬಲದಿಂದ ಹೋಗುತ್ತಾನೆ. ಹಸ್ತಿನಾವತಿ ಎಂಬ ನಗರ, ಅದರ ನಾಗರಿಕರು, ವನಚರರನ್ನು ಹೇಗೆ ಕಾಣಬೇಕೋ ಹಾಗೆಯೇ ಕಾಣುತ್ತಾರೆ. ದ್ರೋಣನ ಅಸಹಾಯಕತೆ, ಒಂದು ಕಡೆಯಾದರೆ, ಅರಸು ಮಕ್ಕಳ ಅವಹೇಳನ ಇನ್ನೊಂದು ಕಡೆ. ''ಏ ಕಾಡಿನ ಕ್ರಿಮಿ. ಒಳಗೆ ಬರಲು ಎಷ್ಟೋ ಧೈರ್ಯ ನಿನಗೆ'' ಎಂದು ಭೀಮ ಗದರಿಸುತ್ತಾನೆ. ಅಸ್ಪೃಶ್ಯರನ್ನು

ಯಾರೊಳಗೆ ಬರಲಾರದಂಥ ನಿರ್ಬಂಧ ಈ ಹೊತ್ತಿನ ಸಂದರ್ಭದಲ್ಲೂ ಕೇಳಿ ಬರುವ ವಿಷಯವೇ ಆಗಿದೆ. ಅರಸು ಮಕ್ಕಳಾದ ಅರ್ಜುನ, ಭೀಮ ಮುಂತಾದವರನ್ನು ಸಿದ್ಧಲಿಂಗಯ್ಯನವರು ನೋಡಿರುವುದು ಕುವೆಂಪು, ಗೋವಿಂದ ಪೈ, ಕೈಲಾಸಂ, ವಜ್ರಮಟ್ಟಿ ಅವರುಗಳಿಗಿಂತ, ಭಿನ್ನವಾಗಿಯೇನೂ ನೋಡಿಲ್ಲ.

ಆದರೆ ಇಲ್ಲಿ ದುರ್ಯೋಧನನು 'ಏಕಲವ್ಯನ ಪರವಾದಿಸುತ್ತಾನೆ. ಈ ನಾಟಕದ ಮೂರು ಮತ್ತು ನಾಲ್ಕನೆಯ ದೃಶ್ಯಗಳು ಪುರಾಣದ ಜಾಡನ್ನೇ ಅನುಸರಿಸಿವೆ. 'ಏಕಲವ್ಯನನ್ನು ದ್ರೋಣ ತಿರಸ್ಕರಿಸುತ್ತಾನೆ. ದ್ರೋಣನ ಮಗ ಅಶ್ವತ್ಥಾಮ ಸ್ನೇಹ ಬೆಳೆಸುತ್ತಾನೆ. 'ಏಕಲವ್ಯ ಮರಳಿ ಕಾಡಿಗೆ ಬಂದು ದ್ರೋಣನನ್ನೇ ಗುರುವಾಗಿ ಮನದಲ್ಲೇ ಸ್ವೀಕರಿಸಿ ಮೂರ್ತಿ ಮಾಡಿ ಅದರ ಮುಂದೇನೆ ಬಿಲ್ವಿದ್ಯೆ ಕಲಿತು ಪಾರಂಗತನಾಗುವುದು, ಒಂದು ದಿನ ಭೇಟಿಗೆ ಬಂದ ಪಾಂಡವರ ನಾಯಿಯ ಬಾಯಿಗೆ ಬೊಗಳದ ಹಾಗೆ ಬಾಣ ಬಿಡುವುದು, 'ಏಕಲವ್ಯನ ಪ್ರತಿಭೆಯನ್ನು ಕಂಡು ಅಸೂಯೆ ಪಟ್ಟು, ಗುರುದ್ರೋಣನನ್ನು ಮುಂದು ಮಾಡಿ ಗುರುದಕ್ಷಿಣೆಯೆಂದು ಹೆಬ್ಬೆರಳು ಕತ್ತರಿಸಿ ಕೊಡುವಂತೆ ಕೇಳುವುದು ಮುಂತಾದ ಪ್ರಸಂಗಗಳೆಲ್ಲ ಇಲ್ಲೂ ಇವೆ. ಈ ನಾಟಕದ ಆರನೆಯ ದೃಶ್ಯದಲ್ಲಿರುವ ದ್ರೋಣ ಭೀಷ್ಮರ ಸಂವಾದ ಕುತೂಹಲವಾದುದು. ಕೈಲಾಸಂ ಮೊದಲ ಐದರಲ್ಲಿರುವ ದ್ರೋಣ, ಭೀಷ್ಮರ ಸಂವಾದದಂತೆ. ಇಲ್ಲಿ [illegible] ಅವರ 'The purpose' ನಾಟಕದಲ್ಲಿ ಉಂಟಾಗುವ ಅನರ್ಥಕಾರಿ ಘಟನೆಗಳಿಗೆ ಯಾರೂ ಹೊಣೆಯಲ್ಲ. ವಿಧಿಲೀಲೆಯಂತಾಗುತ್ತದೆ ಎಂಬ ವಾದ ವ್ಯಕ್ತವಾಗುತ್ತದೆ. 'ಏಕಲವ್ಯ' ನಾಟಕದಲ್ಲೂ ಇದು ವ್ಯಕ್ತವಾಗುತ್ತದೆ. ಜೊತೆಗೆ ಬಹು ಮುಖ್ಯವಾದ ವಿಷಯವೆಂದರೆ ರಾಜಪ್ರಭುತ್ವದ ಪ್ರತಿನಿಧಿಯಾಗಿ ಭೀಷ್ಮನು, ಪುರೋಹಿತಶಾಹಿ ಪ್ರತಿನಿಧಿಯಾಗಿ ದ್ರೋಣನು ಕೂಡಿ 'ನಿರ್ಮಿಸಿಕೊಂಡ ವ್ಯವಸ್ಥೆ'' ಯ ರೀತಿ ಯಾವ ಬಗೆಯದು ಎಂಬುದು ವ್ಯಕ್ತವಾಗುತ್ತದೆ.

ಭೀಷ್ಮ: ಲೋಕದ ಮಾನವ ಜೀವಿಗಳ ತರತಮ ಸಂಬಂಧಗಳನ್ನು ಉಳಿಸಿಕೊಂಡು ಬರುವುದೇ ನಮ್ಮೆಲ್ಲರ ಜವಾಬ್ದಾರಿ.

ದ್ರೋಣ: ಅಂದರೆ ನಮ್ಮ ಬದುಕಿನ 'ಏರುಪೇರುಗಳನ್ನು ಅಸಂಗತ ವಿಚಾರಗಳನ್ನು ಕಾಪಾಡುವುದೇ ಪ್ರಮುಖವೆಂದಾಯಿತಲ್ಲವೆ?

ಭೀಷ್ಮ: ಆಚಾರ್ಯ ನಾನು ಧರ್ಮ ಸೂತ್ರಗಳಿಗೆ ಅನುಗುಣವಾಗಿ ಹೇಳುತ್ತಿದ್ದೇನೆ. ಎಷ್ಟೇ ಆಗಲಿ ಅದು ರಚಿತವಾದುದು ಬ್ರಹ್ಮಜ್ಞೋತ್ತಮರಿಂದ ಅಲ್ಲವೇ? ನೀವೇ ಬರೆದದ್ದನ್ನು ಚಾಚೂ ತಪ್ಪದೆ ಪಾಲಿಸುವುದಷ್ಟೇ ಕ್ಷತ್ರಿಯರ ಕೆಲಸ. (ನಗು)

ದ್ರೋಣ: ಪೂಜ್ಯರೇ ನೀವು ಬರಸಿದ್ದರಿಂದ ನಾವೇಕೆ ಬರೆದಿರಬಾರದು?

ಭೀಷ್ಮ : ಅದೇನೆ ಇರಲಿ, ಸೂಕ್ಷ್ಮವಾದ ಸಂಗತಿಗಳತ್ತ ಗಮನ ಕೊಡೋಣ. ಕ್ಷತ್ರಿಯರು ರಾಜ್ಯವನ್ನು ಆಳಲು ಅರ್ಹರಾದವರು. ನಮ್ಮ ಪದ್ಧತಿಗಳನ್ನು ಜೀವನವನ್ನು ಅವರು ರಕ್ಷಿಸುತ್ತಾರೆ ನಿಜ. ಆದರೆ ಈ ಕ್ಷತ್ರಿಯ ಬಲವಷ್ಟೇ ನಿರ್ಣಾಯಕವಲ್ಲ. ಕ್ಷತ್ರಿಯರ ಬಾಹುಬಲಕ್ಕೆ ಬ್ರಾಹ್ಮಣರ ಬುದ್ಧಿಯ ಬಲ ಅಗತ್ಯವಾಗಿ ಬೇಕಾಗಿದೆ.

ವರ್ಣಾಶ್ರಮ ನೀತಿಯಿಂದ, ಪುರೋಹಿತರು(ಬ್ರಾಹ್ಮಣರು) ಅರಸರು(ಕ್ಷತ್ರಿಯರು) ಕೂಡಿಕೊಂಡು ತಮಗೊಂದು ನೀತಿ-ನಿಯಮವನ್ನು ಮಾಡಿಕೊಂಡು, ಶೂದ್ರರಿಗೊಂದು ನೀತಿ-ನಿಯಮವನ್ನು ಮಾಡಿ ಶತಮಾನಗಳ ಉದ್ದಕ್ಕೂ ಶೂದ್ರರನ್ನು ಶೋಷಣೆ ಮಾಡಿ, ತಾವು ವೈಭವಯುತವಾಗಿ ಬದುಕುತ್ತ ಬಂದಿರುವುದು ಚರಿತ್ರೆಯಿಂದ ಕಾಣುತ್ತೇವೆ. ಈ ಹೊತ್ತಿನ ಸಂದರ್ಭದಲ್ಲಿ ಪ್ರಜಾಪ್ರಭುತ್ವ ಬಂದಿದ್ದರೂ, ಸಂಪೂರ್ಣ ಬದಲಾವಣೆ ಬಂದಿದೆ ಎಂಬುದು ಇಲ್ಲ. ಶೂದ್ರರಿಗೆ ಸಂಪೂರ್ಣ ಮುಕ್ತಿ ಸಿಕ್ಕಿಲ್ಲ. ಧರ್ಮಾಧಿಕಾರಿಗಳು, ರಾಜಕಾರಣಿಗಳು ಪ್ರಜಾಪ್ರಭುತ್ವದಲ್ಲಿಯೂ ಕೂಡಿಯೇ ಇದ್ದಾರೆ. ಇಂಥ ಕ್ರೂರ ವಾಸ್ತವವನ್ನು ಸಿದ್ಧಲಿಂಗಯ್ಯನವರು ವ್ಯಕ್ತಪಡಿಸಿದ್ದಾರೆ.

ಒಂಬತ್ತು, ಹತ್ತು ಮತ್ತು ಹನ್ನೊಂದನೆಯ ದೃಶ್ಯಗಳಲ್ಲಿ ಕಾಣಿಸಿಕೊಳ್ಳುವ ಕಥಾ ಪ್ರಸಂಗವು ಸಿದ್ಧಲಿಂಗಯ್ಯನವರ ಸೃಷ್ಟಿಯಾಗಿದೆ ಮತ್ತು ಅವರ ನಿಲುವು ಇಲ್ಲಿ ಸ್ಪಷ್ಟವಾಗುತ್ತದೆ. ಏಕಲವ್ಯ ಬಲಗೈ ಹೆಬ್ಬೆರಳನ್ನು ಕಳೆದುಕೊಂಡರೂ, ಎಡಗೈ ವೀರನಾಗಿ ಬೆಳೆಸಿದ್ದಾನೆ. ಇದು ವ್ಯಾಸನ ಮಹಾಭಾರತದಲ್ಲಿಯೂ ಇದೆ. ಪ್ರಮುಟ್ಟಿಯವರ 'ಎಚ್ಚತ್ತ ಏಕಲವ್ಯ' ನಾಟಕದಲ್ಲೂ ಇದೆ. ಆದರೆ ವ್ಯಾಸ ಮಹಾಭಾರತದಲ್ಲಿ ಏಕಲವ್ಯ ಎಡಗೈ ವೀರನಾಗಿ ಕೌರವರ ಪಕ್ಷವಹಿಸಿ, ಪಾಂಡವರಿಂದ ಮಡಿಯುತ್ತಾನೆ. 'ಎಚ್ಚತ್ತ ಏಕಲವ್ಯ'ದಲ್ಲಿ ಎಡಗೈ ವೀರನಾಗಿ, ಕುರುಕ್ಷೇತ್ರ ಯುದ್ಧಾನಂತರ ಅಶ್ವತ್ಥಾಮನು 'ರಾಜನಾಗಲು ನೀನೊಬ್ಬನೇ ಅರ್ಹ ವ್ಯಕ್ತಿ' ಎಂದು ಏಕಲವ್ಯನನ್ನು ಆಹ್ವಾನಿಸುತ್ತಾನೆ. ಆದರೆ ಏಕಲವ್ಯ ಅದಕ್ಕೂ ಒಪ್ಪದಿರುವುದು 'ರಾಜಪ್ರಭುತ್ವವೇ' ನಾಶವಾಗಲಿ ಎಂಬ ಆಶಯ ಇಲ್ಲಿ ವ್ಯಕ್ತವಾಗುತ್ತದೆ.
ಇದಕ್ಕಿಂತ ಭಿನ್ನವಾಗಿ ಸಿದ್ಧಲಿಂಗಯ್ಯನವರ ''ಏಕಲವ್ಯ' ನಾಟಕದಲ್ಲಿ ವ್ಯಕ್ತವಾಗುತ್ತದೆ. ಇಲ್ಲಿ ಕೌರವರು ತಮ್ಮ ಪಕ್ಷ ಸೇರಿಕೊಳ್ಳುವಂತೆಯೂ, ಪಾಂಡವರು ತಮ್ಮ ಪಕ್ಷ ಸೇರಿಕೊಳ್ಳುವಂತೆಯೂ ಏಕಲವ್ಯನನ್ನು ಆಹ್ವಾನಿಸಲು ಬರುತ್ತಾರೆ. ಈ ಸಂದರ್ಭದಲ್ಲಿ ಏಕಲವ್ಯ ವ್ಯಕ್ತಪಡಿಸುವ ವಿಚಾರ ಮತ್ತು ತೆಗೆದುಕೊಳ್ಳುವ ನಿರ್ಧಾರವು ಸಮಕಾಲೀನವಾಗಿಯೂ ತುಂಬ ಮಹತ್ವದ ವಿಚಾರವಾಗಿ ಬಿಂಬಿಸುತ್ತದೆ.

ಏಕಲವ್ಯ ಅರ್ಜುನನ ವಿರೋಧಿ. ಆ ಕಾರಣವಾಗಿ ಅವನು ತಮ್ಮ ಪಕ್ಷ ಸೇರುತ್ತಾನೆಂದು ದುರ್ಯೋಧನ, ಕರ್ಣ ಯೋಚಿಸುತ್ತಾರೆ. ಆದರೆ ದುರ್ಯೋಧನನ ಆಲೋಚನೆ ಹೇಗಿದೆಯೆಂದರೆ: ''ಕುರು ಸೇನೆಯನ್ನು ಸೇರಿ ಹೋರಾಡಿ ಹುತಾತ್ಮನಾಗಲಿ. ಚರಿತ್ರೆಯಲ್ಲಿ ಅವನ ಹೆಸರು ಅಜರಾಮರವಾಗಲಿ'' ಜಾ[illegible]ಯೇ ಕಾರಣವಾಗಿ ಕರ್ಣನೇ ಏಕಲವ್ಯನನ್ನು ಆಹ್ವಾನಿಸಲು ಹೋಗುತ್ತಾನೆ. ಪಾಂಡವರಿಗೆ ಮೊದಲೇ ಏಕಲವ್ಯನ ಬಗ್ಗೆ ಭಯ ಹುಟ್ಟಿಕೊಂಡಿದೆ. ಸಹಜವಾಗಿ ಅವನು ಕೌರವರ ಪಕ್ಷ ಸೇರಬಹುದೆಂಬ ಪಾಂಡವರಿಗೆ ಇನ್ನೂ ಭಯ. ಆ ಕಾರಣವಾಗಿ

ಅವನೊಡನೆ ಸಂಧಾನವಾದರೂ ಮಾಡಿಕೊಳ್ಳಬೇಕು. ಇಲ್ಲ ಮನಸ್ಸೋಲಿಸಿ ತಮ್ಮ ಕಡೆಯಾದರೂ ಕರೆದುಕೊಳ್ಳಬೇಕೆಂದು ಕೃಷ್ಣ, ಅರ್ಜುನ ಆಹ್ವಾನಿಸಲು ಹೋಗುತ್ತಾರೆ. ಕರ್ಣ ಕುಲದ ನೆಪಮಾಡಿಕೊಂಡು, ''ಕುಲದಲ್ಲಿ ಕೀಳೆನಿಸಿಕೊಂಡ ನಮ್ಮರಥವರನ್ನು ಮಮತೆ ಯಿಂದ ಕಾಣುವ ಜೀವ ಸುಯೋಧನನೊಬ್ಬನೆ'' ಎಂದು ಕರೆಯುತ್ತಾನೆ. ''ಕರ್ಣ, ನನಗೂ ನಿನಗೂ ಹೋಲಿಕೆಯಿಲ್ಲ? ನೀನೀಗ ಸೂತ ಪುತ್ರನಲ್ಲ. ಅದನ್ನು ಮೀರಿ ಬೆಳೆ ದಿದ್ದೀಯ. ಈಗ ನೀನು ಅಂಗಾಧಿಪತಿ. ಆದರೆ ನಾನಿನ್ನು ಬೇಡ. ಅದಕ್ಕಾಗಿಯೇ ಕೌರ ವರು ಪಾಂಡವರಿಬ್ಬರ ಹಿತಾಸಕ್ತಿಗಳು ನನಗೆ ಬೇರೆಯಾಗಿ ಕಾಣುತ್ತಿಲ್ಲ. ಸುಯೋಧನ ನಿನ್ನನ್ನು ಒಪ್ಪಿಕೊಂಡಿದ್ದಾನೆ. ಇಡೀ ಸೂತ ಕುಲವನ್ನಲ್ಲ. ಸೂತ ಕುಲ ಹಿಂದೆ ಇದ್ದ ಸ್ಥಿತಿಯಲ್ಲಿಯೇ ಇದೆ. ದುರ್ಯೋಧನನ ಆಶ್ರಯದಲ್ಲಿ ನೀನು ಮಾತ್ರ ಬೆಳೆದೆ. ನೀನು ನಿನ್ನ ಕುಲದವರನ್ನು ಕಣ್ಣು ತುಂಬ ನೋಡಿಲ್ಲ ಅವರೊಡನೆ ಒಡನಾಟ ಮಾಡಿಲ್ಲ. ಬೆಸ್ತನ ಮೈ ವಾಸನೆಯಿಂದ ದುರ್ಯೋಧನ ಹತ್ತು ಗಾವುದ ದೂರ 'ಓಡಿದರೆ ನೀನು ನೂರು ಗಾವುದ ದೂರ 'ಓಡುವ ಸ್ಥಿತಿಯಲ್ಲಿದ್ದೀಯೇ...'' ಎಂದು ಕರ್ಣನಿಗೆ 'ಏಕಲವ್ಯನು ಹೇಳುವ ಮಾತು ಅರ್ಥಪೂರ್ಣವಾದುದು. ಈ ಹೊತ್ತಿನ ಪರಿಸ್ಥಿತಿಗೆ ಈ ಮಾತು ಅನ್ವಯವಾಗುತ್ತದೆ. ದಲಿತನೊಬ್ಬನಿಗೆ ಅವಕಾಶ ಸಿಕ್ಕರೆ ಅವನು ಮೇಲೇರಿ ಹೋಗುತ್ತಾನೆಯೇ ಹೊರತು ಮರಳಿ ತನ್ನ ಕುಲಬಾಂಧವರನ್ನು ನೋಡದೆ ಮರೆತು ಬಿಡುತ್ತಾನೆ. ಕರ್ಣನ ಉದಾಹರಣೆಯಂತೆ ಯೇ ಪ್ರಸ್ತುತ ಸಮಾಜದಲ್ಲಿಯೂ ಇದಕ್ಕೆ ಬೇಕಾದಷ್ಟು ಉದಾಹರಣೆಗಳಿವೆ. 'ಏಕಲವ್ಯ ಮುಂ ದುವರಿದು ಹೇಳುವಂತೆ '' ನನಗೆ ಎರಡು ಶಕ್ತಿಗಳೂ ಒಂದೇ ಅವರವರ ಸ್ವಾರ್ಥಕ್ಕಾಗಿ ಬಡ ದಾಡುತ್ತಿದ್ದಾರೆ. ಇವರಿಬ್ಬರ ಕಚ್ಚಾಟದಲ್ಲಿ ನಾವೇಕೆ ಬಲಿಪಶುವಾಗಬೇಕು''.

ಈ ಹೊತ್ತಿನ ರಾಜಕೀಯ ಪಕ್ಷಗಳು ಇದಕ್ಕೆ ಉದಾಹರಣೆಯಾಗಿದೆ. ದಲಿತರ 'ಓಟು ಬ್ಯಾಂಕ ಪಡೆಯಲು ದಲಿತರನ್ನು ಆಹ್ವಾನಿಸುವಾಗ, ಸೈದ್ಧಾಂತಿಕವಾಗಿ ಭಿನ್ನವಿರದ ಪಕ್ಷಗಳೇ ಹೆಚ್ಚಾಗಿರುವಾಗ ದಲಿತರು ಯಾರ ಪಕ್ಷವಹಿಸಿದರೂ ಅಷ್ಟೇ. ಬಲಿಪಶುಗಳಾಗುವುದು ತಪ್ಪುವುದಿಲ್ಲ.

''ಕುರುಕ್ಷೇತ್ರ ಕೇವಲ ಉಳ್ಳವರ ನಡುವಿನ ಕಚ್ಚಾಟ. ನನ್ನದು ಇಲ್ಲದವರ ಪರವಾದ ಹೋರಾಟ. ಈ ಸಂಘರ್ಷ ಕುರು ಪಾಂಡವರಿಬ್ಬರ ವಿರುದ್ಧವಾ ಸಾಗಬೇಕು. ಆಗ ಮಾತ್ರ ತುಳಿತಕ್ಕೆ ಸಿಕ್ಕಿದವರ ಬಾಳಿಗೆ ಬೆಳಕು ಮೂಡುತ್ತದೆ. ಕಡೆಗಣಿಸಲ್ಪಟ್ಟವರ ಬದುಕಿನ ತೋಟ ದಲ್ಲಿ ಸಮಾನತೆಯ ಹೂ ಅರಳುತ್ತದೆ'' ಎಂಬುದು 'ಏಕಲವ್ಯನ ನಿಲುವು. ಸಿದ್ದಲಿಂಗಯ್ಯ ನವರ ಆಶಯವೂ ಹಾದು.

ಗ್ರಾಮೀಣ ಜಾತಿ ರಾಜಕಾರಣದ ರೂಪಕವಾಗಿ- 'ಮತ್ತೊಬ್ಬ ಏಕಲವ್ಯ'

ಪುರಾಣ ಅಥವಾ ಚರಿತ್ರೆಯ ವಸ್ತುವನ್ನು ಆಧರಿಸಿ ರಚಿತವಾಗುವ ಕೃತಿಗಳು ಮೂರು ಬಗೆಯಲ್ಲಿರುತ್ತವೆ. ವಸ್ತು ಪುರಾಣ ಅಥವಾ ಚರಿತ್ರೆಗೆ ಸಂಬಂಧಿಸಿದ್ದರೂ, ಅದನ್ನು ವರ್ತಮಾನದಲ್ಲಿಟ್ಟು ಅರ್ಥೈಸುವ, ಪುರುವ್ಯಾಖ್ಯಾನಿಸುವ ಬಗೆ ಒಂದು. ವಸ್ತುವು ಪುರಾಣ ಅಥವಾ ಚರಿತ್ರೆಗೆ ಸಂಬಧಿಸಿದ್ದಾಗ್ಗಿ ಮತ್ತು, ಅದು ಪುರಾಣ ಅಥವಾ ಚರಿತ್ರೆಯನ್ನೇ ನಿರೂಪಿಸುವ ಬಗೆ ಎರಡನೆಯದು. ಸಮಕಾಲೀನ ವಸ್ತುವನ್ನೇ ಆಧರಿಸಿದ್ದರೂ ಅದು ಪುರಾಣ ಅಥವಾ ಚರಿತ್ರೆಯನ್ನು ನೆನಪಿಗೆ ತರುವ ಬಗೆ ಮೂರನೆಯದು. ಸತ್ಯಾನಂದ ಪಾತ್ರೋಟರ '' ಮತ್ತೊಬ್ಬ 'ಏಕಲವ್ಯ '' ನಾಟಕವು ಮೂರನೆಯ ಬಗೆಯದು.
ಗೋವಿಂದಪೈ, ಕುವೆಂಪು, ಕೈಲಾಸಂ, ವಜ್ರಮಟ್ಟಿ ಮತ್ತು ಸಿದ್ಧಲಿಂಗಯ್ಯ ಇವರಿಗೆಲ್ಲ ವ್ಯಾಸ ಮಹಾಭಾರತದ 'ಏಕಲವ್ಯನೆ ಮೂಲಾಧಾರ. ಆದರೆ ಅವರವರ ಆಶಯಗಳು ಬೇರೆ ಬೇರೆಯಾಗಿವೆ. ಆ ಕಾರಣಕ್ಕಾಗಿ 'ಏಕಲವ್ಯನ ಭಿನ್ನ ಭಿನ್ನ ಚಿತ್ರಣ ಈ ಎಲ್ಲ ನಾಟಕಗಳಲ್ಲಿ ಕಾಣುತ್ತೇವೆ. ಸತ್ಯಾನಂದ ಪಾತ್ರೋಟರ ''ಏಕಲವ್ಯ' ಈ ಹೊತ್ತಿನ ಒಬ್ಬ ದಲಿತ. ಆದರೆ ಅವರು ವ್ಯಾಸ ಮಹಾಭಾರತದ 'ಏಕಲವ್ಯನ ನೆನಪನ್ನು ತರುತ್ತಾನೆ. ಅಲ್ಲದೆ '' ನೀ ಮತ್ತೊಬ್ಬ 'ಏಕಲವ್ಯ ಆದಿ....' ಎಂಬ ಮಾತು ನಾಟಕದಲ್ಲಿ ಕಾಣಿಸಿಕೊಂಡು ವಾಚ್ಯಕ್ಕೆ ದಾರಿ ಮಾಡಿದೆ. ವಸ್ತು — ವಿಷಯ — ಸಂದರ್ಭ ಹಾಗೂ ಪಾತ್ರಗಳ ಹೆಸರು ಈ ಹೊತ್ತಿನ ರಾಜಕೀಯ ಮತ್ತು ದಲಿತರ ಬದುಕನ್ನು ಚಿತ್ರಿಸುತ್ತದೆಯಾದರೂ, ನಾಟಕದ ಹೃದಯ 'ಏಕಲವ್ಯನ ಪ್ರಸಂಗವನ್ನು ನಿರೂಪಿಸುತ್ತದೆ. ಕುವೆಂಪು, ಗೋವಿಂದಪೈ, ಕೈಲಾಸಂ ಇವರ ನಾಟಕಗಳ ಜೊತೆಗೆ ವಿಶೇಷವಾಗಿ ವಜ್ರಮಟ್ಟಿ, ಸಿದ್ಧಲಿಂಗಯ್ಯನವರ ನಾಟಕಗಳ ಪ್ರಭಾವವಿದೆ.

ದಲಿತನಾದ 'ಏಕನಾಥನನ್ನು, ಮೇಲ್ವರ್ಗದ ಗುರು (ಈ ಪಾತ್ರಕ್ಕೆ ಹೆಸರಿಲ್ಲ) ಅನೇಕ ರೀತಿಯಲ್ಲಿ ಸಹಾಯ ನೀಡಿ ಪ್ರೋತ್ಸಾಹಿಸಿ ಬೆಳೆಸುತ್ತಾನೆ. '' ಗುರಿ ಮುಟ್ಟ ವಂಗ'' ಮಾಡುತ್ತಾನೆ. ಅದಕ್ಕಾಗಿಯೇ 'ಏಕನಾಥನಿಗೆ' ಗುರುವಿನ ಮೇಲೆ ಗೌರವ, ಪ್ರೀತಿ, '' ನೀವ್ ಮಾಡ ಅಂಬಿದ್ದ ಮಾಟ ತೋರಸ್ತೀನಿ. ಹಿಂಗ ನಮಿ ಅಂದದಾರ್ಯಾಗ ಹಂಗ ನಡದು ತೋರಸತೀನಿ'' ಎಂದು ನಂಬಿಕೆಯಿಟ್ಟಿರುತ್ತಾನೆ. ತಾಯಿ ವಿಚಾರವಂತಳಾಗಿರುತ್ತಾಳೆ. ಮಗ 'ಏಕನಾಥನನ್ನು, ಮಗಳು ದುರ್ಗಾಳನ್ನು (ಏಕನಾಥನ ಅಕ್ಕ) ವಿದ್ಯಾವಂತಳನ್ನಾಗಿ ಮಾಡಿರುತ್ತಾಳೆ. ವಿದ್ಯಾವಂತನಾದ 'ಏಕನಾಥ ದಲಿತರ ಮಧ್ಯ ಎದ್ದು ನಿಂತ ಪ್ರತಿಭಾ ಸಂಪನ್ನ. ಊರ ಜನರ ಗೌರವಕ್ಕೆ ಪಾತ್ರನಾದವನು. ಇವರಿಗೆ ಮೇಲ್ವರ್ಗದವರಿಂದ ಕಿರುಕುಳವಿತ್ತು. ದುರ್ಗಾಳನ್ನು ಕುರಿತು,"ಇಕಿ ಸೂಳಿ ಮಗಳು ಇಕಿದು 'ಏನ ಒನಪು 'ಏನ ವೈಯಾರ ನಾಲ್ಕಕ್ಷರ ಕಲಿತು ಸಭ್ಯಸ್ತ ಸುಬಿಬ ಆಗ್ಯಾಳ ಬರೆ. ಇವತ್ತಿಲ್ಲ ನಾಳೆ ಅವಳನ ದಾರಿ ಕಟ್ಟಿಟ್ಟ ಬುತ್ತಿ. ನಾಳೆ ಇಕಿ ದಾರಿಗ [illegible]ತಾಳ'' ಎಂಬ ಮಾತುಗಳನ್ನು ಕೇಳಿಸಿಕೊಳ್ಳುವ ಸ್ಥಿತಿ ತಪ್ಪಿರಲಿಲ್ಲ. ಇಂಥ

ಸ್ಥಿತಿಯಲ್ಲಿ "ಒಂದಲ್ಲ ಒಂದ ದಿನ ತುಳಸಗೊಂಡವರ ಎದ್ಯಾಗಿನ ಬೆಂಕಿ ಬುಗಿಲಂತೈತಿ...
ಅಲ್ಲಿತನಾ ತಡಕೊಬೇಕಾಗೈತಿ" ಎಂದು ತಾಯಿ ಸಮಾಧಾನ ಮಾಡುತ್ತಾಳೆ. ದುರ್ಗಾ
ದಲಿತರಿಂದ ಕ್ರಾಂತಿಯಾಗಬೇಕೆಂದು ಬಯಸುತ್ತಾಳೆ. ಏಕನಾಥನಿಗೆ ಶ್ರೀಮಂತರ ಬಗ್ಗೆ ಸಿಟ್ಟಿದೆ.
"ನಮ್ಮ ಕೈಕಾಲು ಇದ್ದವರ ಮನಿ ಜಂತಿ, ಕಂಬ ತೊಲಿ ಆಗ್ಯಾವ. ನಮ್ಮ ಹಸದ ಕರಳ
ಅವರ ತೂಗು ಮಂಚಕ್ಕ ಜೋಡ ಹಗ್ಗ ಆಗ್ಯಾವ. ಬಗ್ಗಿಸಿ ಬಗ್ಗಿಸಿ ನಮ್ಮ ಬೆನ್ನ ಅನ್ನುದನ್ನ
ನಿಷ್ಟ್ರಣಕಿ ಮಾಡ್ಯಾರ" ಎಂದು ತಂಗಿಗೆ ಹೇಳುತ್ತಾನೆ. ಕ್ರಾಂತಿ ಮಾಡಬೇಕೆನ್ನುವ ತಾಯಿ,
ಮಗ, ಮಗಳು, ಇವರ ಹೆಬ್ಬಯಕೆಯಂತೆ ಚುನಾವಣೆ ಬರುತ್ತದೆ. ಜನರು ಏಕನಾಥನನ್ನು
ಬೆಂಬಲಿಸಲು ನಿಲ್ಲುತ್ತಾರೆ. ಗುರುಗಳ ಆಶೀರ್ವಾದ ಬೇರೆ ಪಡೆದು ಕಣಕ್ಕೆ ನಿಲ್ಲುತ್ತಾನೆ. ಚುನಾ
ವಣೆಗೆ ನಿಲ್ಲುವುದು, ಗೆಲ್ಲುವುದು, ಅಧಿಕಾರ ಪಡೆಯುವುದು ತಮ್ಮ ಹಕ್ಕಾಗಿಸಿಕೊಂಡಿದ್ದ
ಊರಿನ ಗೌಡ ಮತ್ತು ಸಾಹುಕಾರ ಇದರಿಂದ ಬೆಚ್ಚಿಬೀಳುತ್ತಾರೆ". "ದುಡಿಯುವ ಎಲ್ಲಾ ಜನ
ಸೇರಿ ಏಕನಾಥಗೆ ಬೆಂಬಲ ಕೊಟ್ಟು ಇಲೆಕ್ಷನ್ ಕಣಕ್ಕ ಇಳಿಸ್ಯಾರಂತ. ಆ ಸೂಳಿಮಗಳು ದುರ್ಗಿ
ಒಳ್ಳೆ ತುರಿಸಿನಿಂದ ಪ್ರಚಾರ ಮಾಡಾಕ ಹತ್ಯಾಳಂತ. ಈ ಸರೆ ಆ ಮಾಸ್ತರ (ಎಕಲವ್ಯನ
ಗುರು) ಬ್ಯಾರೆ ಇದರಾಗ ತಲಿ ಹಾಕ್ಯಾನಂತ. ಅಂದರ ಅಂವ ಗೆಲ್ಲೂದೂ ಖಾತ್ರಿ ಅಂದಂಗಾ
ತಿಲ್ಲೋ? ಹಾಂಗಾಂದು ನಮ್ಮ ಕೈಯಾಗಿನ ಅಧಿಕಾರನೂ ಜಾರಿ ಹೋಗತೈತಿಲ್ಲೋ?
ಇದ್ನ ತಪ್ಪಸಾಕಬೇಕು. ಹ್ಯಾಂಗರ ಯಾಕ ಆಗ್ಲಿ ಈ ಗೌಡ್ರು ಮತ್ತಾ ಖರ್ಚ ಏರಾಕ
ಬೇಕು" ಎಂದು ಗೌಡನ ಅಭಿಪ್ರಾಯ. ಗೌಡನ ಅಭಿಪ್ರಾಯಕ್ಕೆ ಬೆಂಬಲಿಗನಾಗಿ ಕುಲಕರ್ಣಿ
ನಿಂತಿದ್ದಾನೆ. ಅತ್ತ ಊರಿನ ಸಾಹುಕಾರನೂ ಗೌಡನನ್ನು ಸೋಲಿಸಬೇಕೆಂದು ಮಸಲತ್ತು
ನಡೆಸಿರುತ್ತಾನೆ. ಆದರೆ ಈ ವರ್ಷ ಗೌಡ ಮತ್ತು ಸಾವುಕಾರ ಇಬ್ಬರ ನಡುವೆ ಹೋರಾಟ ಇಲ್ಲ. ಈ
ಮಧ್ಯ ಜನರ ಬೇಡಿಕೆಯಂತೆ ಏಕನಾಥ ಸವಾಲಾಗಿ ನಿಂತಿದ್ದಾನೆ. ಗೌಡ, ದುರ್ಗಿಯ ಜತೆ ಸಂ
ಧಾನ ಮಾಡಿಕೊಂಡು ಏಕನಾಥನನ್ನು ಕಣದಿಂದ ಹಿಂದಕ್ಕೆ ಸರಿಸಲು ಪ್ರಯತ್ನಿಸಿ ವಿಫಲನಾ
ಗುತ್ತಾನೆ. ಸಾವುಕಾರ ನೇರವಾಗಿ ಏಕನಾಥನನ್ನು ಭೇಟಿ ಮಾಡಿ ಹಣದ ಆಸೆ ತೋರಿಸಿ ಕಣದಿಂದ
ಹಿಂದಕ್ಕೆ ಸರಿಸಲು ಪ್ರಯತ್ನಿಸಿ ವಿಫಲನಾಗುತ್ತಾನೆ.

ಚುನಾವಣೆಯಲ್ಲಿ ಏಕನಾಥ ಗೆಲ್ಲುತ್ತಾನೆ. ದಲಿತರೆಲ್ಲ ಅವನನ್ನು ಗೆಲ್ಲಿಸಿ ಸಂತೋಷಪಡುತ್ತಾರೆ.
"ಸಾವುಕಾರ್ರು, ಗೌಡ್ರು ಕೈಯಾಗ ಸಿಕ್ಕ ಒದ್ದಾಡಿದ ಖರ್ಚ ಇನ್ನ ಮ್ಯಾಲ ನಮ್ಮ ಏಕನಾಥಗ
ದಕ್ಕತೈತಿ" ಎಂದು ಕುಣಿದಾಡುತ್ತಾರೆ. "ನಮ್ಮ ಗುಡಿಸಲಮ್ಯಾಗ ಸೂರ್ಯನ ಬೆಳಕ ಬಿದ್ದ
ದ್ದ ಕಾಣಬಹುದು. ಚಂದ್ರ ಕುಲು ಕುಲು ನಕ್ಕಿದ್ದು ನೋಡಬಹುದು" ಎಂದು ನಲಿಯು
ತ್ತಾರೆ. "ಕೂಲಿ ಕುಂಬಳಿ ಮಾಡುವರು ಇನ್ನಮ್ಯಾಲಿ ಚಿಂತಿ ಇಲ್ಲ ಉಸರ ಬಿಡತಾರ" ಎಂದು
ಬೀಗುತ್ತಾರೆ. ಇನ್ನು ಏಕನಾಥ ಚೇರಮನ್ ಆಗಬೇಕಾಗಿದೆ. ಗೌಡ, ಸಾವುಕಾರ ಇಂಥ ಸಮಯ
ದಲ್ಲಿ ಕೂಡಿ "ಒಮ್ಮ ನಾವ ಅಧಿಕಾರ ಕಳಕೊಂಡ್ರು ನಾವ ಬದುಕುದು ಕಠಿಣ ಆಗತೈತಿ. ಅಂವ
ಚೇರಮನ್ನ ಆದ್ರು ನಮ್ಮಂಥ ದೊಡ್ಡವರು ಕಂಡ ಕಂಡಲ್ಲಿ ಅಂವಗ ನಮಸ್ಕಾರ ಹೊಡಿಬೇಕಾ
ಗತೈತಿ". ಎಂದು ಯೋಚಿಸಿ ಹೇಗಾದರು ಮಾಡಿ ಏಕನಾಥನಿಗೆ ಚೇರಮನ್ ಸೀಟು ಸಿಗದಂತೆ

ನೋಡಬೇಕೆಂದು ಯೋಚಿಸುತ್ತಾರೆ. " ಖುರ್ಚಿ ಏರಾಕ ಬುದ್ಧಿ ಸ್ವಲ್ಪ ಹೆಚ್ಚು ಕಡಿಮಿ ಇದ್ರೂ ನಡದೀತು. ಬುದ್ಧಿ ಇರಲಿಕ್ಕಂದ್ರೂ ನಡದೀತು. ಆದ್ರ ಜಾತಿ, ಗೋತ್ರ ಸುದ್ಧಿರ ಬೇಕು. ಪೂರ್ವ ಜನ್ಮದ ಪುಣ್ಯ ಬೇಕು " ಎಂದು ಗುರುವಿನ ಮೂಲಕ 'ಏಕನಾಥನನ್ನು ಛೇರಮನ್ ಆಗಕೂಡದೆಂದು ಹೇಳಿಸಲು ಮುಂದಾಗುತ್ತಾರೆ. ಸಾಹುಕಾರ, ಗೌಡ ಮತ್ತು ಗುರು ಒಂದೇ ಕುಲದವರು. ಕುಲವನ್ನು ಮುಂದ ಮಾಡಿ " ಎಲ್ಲಾರು ತಮ್ಮ ತಮ್ಮ ಜಾತಿ ಹೆಸರಲೇ ಜೆಂಡಾ, ನಿಶಾನೆ ಹಾರಿಸಿ, ತಮ್ಮ ತಮ್ಮ ಜನರ ಉದ್ಧಾರ ಮಾಡಕೊಳ್ಳುವಾಗ ನಾವ್ಯಾಕ ನಮ್ಮ ಜಾತಿ ಜನರ್ನ ಉದ್ಧಾರ ಮಾಡಬಾರದ್ರೀ" ಎಂದು ಗುರುವಿನ ಮೇಲೆ ಒತ್ತಾಯ ಹೇರುತ್ತಾರೆ. ಗುರುವಿಗೆ ಸಂಕಟವಾಗುತ್ತದೆ. " ನಾ ಕೇಳಿದ್ರ ನನ್ನ ಶಿಷ್ಯ ಪ್ರಾಣಾ ಬೇಕಾದ್ರ ಕೊಡತಾನ. ಹಂಗಂತ ಹೇಳಿ ಕೂದಲೆಳೀಲೆ ಅವನ ಕುತಿಗಿಕೊಯ್ಯಾಕ ನಾ ತಯಾರಿಲ್ಲ." ಎಂದು ಒಪ್ಪದಿದ್ದರೂ ಗೌಡ, ಸಾಹುಕಾರ ಬಿಡುವುದಿಲ್ಲ ಕಳಿಸುತ್ತಾರೆ. ದುರ್ಗಿ, ತಾಯಿ 'ಏಕನಾಥನಿಗೆ ಸಿಕ್ಕ ಅಧಿಕಾರ ಅದು ದಲಿತರಿಗೆ ಸಿಕ್ಕ ಅಧಿಕಾರ ಎಂದು ಹಿಗ್ಗುತ್ತಾರೆ. ಅದೇ ಹೊತ್ತಿಗೆ ಛೇರಮನ್ ಅಧಿಕಾರ ಬೇಡ ಎಂದು ಹೇಳಲು ಗುರು ಬರುತ್ತಾನೆ ಎಂಬ ಸುದ್ದಿ ಕೇಳಿ ದುರ್ಗಿ ತಾಯಿ ಬೆಂಕಿಯಾಗುತ್ತಾರೆ. " ನೀ ಒಬ್ಬ ವ್ಯಕ್ತಿ ಅಲ್ಲ. ಬಿದ್ದವರ ಮುಖಂಡ. ಬಿದ್ದವರ ಪ್ರತಿನಿಧಿ. ಅವರು ನಿನ್ನ ಮ್ಯಾಲೆ ವಿಶ್ವಾಸ ಇಟ್ಟಾರ." ಎಂದು ತಾಯಿ ಹೇಳಿ ಪ್ರೋತ್ಸಾಹಿಸುತ್ತಾಳೆ. ಆದರೆ 'ಏಕನಾಥ ಗುರುವಿನ ಮೇಲಿನ ಭಕ್ತಿಗೆ ಮಣಿದು, ಗುರು ಹೇಳಿದಂತೆ ಮಾಡುತ್ತೀನೆ ಎಂದು ಹೇಳಿದಾಗ ತಾಯಿ, ದುರ್ಗಿಗೆ ಸಿಟ್ಟು ಬರುತ್ತದೆ. ಗುರು ಬಂದು " ಖುರ್ಚಿ, ಅಧಿಕಾರ ಬರತಾವ ಹೋಕ್ಯಾವ. ನಿನ್ನಂಥವಗ ಅದು ಮುಖ್ಯ ಅಲ್ಲ. ನಿನ್ನಂಥವನ ಹೆಸರ ದೇಶದ ಇತಿಹಾಸದಾಗ ಸೂರ್ಯ ಚಂದ್ರರಂಗ ಹೊಳಿಬೇಕು. ಅದಕ್ಕ ಈ ಖುರ್ಚಿ ಆಸೆ ನಿ... ನೀ ಬಿಟ್ರ ಚಲೋ ಆಕ್ಕೈತಿ. ಯಾಕಂದ್ರ ನೀ ಬೆಳಿಬೇಕು" ಎಂದು ಹೇಳಿದಾಗ " ಬಿಟ್ಟ ಬಿಡತೀನಿ. ಗುರುವಿನ ಆಶೆನ ಶಿಷ್ಯನ ಆಶೆ. ಗುರುವಿನ ಸಂತೋಷನ ಶಿಷ್ಯನ ಸಂತೋಷ" ಎಂದು ನಿರ್ಧರಿಸುತ್ತಾನೆ. ಆದರೆ ತಾಯಿ, ಅಕ್ಕ ಮತ್ತು ದಲಿತರು ಎಲ್ಲರಿಗೆ ನಿರಾಶೆಯಾಗುತ್ತದೆ. ಸಿಟ್ಟು ಬರುತ್ತದೆ. " ನೀ ಹಿಂಗ ಮಾಡಿದ್ರ ಮತ್ತ ಸೂರ್ಯ — ಚಂದ್ರರು ನಮ್ಮ ಸನೇಕ ಬರಲಿಲ್ಲದಂಗ ಆಕ್ಕೈತಿ" ಎಂದು ಹೇಳುತ್ತಾರೆ. 'ಏಕನಾಥ ತನ್ನ ನಿರ್ಧಾರ ಬದಲಿಸುವುದಿಲ್ಲ. ಛೇರಮನ ಪೀಟಿನ ಮೇಲೆ ಅಕ್ಕ, ದುರ್ಗಿಯಾಗಿ ಹೋಗಿ ಕೂಡುತ್ತಾಳೆ. ಅವಳ ರುದ್ರಾವತಾರ ಕಂಡು ಗೌಡ, ಸಾಹುಕಾರ ಹತ್ತಿರ ಹೋಗಲು ಹೆದರಿ ದಿಕ್ಕು ತಿಳಿಯದಂತೆ ನಿಂತು ಬಿಡುತ್ತಾರೆ.

" ಮತ್ತೊಬ್ಬ 'ಏಕಲವ್ಯ" ನಾಟಕವೂ ಕೂಡ " ಎಚ್ಚೆತ್ತ 'ಏಕಲವ್ಯ" ನಾಟಕದಂತೆ ಆಶಯ ಪ್ರಧಾನವಾದುದು. ಈ ಎರಡು ನಾಟಕಗಳಲ್ಲಿ ಒಂದೇ ಬಗೆಯ ಉದ್ದೇಶವಿದೆ. ಶೂದ್ರರಿಗೆ ಮತ್ತು ದಲಿತರಿಗೆ ಆದ ಶೋಷಣೆ ತಪ್ಪಬೇಕು. ಸಮಾನತೆ ಬರಬೇಕು. ಅಧಿಕಾರವು ಶೂದ್ರರಿಗೆ ಸಿಗಬೇಕೆಂಬ ನಿಲುವುಗಳಿವೆ. ವೈಚಾರಿಕತೆ ಎಂಬುದು ಕೃತಿಯ ಒಳಗಿನಿಂದ ಹುಟ್ಟುವುದಿಲ್ಲ, ಬಲವಾಗಿ ನಾಟಕಕಾರರೇ ಹೇರಿದಂತಾಗಿದೆ. ಹೀಗಾಗಿ ಈ ಎರಡು ನಾಟಕಗಳಲ್ಲಿ ಬರುವ ತಾಯಿ

ಮತ್ತು ತಂಗಿ (' ಮತ್ತೊಬ್ಬ 'ಏಕಲವ್ಯ' ದಲ್ಲಿಯ ಅಕ್ಕ) ಒಂದೇ ಸ್ವರೂಪದ ಪಾತ್ರಗಳು.
ಇವರಾಡುವ ಮಾತುಗಳು ಪಾತ್ರಗಳ ಬೆಳವಣಿಗೆಯಿಂದ ಹುಟ್ಟುವ ಬದಲು ನಾಕಕಾರರ ಮಾತು
ಗಳಾಗಿ ಬಿಡುತ್ತವೆ. ' ಮತ್ತೊಬ್ಬ 'ಏಕಲವ್ಯ' ನಾಟಕದಲ್ಲಿ 'ಏಕನಾಥನ ಪಾತ್ರದಲ್ಲಿ ಬೆಳವಣಿಗೆ
ಯಿಲ್ಲ. ಗುರುವಿನ ಮೇಲಿರುವ ಅತಿಯಾದ ಶ್ರದ್ಧೆಯಿಂದ, ಗುರುವು ಹೇಳಿದಂತೆ ನಡೆಯುವ
ಸ್ವಭರಿಂದ ಅವನಲ್ಲಿ **ತುಮುಲ**ಗಳಿಲ್ಲ, ತಲ್ಲಣಗಳಿಲ್ಲ. ಗುರುವಿನ ಮೇಲಿನ ವಿಶ್ವಾಸದಂತೆ, ತನ್ನ
ನ್ನು ಬೆಂಬಲಿಸಿದ ತನ್ನ ದಲಿತಲೋಕದ ಜನರ ವಿಶ್ವಾಸಕ್ಕೆ ಯಾವುದೇ ರೀತಿಯ ಪ್ರತಿಕ್ರಿಯೆ
ಇರುವುದಿಲ್ಲ. ಹಾಗೆಯೇ ಗುರುವಿನ ಪಾತ್ರವೂ ಚಲನೆಯಿಲ್ಲದ ಸೂತ್ರದ ಗೊಂಬೆಯಂತೆ
ತನ್ನ ಕಾರ್ಯ ನಿರ್ವಹಿಸಿದೆ. ಈ ನಾಟಕದಲ್ಲಿ ಬರುವ ಗಾಡ ಮತ್ತು ಸಾಹುಕಾರ ಎರಡು ಪಾತ್ರ
ಗಳು ಕಪ್ಪು ಪಾತ್ರಗಳಾಗಿವೆ. ಈ ಹೊತ್ತಿನ ದಲಿತ ಚಳುವಳಿಯಿಂದ ದಲಿತ ಸಮುದಾಯವು
ಯೋಚಿಸುವ ಹಂತ ತಲುಪಿದೆ ಎಂಬುದು ನಾಟಕಕಾರರು ಗಮನಿಸಿದಂತಿಲ್ಲ. ಕಂಪನಿ ನಾಟಕ
ಗಳಲ್ಲಿ ಬರುವಂತೆ ಇಲ್ಲಿ ಗಾಡ, ಸಾಹುಕಾರರ ಮಾತುಗಳು, ಸನ್ನಿವೇಶಗಳು ಮತ್ತು ಕ್ರಿಯೆ
ಗಳು ಬಂದಿವೆ. ಈ ನಾಟಕದಲ್ಲಿ ತಾಯಿ (ಅವ್ವ)ಯ ವೈಚಾರಿಕತೆ ಇಂದಿನ ಆಕೆಯ ಪ್ರಜ್ಞಾ
ಬೆಳವಣಿಗೆಯ ಹಿನ್ನೆಲೆಯಲ್ಲಿ ಭಾರವಾದದ್ದು.

'' ತುಳಸಗೊಂಡವರ ಎದ್ಯಾಗಿನ ತಳಮಳ, ಅವರ ಒಡಲಾಗಿನ ಬೆಂಕಿ ತಾಪ ಅವರಿಗೆ ಗೊತ್ತು.
ಒಂದಿಲ್ಲ ಒಂದ ದಿನ ತುಳಸಗೊಂಡವರ ಎದ್ಯಾಗಿನ ಬೆಂಕಿ ಬುಗಲಿಯೈತಿ. ಆಗ ತುಳದವರೆಲ್ಲ
ಫಟ್ ಫಟ್ ಅಂತ ಎಳ್ಳ ಹುರದಂಗ ಅಕ್ಕಾರ''

> '' ನಮ್ಮ ರಟ್ಟ್ಯಾಗ ಎಂಟಾನಿ ಬಲಾ ಐತಿ. ಎದ್ಯಾಗ ಗುಡ್ಡ ಕಡದು ಮುತ್ತು ರತ್ನ
> ಬೆಳಿಯು ಆಶೆ ಐತಿ. ತಲ್ಯಾಗ ಮುಗಿಲ ಮುಟ್ಟು ಕನಸದಾವ''

> '' ನೀ ಒಬ್ಬ ವ್ಯಕ್ತಿ ಅಲ್ಲ. ಬಿದ್ದವರ ಮುಖಂಡ, ಬಿದ್ದವರ ಪ್ರತಿನಿಧಿ, ಅವರು ನಿನ್ನ
> ಮ್ಯಾಲ ವಿಶ್ವಾಸ ಇಟ್ಟಾರ. ಭರೋಸಾ ಇಟ್ಟಾರ. ಈಗ ನಿನ್ನ ಶ್ರದ್ಧಾನ ಒಂದು
> ದೌರ್ಬಲ್ಯ ಆಗಬಾರದು''

ಈ ಮಾತುಗಳು ತಾಯಿಯಿಂದ ಹುಟ್ಟಿದವುಗಳಾಗದೆ ನಾಟಕಕಾರರ ಮಾತುಗಳಾಗಿ ಕಾಣಿಸುತ್ತವೆ.
ಇಂಥ ಉದಾಹರಣೆ ಈ ನಾಟಕದಲ್ಲಿ ಅಕ್ಕ (ದುರ್ಗಾ)ನ ಪಾತ್ರಕ್ಕೂ ಅನ್ವಯಿಸುತ್ತದೆ.

ಈ ನಾಟಕಕಾರರಿಗೆ ಮಹಾಭಾರತದ ದ್ರೋಣ, 'ಏಕಲವ್ಯನ ಪ್ರಸಂಗ ಅರಿವಿನಲ್ಲಿರು
ವುದರಿಂದಲೇ ತಾನಾಗಿಯೇ ಇಲ್ಲಿಯ ಪಾತ್ರಗಳು ಸಿದ್ಧ ಮಾದರಿಗೆ ಬದ್ಧವಾಗಿಬಿಟ್ಟಿವೆ. ಸಿದ್ಧ
ಲಿಂಗಯ್ಯನವರ ''ಏಕಲವ್ಯ' ನಾಟಕದ ಮುಂದುವರಿಕೆಯಾಗಬೇಕಿತ್ತೇ ಹೊರತು, ವಜ್ರ
ಮಟ್ಟಿಯವರ ' ಎಚ್ಚತ್ತ 'ಏಕಲವ್ಯ' ನಾಟಕದ ದುರ್ಬಲ ಬಳಕೆಯಾಗಿದೆ. ಅಂದರೆ ಪೂರ್ವಭಾವಿ
ಯಾಗಿ ಹೊಂದಿದ ಉದ್ದೇಶಕ್ಕನುಗುಣವಾಗಿ ನಾಟಕ ರಚಿತವಾಗಿದೆಯೇ ಹೊರತು, ನಾಟಕದ

ಒಳಗಿನಿಂದಲೇ ಒಂದು ಉದ್ದೇಶ ಹುಟ್ಟುವುದಿಲ್ಲ. ಸತ್ಯಾನಂದ ಪಾತ್ರೋಟರು ನಾಟಕದಲ್ಲಿ ಬರೆದ 'ಒಂದೆರಡು ಮಾತುಗಳಲ್ಲಿ', ಯೇ ಇಂಥ ಅಭಿಪ್ರಾಯ ಹೇಳಿಕೊಂಡಿದ್ದಾರೆ. ''...ದಲಿತರೆಲ್ಲ ಹೊರಬಂದು ತಮಗಾಗುವ ಅನ್ಯಾಯಕ್ಕೆ ಸಿಡಿಮುದ್ದಾಗ ಬೇಕಾದದ್ದು ಇಂದಿನ ದಿನಮಾನಗಳಲ್ಲಿ ಅತೀ ಅವಶ್ಯ. ಅಂಥ ವಿಚಾರವನ್ನು ದುರ್ಗಾ, ಅವ್ವ ಇಲ್ಲಿ ಪ್ರತಿಪಾದಿಸಿ ಯಶಸ್ವಿಯಾಗಿದ್ದಾರೆ''

ನಾಟಕಕಾರರ ದೃಷ್ಟಿಯಲ್ಲಿ ಅಂದಿನ ದ್ರೋಣ ಮತ್ತು 'ಏಕಲವ್ಯ ಇಂದಿಗೂ ಇದ್ದಾರೆ. ಅಂದಿನ ವ್ಯವಸ್ಥೆಯೇ ಇಂದು ಮುಂದುವರಿದಿದೆ ಎಂಬ ಅಭಿಪ್ರಾಯದಿಂದಲೇ ಈ ನಾಟಕವನ್ನು ಸೃಷ್ಟಿಸಿದ್ದಾರೆ. ಆ ಮುಂದುವರಿದ ವ್ಯವಸ್ಥೆಯನ್ನು ಬದಲಿಸಲು ಕ್ರಾಂತಿಕಾರಕವಾಗಿ ಅವ್ವ ಮತ್ತು ದುರ್ಗಾ ನಿಂತಿದ್ದಾರೆ. ನಾಟಕಕಾರರೇ '' ವಿದ್ಯೆ ಕೊಡಲು ಜಾತಿ ಎಣಿಸಿದ ದ್ರೋಣ ಮೊದಲ ಹೆಜ್ಜೆ ತಪ್ಪಿದ. ಅನಂತರ ತನ್ನ ಸ್ವಶಕ್ತಿಯಿಂದ ಜಗತ್ತೇ ನಿಬ್ಬೆರಗಾಗುವಷ್ಟು ಶೂರನಾದ 'ಏಕಲವ್ಯನಿಂದ, ವ್ಯವಸ್ಥೆಯ ಕೈಗೊಂಬೆಯಿಂದ ಗುರು ಕಾಣಿಕೆಯ ನೆವದಲ್ಲಿ ಹೆಬ್ಬೆರಳನ್ನು ಪಡೆದು ಇನ್ನೊಂದು ಹೆಜ್ಜೆ ತಪ್ಪಿದ. ತಪ್ಪಿದ ಆ ಹೆಜ್ಜೆಗಳನ್ನು ಇವತ್ತಿನವರೆಗೂ ಸರಿಪಡಿಸಲಾಗಿಲ್ಲ''(ಮುನ್ನುಡಿ), ಎಂದು ಹೇಳಿಕೊಂಡಿದ್ದಾರೆ. ಇಂಥ ವ್ಯವಸ್ಥೆಯನ್ನು ಸತ್ಯಾನಂದರು ನಿರೂಪಿಸುತ್ತಾರೆಯೇ ಹೊರತು ವ್ಯಾಖ್ಯಾನಿಸುವುದಿಲ್ಲ. ನಾಟಕದಲ್ಲಿ ಕೊನೆಗೆ 'ಏಕನಾಥನ ಬದಲು, ದಲಿತರ ಪರವಾಗಿ ದುರ್ಗಾ ಅಧಿಕಾರದ ಗದ್ದುಗೆಯ ಮೇಲೆ ಕೂಡುವುದು ನ್ಯಾಯಬದ್ಧವಾಗಿ ಎಂದು ವ್ಯಕ್ತವಾಗದೆ ಅಧಿಕಾರ ಹಿಡಿಯಲೇ ಬೇಕೆಂಬ ತರ್ಕದಿಂದ ವರ್ತಿಸುವುದಾಗಿ ಕಾಣುತ್ತದೆ. ಇದರಿಂದ ನಾಟಕದಲ್ಲಿ ಈ ಪ್ರಸಂಗಕ್ಕೆ ತಾತ್ವಿಕ ಬೆಂಬಲ ಇಲ್ಲದಂತಾಗಿದೆ. 'ಏಕನಾಥನಿಗೆ ದಲಿತರ ಒಡನಾಡಿಯಾಗಿ, ದಲಿತರ ಉದ್ಧಾರಕನಾಗಿ ಮಾತನಾಡಿ, ಕೊನೆಗೆ –

ಗುರುವಿನ ಆದೇಶದಂತೆ ಪಿಂಡಕ್ಕೆ ಸರಿಯುವುದರಿಂದ ಅಲ್ಲಿ ಜೀವಂತತೆ ಕಾಣುವುದಿಲ್ಲ. '' ನಮ್ಮ ಕೈಕಾಲು ಇದ್ದವರ ಮನಿ ಜಂತಿ, ಕಂಬ, ತೊಲಿ ಆಗ್ಯಾವ. ನಮ್ಮ ಹಸದ ಕರಳ ಅವರ ತೂಗು ಮಂಚಕ್ಕ ಜೋಡ ಹಗ್ಗ ಆಗ್ಯಾವ. ಬಗ್ಗಿಸಿ ಬಗ್ಗಿಸಿ ನಮ್ಮ ಬೆನ್ನ ಅನ್ನುದನ್ನ ನಿಚ್ಚಣಕಿ ಮಾಡ್ಯಾರ'' ಎಂಬ 'ಏಕನಾಥನ ದಲಿತ ಪ್ರಜ್ಞೆಗೆ ಕ್ರಿಯೆ ಎಂಬುದೇ ಇಲ್ಲದಾಗಿ, ಜೀವನದೇ ವ್ಯಕ್ತಿತ್ವ ಕಾಣದೆ ಭೋಳೆಶಂಕರವಾಗಿ ಗುರುವಿನ ಮಾತು ಕೇಳುವಾಗ ಈ ದಲಿತ ಪ್ರಜ್ಞೆಗೆ ಒತ್ತು ಸಿಗುವುದಿಲ್ಲ. ಯಾಕೆಂದರೆ 'ಏಕನಾಥನ ಮೇಲೆ ವಿಶ್ವಾಸವಿಟ್ಟ ದಲಿತರು, ಇವನು ಚುನಾವಣೆಯಲ್ಲಿ ಆರಿಸಿ ಬಂದಾಗ, '' ಕೂಲಿ ಕುಂಬಳಿ ಮಾಡವರು ಇನ್ನಮ್ಯಾಲಿ ಚಿಂತಿ ಇಲ್ದ ಉಸರ ಬಿಡ್ತಾರ'' ಎಂಬ ದಲಿತರ ಕನಸು ಕನಸಾಗಿಯೇ ಉಳಿದುಬಿಡುತ್ತದೆ. ಪಾತ್ರೋಟರು ದ್ರೋಣ ಮತ್ತು 'ಏಕಲವ್ಯನ ಪ್ರಸಂಗವನ್ನು ನೆಸೆಯದೆ, ವಸ್ತುವಿನಲ್ಲಿ ಸೂಕ್ಷ್ಮ ಸ್ವಾತಂತ್ರ್ಯವಹಿಸಬೇಕಾಗಿತ್ತು. ಆ ಸ್ವಾತಂತ್ರ್ಯ ಇಲ್ಲದ ಕಾರಣ '' ಮಾತು ಬಹಳ, ಶಬ್ದಗಳ ಭಾರ ಜಾಸ್ತಿ. ಕ್ರಿಯಾಲೋಪಿತ ದೊಂದಿಗೆ ನೇರವಾಗಿ ಒಂದಾದ ನಂತರ ಒಂದು ದೃಶ್ಯವನ್ನು ಹೊಂದಿಸ

ಬೇಕಾಗಿ ಬರುವುದು ಬಹುಶಃ ಈ ವಸ್ತುವಿನ ಸೀಮಿತತೆಯು, ಸ್ಪಷ್ಟತೆಯು ದೋಷ" ಎನ್ನುತ್ತಾರೆ ಮುನ್ನುಡಿಯಲ್ಲಿ, ಸಿದ್ಧಲಿಂಗ ಪಟ್ಟಣಶೆಟ್ಟಿ.

ತಾತ್ವಿಕವಾಗಿ, ಕಲಾತ್ಮಕವಾಗಿ ಒಂದು ವಸ್ತುವನ್ನು ಬರಹದಲ್ಲಿ ನಿರ್ವಹಿಸದೆ, ಕೇವಲ ಆಶಯಕ್ಕನುಗುಣವಾಗಿ ಈ ನಾಟಕ ರಚಿತವಾಗಿದೆ. 'ಏಕಲವ್ಯನ ಪಾತ್ರದ ಮೂಲಕ ಪಾತ್ರೋಚಿತ 'ಏನನ್ನೂ ವ್ಯಕ್ತಪಡಿಸದೆ, ಕೇವಲ ವ್ಯಾಸನ 'ಏಕಲವ್ಯನ ಹಣಿಪಟ್ಟಿಕಟ್ಟಿ ಅಸಹಾಯಕನನ್ನಾಗಿ ನಿಲ್ಲಿಸಿದ್ದಾರೆ. 'ಏಕಲವ್ಯನ ಅಕ್ಕನ (ದುರ್ಗಾ) ಮೂಲಕ, ನಾಟಕಕಾರರು ಗುರಿಯನ್ನು ತಲುಪಿರುವುದು ಸಮಂಜಸವೆನಿಸುವುದಿಲ್ಲ.

ಎಸ್.ಎಲ್. ಭೈರಪ್ಪನವರ 'ಪರ್ವ'
ಅಪೌರಾಣೀಕರಣಗೊಂಡ ಮಾನವಶಾಸ್ತ್ರೀಯ ನಿರೂಪಣೆ

ಮಹಾಭಾರತವನ್ನು ಎಸ್.ಎಲ್.ಭೈರಪ್ಪನವರು ಕಾದಂಬರಿ ರೂಪದಲ್ಲಿ ಬರೆದು 'ಪರ್ವ' ಎಂದು ಹೆಸರಿಟ್ಟಿದ್ದಾರೆ. ಪೌರಾಣಿಕತೆಯನ್ನು ಕಳಚಿಕೊಂಡ ಈ ಕಾದಂಬರಿ ಸಮಾಜಶಾಸ್ತ್ರೀಯ ಅಧ್ಯಯನದ ಹಿನ್ನೆಲೆಯಲ್ಲಿ ಮೂಡಿಬಂದಿದೆ. ಆದ್ದರಿಂದ ವಾಸ್ತವತೆ ಇಲ್ಲಿ ಮುಖ್ಯವಾಗಿದೆ. ಪಾತ್ರಗಳು, ಸನ್ನಿವೇಶಗಳು ಸಹಜವಾಗಿ ವರ್ತಿಸುತ್ತವೆ. ಅತಿಮಾನುಷ ಎನ್ನಿಸುವ ಮಹಾಭಾರತದ ಕಥೆಯನ್ನು ವರ್ತಮಾನಕ್ಕೆ ತಂದು ಸಹಜ ರೀತಿಯಲ್ಲಿ ಚಿತ್ರಿಸಿದ್ದಾರೆ. 'ಪರ್ವ' ಕಾದಂಬರಿಯಲ್ಲಿ ಕೇವಲ 10 ಪುಟಗಳಲ್ಲಿ ಏಕಲವ್ಯ ಕಾಣಿಸಿಕೊಳ್ಳುತ್ತಾನೆ. ಇಲ್ಲಿ ಏಕಲವ್ಯನ ಚಿತ್ರವು ಇದುವರೆಗೆ ನೋಡಿದ್ದಕ್ಕಿಂತ ಭಿನ್ನವಾದ ನೆಲೆಯಲ್ಲಿ ಮತ್ತು ಭಿನ್ನ ದೃಷ್ಟಿಕೋನದಲ್ಲಿ ಚಿತ್ರಿತನಾಗಿದ್ದಾನೆ.

ಈ ಕಾದಂಬರಿಯಲ್ಲಿ, ಕುರುಕ್ಷೇತ್ರ ಯುದ್ಧ ನಡೆದ ಸಂದರ್ಭದಲ್ಲಿ ಏಕಲವ್ಯನು ಕೌರವರ ಪರ ಯುದ್ಧಮಾಡಿ ಅರ್ಜುನನನ್ನು ತನ್ನವರ ಸೈನ್ಯದಿಂದ ಸುತ್ತುಗಟ್ಟಿ ಕೊಲ್ಲಲೆಂದು ನಿರ್ಧರಿಸಿ ಬಂದಿರುತ್ತಾನೆ. ಈ ಸಂದರ್ಭದಲ್ಲೇ ಅವನು ದ್ರೋಣನನ್ನು ಹುಡುಕಿಕೊಂಡು ಅವನಿರುವ ಬಿಡಾರಕ್ಕೆ ಬರುತ್ತಾನೆ. ಇಲ್ಲಿ ಏಕಲವ್ಯ ಅರಣ್ಯವಾಸಿಯಾದರೂ ಅವನು ಕಾಡಾಡಿಯಾಗಿರುವುದಿಲ್ಲ. ಆರ್ಯರಂತೆ ವೇಷಭೂಷಣ ಹೊಂದಿರುತ್ತಾನೆ. ವಯಸ್ಸಾದ ದ್ರೋಣ ಏಕಲವ್ಯನನ್ನು ಕೂನ ಹಿಡಿಯುವುದಿಲ್ಲ. "ನೀನು ಯಾವಾಗ ಯಾವ ಊರಿನಲ್ಲಿ ಶಿಷ್ಯನಾಗಿದ್ದೆ?" ಎಂದು ಕೇಳುತ್ತಾನೆ. "ಇಲ್ಲಿ ನೋಡಿ ಗುರುತು" ಎಂದು ಬಲ ಅಂಗೈ ತೋರಿಸುತ್ತಾನೆ. ಹೆಬ್ಬೆರಳಿರದ ಅಂಗೈ ನೋಡಿದ ದ್ರೋಣ ಕಸಿವಿಸಿಕೊಂಡು ಮೆಲ್ಲನೆ ಬೆವರ ತೊಡಗುತ್ತಾನೆ. ದ್ರೋಣನಿಗೆ ನೆನಪಾಗುತ್ತದೆ. ಕುರು ಪಾಂಚಾಲ ದೇಶಗಳ ನಡುವಿನ ಕಾಡಿನಲ್ಲಿ ವಾಸಿಸುವ ಏಕಲವ್ಯ ಎಂದು. ಹಿಂದೆ ಏಕಲವ್ಯ ಚಿಕ್ಕವನಿರುವಾಗ ಅವನ ತಂದೆಯೇ ದ್ರೋಣನಲ್ಲಿಗೆ ಕರೆದುಕೊಂಡು ಬಂದು ಮಗನಿಗೆ ಬಿಲ್ವಿದ್ಯೆ ಕಲಿಸಿರೆಂದು, ಗಡಿಗೆ ಗಡಿಗೆ ಜೇನು, ಬುಟ್ಟಿಗಟ್ಟಳೆ ಹಣ್ಣು, ಆನೆಯ ದಂತ, ಜಿಂಕೆಯ ಕೊಂಬು, ಕೃಷ್ಣಾಜಿನ, ಹನ್ನೆರಡು ಹುಲಿಯ ಚರ್ಮ ದ್ರೋಣರಿಗೆ ಒಪ್ಪಿಸಿ ಬೇಡಿಕೆ ಸಲ್ಲಿಸಿದುದೂ ನೆನಪಾಗುತ್ತದೆ. ಆ ಹೊತ್ತಿನಲ್ಲಿ ಏಕಲವ್ಯನ ಕಪ್ಪುಬಣ್ಣ, ನಗುವಿನ ಹೊಳಪು ಕಂಡು ದ್ರೋಣನಗೆ ಪ್ರೀತಿ ಉಕ್ಕಿ ಬಂದಿದ್ದು ನೆನೆಯುತ್ತಾನೆ. ಆಗಲೇ ಏಕಲವ್ಯ ಬಿಲ್ವಿದ್ಯೆಯಲ್ಲಿ ಥಂಗನೆ ನೆಗೆಯುವ ಹುಲಿಗೆ ಕೂಡ ಸೂಲುಗಟ್ಟಿ ಬಾಣ ಹೊಡೆಯುವ ಚಳಕ ಸಂಪಾದಿಸಿದ್ದ. ಏಕಲವ್ಯನ ಕೈಚಳಕ, ಧೈರ್ಯ, ಗುರುಭಕ್ತಿಯನ್ನು ಪರೀಕ್ಷಿಸಿ ದ್ರೋಣ ಧನುರ್ವಿದ್ಯಾ ಶಾಲೆಗೆ ಸೇರಿಸಿಕೊಂಡದ್ದಕ್ಕೆ ಕುರು ಪಾಂಡವರ ಮಕ್ಕಳು, ಆರ್ಯಭಾಷೆ ಗೊತ್ತಿರದ ಏಕಲವ್ಯನನ್ನು ಕಂಡು ನಗುತ್ತಿದ್ದರು. ಅವನಿಗೆ ಮುಜುಗರ. ಆದರೆ ಬಿಲ್ಲಿನ ಗುರಿ ಕಂಡಾಗ ನಕ್ಕವರೆಲ್ಲ ಬೆರಗಾಗುತ್ತಿದ್ದರು. ಎಲ್ಲರ ಜೊತೆ ದ್ರೋಣನು ಏಕಲವ್ಯನಿಗೆ ಬಿಲ್ವಿದ್ಯಾಭ್ಯಾಸ ಸುರು ಮಾಡಿದ್ದು ಕೆಲವರಿಗೆ ಸರಿಬರಲಿಲ್ಲ.

ಭೀಷ್ಮನೆ ಬಂದು "ಆಚಾರ್ಯ, ಆದ್ಯಾವುದೋ ಕಾಡು ಹುಡುಗನ ಜೊತೆಯಲ್ಲಿ ರಾಜಕುಮಾರರಿಗೆ ಅಭ್ಯಾಸ ಮಾಡಿಸುತ್ತಿದ್ದಿರಂತೆ. ಯಾಕೋ ಹುಡುಗರಿಗೆ ಇಷ್ಟವಿಲ್ಲ. ಅಲ್ಲದೆ ರಾಜಕುಲದ ಘನತೆಯೂ ಉಳಿಯುವುದಿಲ್ಲ" ಎಂದು ಹೇಳುತ್ತಾನೆ. ದ್ರೋಣನು ನೊಂದು 'ಏಕಲವ್ಯನನ್ನು ಗಂಗೆಯ ಆಚೆ ಕಾಡಿನಲ್ಲಿಟ್ಟು ಬಿಲ್ವಿದ್ಯೆ ಕಲಿಸತೊಡಗುತ್ತಾನೆ. ಸ್ವಲ್ಪ ದಿನದ ನಂತರ ಇದು ಗೊತ್ತಾಗುತ್ತದೆ. ಮುಂದೆ ಎಲ್ಲ ಪ್ರಸ್ತಾಪವಿರುವಂತೆ ರಾಜಕುಮಾರರ ಮಕ್ಕಳು ಭೇಟಿಗೆ ಬರುವುದು, 'ಏಕಲವ್ಯ ಅವರ ಒದರುವ ನಾಯಿಯ ಬಾಯಿಗೆ ಬಾಣ ಹೊಡೆಯುವುದು, 'ಏಕಲವ್ಯನ ಕೈಚಳಕ ಕಂಡು ಅಸೂಯೆಯಿಂದ ಮರಳುವುದು, ನಂತರ ಅರ್ಜುನನ ಸಲುವಾಗಿ, 'ಏಕಲವ್ಯನ ಹೆಬ್ಬೆರಳನ್ನು ದ್ರೋಣನು ಕೇಳುವುದು, ಭಕ್ತಿಯಿಂದ ಅದನ್ನು ಕತ್ತರಿಸಿಕೊಡುವುದು ಈ ಕಾದಂಬರಿಯಲ್ಲಿಯೂ ನಿರೂಪಿತವಾಗಿದೆ.

'ಪರ್ವ'ದಲ್ಲಿ 'ಏಕಲವ್ಯನ ಈ ಪ್ರಸಂಗವನ್ನು ದ್ರೋಣನು ನೆನೆಸಿಕೊಂಡಾಗಲೇ ಅದೆಲ್ಲ ತೆರೆದುಕೊಳ್ಳುವುದು. ಕುರು – ಪಾಂಡವರ ಯುದ್ಧದಲ್ಲಿ 'ಏಕಲವ್ಯ ದುರ್ಯೋಧನನ ಪರವಾಗಿ ನಿಂತು ತನಗೆ ಅನ್ಯಾಯ ಮಾಡಿದ ಅರ್ಜುನನ ಮೇಲೆ ಸೇಡು ತೀರಿಸಿಕೊಳ್ಳಲು ಬಂದಿರುತ್ತಾನೆ. ಆದರೆ ಇಲ್ಲಿ ದ್ರೋಣನೇ ಅರ್ಜುನನ ವಿರುದ್ಧ ಯುದ್ಧಕ್ಕೆ ನಿಂತಿದ್ದಾನೆ. ದ್ರೋಣನು 'ಏಕಲವ್ಯನ ನಿರ್ಧಾರ ಕೇಳಿ, "ಮಗು, ಈ ಯುದ್ಧಕ್ಕೆ ಯಾವ ಯಾವುದೋ ದೇಶದ ರಾಜರು ಯಾವ ಯಾವ ಕಾರಣಕ್ಕಾಗಿಯೋ ಬಂದು ಸೇರಿದ್ದಾರೆ. ನೀನು ಕೂಡ ಬಂದಿದ್ದೀಯೆ. ದುರ್ಯೋಧನನ ಪರ ನಿಲ್ಲುವ ಅಪೇಕ್ಷೆ ಇದ್ದರೆ ನಿಲ್ಲು. ನಾನು ನಿಂತಿದ್ದೇನೆ. ಆದರೆ ಅರ್ಜುನನ ಮೇಲೆ ಪ್ರತೀಕಾರ ತೀರಿಸಿಕೊಳ್ಳುವುದು ಬೀಜವಿಲ್ಲದ ಚಿಗುರಿನಂತಹ ಕೆಲಸ. ನಿನ್ನ ಹೆಬ್ಬೆರಳನ್ನು ತೆಗೆಸಿದ ಕಾರಣ ಅರ್ಜುನನದಲ್ಲ" ಎಂದು ದ್ರೋಣ ಹೇಳುತ್ತಾನೆ. 'ಏಕಲವ್ಯನಿಗೆ ಆಶ್ಚರ್ಯವಾಗುತ್ತದೆ. ತನ್ನ ಬಿಲ್ವಿದ್ಯೆಗೆ ಮತ್ಸರಪಟ್ಟವನು ಅರ್ಜುನ. ಭೇಟಿಗೆ ಬಂದವನೂ ಅರ್ಜುನ. ದ್ರೋಣನೆ ಬಂದು, "ವತ್ಸ, ನಾನು ವಚನ ಭ್ರಷ್ಟನಾಗುವಂತಾಗಿದೆ. ನನ್ನನ್ನು ಪಾರು ಮಾಡುವೆಯಾ?" ಎಂದು ಕೇಳಿ ತನ್ನಿಂದ ಬೆರಳು ಕಿತ್ತುಕೊಂಡದ್ದು, ಎಲ್ಲವನ್ನು ನೆನೆಸಿಕೊಂಡ 'ಏಕಲವ್ಯನಿಗೆ ದಿಕ್ಕು ತಪ್ಪಿದಂತಾಗುತ್ತದೆ. ಈಗ ತನ್ನ ಹೆಬ್ಬೆರಳು ಹೋಗುವುದಕ್ಕೆ ಕಾರಣರು ಯಾರೆಂಬ ಕುತೂಹಲ ಹುಟ್ಟುತ್ತದೆ. ದ್ರೋಣ ಮುಚ್ಚಿಟ್ಟಿದ್ದ ನಿಜ ಸಂಗತಿ ಹೇಳುತ್ತಾನೆ: "ನಿನ್ನ ಶಬ್ದವೇಧಿಗೆ ಈ ಕ್ಷತ್ರಿಯ ಹುಡುಗರು ಬೆರಗಾದುದು ನಿಜ. ಅದಕ್ಕಿಂತ ಹೆಚ್ಚಾಗಿ ನೀನು ಹಿಡಿದಿದ್ದುದು ತಾಮ್ರದ ಬಿಲ್ಲು. ನಿಮ್ಮ ಕಾಡು ಜನರಿಗೆ ಬಿದಿರಿನ ಬಿಲ್ಲು ಬಿಟ್ಟರೆ ಬೇರೆಯದು ಗೊತ್ತಿಲ್ಲ. ಲೋಹದ ಬಿಲ್ಲನ್ನು ಕೊಟ್ಟರೂ ಅದರ ಬಿಗಿ, ಸೆಡೆತಗಳನ್ನು ಅಭ್ಯಾಸ ಮಾಡಿಕೊಂಡು ಗುರಿಕಟ್ಟುವುದು ಗೊತ್ತಿಲ್ಲ. ಬರೀ ಬಿದಿರಿನ ಬಿಲ್ಲಿನಲ್ಲಿ ಬಾಣ ಎಷ್ಟು ದೂರ ಹೋಗಬಲ್ಲದು. ಅಲ್ಲದೆ ನಿಮ್ಮ ಬಾಣದ ತುದಿಯಲ್ಲಿ ವಿಷ ಅಂಟೇ ವಿನಾ ಲೋಹದ ಮೊನಚು ಮುಂಡವಿಲ್ಲ. ತೂಕವಿಲ್ಲದ ಬಾಣದ ದೂರ ವೇಗ

ರಭಸಗಳೇ ಕಡಿಮೆ. ನೀನು ನಾಯಿಗೆ ಹೊಡೆದದ್ದು ಲೋಹದ ತಲೆಯ ಬಾಣ. ನಾನು ಸರಬರಾಜು ಮಾಡಿದುದೇ. ಹಿಡಿದದ್ದು ತಾಮ್ರದ ಬಿಲ್ಲು. ಈ ಸಂಗತಿ ಹುಡುಗರಿಂದ ಭೀಷ್ಮರಿಗೆ ತಿಳಿಯಿತು. ಆ ರಾತ್ರಿಯೇ ಅವರು ನನ್ನನ್ನು ಕರೆಸಿದರು. 'ಇತ್ತೀಚೆಗೆ ರಾಜ್ಯದ ಗಡಿಗಳಲ್ಲಿ ಕಾಡು ಜನರ ಉಪದ್ರವ ಹೆಚ್ಚಿದೆ. ಅಂತರ್ಜರ ಹಳ್ಳಿಗಳಿಗೆ ನುಗ್ಗಿ ದವಸ ಧಾನ್ಯ ಲೂಟಿ ಮಾಡುತ್ತಾರೆ. ನಮ್ಮ ಹೆಂಗಸರನ್ನು ಅಪಹರಿಸುತ್ತಾರೆ. ಅಂಥವರ ಪ್ರಮುಖನ ಮಗನಿಗೆ ನೀವು ಅಂತರ್ಜರ ಬಿಲ್ಲು ವಿದ್ಯೆ ಹೇಳಿಕೊಟ್ಟರೆ ರಾಜ್ಯಕ್ಕೆ ಅನ್ಯಾಯ ಮಾಡಿದಂತಾಗುವುದಿಲ್ಲವೆ' ಎಂದು ಕೇಳಿದರು. ಅಷ್ಟು ಮಾತ್ರವಲ್ಲ. ಈಗ ಕಲಿಸಿರುವ ವಿದ್ಯೆಯನ್ನ ವಾಪಾಸು ತೆಗೆದುಕೊಳ್ಳಬೇಕು. ಎಂದರೆ ನಿನ್ನ ಬಲಗೈ ಹೆಬ್ಬೆರಳನ್ನು ಕತ್ತರಿಸಬೇಕು ಎಂದರು. ಅಷ್ಟರಲ್ಲಿ ನಿಮಗೂ ಹಸ್ತಿನಾವತಿಯ ಅರಮನೆಗೂ ವ್ಯಾಪಾರ ವ್ಯವಹಾರ ಬೆಳೆದಿತ್ತಲ್ಲವೆ? ಹುಲಿ ಹುಲ್ಲೆ ಮೊದಲಾದ ಪ್ರಾಣಿಗಳ ಚರ್ಮ ಹಿಡಿದು ಪಳಗಿಸಿದ ಕಾಡಾನೆ, ಜೇನು, ಮೊದಲಾದುವನ್ನು ಸರಬರಾಜು ಮಾಡಿ ನೀವು ಗೋಧಿಯನ್ನು ಇಲ್ಲಿಂದ ಪಡೆಯುತ್ತಿದ್ದಿರಲ್ಲವೆ? ನೀವು ಅಷ್ಟು ಹೊತ್ತಿಗಾಗಲೇ ಗೋಧಿ ತಿನ್ನುವ ರುಚಿಗೆ ಬಿದ್ದಿದ್ದಿರಿ. ಹೀಗಿರುವಾಗ ರಾಜಪದದಲ್ಲಿ ನಿಂತು ಆಡಳಿತ ನಡೆಸುತ್ತಿರುವ ಭೀಷ್ಮರು ನಿಮ್ಮ ಜನದ ಪ್ರಮುಖನ ಮಗನ ಹೆಬ್ಬೆರಳನ್ನು ಕತ್ತರಿಸಿದರೆಂದರೆ ಅವಿವೇಕವಾಗುತ್ತದೆಂದು ಆಲೋಚಿಸಿ ತಮ್ಮ ಹೆಸರು ಎಲ್ಲಿಯೂ ಬರದಂತೆ ನಿನ್ನ ಹೆಬ್ಬೆರಳನ್ನು ತರಬೇಕೆಂದು ಆಜ್ಞಾಪಿಸಿದರು. ಅರ್ಜುನನಿಗೆ ಕೊಟ್ಟಿದ್ದ ವರವನ್ನು ನಾನು ನಿನಗೆ ಕಾರಣವಾಗಿ ಹೇಳಿದೆ ಅಷ್ಟೇ."

ದ್ರೋಣನಿಂದ ಈ ರಹಸ್ಯವನ್ನು ಕೇಳಿದ ಮೇಲೆ ಏಕಲವ್ಯನಿಗೆ ದಿಕ್ಕು ತೋಚದಾಯಿತು. ತನ್ನ ಬಿಡಿಗೆ ಹೋಗುತ್ತಾನೆ. ಮರುದಿನ ದ್ರೋಣನಲ್ಲಿಗೆ ಬಂದು ಏಕಲವ್ಯ, '' ನಾನು ರಾತ್ರಿ ಪೂರ್ತಿ ಆಲೋಚಿಸಿದೆ. ಅರ್ಜುನನ ಮೇಲೆ ಪ್ರತೀಕಾರ ತೀರಿಸಿಕೊಳ್ಳಲು ಒಳ್ಳೆಯ ಅವಕಾಶವೆಂದು ಭಾವಿಸಿ ದುರ್ಯೋಧನನ ಪಕ್ಷವಹಿಸಿ ಈ ಯುದ್ಧಕ್ಕೆ ಬಂದೆ. ನನಗೆ ಅನ್ಯಾಯ ಮಾಡಿರುವವನು ಭೀಷ್ಮ ಎಂದು ತಿಳಿಯಿತು. ಅವನೇ ಈ ಪಕ್ಷದ ನಾಯಕ. ಅವನ ಮೇಲೆ ಪ್ರತೀಕಾರ ಮಾಡಬೇಕಾದರೆ ನಾನು ಅರ್ಜುನನ ಪಕ್ಷಕ್ಕೆ ಹೋಗಿ ಸೇರಬೇಕು. ಆದ್ದರಿಂದ ನಾನು ನನ್ನ ಜನಗಳೊಡನೆ ವಾಪಸು ಹೊರಟು ಹೋಗುತ್ತೇನೆ'' ಎಂದು ತನ್ನ ನಿರ್ಧಾರವನ್ನು ತಿಳಿಸುತ್ತಾನೆ. ಪುನಃ ಏಕಲವ್ಯ, '' ನಮ್ಮದು ಪಾಂಚಾಲರಿಗೂ ಕುರುಗಳಿಗೂ ನಡುವೆ ಇರುವ ಕಾಡು. ನಾವು ಹಿಡಿದು ಪಳಗಿಸಿದ ಆನೆಗಳನ್ನು ಅವರೂ ಕೇಳುತ್ತಾರೆ. ಇವರೂ ಕೇಳುತ್ತಾರೆ. ಅರ್ಜುನನು ಪಾಂಚಾಲರ ಮನೆಯ ಮಗಳನ್ನು ಮದುವೆಯಾದನೆಂದು ಕೇಳಿ ತಿಳಿದ ಮೇಲೆ ಅವರಿಗೆ ಆನೆಯ ವ್ಯಾಪಾರ ಮಾಡುವುದನ್ನೇ ನಿಲ್ಲಿಸಿಬಿಟ್ಟ. ಒಂದೊಂದು ಆನೆಗೆ ಇನ್ನೆರಡೆರಡು ಗಾಡಿ ದವಸ, ಇನ್ನೂ ಐದು ನಿಷ್ಕಗಳನ್ನು ಹೆಚ್ಚು ಕೊಡುತ್ತೇನೆ ಅಂದರೂ ಕಡಿಮೆ ಬೆಲೆಗೆ ಹಸ್ತಿನಾವತಿಯವರಿಗೇ ಮಾರುತ್ತಿದ್ದ. ಈಗ ಅದೇ ತಪ್ಪಾಯಿತೆಂದು ತಿಳಿಯಿತಲ್ಲ. ಇನ್ನು

ಯಾವ ಪಕ್ಷಕ್ಕೂ ಸೇರುವುದಿಲ್ಲ. ನಾನು ಒಂದು ಮರ ಹತ್ತಿ ನೋಡಿದೆ ಎರಡು ಕಡೆಗಳಲ್ಲೂ ಎಷ್ಟೊಂದು ಆನೆಗಳನ್ನು ಜಮಾಯಿಸಿ ನಿಲ್ಲಿಸಿದ್ದಾರೆ. ಸಾಮಾನು ಸಾಗಿಸಲೆಂದು ತಂದ ಆನೆಗಳನ್ನೆಲ್ಲ ಈ ಜನಗಳು ಯುದ್ಧಕ್ಕೆ ನಿಲ್ಲಿಸಿ ಸಾಯಿಸುತ್ತಾರೆ. ನೋಡಿ ದುಃಖವಾಗುತ್ತದೆ....'' ಎಂದು ಹೇಳಿ ಗುರು ದ್ರೋಣನಿಗೆ ನಮಸ್ಕರಿಸಿ ಹೋಗಿ ಬಿಡುತ್ತಾನೆ.

ಏಕಲವ್ಯನು ಯಾರ ಪಕ್ಷವನ್ನು ವಹಿಸದೆ ಯುದ್ಧವನ್ನೇ ತಿರಸ್ಕರಿಸಿ ಹೊರಟು ಹೋದದ್ದು ದ್ರೋಣನಿಗೆ ನೆಮ್ಮದಿ ತರುತ್ತದೆ. ಇದಿಷ್ಟು 'ಪರ್ವ' ಕಾದಂಬರಿಯಲ್ಲಿ ದ್ರೋಣ, ಏಕಲವ್ಯರ ಬಗ್ಗೆ ಬರುವ ಪ್ರಸಂಗದ ಸಾರಾಂಶ.

ಇಲ್ಲಿಯೂ ಏಕಲವ್ಯನ ಹೆಬ್ಬೆರಳನ್ನು ಗುರುಕಾಣಿಕೆಯಾಗಿ ದ್ರೋಣನೆ ಪಡೆದಿದ್ದರೂ, ಅದರ ಹಿಂದೆ ಭೀಷ್ಮನ ಕೈವಾಡವಿತ್ತೆಂದು ನಿರೂಪಿಸಲಾಗಿದೆ. ಇದರಿಂದ ದ್ರೋಣ ನಿರ್ದೋಷಿಯಾಗಿ ಕಾಣುತ್ತಾನೆ. 'ಬೆರಳ್ ಗೆ ಕೊರಳ್', 'ಹೆಬ್ಬೆರಳು', 'The Purpose' ಮತ್ತು 'ಏಕಲವ್ಯ' ಈ ನಾಟಕಗಳಲ್ಲಿಯೂ ವ್ಯಕ್ತವಾಗುವ ಅಂಶವೆಂದರೆ ದ್ರೋಣನು ಭೀಷ್ಮನ ಅಧೀನದಲ್ಲಿರುವುದು. ಏಕಲವ್ಯ ಬಿಲ್ವಿದ್ಯೆ ಕಲಿಯಲು ದ್ರೋಣನಲ್ಲಿಗೆ ಬಂದಾಗ ಭಯದಿಂದ ದ್ರೋಣ ಸ್ವೀಕರಿಸುವದಿಲ್ಲ. ಅರಸರಿಗೆ, ಅರಸು ಮಕ್ಕಳ ಬಗ್ಗೆ ಭಯದಿಂದಿರುತ್ತಾನೆ. ಮತ್ತು ಏಕಲವ್ಯನ ಬೆರಳು ಪಡೆಯಲು ದ್ರೋಣನು ಅರ್ಜುನನಿಗೆ ಕೊಟ್ಟ ಮಾತೇ ಕಾರಣವಾಗುತ್ತದೆ. 'ಪರ್ವ' ದಲ್ಲಿ ದ್ರೋಣನು ಅರ್ಜುನನಿಗೆ ಕೊಟ್ಟ ವಚನ ಒಂದು ನೆಪವಾಗುತ್ತದೆ. ಭೀಷ್ಮನ ಆಜ್ಞೆಯೇ ಏಕಲವ್ಯನ ಬೆರಳನ್ನು ಕತ್ತರಿಸಿಕೊಳ್ಳಲು ಕಾರಣವಾಗಿದೆ. ದ್ರೋಣ ಅಪವಾದದಿಂದ ತಪ್ಪಿಸಿಕೊಳ್ಳುತ್ತಾನೆ. ತನ್ನ ವಂಶದ ಮಕ್ಕಳ ಹಿತರಕ್ಷಣೆಗಾಗಿ ಭೀಷ್ಮ ಏಕಲವ್ಯನಂಥ ಅನುತ್ತರ ಧನುರ್ಧಾರಿಯನ್ನು ಅಡಗಿಸಲು ಮಾಡಿದ ಕುತಂತ್ರ ಇದಾಗಿದೆ. ತನ್ನ ವಂಶದರಕ್ಷಣೆಯ ಜವಾಬ್ದಾರಿ ತುಂಬಾ ಇದೆ ಎಂಬುದು, ಮತ್ತು ಅದು ತನ್ನ ಕರ್ತವ್ಯ; ಧರ್ಮ ಎಂಬುದು ಸರಿಯಾಗಿಯೇ 'The Purpose' ನಾಟಕದಲ್ಲಿ ಭೀಷ್ಮನೇ ವ್ಯಕ್ತಪಡಿಸುತ್ತಾನೆ.

'ಬೆರಳ್ ಗೆ ಕೊರಳ್', 'ಹೆಬ್ಬೆರಳು' ಮತ್ತು 'The Purpose' ನಾಟಕದಲ್ಲಿ ದ್ರೋಣನನ್ನು ಮಹಾನುಭಾವನನ್ನಾಗಿ ಚಿತ್ರಿಸಲು ಹೋಗಿ ಮತ್ತು ಏಕಲವ್ಯನ ಉದಾತ್ತತೆ, ತ್ಯಾಗವನ್ನು ವೈಭವೀಕರಿಸಲು ಹೋಗಿ ಅರ್ಜುನನನ್ನು ಸಣ್ಣಮನಸ್ಸಿನವನನ್ನಾಗಿ ನಾಟಕಕಾರರು ತೋರಿಸಿದ್ದಾರೆ.(ಉಳಿದ ನಾಟಕಗಳಲ್ಲಿ ಅರ್ಜುನ ಎಂದರೆ ರಾಜತ್ವದ ಪ್ರತೀಕವಾಗಿ ಬರುತ್ತಾನೆ. ದ್ರೋಣನಿಗೆ ರಾಜ ಪ್ರಭುತ್ವದ ಮೇಲೆ ಸಿಟ್ಟಿತ್ತು ಎಂಬುದು ವ್ಯಕ್ತವಾಗುತ್ತದೆ) 'ಪರ್ವ' ದಲ್ಲಿ ಅರ್ಜುನ ಮಾನವ ಸಹಜ ಸ್ವಭಾವದವನಾಗಿ ನಿಂತಿದ್ದಾನೆ. ಅರ್ಜುನನೇ ತನ್ನ ಹೆಬ್ಬೆರಳಿಗೆ ಕಾರಣವಾದವನೆಂದು ಪ್ರತಿಕಾರ ತೀರಿಸಿಕೊಳ್ಳಲು ಬಂದ ಏಕಲವ್ಯನಿಗೆ ದ್ರೋಣ ಅರ್ಜುನನ ಬಗ್ಗೆ, "ಅಭ್ಯಾಸ ಮಾಡುವ ವೃಂದದಲ್ಲಿ ಪ್ರಥಮನೆನ್ನಿಸಿಕೊಳ್ಳಬೇಕೆಂಬ ಬಯಕೆ ಯಾವ ಬುದ್ಧಿ

ಗುಣವಾದ ನಂತರ ದ್ರೋಣ ಕದ್ದು ಹೋಗಿ ಉಳಿದ ನಾಲ್ಕು ಬೆರಳಿನ ಸಹಾಯದಿಂದಲೇ ಬಾಣ ಹೂಡುವುದನ್ನು ಕಲಿಸಿರುತ್ತಾನೆ. 'ಬೆರಳ್ ಗೆ ಕೊರಳ್' ನಾಟಕದಲ್ಲಿ ಕೂಡ 'ಏಕಲವ್ಯನಿಗೆ ದ್ರೋಣ ಮನೆಯಲ್ಲಿಟ್ಟುಕೊಂಡು ಬಿಲ್ವಿದ್ಯೆ ಕಲಿಸಲು ತೊಡಗಿರುತ್ತಾನೆ. 'ಹೆಬ್ಬೆರಳು', 'The purpose,' ಮತ್ತು ''ಏಕಲವ್ಯ' ನಾಟಕಗಳಲ್ಲಿ, 'ಏಕಲವ್ಯನಿಗೆ [illegible] ಮತ್ತು ಅರಸರ ಭಯದಿಂದಾಗಿ ದ್ರೋಣ ಬಿಲ್ವಿದ್ಯೆ ಕಲಿಸಲು [illegible] ನಿರಾಕರಿಸುತ್ತಾನೆ. ನಂತರ 'ಏಕಲವ್ಯ ಬಿಲ್ವಿದ್ಯೆಯನ್ನು ಸ್ವಪ್ರಯತ್ನದಿಂದ ಕಲಿತು ಪಾರಂಗತನಾಗುತ್ತಾನೆ. ಆಗ ಗುರು ದ್ರೋಣನು ಹೆಬ್ಬೆರಳು ಕೇಳಲು ಬಂದಾಗಲೂ ಅಪಾರ ಭಕ್ತಿಯಿಂದ ಅದನ್ನು ಕತ್ತರಿಸಿಕೊಡುವುದು ಸಹಜವೆನಿಸುವುದಿಲ್ಲ. ಅಂದರೆ 'ಏಕಲವ್ಯನ ಭಕ್ತಿಗೆ ಕಾರಣವಿರುವುದಿಲ್ಲ. ಬದಲಾಗಿ ಅವನ ಬೋಳೆತನ ಎನ್ನುವಂತಾಗುತ್ತದೆ.

'ಪರ್ವ' ದಲ್ಲಿ 'ಏಕಲವ್ಯನು ಕೌರವರ ಪರವಾಗಿ ನಿಂತಾಗಲಿ, ಪಾಂಡವರ ಪರವಾಗಿ ನಿಂತಾಗಲಿ ಯುದ್ಧ ಮಾಡದೆ ಬೇಸರದಿಂದ ತನ್ನ ಜಾಗಿಗೆ ಮರಳಿಬಿಡುತ್ತಾನೆ. ಅವನಿಗೆ ಆರ್ಯರ ಸಹವಾಸವೇ ಬೇಡವೆನಿಸುತ್ತದೆ. ಈ ಅಂಶ ಸಿದ್ಧಲಿಂಗಯ್ಯನವರ ಮೇಲೆ ಪ್ರಭಾವಬೀರಿದೆ. ಅವರ ''ಏಕಲವ್ಯ' ನಾಟಕದಲ್ಲಿ 'ಏಕಲವ್ಯ ಪಾಂಡವರ ಪರವಾಗಿಯಾಗಲಿ, ಕೌರವರ ಪರವಾಗಿಯಾಗಲಿ ನಿಂತು ಯುದ್ಧ ಮಾಡಲು ನಿರಾಕರಿಸುತ್ತಾನೆ. ನಿರಾಕರಿಸುವುದರಲ್ಲಿ ಇರುವ ಉದ್ದೇಶ ಬೇರೆ ಬೇರೆ. 'ಪರ್ವ' ದಲ್ಲಿ 'ಏಕಲವ್ಯನ ಬೆರಳು ಹೋಗಲು ಅರ್ಜುನ ಕಾರಣನಲ್ಲ. ಭೀಷ್ಮ ಕಾರಣ ಅಂದಾಗ, 'ಏಕಲವ್ಯ ಯಾರ ಪಕ್ಷ ಸೇರಬೇಕು? ಕೌರವರ ಪಕ್ಷ ಸೇರಿದರೆ ಅಲ್ಲಿ ಭೀಷ್ಮನಿದ್ದಾನೆ. ಪಾಂಡವರ ಪಕ್ಷ ಸೇರಿದರೆ ಅಲ್ಲಿ ಅರ್ಜುನ ಇದ್ದಾನೆ ಇದಕ್ಕಿಂತಲು ಮುಖ್ಯವಾಗಿ 'ಏಕಲವ್ಯನಿಗೆ '' ದುರ್ಯೋಧನನದು ಧರ್ಮವೋ ಅರ್ಜುನನ ಪಕ್ಷದವರದು ಧರ್ಮವೋ ಎಂಬುದೆಲ್ಲ ಬರೀ ಕಗ್ಗ'' ವಾಗುತ್ತದೆ. ಸಿದ್ಧಲಿಂಗಯ್ಯನವರ 'ಏಕಲವ್ಯ' ದಲ್ಲಿ 'ಏಕಲವ್ಯನಿಗೆ ಕುರು ಪಾಂಡವರ ಯುದ್ಧವು '' ಕೇವಲ ಆಳುವರ ನಡುವಿನ ಕಚ್ಚಾಟ'' ಕಂಡದ್ದರಿಂದ, '' ನನ್ನದು ಇಲ್ಲದವರ ಪರವಾದ ಹೋರಾಟ'' ಎಂದು ನಿರ್ಧರಿಸುತ್ತಾನೆ.

'ಪರ್ವ' ಕಾದಂಬರಿಯನ್ನು ಎಸ್.ಎಲ್.ಭೈರಪ್ಪನವರು ಮಾನವಶಾಸ್ತ್ರದ ಅಧ್ಯಯನದ ಹಿನ್ನೆಲೆಯಲ್ಲಿ ಬರೆದಿರುವುದರಿಂದ ಇಲ್ಲಿ ಇಂತಹ ಅನೇಕ ಅಂಶಗಳು ವ್ಯಕ್ತವಾಗುತ್ತವೆ. 'ಏಕಲವ್ಯ ಕಾಡಿನಲ್ಲಿರುವ ಅನಾರ್ಯ. ಕೌರವರಾಗಲಿ, ಪಾಂಡವರಾಗಲಿ ನಗರ ನಾಗರಿಕರು. ಅವನಿಗೆ ಆರ್ಯರ ಪದ್ಧತಿಗಳೇ ವಿಚಿತ್ರವಾಗಿ ಕಾಣುತ್ತವೆ. 'ಏಕಲವ್ಯನಿಗೂ ಹಸ್ತಿನಾವತಿಗೂ ಕೊಡುಕೊಳ್ಳುವ ವ್ಯಾಪಾರ ಸಂಬಂಧವಿರುತ್ತದೆ. ಆನೆಗಳನ್ನು 'ಏಕಲವ್ಯ ಸಾಗಿಸಿ, ಅಲ್ಲಿಂದ ಗೋಧಿಯನ್ನು ತರಿಸಿಕೊಳ್ಳುವುದು ನಡೆದಿರುತ್ತದೆ. [illegible] ಮಾರಿದ ಹಣದಿಂದಲೇ 'ಏಕಲವ್ಯ

ಚಿನ್ನದ ಒಡವೆ ಮಾರಿಸಿಕೊಂಡು, ಅಂತರ್ಗರಂಗಿ ಧರಿಸು[illegible]ದಂ. [illegible]ನೆಗಳು ಸರಕು ಸಾಗಿಸಲು [illegible]ಪಂತೋಳಗಿಸುತ್ತಾರೆಂದು ತಿಳಿದಿದ್ದ ವಿಜಲನಿಗೆ ಆ ಸಮುದ್ರದಲ್ಲಿ ಸೋರಾ[illegible] ಮುಟಿಂತು [illegible]ದನ್ನು ಕಂಡು ಮರುಗುತ್ತಾನೆ. [illegible]ಲ್ಲಿಂದ ಒಡವೆ ತೆಗೆದು ಬೀಸಾಡುತ್ತಾನೆ. ಪಾಂಡವರೆಲ್ಲ ನಿಂತೋಳಗ ಪದ್ಮದಿಂದಿಂದ ಪುಟ್ಟಿದ್ದನ್ನು ಕಂಡು ಬೆರಗಾಗುತ್ತಾನೆ. ‘‘ನಿಂತೋಳಗ ಮಂತೆ ಪಂತೋಳಗ. ನಿಮ್ಮ ಜನರದು ವಿಚಿತ್ರ ಧರ್ಮ. ನಮ್ಮಲ್ಲಿ ಅಂಥದ್ದೆಲ್ಲ ಏನಿಲ್ಲ. ಮಕ್ಕಳಿಲ್ಲದೆ ಸತ್ತರೆ, ಸಂತಾನ ಬೆಳೆಯದಿದ್ದರೆ ಪಾಪಗೀಪ ಅನ್ನುವ ವಿಷಯ ಇಲ್ಲವಾ ಇಲ್ಲ. ಮಕ್ಕಳಿಗೆಂದು ಕೂಡಿಡುವ ಹೊಲ, ಮನೆ, ಅರಮನೆಗಳೂ ಇಲ್ಲ.’’ ಎಂದು ದ್ರೋಣನಿಗೆ ಹೇಳುತ್ತಾನೆ.

ಸರ್ವರ ಪರಿವರ್ತನೆಯ ಆಶಯದ-ಅದಮ್ಯ

ಜ.ಹೊ.ನಾರಾಯಣಸ್ವಾಮಿಯವರು ತಮ್ಮ ವೈಚಾರಿಕ ಬರಹಗಳಿಂದ ಪ್ರಸಿದ್ಧರಾದವರು. ಪ್ರಗತಿ ಪರ ಆಲೋಚನೆಗಳಿಂದ ವೈದಿಕಧರ್ಮದಲ್ಲಿರುವ ಅನೇಕ ಮೌಢ್ಯ ಕಂದಾಚಾರಗಳ ಬಗ್ಗೆ ತೀವ್ರವಾಗಿ ಪ್ರತಿಭಟಿಸುತ್ತಲೇ ಮಾನವೀಯತೆಗಾಗಿ ತುಡಿಯುವವರು. ಧರ್ಮ, ಜಾತಿಗಳನ್ನು ಮೀರಿ ಮನುಷ್ಯ ಬೆಳೆಯಬೇಕೆಂಬ ಹಂಬಲ ಇವರದಾಗಿದೆ. ಅವರ 'ಅದಮ್ಯ' ಕಾದಂಬರಿ ಇದನ್ನೇ ಪ್ರತಿಪಾದಿಸುತ್ತದೆ. 'ಅದಮ್ಯ' 'ಏಕಲವ್ಯ'ನನ್ನು ಕುರಿತ ಮೊದಲ ಕನ್ನಡ ಕಾದಂಬರಿಯಾಗಿದೆ. ಈ ಶತಮಾನದ ಪ್ರಾರಂಭದಿಂದ ಈ ಹೊತ್ತಿನವರೆಗೆ ಅನೇಕ ಆಂದೋಲನಗಳು ನಡೆದಿವೆ. ಬ್ರಿಟಿಷ ಸಾಮ್ರಾಜ್ಯಶಾಹಿ ವಿರುದ್ಧ ಆರಂಭವಾದ ಆಂದೋಲನವು ಮುಂದೆ ಆರ್ಯ ಸಮಾಜ, ಬ್ರಹ್ಮಸಮಾಜಗಳು ಹುಟ್ಟಿಕೊಂಡು ಹಿಂದು ಸಂಸ್ಕೃತಿಯಲ್ಲಿಯೇ ಮನೆಮಾಡಿಕೊಂಡಿದ್ದ ಅನೇಕ ಬಗೆಯ ಮೌಢ್ಯಗಳನ್ನು ಹೊರದೂಡಲು ಪ್ರಯತ್ನಿಸಿದವು. ಶೂದ್ರರು ಇದರಿಂದ ಎಚ್ಚೆತ್ತರು. 'ಸತ್ಯಶೋಧಕ' ಎಂಬ ಸಂಘಟನೆಯು ಹಿಂದುಳಿದವರಿಗೂ, ಮಹಿಳೆಯರಿಗೂ, ವಿದ್ಯಾಭ್ಯಾಸ ದೊರಕುವಂತೆ, ಪ್ರಯತ್ನಿಸಿತು. ಅಲ್ಲದೆ ಅದರ ಮುಖ್ಯ ಗುರಿಯಾಗಿದ್ದ ಅಸ್ಪೃಶ್ಯರ ಉದ್ಧಾರಕ್ಕೆ ಕೈಗೊಂಡ ಕಾರ್ಯಚಟುವಟಿಕೆಗಳು ಸಮಾಜದ ಬದಲಾವಣೆಗೆ ದಾರಿ ಮಾಡಿದವು. ಗಾಂಧೀ, ಲೋಹಿಯಾ, ಜ್ಯೋತಿಬಾಫುಲೆ, ಅಂಬೇಡ್ಕರ್, ರಾಮಸ್ವಾಮಿ ನಾಯ್ಕರ್, ವಿವೇಕಾನಂದ, ನಾರಾಯಣಗುರು ಮುಂತಾದವರ ಸುಧಾರಣಾ ಚಳುವಳಿಗಳು ಸಮಾಜದ ಪರಿವರ್ತನೆಗೆ ಸಹಾಯಕವಾದವು. ಈ ಪರಿವರ್ತನೆಯ ಆಗ್ರಹವನ್ನು ಬಿಗ್ಗಿಸಲು ನಮ್ಮ ಲೇಖಕರು ಪುರಾಣ ಮತ್ತು ಚರಿತ್ರೆಗಳನ್ನು ಮರುವ್ಯಾಖ್ಯಾನಕ್ಕೆ ಗುರಿಪಡಿಸಿದರು. ಮಹಾಭಾರತ, ರಾಮಾಯಣಗಳು ಕಾಲಕ್ರಮಕ್ಕನುಗುಣವಾಗಿ ಮರುಸೃಷ್ಟಿಯಾಗುತ್ತಿರುವುದು ಸಹಜವೆ ಆಗಿದೆ. ಮಹಾಭಾರತದ 'ಏಕಲವ್ಯ' ಪ್ರಸಂಗವು ಒಂದು ದೊಡ್ಡ ಪ್ರತೀಕವಾಗಿ ನಮ್ಮ ಲೇಖಕರಿಗೆ ಸಿಕ್ಕು ಪುನಃ ಪುನಃ ಸಾಂಸ್ಕೃತಿಕ ಆಗತ್ಯಗನುಗುಣವಾಗಿ ವಿಸ್ತರಿಸುತ್ತಲೇ ಬಂದಿದ್ದಾರೆ.

ಕರ್ಮತತ್ವದ ಮೂಲಕ ದರ್ಶನದ ನೆಲೆಯಲ್ಲಿ 'ಬೆರಳ್ ಗೆ ಕೊರಳ್' ನಾಟಕ ಸೃಷ್ಟಿಯಾಯಿತು. ಆರ್ಯ ಅನಾರ್ಯರ ಸುಸಂಬಂಧ 'ಏರ್ಪಡುವ ಆಗ್ರಹದಿಂದ' 'ಹೆಬ್ಬೆರಳು' ನಾಟಕ ರಚಿತವಾಯಿತು. ವರ್ಗ ಸಂಘರ್ಷದ ಹಿನ್ನೆಲೆಯಲ್ಲಿ ವಜ್ರಮುಟ್ಟಿಯವರ 'ಎಚ್ಚೆತ್ತ 'ಏಕಲವ್ಯ' ಹಾಗೂ ಸಿದ್ಧಲಿಂಗಯ್ಯನವರ 'ಏಕಲವ್ಯ' ನಾಟಕಗಳು ಬರೆಯಲ್ಪಟ್ಟಿವೆ. ಜ.ಹೊ.ನಾರಾಯಣಸ್ವಾಮಿಯವರ 'ಅದಮ್ಯ' ಕಾದಂಬರಿಯು ಇವೆಲ್ಲವುಗಳ ವಿಸ್ತೃತ ರೂಪದಲ್ಲಿ ಮೂಡಿ ಬಂದಿದೆ. ಪರಿವರ್ತನ ಶೀಲ ತತ್ವದ ಹಿನ್ನೆಲೆಯಲ್ಲಿ ಈ ಕಾದಂಬರಿಯನ್ನು ನೋಡಬಹುದಾಗಿದೆ.

' ಅದಮ್ಯ' ಕಾದಂಬರಿಯಲ್ಲಿ ಭೀಷ್ಮ, ದ್ರೋಣ, ಅರ್ಜುನ, 'ಏಕಲವ್ಯ ಮತ್ತು 'ಏಕಲವ್ಯನ ತಾಯಿ ಇವೇ ಪಾತ್ರಗಳು. ಪ್ರಾರಂಭದಲ್ಲಿಯೇ ಅರ್ಜುನ ಬೇಟೆಯಾಡಲು ಹೋಗುವುದಕ್ಕೆ ಅನುಮತಿಯನ್ನು ಬೇಡಲು ದ್ರೋಣನಲ್ಲಿಗೆ ಬರುತ್ತಾನೆ. ದ್ರೋಣನಿಗೆ, ಅವರ ಕಲಿಕೆಗೆ ಅಡ್ಡಿಯಾಗುವ ಬೇಟೆಯಾಡುವ ಹವ್ಯಾಸವನ್ನು ನೋಡಿ ಸಮ್ಮತಿಸುವುದಿಲ್ಲ. ಭೀಷ್ಮ, ದ್ರೋಣನಿಗೆ ಹೇಳಿ ಅನುಮತಿ ಕೊಡಿಸುತ್ತಾನೆ. ಇದರಿಂದ ದ್ರೋಣನಿಗೆ ವ್ಯಥೆಯಾಗುತ್ತದೆ. ಯಾವುದೋ ಒತ್ತಡಕ್ಕೆ ಒಳಗಾಗಿ ಕ್ಷತ್ರಿಯರ ಆಶ್ರಯದಲ್ಲಿದ್ದ ದ್ರೋಣನು ಭೀಷ್ಮನ ಮಾತು ಕೇಳಲೇ ಬೇಕಾಯ್ತು. ಬೇಟೆಗೆ ಹೋದ ಅರ್ಜುನ ಮರಳಿ ಬಂದಾಗ ಮುಖ ಸಣ್ಣದಾಗಿತ್ತು. ''ಏಕಿಷ್ಟು ಅಶಾಂತ ಚಿತ್ತನಾಗಿದ್ದೀಯೆ'' ಎಂದು ಕೇಳುತ್ತಾನೆ, ದ್ರೋಣ. ಬೇಟೆಗೆ ಹೋದಾಗ ನಾಯಿಗೆ 'ಏಕಲವ್ಯ ಹೊಡೆದ ಬಾಣಗಳು ಅವನ ಬಿಲ್ಜಾಣ್ಮೆಯನ್ನು ತೋರಿಸಿತ್ತು. ಅಪ್ರತಿಮ ಕೈಚಳಕ ಕಂಡ ಅರ್ಜುನನಿಗೆ ತನ್ನ ಸ್ವಾಭಿಮಾನಕ್ಕೆ ಧಕ್ಕೆ ತಂದ ಕಾರಣವೇ '' ಗುರುದೇವ, ನನ್ನನ್ನು ಮೀರಿಸಿದ ನಿಮ್ಮ ಶಿಷ್ಯ ಮತ್ತೊಬ್ಬನಿರಲು ಹೇಗೆ ಸಾಧ್ಯ? '' ಎಂಬ ಪ್ರಶ್ನಿಸುತ್ತಾನೆ. ಇದು ದ್ರೋಣರಿಗೂ ಒಡೆಯದ ಒಗಟಾಯಿತು.

'ಏಕಲವ್ಯ ದ್ರೋಣನಿಗೆ ಗೊತ್ತು. ನೆನೆಸಿಕೊಳ್ಳುತ್ತಾರೆ. ತನ್ನಲ್ಲಿಗೆ ಬಿಲ್ವಿದ್ಯೆ ಕಲಿಯಲು ಬಂದ ಪ್ರತಿಭಾವಂತ ಬೇಡರ ಹುಡುಗ. ಬೇಡನಿಗೆ ವಿದ್ಯೆ ನಿರಾಕರಿಸಿತ್ತು ಶಾಸ್ತ್ರ. ಆದ್ದರಿಂದ '' ನಿನಗೆ ವಿದ್ಯೆ ಹೇಳಿ ಕೊಡಲು ಆಗದು. 'ಏಕೆಂದು ಕೇಳಬೇಡ'' ಎಂದು ಹೇಳಿದ್ದ ಮಾತು ನೆನಪಿಗೆ ಬಂತು. ಆದರೂ ಬೇಡರ 'ಏಕಲವ್ಯ ಈಗ ಸಾಧಿಸಿದ್ದ ಸಾಧನೆ ಬಗ್ಗೆ ಹೆಮ್ಮೆ 'ಎನಿಸಿತು. '' ಸ್ವತಃ ಕಲಿಸುತ್ತಾ ಅನವರತ ಅಭ್ಯಾಸ ಮಾಡಿದರೂ ಅರ್ಜುನನು ಆದಿಯಾಗಿ ಈ ಅರಸು ಮಕ್ಕಳಿಗೆ ಸಿಗದ್ದು, ದಕ್ಕದ್ದು ನನ್ನಿಂದ ಬಹುದೂರವಿದ್ದು, ಆ ಎಲ್ಲವನ್ನೂ ತನ್ನದಾಗಿಸಿಕೊಂಡಿರುವ 'ಏಕಲವ್ಯನ ಬಗ್ಗೆ ಅವರಲ್ಲಿ ಹೆಚ್ಚಿನ ಪ್ರೀತಿ ಉಕ್ಕಿತು. ಅವನ ಆ ಯಶಸ್ಸಿಗೆ ಪ್ರಾಮಾಣಿಕತೆಯೇ ಪೂರಕವಾಗಿರಬೇಕು. ಪ್ರಾಮಾಣಿಕ ಹೃದಯಕ್ಕೆ ಪ್ರಕೃತಿ ತನಗೆತಾನೇ ತೆರೆಯುತ್ತದೆ. ತನ್ನದೆಲ್ಲವನ್ನೂ ಧಾರೆ ಎರೆಯುತ್ತದೆ. ಅದೇ ತಾನಾಗಿ ಬಿಡುತ್ತದೆ. ಪ್ರಕೃತಿಗೆ ಕಿಂಚಿತ್ತೂ ವಂಚನೆ ಇಲ್ಲ'' ದ್ರೋಣನ ಚಿಂತೆಗೆ ಕಾರಣ ತಾವೇ ಆಗಿದ್ದಾರೆ. ದ್ರೋಣ ತನ್ನ ಮಗ ಅಶ್ವತ್ಥಾಮನಿಗೆ ಬಿಲ್ವಿದ್ಯೆ ಕಲಿಸುವಾಗ ಯಾರಿಗೂ ಹೇಳದ ತಂತ್ರಗಳನ್ನು ಪುತ್ರ ವ್ಯಾಮೋಹಕ್ಕೆ ಒಳಗಾಗಿ ಹೇಳಿರುತ್ತಾನೆ. ಇದು ಅರ್ಜುನನಿಗೆ ಗೊತ್ತಾಗಿ, ತನ್ನ ಅವಮಾನ ಮುಚ್ಚಿಕೊಳ್ಳಲು '' ಅಸ್ತ್ರಚಾಲನೆಯ ಶ್ರೇಷ್ಠತೆಯ ತಂತ್ರಗಳನ್ನು ಇನ್ನು ಮುಂದೆ ನಿನಗೂ ಹೇಳಿ ಕೊಡುತ್ತೇನೆ'' ಎಂದು ನಿಭಾಯಿಸಿಕೊಂಡಿರುತ್ತಾನೆ. 'ಏಕಲವ್ಯನಿಂದ ಅರ್ಜುನನಿಗೆ ಜಗದ್ವಿಖ್ಯಾತ, ಅದ್ವಿತೀಯ,

ಅಪ್ರತಿಮ ಎಂಬ ಬಿರುದುಗಳಿಂದ ವಂಚಿತವಾದ ಕಾರಣ ದ್ರೋಣನೆ ಎಂದು ನಿರ್ಧರಿಸಿ, ಕೊಟ್ಟ ವಚನ ಹುಸಿಯಾಗದಂತೆ ನೋಡಿಕೊಳ್ಳುವ ಹೊಣೆಯನ್ನು ಗುರುವಿಗೆ ಹೊರಿಸುತ್ತಾನೆ. 'ಏಕಲವ್ಯನಲ್ಲಿಗೆ ಅರ್ಜುನ, ದ್ರೋಣರು ಹೋಗುತ್ತಾರೆ.' ದ್ರೋಣನಿಗೆ ಈ ಪ್ರಯಾಣ ಕುತೂಹಲ ತಂದಿದ್ದರೆ, ಅರ್ಜುನನಿಗೆ '' ನನಗಿಂತ ಸಮರ್ಥ ಎನ್ನದಂತೆ ಬಲಿಯಾಗಬೇಕು'' ಎಂಬ ಕಾರಣಕ್ಕಾಗಿ ಹೊರಟಿದ್ದಾನೆ. ದಟ್ಟಡವಿಯಲ್ಲಿ, ಕೊಳ್ಳಗಳಲ್ಲಿ ಹೊರಟ ದ್ರೋಣನಿಗೆ ಸಂತಸ ತಂದಿದ್ದರೆ, ಅರ್ಜುನನಿಗೆ ದುಗುಡ ತಂದಿತ್ತು. 'ಏಕಲವ್ಯ ಇವರನ್ನು ಕಂಡು ಧನ್ಯನಾದಂತೆ ಬರಮಾಡಿಕೊಳ್ಳುತ್ತಾನೆ. '' ನಾನು ನಿರೀಕ್ಷಿಸಿದ ಫಲ ಇಷ್ಟು ಅನಿರೀಕ್ಷಿತವಾಗಿ ನನ್ನದಾಗುತ್ತದೆಂದು ನಾನು ಎಣಿಸಿರಲಿಲ್ಲ'' ಎಂದು ಸಂತೋಷ ಪಡುತ್ತಾನೆ. ದ್ರೋಣರು '' ಅದಕ್ಕೆ ಕಾರಣ ಅರ್ಜುನ'' ಎಂದು ಹೇಳಿದಾಗ, '' ಈ ನನ್ನ ಸಹೋದರನಿಗೆ ನಾನು ಋಣಿ'' ಎಂದು ಅರ್ಜುನನಿಗೆ ನಮಸ್ಕಾರ ಮಾಡುತ್ತಾನೆ. ಇಬ್ಬರನ್ನು ಸತ್ಕರಿಸುತ್ತಾನೆ.

ಅರ್ಜುನನು 'ಏಕಲವ್ಯನನ್ನು ಕಂಡು ಅವನ ವಿನಯ, ಸೌಜನ್ಯ, ಪ್ರೀತಿಗೆ ಕರಗದೆ ಅಸಹನೆಯಿಂದಲೇ ವರ್ತಿಸತೊಡಗುತ್ತಾನೆ. 'ಏಕಲವ್ಯನ ಕುಟೀರದಲ್ಲಿ ದ್ರೋಣನ ವಿಗ್ರಹದ ಇತರ ಪ್ರಾಣಿಪ್ರತಿಮೆಗಳ ಮಧ್ಯ ಇರುವುದು ಕಂಡು ಸಿಟ್ಟಿಗೇಳುತ್ತಾನೆ. ಕೋಳಿ, ಡೇಗೆ, ಬಾವಲಿ, ಹುತ್ತ ಇತ್ಯಾದಿ ಹತ್ತಾರು ಪ್ರತಿಮೆಗಳ ನಡುವೆ ದ್ರೋಣನ ವಿಗ್ರಹ ಇರುವುದು ಅರ್ಜುನನ ಅಸಹನೆಗೆ ಕಾರಣವಾಗುತ್ತದೆ. '' ಪೂಜ್ಯರೆ, ಸಂಸ್ಕೃತಿ ಶೂನ್ಯರಾದ ಈ ಅನಾಗರಿಕರಿಗೆ ಸ್ಥಾನಮಾನದ, ಔಚಿತ್ಯದ ಪ್ರಜ್ಞೆಯೇ ಇಲ್ಲ. ನಿಮ್ಮನ್ನು ಗುರುವೆಂದು ಸ್ವೀಕರಿಸಿದ 'ಏಕಲವ್ಯ ನಿಮ್ಮ ಪ್ರತಿಮೆಯನ್ನು ಈ ಯಃಕಶ್ಚಿತ್ ಪ್ರತಿಮೆಗಳ ಸಾಲಿನಲ್ಲಿ ಜೋಡಿಸಿ ಅವಮಾನದ ಅಂಚಿಗೆ ತಳ್ಳಿದ್ದಾನೆ.'' ಎನ್ನುತ್ತಾನೆ. ಪ್ರತಿಮೆಗಳನ್ನು ಕಿತ್ತೆಸೆಯಲು ಹೋಗುತ್ತಾನೆ. '' ಕಲಕಿದ ನೀರು ಅಂಬರವನ್ನು ಪ್ರತಿಬಿಂಬಿಸಲಾರದೋ ಹಾಗೆ ದುಡುಕು ಮನಸ್ಸಿಗೆ ವಾಸ್ತವದ ಹೊಳಹು ಹೊಳೆಯುವುದಿಲ್ಲ'' ಎಂದು 'ಏಕಲವ್ಯನೇ ಸಮಾಧಾನ ಮಾಡುತ್ತಾನೆ. '' ಸೇವೆಗಾಗಿಯೇ ಹುಟ್ಟಿದ ಶೂದ್ರರಿಗೇಕೆ ವಿದ್ಯೆ'' ಎಂದು 'ಏಕಲವ್ಯ ಬಿಲ್ವಿದ್ಯೆ ಕಲಿಯಲು ದ್ರೋಣನಲ್ಲಿ ಹೋದಾಗ ಅರ್ಜುನ ಅಂದ ಮಾತನ್ನು ನೆನಪಿಸುತ್ತಾನೆ. 'ಏಕಲವ್ಯ ತನ್ನ ಕಾಡಿಗೆ ಮರಳಿದ್ದು '' ಕಾನನ ಕಣ್ಣಿದ್ದರೆ ಕಾಡೇ ಎಲ್ಲವನ್ನು ಕರುಣಿಸಿ ಕಲಿಸುತ್ತದೆ.'' ಎಂದು ತಾಯಿಯ ಮಾತಿನಿಂದ ಸಮಾಧಾನ ತಂದುಕೊಂಡದ್ದು, ಕಲಿಯಲು ಪಟ್ಟಪಾಡನ್ನು, [illegible] ಜೊತೆ ನಿರಂತರ ಅಭ್ಯಾಸದಿಂದ ಕಲಿತರೂ ಕರಗತವಾಗದೆ ಹೋದದ್ದನ್ನು, ಕೊನೆಗೆ ಸ್ವಾಭ್ಯಾಸದ ಜೊತೆಗೆ ಪ್ರಕೃತಿಯ ಭಾಗವೇ ಆದ, ಕೋಳಿ, ಡೇಗೆ, ಬಾವಲಿ ಪಕ್ಷಿಗಳ ಕ್ರಿಯೆಯಿಂದ ಪಾಠ ಕಲಿತದ್ದನ್ನು ಮನವರಿಕೆಮಾಡಿಕೊಡುತ್ತಾನೆ. ಅರ್ಜುನನಿಗೆ 'ಏಕಲವ್ಯನ ಶ್ರಮ, ಛಲದಿಂದ ಸಾಧಿಸಿದ ಬಿಲ್ವಿದ್ಯೆ

ಇವೆಲ್ಲವು ---- ಪರಿವರ್ತನೆಯನ್ನುಂಟು ಮಾಡ ತೊಡಗಿದವು. '' ನಾನು ಕಲಿತಲ್ಲದೆ ಯಾವುದೂ ತನ್ನ ವಶವಾಗುವುದಿಲ್ಲ. ಗುರು ನೆಪ ಮಾತ್ರ. ಎಲ್ಲಾ ಇಲ್ಲ. ನಾನು ನನ್ನ ಹೊಣೆಯನ್ನು, ವಚನ ಪರಿಪಾಲನೆಯ ನೆಪದಲ್ಲಿ ಅವರ ಹೆಗಲಿಗೇರಿಸಿದುದು ನನ್ನ ಅವನತಿಗೆ ಕಾರಣವಾಗಿದೆ''... ಎಂದುಕೊಳ್ಳುತ್ತಾನೆ. 'ಏಕಲವ್ಯನ ತಾಯಿ ಹಣ್ಣುಗಳನ್ನು, ಗೆಣಸನ್ನು, ಸವಿಜೇನನ್ನು ಎರಡು ಗಿಂಡಿಯ ತುಂಬ ಕರೆದ ನೊರೆಹಾಲನ್ನು ದೇವರಿಗೆ ನೈವೇದ್ಯ ನೀಡುವಂತೆ ನೀಡಿ ಸತ್ಕರಿಸುತ್ತಾಳೆ. ತಾಯಿಯ ಮಮತೆ ಕಾಣದ ದ್ರೋಣ 'ಏಕಲವ್ಯನ ತಾಯಿಯಿಂದ ತಾಯಿ ಪ್ರೇಮದ ಸಂವೇದನೆಯನ್ನನುಭವಿಸಿ ಮೂಕನಾದ. ತಾಯಿ-ಮಗನ ಪ್ರೀತಿ ಮಮತೆಯ ಮುಂದೆ ದ್ರೋಣ, ಅರ್ಜುನ ಸಣ್ಣವರಾಗುತ್ತಾ ಹೋಗುತ್ತಾರೆ. ಮೂಕರಾಗಿ ಅನುಭವಿಸುತ್ತ, ಪರಿವರ್ತನೆಯಾಗ ತೊಡಗುತ್ತಾರೆ. '' ನಾನು ದುಡುಕಿ ಎಂಥ ಅನಾಹುತಕ್ಕೆ ಕೈ ಹಾಕಿದ್ದೆ'' ಎಂದು ಅರ್ಜುನ ನೊಂದುಕೊಂಡ. ಕೋಳಿ, ಡೇಗೆ, ಬಾವಲಿ ಮುಂತಾದ ಪಕ್ಷಿಗಳ ಸಾಲಿನಲ್ಲಿದ್ದ 'ತನ್ನ ವಿಗ್ರಹವನ್ನು - ಕಂಡು '' ನನ್ನ ಈ ಪ್ರತಿಮೆ ಈ ಪೂಜ್ಯ ಪ್ರತಿಮೆಗಳ ನಡುವೆ ಇರಲು ಯಾವ ಅರ್ಹತೆಯನ್ನು ಪಡೆದಿಲ್ಲ. 'ಏಕಲವ್ಯನ ಪ್ರೀತಿಯೊಂದನ್ನುಳಿದು'' ಎಂದುಕೊಂಡ ದ್ರೋಣ ; ಕೊನೆಗೆ ಬಲಿ ತೆಗೆದುಕೊಳ್ಳಲು ಬಂದಿದ್ದ ದ್ರೋಣ, ಅರ್ಜುನರಿಬ್ಬರು 'ಏಕಲವ್ಯನ ದಿವ್ಯ ಪ್ರೇಮಕ್ಕೆ ಮಾರುಹೋಗಿ ಅವನಿಗೆ ಮನದಲ್ಲೇ ಮಣಿಯುತ್ತಾರೆ. ದ್ರೋಣನೇ ತನ್ನ ವಿಗ್ರಹ ಅಲ್ಲಿರಲು ಯೋಗ್ಯವಲ್ಲವೆಂದು ಅದನ್ನು ಹೊತ್ತು, ಇವರಿಬ್ಬರು ಅಲ್ಲಿಂದ ಹೊರಟುಹೋಗುತ್ತಾರೆ.

'ಅದಮ್ಯ' ಕಾದಂಬರಿಯಲ್ಲಿ 'ಏಕಲವ್ಯನ ಉದಾತ್ತ, ವ್ಯಕ್ತಿತ್ವವನ್ನು ಕಾಣಬಹುದು. ನಾರಾಯಣಸ್ವಾಮಿಯವರು ಕುವೆಂಪು, ಗೋವಿಂದಪೈ, ಕೈಲಾಸಂ, ವಜ್ರಮಟ್ಟಿ, ಸಿದ್ಧಲಿಂಗಯ್ಯ ಇವರೆಲ್ಲರು ಚಿತ್ರಿಸಿದ 'ಏಕಲವ್ಯನಿಗಿಂತ ಭಿನ್ನವಾಗಿ ಚಿತ್ರಿಸಿದ್ದಾರೆ. ಆಯ 'ಅದಮ್ಯ'ದ ದೃಷ್ಟಿಯಿಂದಲೂ ಪ್ರತ್ಯೇಕವಾಗಿಯೇ ನಿಲ್ಲುತ್ತದೆ. ಕಾದಂಬರಿಕಾರರು ಪ್ರಾರಂಭದಲ್ಲಿ ('ಈ ಕೃತಿ' ಯಲ್ಲಿ) '' ಕುವೆಂಪು ಅವರನ್ನುಳಿದು ಜ್ಞಾನಪೀಠ ಪ್ರಶಸ್ತಿ ವಿಜೇತರಾದಿಯಾಗಿ ಯಾವ ಸಾಹಿತಿಯೂ ಈ ದೇಶವನ್ನು ಕಿತ್ತು ತಿನ್ನುತ್ತಿರುವ ವರ್ಣವ್ಯವಸ್ಥೆಯ ಕಳಂಕ ತೊಡೆಯಲು ಕೈಹಚ್ಚಿದವರಲ್ಲ. ಕುವೆಂಪು ಮಾತ್ರ 'ಶೂದ್ರ ತಪಸ್ವಿ' ನಾಟಕದಲ್ಲಿ ತ್ರೇತಾಯುಗದ ಶೂದ್ರ ಶಂಬೂಕನ ಕೊರಳನ್ನು ಉಳಿಸಿ ವರ್ಣವ್ಯವಸ್ಥೆಯ ವಿಷದ ಹಲ್ಲನ್ನು ಕಿತ್ತು ಜ್ಞಾನದ ಬೆಳಕಿತ್ತರು. ಆದರೆ 'ಬೆರಳ್ — ಗೆ — ಕೊರಳ್' ನಾಟಕದಲ್ಲಿ ಗುರು, ಕರ್ಮ, ಯುದ್ಧತತ್ವಗಳನ್ನು ಸಮರ್ಥವಾಗಿ ಧ್ವನಿಸಿದ್ದರೂ ದ್ವಾಪರದ 'ಏಕಲವ್ಯನ ಬೆರಳನ್ನು ಉಳಿಸುವಲ್ಲಿ ಅವರೂ ಯಶಸ್ವಿಯಾಗಲಿಲ್ಲ'' ಎಂದು ಹೇಳಿದ್ದಾರೆ.

ಇದುವರೆಗೆ ಪರಿಶೀಲಿಸಿದ ಎಲ್ಲ ಕೃತಿಗಳಲ್ಲಿ 'ಏಕಲವ್ಯನ ಬೆರಳು ಗುರುದಕ್ಷಿಣೆಯಾಗಿ ಕತ್ತರಿಸಲಾಗಿದೆ. 'ಅದಮ್ಯ' ದಲ್ಲಿ ಹೆಬ್ಬೆರಳು ಉಳಿಸಿದೆ. 'ಅದಮ್ಯ' ಕೃತಿ ಬಿಟ್ಟು ಉಳಿದೆಲ್ಲ ಕೃತಿಗಳಲ್ಲಿ ಬರುವ ಇತರ ಪಾತ್ರಗಳು 'ಏಕಲವ್ಯನನ್ನು ಬಿಟ್ಟು ಬೇರೆ ಬೇರೆ ಕಾರಣಗಳಿಂದ

ಕಪ್ಪು – ಬಿಳುಪಿನ ಪಾತ್ರಗಳಾಗಿವೆ. ಆದರೆ 'ಅದಮ್ಯ' ಕಾದಂಬರಿಯಲ್ಲಿ ಬರುವ ಎಲ್ಲ ಪಾತ್ರಗಳು ಪರಿವರ್ತನಶೀಲವಾಗುತ್ತವೆ. ಈ ಕಾರಣದಿಂದಲೇ ಇಲ್ಲಿ 'ಏಕಲವ್ಯನ ಬೆರಳನ್ನು ಅರ್ಜುನನಾಗಲಿ, ಅರ್ಜುನನ ಕಾರಣಕ್ಕೆ ದ್ರೋಣನಾಗಲಿ ಗುರುದಕ್ಷಿಣೆಯ ನೆಪದಲ್ಲಿ ಕತ್ತರಿಸಿ ಕೊಳ್ಳುವುದಿಲ್ಲ. ದ್ರೋಣನಲ್ಲಿಗೆ ಬಿಲ್ವಿದ್ಯೆ ಕಲಿಯಲು ಬಂದ 'ಏಕಲವ್ಯನನ್ನು ಕಂಡು, "ಶೂದ್ರರು ವಿದ್ಯೆಕಲಿಯುವುದು, ಅವರಿಗೆ ವಿದ್ಯೆ ಕಲಿಸುವುದು ಈ ಎರಡೂ ಶಾಸ್ತ್ರ ವಿರುದ್ಧ" ಎಂದ ಅರ್ಜುನ, ಮುಂದೆ 'ಏಕಲವ್ಯನ ಬಿಲ್ವಿದ್ಯೆಯಲ್ಲಿ ತನ್ನ ಸಾಮರ್ಥ್ಯ ತೋರಿಸಿದಾಗ ಇನ್ನಷ್ಟು ಕರುಬುತ್ತಾನೆ. ಅಷ್ಟೇ ಅಲ್ಲ ಅವನ ಬಿಲ್ವಿದ್ಯೆ, ತನ್ನ ಶಕ್ತಿ ಗಿಂತ ಕಡಿಮೆಯಾಗಲೇಬೇಕೆಂಬ ಹಠದಿಂದಲೇ ದ್ರೋಣನನ್ನು 'ಏಕಲವ್ಯನಲ್ಲಿಗೆ ಕರೆ ತರು ತ್ತಾನೆ. ಆದರೆ 'ಏಕಲವ್ಯ ಪ್ರಕೃತಿಯೊಳಗೊಂದಾಗಿ ಚರಾಚರ ಜೀವಿಗಳಿಂದಲೇ ಅವನು ಬಿಲ್ವಿ ದ್ಯೆ ಕಲಿತದ್ದುಕಂಡು, ಅದಕ್ಕಿಂತಲೂ ಅವನ ಅಪಾರ ಪ್ರೇಮ ಕಂಡು, "ನಾನು ದುಡುಕಿ ಎಂಥ ಅನಾಹುತಕ್ಕೆ ಕೈ ಹಾಕಿದ್ದೆ" ಎಂದು ಪಶ್ಚಾತ್ತಾಪ ಪಡುತ್ತಾನೆ; "'ಏಕಲವ್ಯ ಎಂದರೆ ತನ್ನಿಂದ ತಾನೆ ಪಡೆಯಬಹುದಾದ ಶಕ್ತಿಯ ಸಂಕೇತ. ಎಲ್ಲರ ಪಾಲಿನ ಗುರು. ಇವನ ಸಾನ್ನಿಧ್ಯ ಸಾರ್ಥಕ" ಎಂದು ಹೆಮ್ಮೆ ಪಡುತ್ತಾನೆ.

ದ್ರೋಣನು 'ಏಕಲವ್ಯನಿಂದ ಪರಿವರ್ತನೆಗೊಳ್ಳುತ್ತಾನೆ. ಹಿಂದೆ ವಿದ್ಯೆ ಕಲಿಸೆಂದು ಬಂದಾಗ ಕಲಿ ಸಲು ಹೆದರುತ್ತಾನೆ. ಅದಕ್ಕೆ ಕಾರಣ, ಯಾವುದೋ ಹಂಗಿಗೆ ಒಳಗಾಗಿ ಕ್ಷತ್ರಿಯರಲ್ಲಿ ಬಂದು ದ್ರೋಣ ನೆಲಸಿ, 'ಅರ್ಜುನನಿಗೆ ಲೋಕೋತ್ತರ ಧನುರ್ಧಾರಿಯನ್ನಾಗಿ ಮಾಡು ವೆ' – ಎಂದು ಮಾತು ಕೊಟ್ಟಿದ್ದರೂ ಹಾಗೆ ಅವರು ನಡೆದುಕೊಳ್ಳಲಿಲ್ಲ. "ನಾನೆಷ್ಟು ಪ್ರಾಮಾಣಿಕ ಎಂದು ನನಗೆ ಕಸಿವಿಸಿಯಾಗುತ್ತದೆ: ಲೋಕ ಎಷ್ಟೇ ಎತ್ತರದಲ್ಲಿ ಪಾಡಿ ಹೊಗಳಲಿ, ಅದರ ವಿಕಲ್ಪಗಳು 'ಏನೇ ಆಗಿರಲಿ, ನಾನು ಗುರು ಎಂದು ಕರೆಸಿಕೊಳ್ಳುವ ಆ

ಪವಿತ್ರ ಪದವಿಯ ಪಾವಿತ್ರ್ಯವನ್ನು ನನ್ನ ಅಂತರಂಗದಲ್ಲಿ ಆತ್ಮಸಾಕ್ಷಿಯಾಗಿ ಕಾಪಾಡಿ ಕೊಂಡು ಬಂದಿದ್ದೇನೆಯೆ? ಪುತ್ರ ವ್ಯಾಮೋಹದಿಂದ ಅಶ್ವತ್ಥಾಮನಿಗೆ ಹೆಚ್ಚಿನ ಮನ್ನಣೆ ನೀಡಲಿಲ್ಲವೆ?" ಎಂದು ದ್ರೋಣ ತನ್ನನ್ನೇ ಕೇಳಿಕೊಳ್ಳುತ್ತಾನೆ. ಪುತ್ರ ವ್ಯಾಮೋಹ ದಿಂದ ಎಲ್ಲ ಶಿಷ್ಯರಿಗಿಂತ ಹೆಚ್ಚಿನ ಮಂತ್ರಗಾರಿಕೆಯನ್ನು ಬಿಲ್ವಿದ್ಯೆಯಲ್ಲಿ ಅಶ್ವತ್ಥಾಮನಿಗೆ ಹೇಳಿಕೊಟ್ಟಿರುವ ಪ್ರಸ್ತಾಪ 'ಪರ್ವ' ಕಾದಂಬರಿಯಲ್ಲಿಯೂ ಬರುತ್ತದೆ. ದ್ರೋಣ 'ಏಕಲವ್ಯನಲ್ಲಿಗೆ ಅರ್ಜುನನ ಜತೆ ಹೋಗುವಾಗ, "ಅರ್ಜುನ, ಈ ನಮ್ಮ ಪಯಣದ ಗುರಿ 'ಏನು?" ಎಂದು ಕೇಳುತ್ತಾನೆ. "ನಿಮ್ಮ ವಚನ ಪರಿಪಾಲನೆ.... ನನಗಿಂತ ಸಮರ್ಥ ಎನ್ನದಂತೆ ಬಲಿಯಾಗಬೇಕು" ಎಂದ ಅರ್ಜುನನ ಮಾತನ್ನು [illegible] ಹೊರಡುತ್ತಾನೆ. 'ಏಕಲವ್ಯ ಅನೇಕ ಪಕ್ಷಿಗಳ ಪ್ರತಿಮೆಗಳ ಜತೆ ದ್ರೋಣನ ಪ್ರತಿಮೆ ನಿಲ್ಲಿಸಿರುತ್ತಾನೆ. ಅದನ್ನು ಕಂಡು ಅರ್ಜುನ ಕೋಪಗೊಂಡಾಗ, 'ಏಕಲವ್ಯ ಆ ಪಕ್ಷಿಗಳ ಸಾಮರ್ಥ್ಯವನ್ನು ಅನುಸರಿಸಿ ಯೇ ನಾನು ಬಿಲ್ವಿದ್ಯೆ ಕಲಿತದ್ದೆಂದು ಮಾರ್ಮಿಕವಾಗಿ ನಿರೂಪಿಸುತ್ತಾನೆ. ದ್ರೋಣನಿಗೆ

ನಾಚಿಕೆಯಾಗುತ್ತದೆ. ತನ್ನ ಬಗ್ಗೆ ತನಗೆ ಹೇಸಿಕೆ ಎನಿಸುತ್ತದೆ. '' ಕಲಿತ ವಿದ್ಯೆಯನ್ನು ಪೂರ್ಣವಾಗಿ ಕಲಿಸಿದರೆ ಕ್ಷತ್ರಿಯರು ಪ್ರಬಲಗೊಂಡು ಎಲ್ಲಿ ನನ್ನ ಸ್ಥಾನ ಗೌರವಕ್ಕೆ ಚ್ಯುತಿ ಬಂದೀತೋ ಎಂಬ ಶಂಕೆ, 'ಏಕಲವ್ಯನಿಗೆ ವಿದ್ಯೆ ನಿರಾಕರಿಸುವಲ್ಲಿ ಇದ್ದ ಇದೇ ಭಾವನೆಯನ್ನು ಜಾತಿ ಕವಚದಲ್ಲಿ ತೊಡೆದು ಹಾಕಿದ್ದು; ಈ ಎಲ್ಲಕ್ಕೂ ಒಂದೇ ಮೂಲ ಸ್ವಾರ್ಥ. ಈ ಸ್ವಾರ್ಥವನ್ನು ಮೀರಿ 'ಏಕಲವ್ಯನ ಬಗ್ಗೆ ಒಲವು ಉಕ್ಕಿತ್ತು, ನಿಜ. ನನ್ನಲ್ಲಿ ಒಲವು ಉಕ್ಕಲು ಅವನಲ್ಲಿ ಮನೆ ಮಾಡಿಕೊಂಡಿದ್ದ ನಿಷ್ಕಳಂಕ ಹೃದಯ. ನಿರ್ಮಲ ಪ್ರೀತಿಗಳೇ ಕಾರಣ. ಆ ನನ್ನ ಒಲವು ಅವನ ಭಾಗಕ್ಕೆ ಹೊನಲಾಗಿ ಹರಿವ ಬದಲು ಕತ್ತಲಾಗಿ ಕವಿಯಲು ಕಾರಣನಾದೆ. ಅದಕ್ಕೆ ಕಾರಣವಾದ ನನ್ನ ಹೃದಯದ ಹೀನತೆಗೆ ಧಿಕ್ಕಾರ. '' ಎಂದು ಪಶ್ಚಾತ್ತಾಪ ಪಡುತ್ತಾನೆ. ದ್ರೋಣನು ತನ್ನ ಹುಟ್ಟಿನ ಬಗ್ಗೆ ಕೂಡ ಜಿಗುಪ್ಸೆ ಪಡುತ್ತಾನೆ. 'ಏಕಲವ್ಯನ ತಾಯಿ, ಮಗನಿಗೆ ವಿದ್ಯೆಯನ್ನು ಕಲಿಸಲು ನಿರಾಕರಿಸಿದ ದ್ರೋಣನ ಮೇಲೆ ಕ್ರೋಧಗೊಳ್ಳದೆ ಪ್ರೀತಿಯಿಂದ ಸತ್ಕರಿಸಿದಾಗ ದ್ರೋಣನ ಹೃದಯ ತುಂಬಿಬರುತ್ತದೆ. '' ದ್ರೋಣ ಬಾಂಡ ಹೆತ್ತದ್ದು ದ್ರೋಣರನ್ನಲ್ಲ, ತಾಯಿ ಇಲ್ಲದ ತಬ್ಬಲಿಯನ್ನು ತಬ್ಬಲಿತನವನ್ನು, ಹುಟ್ಟುವ ಮಗು ' ಅಮ್ಮ ' ' ಅಪ್ಪ ' ಅನ್ನುವ ಅವಕಾಶವನ್ನು ಪಡೆದು ಬಂದಿದ್ದರೆ. ಆ ಪುಣ್ಯವಾ ನನಗಿಲ್ಲವಾಯ್ತು. ಜೀವನದಲ್ಲಿ 'ಅಮ್ಮ' ಅನ್ನುವ ಅವಕಾಶವೆ ಇಲ್ಲದೆ ಹುಟ್ಟಿದ ನತದೃಷ್ಟ ತಬ್ಬಲಿ ''. ಆ ತಬ್ಬಲಿತನವನ್ನು ಕ್ಷಣಕಾಲವಾದರೂ ನೀಗಿ ತಾಯ್ತನವನ್ನು ನೀಡಿದ ಅಬ್ಬೆಗೆ ಮನದಲ್ಲೇ ವಂದಿಸಿದನು. ದ್ರೋಣ ಕೊನೆಗೆ 'ಏಕಲವ್ಯನ ಬೆರಳನ್ನು ಕೇಳುವುದಕ್ಕೆ ಮನಸ್ಸು ಮಾಡಲಿಲ್ಲ. ಬದಲಾಗಿ, '' ನನ್ನ ಈ ಪ್ರತಿಮೆ ಈ ಪೂಜ್ಯ ಪ್ರತಿಮೆಗಳ ನಡುವೆ ಇರಲು ಯಾವ ಅರ್ಹತೆಯನ್ನೂ ಪಡೆದಿಲ್ಲ '' ಎಂದು ನಿರ್ಧರಿಸಿ ಅಲ್ಲಿಂದ ತನ್ನ ಪ್ರತಿಮೆಯನ್ನು ಹೊತ್ತುಕೊಂಡು ಬರುತ್ತಾನೆ.

ಇಲ್ಲಿ 'ಏಕಲವ್ಯ ವಿಶೇಷವಾದ ರೀತಿಯಲ್ಲಿ ಚಿತ್ರಿತನಾಗಿದ್ದಾನೆ. ತುಂಬಿದ ನದಿಯ ಶಾಂತ, ಗಂಭೀರದಂತಹ ವ್ಯಕ್ತಿತ್ವವುಳ್ಳವನಾಗಿದ್ದಾನೆ. ದ್ರೋಣನು ವಿದ್ಯೆ ಕಲಿಸಲು ನಿರಾಕರಿಸಿದಾಗ ವ್ಯಥೆಯಿಂದ ತನ್ನ ಕಾಡಿಗೆ ಬರುತ್ತಾನೆ. ಪ್ರಕೃತಿಯ ಜೊತೆ ಬೆಳೆದ 'ಏಕಲವ್ಯನಿಗೆ ಪ್ರಕೃತಿಯೇ ಬಿಲ್ವಿದ್ಯೆಯನ್ನು ಕಲಿಸುತ್ತದೆ. ಮುಟ್ಟಿದ ಕ್ಷಣ ಮುದುರುವ ' ಮುಟ್ಟಿದರೆ ಮುನಿ ' ಎಂಬ ಬಳ್ಳಿ ಪುನಃ ಅರಳಿ ನಿಲ್ಲುವುದನ್ನು ಕಂಡು ತಾನು ಜಾಗೃತಗೊಳ್ಳುತ್ತಾನೆ. ಬಿಲ್ವಿದ್ಯೆ ಕಲಿಯಲು ದ್ರೋಣ ಪ್ರತಿಮೆಯನ್ನು ಮಾಡಿ ಕಲಿಯಲು ನಿಯಾಗಲೂ ಸಾಧ್ಯವಾಗುವುದಿಲ್ಲ. ಕೋಳಿಯನ್ನು ನೋಡುತ್ತಾನೆ. ಅದು ತನ್ನ ಮರಿಗಳನ್ನು ವೈರಿಗಳಿಂದ ಪ್ರಾಣ ಒತ್ತೆಯಿಟ್ಟು ರಕ್ಷಿಸುತ್ತದೆ. ಆದರೆ ಮರಿಗಳು ದೊಡ್ಡವಾದರೆ ಸಾಕು ಹತ್ತಿರ ಕರೆದುಕೊಳ್ಳುವುದಿಲ್ಲ. '' ಯಾವ ಜೀವವೇ ಆಗಲಿ ತನ್ನ ಕಾಲಮೇಲೆ ತಾನು ನಿಲ್ಲದೆ, ಮತ್ತೊಬ್ಬರ ಆಶ್ರಯದ ನೆರಳಿನಿಂದ ವ್ಯಕ್ತವಾಗದೆ, ಪೂರ್ಣ ಸ್ವಾತಂತ್ರ್ಯವನ್ನು

ಪಡೆದುಕೊಂಡಲ್ಲದೆ ತನ್ನ ವಿಶ್ವವನ್ನು ತಾನು ಕಾಣಲು ಸಾಧ್ಯವಿಲ್ಲ'' ಎಂದು ಪಾಠ ಕಲಿಯುತ್ತಾನೆ. ಬಿಲ್ವಿದ್ಯೆ ಅಭ್ಯಸಿಸುವಾಗ 'ಏಕಲವ್ಯನಿಗೆ ಸೂಕ್ಷ್ಮತೆಯನ್ನು ದಕ್ಕಿಸಿ ಕೊಟ್ಟಿದ್ದು ಡೇಗೆ ಹಕ್ಕಿ. ಆಕಾಶದ ಮೇಲಿರುವ ಅದು ಕೆಳಗೆ ಬೇಟೆ ಕಂಡರೆ ಸಾಕು ಪ್ರತಿಮೆಯಂತೆ ಸ್ತಬ್ಧವಾಗಿ ನಿಂತು ಗುರಿ ಖಚಿತಕ್ಕೆ ಬಂದಾಗ ತಕ್ಷಣ ಕೆಳಗೆ ಇಳಿದು ಬೇಟೆಯನ್ನು

ಎತ್ತಿಕೊಂಡು ಹೋಗುವ ಅದರ ಕ್ರಿಯೆ 'ಏಕಲವ್ಯನಿಗೆ ಪಾಠವಾಗುತ್ತದೆ. '' ಗುರಿ ಖಚಿತಕ್ಕೆ ದಕ್ಕುವವರೆಗೆ ಮೈ – ಮನವನ್ನು ಸಂಯೋಜಿಸಬೇಕು. ಖಚಿತ ಸಿಕ್ಕಿದಾಗ ಎಲ್ಲವನ್ನೂ ಮರೆತು ಪ್ರತಿಮೆಯಂತೆ ಅಚಲವಾಗಿ ನಿಲ್ಲಬೇಕು. ಇಟ್ಟ ಗುರಿ ಮತ್ತು ತಾನು ಈ ಎರಡೇ ಇದಿರಾದಂತೆ, ಮತ್ತಾವುದೂ ಮಧ್ಯ ಇರದಂತೆ, ಬರದಂತೆ, ಅವರೊಳಗೆ ಹೊಕ್ಕೂ ಅದು ಪೂರ್ಣವಾಗಿ ಆವರಿಸಿ ಒಂದಾಗುವಂತೆ. ನಂತರ ವೇಗ. ಗುರಿ ಮುಟ್ಟಲು ಅತಿ ಮುಖ್ಯವಾಗಿ ಬೇಕಾದ್ದು'' ಎಂದು ಅರಿತು, ಸಾಧನೆ ಮಾಡಿ ಗುರಿ ಕಲಿಯುತ್ತಾನೆ. 'ಏಕಲವ್ಯನ ಸಾಮರ್ಥ್ಯ ಅವನು ಸಿದ್ಧಿಸಿಕೊಂಡದ್ದು ಶಬ್ದವೇಧಿ ಬಿಲ್ವಿದ್ಯೆಯಿಂದಲೇ. ಅರ್ಜುನನ ಅಸೂಯೆಗೆ ಕಾರಣವಾದದ್ದು ಇದೇ. 'ಶಬ್ದವೇಧಿ' ಯನ್ನು ಅವನು ಬಾವಲಿ ಪಕ್ಷಿಯ ಚಲನವಲನ ಗ್ರಹಿಸಿ ಅದರಂತೆ ಪ್ರಯತ್ನಿಸಿ ಕರಗತಮಾಡಿಕೊಂಡದ್ದು; ದ್ರೋಣ, ಅರ್ಜುನರಿಬ್ಬರಿಗೂ ಹೇಳುತ್ತಾನೆ: '' ಬಾವಲಿಯ ಕಣ್ಣುಗಳು ಮಂದ, ಆದರೂ ಅದು ಕಾಣುವುದು ಕಿವಿಗಳಿಂದ, ಅದು ಬಾಯಿ ಮತ್ತು ಮೂಗಿನ ಹೊಳ್ಳೆಗಳಿಂದ ಅಸಂಖ್ಯಾತ ಅಪೂರ್ಣಾಂಕಗಳನ್ನುಳ್ಳ ಧ್ವನಿಸ್ಪಂದನಗಳನ್ನು ಹೊರಡಿಸಿ ಪ್ರತಿ ವಸ್ತುವಿನಿಂದ ಉಂಟಾಗುವ ಪ್ರತಿಧ್ವನಿಯನ್ನು ಅದು ಎಷ್ಟೇ ಸೂಕ್ಷ್ಮವಾದರೂ ವಿಶೇಷವಾಗಿ ರೂಪುಗೊಂಡಿರುವ ತನ್ನ ಕಿವಿಗಳಿಂದ ಸೆರೆಹಿಡಿದು ಪ್ರತಿಧ್ವನಿಗೈದ ವಸ್ತುವಿನ ದೂರ, ಗಾತ್ರ, ಆಕಾರ ಮತ್ತು ವೇಗವನ್ನು ನಿಖರವಾಗಿ ಗ್ರಹಿಸುವ ಅಪೂರ್ವ ಶಕ್ತಿಯುಳ್ಳದ್ದು. ಶಬ್ದತರಂಗಗಳಿಂದ ಬಹುದೂರದಲ್ಲಿರುವ ವಸ್ತುವನ್ನು ಗ್ರಹಿಸಿ ಹಿಡಿಯಬಲ್ಲ ಅದರ ಸೂಕ್ಷ್ಮತೆಗೆ ಬೆರಗಾಗಿ ಅದನ್ನು ಕುರಿತು ಅನವರತ ಅಧ್ಯಯನಮಾಡಿದೆ. ; 'ಏಕಲವ್ಯ ಪ್ರಕೃತಿಯಲ್ಲಿರುವ ಅನೇಕ ಜೀವಿಗಳಿಂದಲೇ ಬಿಲ್ವಿದ್ಯೆಯನ್ನು ಕಲಿತ ಎಂಬುದು ಈ ಕಾದಂಬರಿಯಲ್ಲಿ ನಿರೂಪಿತವಾಗಿರುವುದು ಒಂದು ವಿಶೇಷ. ವಿದ್ಯೆಯನ್ನು ಸಾಂಪ್ರದಾಯಿಕವಾಗಿ ಗುರುಕುಲದಲ್ಲಿ ಕಲಿಯುವ ರೀತಿಗಿಂತ, ಪ್ರಕೃತಿಯ ಮಧ್ಯವಿದ್ದು, ಪ್ರಕೃತಿಯೊಳಗೊಂದಾಗಿ, ಪ್ರಕೃತಿಯಿಂದಲೇ ಕಲಿಯುವುದು ಸಹಜವಾದುದಷ್ಟೇ ಅಲ್ಲ. ಇದು 'ಏಕಲವ್ಯನ ಸಂದರ್ಭದಲ್ಲಿ ('ಅದಮ್ಯ' ಕೃತಿಯ ನೆಲೆಯಲ್ಲಿ) ಪ್ರತಿ ಸಾಂಸ್ಕೃತಿಕ ಸಂಕಥನೆಯಾಗಿದೆ. ಕೇವಲ ದ್ರೋಣ ಪ್ರತಿಮೆ ಮಾಡಿ ನಿಲ್ಲಿಸಿ ಬಿಲ್ವಿದ್ಯೆಯನ್ನು ಅದರ ಸಾಕ್ಷಿಯಲ್ಲಿ ಕಲಿತ ಎಂಬುದು ಎಲ್ಲ ಕೃತಿಗಳಲ್ಲಿ ವ್ಯಕ್ತವಾದರೆ, 'ಅದಮ್ಯ' ಕಾದಂಬರಿಯಲ್ಲಿ ದ್ರೋಣನ ಪ್ರತಿಮೆಯ ಜೊತೆ ಏಕಲವ್ಯ ಡೇಗೆ, ಕೋಳಿ , ಗಿಡುಗ, ಬಾವಲಿ ಮುಂತಾದ ಪಕ್ಷಿಗಳ ಪ್ರತಿಮೆಯನ್ನೂ ನಿಲ್ಲಿಸಿದ್ದ.

ಪ್ರಕೃತಿಯಲ್ಲಿ ಅನೇಕ ನಿಗೂಢಗಳು ಅಡಗಿವೆ. ಅವುಗಳ ಅಂತರಂಗ ಅರಿತುಕೊಂಡರೆ ಮನುಷ್ಯನಿಗೆ ಬೇಕಾದುದೆಲ್ಲ ಪ್ರಕೃತಿಯಿಂದ ಪಡೆಯಬಹುದು. ಅವನಿಗೆ ಸೂಕ್ಷ್ಮಗ್ರಹಿಸುವ, ಪ್ರಕೃತಿಯೊಳಗೆ ಒಂದಾಗುವ ಗುಣ ತಿಳಿಯಬೇಕಾಗುತ್ತದೆ ಎಂಬುದನ್ನು 'ಏಕಲವ್ಯ ಸಾಧಿಸಿಕೊಂಡು, ಅನುಭವದಿಂದ ವ್ಯಕ್ತಪಡಿಸಿದ್ದಾನೆ. ''ಈ ಮರ..... ಪ್ರಕೃತಿಯ ಶಿಶು, ಪ್ರತೀಕ. ಸ್ವಾರ್ಥಕ್ಕಲ್ಲದ, ಕೇವಲ ಪರಾರ್ಥಕ್ಕೆ ಇದರ ಇರುವಿಕೆ. ನಿರಂತರ ತ್ಯಾಗ ಅದರ ಅಂತರಂಗ. ಕೊಂಬೆ ಕಡಿದರೂ ಕೋಪಿಸಿಕೊಳ್ಳುವುದಿಲ್ಲ. ಬೇರನ್ನು ಬಳಿಗೊಂಡರೂ ಬಯ್ಯುವುದಿಲ್ಲ. ಯಾರಿಂದಲೂ ಏನೊಂದನ್ನೂ ಕೇಳುವುದಿಲ್ಲ. ಪ್ರಕೃತಿಯನ್ನು ಪೂರ್ಣವಾಗಿ ನಂಬಿದೆ. ಧ್ಯಾನಸ್ಥವಾಗಿ ಪ್ರಕೃತಿಯೊಂದಿಗೆ ಒಂದಾಗಿರುತ್ತದೆ. ಪ್ರಕೃತಿ ಕೊಟ್ಟುದನ್ನು ಹೊಟ್ಟೆಗೆ ಇಟ್ಟುಕೊಂಡು ಪುಷ್ಪವೆಂಬ ಫಲಬಿಟ್ಟು ನಿಲ್ಲುತ್ತದೆ, ತನಗಾಗಿ ಅಲ್ಲ — ಪರರಿಗಾಗಿ; ಕೊಂಬೆಯನ್ನು, ಬೇರನ್ನು ಕಡಿಸಿಕೊಂಡರೂ, ನೋವಿನಿಂದ ನಲುಗಿದರೂ, ಒಡಲ ಒಲವನ್ನು ಫಲಬಿಟ್ಟು ಧಾರೆ ಎರೆಯುತ್ತದೆ. ಆ . . ಪರಾರ್ಥದ ಸಾರ್ಥಕತೆಯಿಂದ ಜೀವನ ಪಾವನ ಮಾಡಿಕೊಳ್ಳುತ್ತದೆ. ಆದರೆ ಮನುಷ್ಯ? ತಾಯಿಯಂತ ಕರುಳಿನ ಈ ಪ್ರಕೃತಿಯನ್ನು ಅರಿಯುವುದಿಲ್ಲ. ತಾನು, ತನಗೆ, ತನ್ನದು, ತನ್ನಿಂದಲೇ ಎಲ್ಲಾ ಎಂಬ ಅಹಂಕಾರ. ಇದೇ ಅವನ ನಾಶದ ಮೂಲ''. ಎಂದು 'ಏಕಲವ್ಯನು ಗುರು ದ್ರೋಣನಿಗೆ, ಅರ್ಜುನನಿಗೆ ಹೇಳುತ್ತಾನೆ.

ಇಂತಹ ಮಾತುಗಳು ಕಾದಂಬರಿಯಲ್ಲಿ ಕೆಲವು ಕಡೆ ಬರುತ್ತವೆ. ಇವು ಯಾರಿಗಾ ಗೊತ್ತಿರುವ ವಿಷಯವೇ? ಇದನ್ನು ಕೇಳಿಸಿಕೊಂಡು ಪೆಚ್ಚುಕೊಳ್ಳುವ ದ್ರೋಣ ಎಷ್ಟು ಬಾಲಿಶ ಇರಬೇಕು ಎನಿಸುತ್ತದೆ. ಇದಕ್ಕೂ 'ಏಕಲವ್ಯನು ಅನುಭವಿಸಿದ ಅನುಭವದ ಮಾತುಗಳು ಪುಟಗಟ್ಟಲೇ ಬರೆದಿರುವುದರಿಂದ ಕಾದಂಬರಿಯಲ್ಲಿ ಕ್ರಿಯೆಯಿಲ್ಲದಂತಾಗಿದೆ. ಒಮ್ಮೊಮ್ಮೆ ಏನು [illegible] ಹೇಳುತ್ತಾರೆ, ಯಾರು ಕೇಳುತ್ತಾರೆ ಎಂಬುದೇ ತಿಳಿಯುವುದಿಲ್ಲ. 'ಏಕಲವ್ಯನ ಪ್ರಾಮಾಣಿಕತೆಗೆ ಬೆರಗಾಗಿ ಮೂಕರಾಗಿ ಕೇಳುವುದೊಂದೇ ದ್ರೋಣ, ಅರ್ಜುನರ ಕೆಲಸವಾಗಿದೆ. 'ಏಕಲವ್ಯನು ಅನುಭವವನ್ನು ನಿರೂಪಿಸುವಾಗ ಹತ್ತಾರು ಕಡೆ ಮಾತು ಕಾವ್ಯದಂತೆ ಹರಿಯುತ್ತದೆ. ಇವು ಪ್ರತ್ಯೇಕ ಕವಿತೆಗಳಂತೆ ಕಾಣುತ್ತವೆ. ಮತ್ತು ಈ ಕವಿತೆಗಳ ಉಪಯುಕ್ತತೆ ಎಷ್ಟರಮಟ್ಟಿನದು ? ಎಂಬ ಪ್ರಶ್ನೆ ಏಳುತ್ತದೆ. ಕಾದಂಬರಿಕಾರನ ತೀರ್ಮಾನಗಳೆಲ್ಲ 'ಏಕಲವ್ಯನ ಮೂಲಕ ಹರಿದು ಹೊರಬಂದಂತೆ ಕಾಣುತ್ತವೆ.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ನಾರಾಯಣಸ್ವಾಮಿಗಳು ಒಂದು ರೀತಿಯ ಹೊಸ ಸಾಂಸ್ಕೃತಿಕ ಸಂಘರ್ಷಕ್ಕೆ ದಾರಿಮಾಡಿದ್ದಾರೆ. ಇಲ್ಲಿ [illegible] ವಿಚಾರವನ್ನು,

ಪುರಾಣವನ್ನು ಒಡೆದು ಕಟ್ಟುವ ನೆಲೆಯಿಂದಲೂ ಇಲ್ಲ, ಪುರಾಣದ ನೆಲೆಯಲ್ಲೇ ನಾರಾಯಣಸ್ವಾಮಿಯವರು ಸಾಧಿಸಲು ಪ್ರಯತ್ನಿಸಿದ್ದಾರೆ. ಅವರು ನೇರವಾಗಿ ತಾವಿಟ್ಟುಕೊಂಡ ಉದ್ದೇಶದ ಕಡೆ ಸಾಗಿದ್ದಾರೆ. ಅಲ್ಲದೆ ದಲಿತ ಬಂಡಾಯದ ತಾತ್ವಿಕ ಸಂದರ್ಭದಲ್ಲಿ ಇದನ್ನು ನೋಡಿರುವುದರಿಂದ ಇಲ್ಲಿ ಎಲ್ಲರೂ ಪರಿವರ್ತನೆಗೆ ಒಳಗಾಗಿ ಸಮಾನತೆಯ ಹಾದಿ ಕಡೆ ಹರಿಯಲೇಬೇಕಾಗಿದೆ. ಆರ್.ವಿ.ಭಂಡಾರಿ ಈ ಬಗ್ಗೆ ಹೇಳುವುದು ಹೀಗೆ: "ಅಂದರೆ ಬಂಡಾಯದವರು ಸೃಷ್ಟಿಸುವ ವಿಲೋಮ ಪುರಾಣ ರಚನಾ ಕ್ರಮ; ಇಲ್ಲಿ ಅರ್ಜುನನಾಗಲಿ, ದ್ರೋಣರಾಗಲಿ ಮುಖ್ಯರಾಗುವುದಿಲ್ಲ. ಬದಲಾಗಿ ಶೂದ್ರನಾಗ ಮತ್ತು, ದ್ರೋಣರಿಂದ(ವೈದಿಕರಿಂದ) ತಿರಸ್ಕರಿಸಲ್ಪಟ್ಟ 'ಏಕಲವ್ಯ' 'ಶ್ರಮ ಸಂಸ್ಕೃತಿ' ಯ ಅಥವಾ ಅವೈದಿಕ ಅದಮ್ಯ ಚೈತನ್ಯದ ಸಂಕೇತವಾಗಿ ಮುಂದೆ ಬರುತ್ತಾನೆ. ಹೀಗೆ ಆತ ಮುಂದೆ ಬಂದಾಗ ದ್ರೋಣನೂ ಅರ್ಜುನನೂ ಸೋಲುತ್ತಾರೆ. ತಮ್ಮ ಕ್ಷುದ್ರತೆಯನ್ನು ಮೀರಿ ಸಮಾನತಾವಾದದ ಉತ್ತರಾಧಿಕಾರಿಗಳಾಗುತ್ತಾರೆ"[1] (ಶ್ವೇಸಿಗೆ. ಸಂಪುಟ-10, ಸಂಚಿಕೆ-52)

ಮಾನವೀಯ ತಲ್ಲಣಗಳನ್ನು ವಿವರಿಸುವ ಸೂಕ್ಷ್ಮತೆಯಲ್ಲಿ

ನಾಟಕಗಳ ಮೂಲಕವೇ ಅಭಿವ್ಯಕ್ತಿಗೆ ಸೀಮಿತವಾಗಿದ್ದ ಏಕಲವ್ಯ ಪ್ರಸಂಗ, ಇತ್ತೀಚೆಗೆ ಬಂದ ಜ.ಹೊ.ನಾರಾಯಣಸ್ವಾಮಿಯವರ 'ಅದವ್ವ' ದ ಮೂಲದ ಕಾದಂಬರಿ ಪ್ರಕಾರಗಳಲ್ಲಿ ಕಾಣಿಸಿಕೊಂಡಿದೆ. ಏಕಲವ್ಯನ ಪ್ರಸಂಗ ನೆಪವಾಗಿ, ಅದರ ಸುತ್ತಮುತ್ತ ಇರಬಹುದಾದ ವಸ್ತುವಿಚಾರದೊಂದಿಗೆ ಸಮಕಾಲೀನ ಚಿಂತನೆಗಳ ಸೃಷ್ಟಿಗೆ ಪುಷ್ಟಿಯನ್ನು ಒದಗಿಸಿಕೊಳ್ಳುತ್ತ ಕನ್ನಡದ ಲೇಖಕರು ಏಕಲವ್ಯನ ಮೂಲಕ ಸಾಂಸ್ಕೃತಿಕ ಅಗತ್ಯವನ್ನು ವಿಸ್ತರಿಸುತ್ತ ಬಂದಿದ್ದಾರೆ. ಇದು 'ಗದ್ಯ' ಪ್ರಕಾರಗಳಾದ ನಾಟಕ ಮತ್ತು ಕಾದಂಬರಿಗಳ ಮೂಲಕ ಹೆಚ್ಚು ವಿಸ್ತಾರವಾಗಿ, ಅನೇಕ ಪಾತ್ರಗಳ ಮೂಲಕ, ಅನೇಕ ಸನ್ನಿವೇಶಗಳಲ್ಲಿ ಏಕಲವ್ಯನ ವಸ್ತುವನ್ನು ಅನೇಕ ಆಯಾಮಗಳಲ್ಲಿ ವ್ಯಕ್ತಪಡಿಸುವ ಸಾಧ್ಯತೆ ಪಡೆದಂತೆ, ಏಕಲವ್ಯನ ಕುರಿತ ಬಿಡಿ ಕವಿತೆಗಳಲ್ಲಿ ಆ ಸಾಧ್ಯತೆ ಕಾಣುವುದಿಲ್ಲವಾದರೂ ನಿರ್ದಿಷ್ಟ ಆಶಯದೊಂದಿಗೆ ರಚಿತವಾಗಿವೆ. ಜಿ.ಎಸ್.ಶಿವರುದ್ರಪ್ಪನವರ ಮೂರು ಕವಿತೆಗಳನ್ನು ಒಟ್ಟಿಗೆ ನೋಡಿದಾಗ ಈ ಬಗೆಗೆ ಹೆಚ್ಚು ಅರ್ಥವ್ಯಾಪ್ತಿಯನ್ನು ಹೊಂದಿವೆ. 'ಚಕ್ರಗತಿ', 'ಪ್ರಶ್ನೆ – ಉತ್ತರ' ಹಾಗೂ 'ತಾಯಿಯ ಕೊರಗು' ಇವೇ ಮೂರು ಕವಿತೆಗಳು. ಚೆನ್ನಣ್ಣವಾಲೀಕಾರರು 'ಏಕಲವ್ಯ' ಮತ್ತು 'ಏಕಲವ್ಯನ ತಾಯಿ' ಎಂಬ ಎರಡು ಕವಿತೆಗಳನ್ನು ಬರೆದಿದ್ದಾರೆ. ಬರಗೂರು ರಾಮಚಂದ್ರಪ್ಪನವರ 'ಪಾಠ ಕೇಳುವ ಪ್ರಾಣಿಗಳು' ಎಂಬ ಕವಿತೆ ಈ ಬಗೆಗೆ ಬೇರೆಯದೇ ರೀತಿಯಲ್ಲಿ ಅರ್ಥ ನೀಡುತ್ತದೆ. ಎಲ್.ಹನುಮಂತಯ್ಯನವರ 'ದ್ರೋಣರಿದ್ದಾರೆ', ಬಿ.ಎನ್.ಮಲ್ಲೇಶರ 'ದ್ರೋಣರ ದ್ರೋಹವನ್ನು ಕುರಿತು' ಈ ಎರಡು ಕವಿತೆಗಳು ಹೆಸರೆ ಸೂಚಿಸುವಂತೆ ದ್ರೋಣನನ್ನು ಕುರಿತ ಕವಿತೆಗಳು. ಕೆ.ನರಸಿಂಹಪ್ಪರ ''ಏಕಲವ್ಯ'', ಎಂ.ಲೋಕೇಶರ ''ಏಕಲವ್ಯ'' ಇವು ಏಕಲವ್ಯನ ಮೇಲಿರುವ ಇನ್ನಿತರ ಕವಿತೆಗಳಾಗಿವೆ.

'ಚಕ್ರಗತಿ' ಎಂಬ ಜಿ.ಎಸ್.ಶಿವರುದ್ರಪ್ಪನವರ ಕವಿತೆಯು ಏಕಲವ್ಯನ ಭೂತಭವಿಷ್ಯತ್‌ಗಳನ್ನು ಕುರಿತು ಚಿಂತಿಸುತ್ತದೆ. ಹೆಬ್ಬೆರಳನ್ನು ಕಳೆದುಕೊಂಡ ಏಕಲವ್ಯನ ಚರಿತ್ರೆಯು, ಚರಿತ್ರೆಯ ಪಾಠಿಯಲ್ಲಿ ಹಲವರಿಗೆ ಹಲವು ರೀತಿಯಲ್ಲಿ ಕಂಡಿದೆ. ಬೆರಳು ಕಳೆದುಕೊಂಡದ್ದು 'ಧನ್ಯತೆಯೊ ವಿಷಾದವೊ ಬಲಿದಾನವೊ.' ಇದನ್ನು ಮನುಷ್ಯನ ಚರಿತ್ರೆಯಿಂದಲೇ ಕಾಣಬೇಕಾಗಿದೆ. ಬೆರಳು ಕಳೆದುಕೊಂಡ ಏಕಲವ್ಯ ಚರಿತ್ರೆಯಲ್ಲಿ ದಾಖಲಾದ ಒಂದು ಉದಾಹರಣೆ ಮಾತ್ರ. ದಾಖಲಾಗದೆ ಕಾಲದ ಗವಿಯೊಳಗೆ ಹುದುಗಿಹೋದವುಗಳೆಷ್ಟೋ? ಬೆರಳು ಕಳೆದುಕೊಂಡ ಏಕಲವ್ಯ ಶೋಷಿತರ ಸ್ಥಿತಿಯ ಪ್ರತೀಕವಾದರೆ, ಬೆರಳು ಪಡೆದ ದ್ರೋಣ ಶೋಷಕ ವ್ಯವಸ್ಥೆಯ ಪ್ರತೀಕ. ಬೆರಳು ಕೊಟ್ಟದ್ದು ತ್ಯಾಗ, ಬಲಿದಾನ ಎಂದು ವೈಭವೀಕರಿಸುವುದಾದರೆ, ಬೆರಳು ಪಡೆದ ದ್ರೋಣನ ಕಾರ್ಯವನ್ನು ಏನೆಂದು ವೈಭವೀಕರಿಸಬಹುದು! ಚರಿತ್ರೆಯು ಉದ್ದಕ್ಕೂ ಕಂಡದ್ದು ಏನೆಂದರೆ, ದ್ರೋಣನ ಪರವಾದವರು ಮಾತ್ರ ಏಕಲವ್ಯನ ಕಾರ್ಯವನ್ನು ತ್ಯಾಗ, ಬಲಿದಾನ, ಗುರುಭಕ್ತಿ ಮುಂತಾದವುಗಳ ಸಂಕೇತ ಎಂದು ವರ್ಣಿಸಿದರು. ಏಕಲವ್ಯನ ಪರವಾದವರು ಬೆರಳನ್ನು ಕಳೆದುಕೊಂಡ ನೋವ ನಿರಂತರವಾಗಿ ನೋಯುವುದನ್ನು ಸಹಿಸಲಾರದ

ಸ್ಥಿತಿ ಬಂದಾಗ, ಅದು ತ್ಯಾಗವೂ ಅಲ್ಲ, ಬಲಿದಾನವೂ ಅಲ್ಲ ಎಂದು ಎಚ್ಚೆತ್ತು, ಅದು ದ್ರೋಣನ ಕ್ರೌರ್ಯವನ್ನು ತೋರಿಸುತ್ತದೆ; ಮನುಷ್ಯ ವಿರೋಧಿ ನಿಲುವನ್ನು ತೋರಿಸುತ್ತದೆ — ಎಂಬ ನಿಲುವಿಗೆ ಬಂದರು. ಉಳ್ಳವರ ಬೆನ್ನೆಲುಬಾಗಿ ದ್ರೋಣ 'ಏಕಲವ್ಯನ ಬೆರಳನ್ನು ಪಡೆದನೇ ಹೊರತು ಅನ್ಯ ಕಾರಣವಿರಲಾರದು. ಆಳುವವರ ಕೈಗೊಂಬೆಯಾದ ಧರ್ಮ (ಪುರೋಹಿತರು) ಸಾಮಾನ್ಯರ ಪಾಲಿಗೆ ಉರುಳಾದದ್ದು ಚರಿತ್ರೆಯಲ್ಲಿ ನಿರಂತರವಾಗಿ ಕಂಡುಕೊಂಡ ಸತ್ಯವಾಗಿದೆ. ಜಿ.ಎಸ್.ಶಿವರುದ್ರಪ್ಪನವರ ಕವಿತೆ ಇದನ್ನು ಹೀಗೆ ಹೇಳುತ್ತದೆ:

"ಮತ್ತೆ ಮತ್ತೆ ಬರುತ್ತಾರೆ ಆಚಾರ್ಯ ದ್ರೋಣರು
ನಿಶ್ಶಬ್ದದಲ್ಲಿ ಕೂತ 'ಏಕಲವ್ಯನ ಬಳಿಗೆ,
ಆಮೇಲೇನಾಗುತ್ತದೆ? ನಿಮಗೆ ಗೊತ್ತೆ, ಇದೆ
ಈ ಚರಿತ್ರೆಯ ಚಕ್ರಗತಿಯೊಳಗೆ."

— ಬೆರಳನ್ನು ಕೊಟ್ಟ 'ಏಕಲವ್ಯ ಆಳುವವರಿಗೆ ಬಲಿಯಾದ ವ್ಯಕ್ತಿ. ಅವನು ಹಾಗೆ ನಿಶ್ಶಬ್ದದಲ್ಲಿ ಕುಳಿತರೆ, ಆಚಾರ್ಯ ದ್ರೋಣರು ಮತ್ತೆ ಮತ್ತೆ ಬಲಿ ತೆಗೆದುಕೊಳ್ಳಲು ಬರುತ್ತಾರೆ. ಆಗ 'ಏನಾಗುತ್ತದೆ? ಎಂಬ ಕವಿಯ ಆತಂಕದ ಪ್ರಶ್ನೆಗೆ ಉತ್ತರ ವಿಷಾದವಾಗಿಯೇ ಇರುತ್ತದೆ. ಬಲಿಯಾಗುವ 'ಏಕಲವ್ಯನಂಥ ವ್ಯವಸ್ಥೆ ನಿಶ್ಶಬ್ದತೆಯನ್ನು ಮುರಿದರೆ, ಬಳಿಗೆ ಬರುವ ದ್ರೋಣನ ಅವಸ್ಥೆ 'ಏನಾಗುತ್ತದೆ? ಎಂಬ ಕುತೂಹಲದ ಪ್ರಶ್ನೆಯನ್ನು ಸೂಚಿಸುವ ಕವಿಗೆ ಉತ್ತರ ಭೀಕರವಾಗಿರುತ್ತದೆ. ಆಗ 'ಏಕಲವ್ಯನು ಅಳಿಯಬೇಕು. ದ್ರೋಣನೂ ಅಳಿಯಬೇಕು ಎಂಬ ಆಶಾವಾದದ ನೆಲೆ ಜಿ.ಎಸ್.ಶಿವರುದ್ರಪ್ಪನವರ 'ಚಕ್ರಗತಿ' ಕವಿತೆಯಲ್ಲಿದೆ.

ಇವರ ಇನ್ನೊಂದು ಕವಿತೆ ''ಪ್ರಶ್ನೆ-ಉತ್ತರ'' ದಲ್ಲಿ ಬೆರಳು ಕಳೆದುಕೊಂಡದ್ದು ಹೇಗೆಂದು 'ಏಕಲವ್ಯನನ್ನು ಮಗ ಪ್ರಶ್ನಿಸುತ್ತಾನೆ. ''ನನ್ನ ದೇವರಿಗೆ ನೈವೇದ್ಯವಾಯಿತು'' ಎಂದು 'ಏಕಲವ್ಯ ಉತ್ತರಿಸುತ್ತಾನೆ. ಇಲ್ಲಿ ವ್ಯಕ್ತವಾಗುವ ಧ್ವನಿಯೆಂದರೆ 'ಏಕಲವ್ಯನಂಥ ದಲಿತ ಭಕ್ತನು ದ್ರೋಣನಂಥ 'ದೇವರಿಗೆ' ನೈವೇದ್ಯ ಅರ್ಪಿಸುವುದರಲ್ಲಿಯೇ ಕಳೆದು ಹೋಗಬಹುದು. ಬೆರಳನ್ನು ನೈವೇದ್ಯವಾಗಿ ಪಡೆಯುವ 'ಏಕಲವ್ಯನ ದೇವರು ಕೆಟ್ಟದಿರಬೇಕು ಎಂಬ ಮಗನ ಪ್ರಶ್ನೆ ಮುಂದುವರಿದು, ''ಕೊಡುವಾಗ 'ಏನೂ ಅನ್ನಿಸಲಿಲ್ಲವೇ ನಿನಗೆ?'' ಎಂಬ ಮಗನಿಗೆ 'ಏಕಲವ್ಯನಲ್ಲಿ ಉತ್ತರವಿಲ್ಲ. ಆದರೂ ''ದೇವರೆಂದರೆ ದೇವರು'' ಎಂದು ಸುಮ್ಮನಾಗುತ್ತಾನೆ. ಇಲ್ಲಿ ದ್ರೋಣನಂಥ ದೇವರಿಗೆ ಹರಕೆ-ಮುಡುಪು ಅರ್ಪಿಸುವುದರಲ್ಲಿಯೇ ಬದುಕಿನುದ್ದಕ್ಕೂ ದುಡಿದು ಶಕ್ತಿಯನ್ನು ಸವೆಸಿಕೊಂಡು ನಿಂತವರು 'ಏಕಲವ್ಯನಂಥ ದಲಿತರು.

“ಹೌದಪ್ಪ ಹೌದು, ಬೆರಳಿನ ಬದಲು ನಿನ್ನನ್ನೆ
ಕೇಳಲಿಲ್ಲವಲ್ಲ, ಆದರಿಂದ ನಿಜವಾಗಿಯೂ
ಒಳ್ಳೆಯವನಿದ್ದರೂ ಇದ್ದೀತು ಈ ನಿನ್ನ ದೇವರು?” ಎಂಬ ಮಗನ ಪ್ರಶ್ನೆ ವ್ಯಂಗ್ಯದಿಂದ ಕೂಡಿದೆ. ಅವನದು ಮುಂದಿನ ತಲೆಮಾರು. ಪ್ರಜ್ಞೆ ಎಚ್ಚೆತ್ತಿದೆ. ಅದಕ್ಕಾಗಿ ಅವನಲ್ಲಿ ಪ್ರಶ್ನೆಗಳಿರಲು ಇನ್ನೊಂದು ಕಾರಣ, ತಂದೆಯ ಚರಿತ್ರೆ ಕಣ್ಣಮುಂದಿದೆ. ನಿರಂತರವಾಗಿ ಬದುಕಬೇಕಾಗಿರುವ ನೈವೇದ್ಯಪಡೆಯುವಂಥ ದೇವರಾದ ದ್ರೋಣನು, ನೈವೇದ್ಯ ಅರ್ಪಿಸಲಿಕ್ಕೆಂದೆ ಇರುವ ‘ಏಕಲವ್ಯನಂಥ ಭಕ್ತರು ಒಮ್ಮೆಲೆ ನಾಶವಾಗಬಾರದು. ನಾಶವಾದರೆ ದ್ರೋಣನಂಥವರು ಬದುಕುವದು ಹೇಗೆ? ಈ ಹೊತ್ತಿನ ತಲೆಮಾರಿಗೆ ಸೇರಿದ ಮಗನಲ್ಲಿ ಪ್ರಶ್ನಿಸುವ ಪ್ರಜ್ಞೆ ಜಾಗೃತವಾಗುತ್ತಿದೆ.

“ಹೇಗೆ ಹೇಳುವುದು ಈ ಮಗುವಿಗೆ, ನಾನು ಕೊಟ್ಟದ್ದು
ಬರೀ ಬೆರಳನ್ನಲ್ಲ, ಇಡಿಯಾಗಿ ನನ್ನನ್ನೆ
ಎಂದು, ಇಷ್ಟರವೇಳೆ ನಾನು ಕೊಟ್ಟದ್ದೆಷ್ಟು ಬಿಟ್ಟ
ದ್ದೆಷ್ಟು ಅರ್ಥವೇ ಆಗಿಲ್ಲ ಈವರೆಗೆ ನನಗೆ” — ಇಲ್ಲಿ ‘ಏಕಲವ್ಯನ ಈ ರೀತಿಯ ಮಾತಿನಲ್ಲಿ ಇನ್ನೊಂದು ರೀತಿಯ ಆಶಾವಾದಿ ನೆಲೆಯಿದೆ. ‘ಏಕಲವ್ಯ ಈಗಾಗಲೇ ಕಳೆದುಕೊಂಡಿದ್ದಾನೆ. ಅಲ್ಲಿಗೆ ಅವನ ಬದುಕು ಸತ್ತು ಹೋಗಿಲ್ಲ. ಅದೊಂದು ಎಚ್ಚರಿಕೆಯ ಅನುಭವ. ಆ ಅನುಭವವೇ ಪಾಠವಾಗಿ ಮುಂದೆ ಸಾಧಿಸುವುದು ‘ಏನೋ ಇದೆ — ಎಂಬ ಸೂಚನೆ ವ್ಯಕ್ತವಾಗುತ್ತದೆ.

“ತಾಯಿಯ ಕೊರಗು” ಜಿ.ಎಸ್.ಶಿವರುದ್ರಪ್ಪನವರ ಇನ್ನೊಂದು ಕವಿತೆ. ‘ಏಕಲವ್ಯನ ತಾಯಿಯ ಭಯ ಮನಸ್ಥಿತಿಯನ್ನು ಕುರಿತದ್ದು. ಮಗನು ‘ಲೋಕೋತ್ತರ’ ಬಿಲ್ಲುಗಾರನಾಗಬೇಕೆಂಬ ಹಂಬಲ ಆಕೆಗಿಲ್ಲ. ಕಾಡಿನಲ್ಲಿ ಒಂದಾಗಿರುವ ಅವರಿಗೆ, ಮಗನು ಕಾಡಿಗೆ ಒಡೆಯನಾಗಿ, ಸಾಧುಪ್ರಾಣಿಗಳ ರಕ್ಷಕನಾಗಿ, ತನ್ನ ಕಣ್ಣೆದುರಿಗೆ, ಪ್ರಕೃತಿಯ ಜತೆ ನಗುನಗುತ್ತ ಇರುವ ‘ಏಕಲವ್ಯ ಬೇಕು. ಮುಗ್ಧಳಾದ ತಾಯಿಯ ಜತೆ. ಅವನೂ ಕಾಡೂ ಒಂದಾಗಿದ್ದವನೇ. ‘ಬೆರಳ್ ಗೆ ಕೊರಳ್’, ‘ಹೆಬ್ಬೆರಳು’, 'The Purpose' ‘‘ಏಕಲವ್ಯ’ ಮತ್ತು ‘ಅದಮ್ಯ’ ಮುಂತಾದ ಕೃತಿಗಳಲ್ಲಿ ಹೀಗೆಯೇ ಚಿತ್ರಿತವಾದವರು. ದ್ರೋಣನ ಬಳಿ ಬಿಲ್ವಿದ್ಯೆ ಕಲಿಯಲು ಹೋಗಬೇಕೆಂಬ ಮಗನ ನಿರ್ಧಾರದ ಹಿಂದೆ ತಾಯಿಯ ಹಿಂಜರಿತ ವಿರುತ್ತದೆ. ಯಾಕೆಂದರೆ ಆರ್ಯನಾದ ದ್ರೋಣನು, ಅನಾರ್ಯನಾದ ಮಗನನ್ನು ಬಳಿ ಸೇರಿಸಿಕೊಳ್ಳುವುದಿಲ್ಲವೆಂದು ಅಂದಿನ ವ್ಯವಸ್ಥೆಯಿಂದ ಆಕೆ ಬಲ್ಲಳು. ಮಗ ಅಲ್ಲಿಗೆ ಹೋಗಿ, ಹಿಂದೂ ಧರ್ಮದ ವ್ಯವಸ್ಥೆಯಿಂದಾಗಿ ತಿರಸ್ಕರಿಸಲ್ಪಟ್ಟು ನಿರಾಶೆಯಿಂದ ಬಂದಾಗಲೂ ತಾಯಿಗೆ ಸಿಟ್ಟುಬರುವುದಿಲ್ಲ. ಅನಾರ್ಯನಾದ ಮಗನಿಗೆ ವಿದ್ಯೆ ನಿರಾಕರಿಸಿದ ವ್ಯವಸ್ಥೆಯಲ್ಲಿ ಬದುಕುವ

ಆಕೆಗೆ ಅದು ಬರೀ ವಿಷಾದವಾಗಿ ಪರಿಣಮಿಸುತ್ತದೆಯೇ ಹೊರತು ದ್ರೋಣನ ಬಗ್ಗೆಯಾಗಲಿ, ಅರಸುಮಕ್ಕಳ ಬಗ್ಗೆಯಾಗಲಿ ಸಿಟ್ಟಲ್ಲ. ಆದರೆ ಆಕೆಯ ಸಿಟ್ಟಿಗೆ ಕಾರಣವಾದದ್ದು, ಮಗನ ಹೆಬ್ಬೆರಳನ್ನು ದ್ರೋಣ ಪಡೆದಾಗ ಮಾತ್ರ. ಈ ನಿರಪರಾಧಿ ನಿರುಪದ್ರವಿಯಾದ ಮಗನ ಬಲಿಯನ್ನು ಯಾವ ತಾಯಿ ಸಹಿಸಿಯಾಳು? ಯಾರೂ ತಡೆಯದ ರೌದ್ರ ಸಿಟ್ಟು ಹುಟ್ಟುತ್ತದೆ. ಶಾಪ ಹಾಕುತ್ತಾಳೆ. ಆದರೂ ಮಗನ ಹೆಬ್ಬೆರಳು ಹೋಗಿ ಬಿಟ್ಟಿದೆ. ಮಗನಾದರೂ,

“ಬಾಣ ಹೂಡುವುದಕ್ಕೆ ಈಗ ಇರು —

ಎಷ್ಟು ಬೆರಳು ಸಾಲದೇನಮ್ಮ ಅನ್ನುತ್ತಾನೆ.” ಮಗನ ಮಾತು ಕೇಳಿ ಆಕೆಗೇನು ಮಾಡಲು ತೋಚದ ಸ್ಥಿತಿ. ಈ ಕವಿತೆಯಲ್ಲಿ ತಾಯಿಯ ಮೂಲಕ ವ್ಯಕ್ತವಾಗುವ ಕೊನೆಯ ಸಾಲುಗಳು ಮಾರ್ಮಿಕವಾಗಿವೆ. ನಿರಂತರ ಬಲಿಯಾಗುತ್ತಲೇ ಇರುವ ದಲಿತರ ಬದುಕು, ಅವರು ಅನುಭವಿಸುತ್ತಿರುವ ನೋವು ಇಲ್ಲಿದೆ:

“.......... ಕವಿಯುತ್ತಿರುವ
ಕತ್ತಲಿನೊಳಗೆ ಕುಳಿತು ಕೊರಗುತ್ತೇನೆ.
ಈ ಕಾಡು, ಈ ನನ್ನ ಮಕ್ಕಳು, ಈ ದಾಳಿ —
ಎದೆಯೊಡ್ಡಿ ಬಾಳಿ ಬದುಕುವುದು ಹೇಗೆ? — ಎಂಬ ತಾಯಿಯ ಕೊರಗಿನಲ್ಲಿ

ಸಾವಿರದ ನೋವು ತುಂಬಿಕೊಂಡಿದೆ. ಈ ಹೊತ್ತಿನ ‘ಏಕಲವ್ಯನ ಜನಾಂಗಗಳು ಸರಕಾರಿ ವ್ಯವಸ್ಥೆಯಿಂದಾಗಿ ಭವಿಷ್ಯತ್ತನ್ನು ಕಾಣದ ಸ್ಥಿತಿಯಲ್ಲಿದ್ದಾರೆಯೆನಿಸುತ್ತದೆಯೋ?
ಜಿ.ಎಸ್.ಶಿವರುದ್ರಪ್ಪ ಈ ಮೂರು ಕವಿತೆಗಳು ‘ಏಕಲವ್ಯನ ಚರಿತ್ರೆಯ ಮೂಲಕ ಶೂದ್ರ ಜನಾಂಗದ ಅವಸ್ಥೆಯನ್ನು, ಮೇಲ್ವರ್ಗ ಮತ್ತು ಕೆಳವರ್ಗಗಳ ನಡುವಿನ ನಿರಂತರ ಸಂಘರ್ಷ ಹಾಗೂ ಈ ಹೊತ್ತಿನ ಸಂದರ್ಭದಲ್ಲೂ ಅದರ ನಿರಂತರತೆಯನ್ನು ಕಲಾತ್ಮಕವಾಗಿ ಕಟ್ಟಿ ಕೊಡುತ್ತವೆ.

ಬಂಡಾಯ, ದಲಿತ ಸಾಹಿತ್ಯದ ಮುಂಚೂಣಿಯಲ್ಲಿರುವ ವಾಲೀಕರರು ತಮ್ಮೆಲ್ಲ ಬರವಣಿಗೆಯಲ್ಲಿ ದಲಿತರ ಬದುಕನ್ನೇ ಕುರಿತು ಬರೆಯುತ್ತಿದ್ದಾರೆ. ಅವರು, ಬಡವ, ಬಲ್ಲಿದವರ ಮಧ್ಯದ ಹೋರಾಟವನ್ನು, ಶೋಷಕ ವ್ಯವಸ್ಥೆ ಮತ್ತು ಶೋಷಿತ ವ್ಯವಸ್ಥೆಗಳ ಮಧ್ಯದ ಸಂಘರ್ಷದ ಸಂದರ್ಭವನ್ನೇ ಚಿತ್ರಿಸುತ್ತ ಬಂದಿದ್ದಾರೆ. ತುಳಿತಕ್ಕೊಳಗಾದವರ ಪರವಾಗಿರುವ ವಾಲೀಕಾರರು ತಮ್ಮ ಸಾಹಿತ್ಯ ಕಲಾತ್ಮಕವಾಗಿರಬೇಕೆಂಬ ಕಡೆ ದೃಷ್ಟಿ ಇರದೆ, ಕೇವಲ ಆಶಯವೇ ಪ್ರಧಾನವಾದ ಚಿಂತನೆಯನ್ನು ನಿರೂಪಿಸುವ ಕಡೆಗಿರುವುದರಿಂದ ಅವರ ರಚನೆಗಳು ಸೂಕ್ಷ್ಮತೆಯನ್ನು ಕಳೆದುಕೊಂಡಿರುತ್ತವೆ. ದಲಿತ ಬಂಡಾಯ ಸಾಹಿತ್ಯದ ಪ್ರಭಾವವು ಜಿ.ಎಸ್.ಶಿವರುದ್ರಪ್ಪನವರ ಮೇಲೆ ಇರುವುದು ಇತ್ತೀಚಿನ ಅವರ ಕವಿತೆಗಳಿಂದ ಕಾಣಬಹುದು. ಅದಕ್ಕೆ ಅವರ “ಪ್ರೀತಿ ಇಲ್ಲದ ಮೇಲೆ” ಮತ್ತು “ಚಕ್ರಗತಿ” ಕವನ ಸಂಕಲನಗಳೇ ಸಾಕ್ಷಿ

ಯಾಗಿವೆ. ಆದರೂ ಅವರ ರಚನೆಗಳು ಕಲಾತ್ಮಕತೆಯನ್ನು ಕಳೆದುಕೊಳ್ಳುವುದಿಲ್ಲ. ವಾಲೀಕಾರರ ''ಏಕಲವ್ಯನ ತಾಯಿ'' ಎಂಬ ಕವಿತೆ ಸೂಕ್ಷ್ಮ ವಿವರಗಳಿಗೆ ಹೋಗದೆ, ನೇರವಾಗಿ ತನ್ನ ಆಶಯವನ್ನಷ್ಟೇ ಹೇಳುವ ಕವಿತೆಯಾಗಿದೆ. ಇಲ್ಲಿ 'ಏಕಲವ್ಯ ಮೇಲ್ವರ್ಗದ ವ್ಯವಸ್ಥೆಗೆ ಬಲಿಯಾಗಿದ್ದಾನೆ. ಅವನ ತಾಯಿ ತನ್ನ ಮಗನನ್ನು ಬಲಿತೆಗೆದುಕೊಂಡ ದ್ರೋಣನನ್ನು ಉದ್ದೇಶಿಸಿ ತನ್ನ ಅಳಲನ್ನು ತೋಡಿಕೊಳ್ಳುತ್ತಾಳೆ:

'' ನೀನು ನಮ್ಮೊರಂಗೆ ಕಷ್ಟದವನು ಕೇಳು ಗುರುವೆ
ಬಡವರ ಪರವಾಗ್ಯಕ ನಿಲ್ಲಲಿಲ್ಲ ನೀನು ಗುರುವೆ''

ಈ ಕವಿತೆಯಲ್ಲಿ ತಾಯಿ ದ್ರೋಣನ ಬಗ್ಗೆ ಒಮ್ಮೆ ಆಕ್ರೋಶಗೊಳ್ಳುತ್ತಾಳೆ. ಒಮ್ಮೆ ನಮ್ರತೆಯೇ ಆತನೂ ಬಲಿಯಾಗುತ್ತಾನೆಂಬುದನ್ನು ಕನಿಕರದಿಂದ ಹೇಳುತ್ತಾಳೆ. ಯಾಕೆಂದರೆ ದ್ರೋಣ ಆಳುವ ವರ್ಗದವರನ್ನು ನಂಬಿ ~~ಉ~~ ಬದುಕುವವನೆಂದು ಆಕೆಗೆ ಗೊತ್ತು. ಕೊನೆಗೆ ಆಳುವವರೇ ನಿನ್ನನ್ನು ಬಲಿತೆಗೆದುಕೊಳ್ಳುತ್ತಾರೆಂದು '' ಇದು ಜಗದ ಆಟ.... ಉಪಕಾರ್ಕ್ಯಪಕಾರ'' ಎಂದು ಕೊರಗುತ್ತಾಳೆ. ಕೊನೆಗೆ 'ಏಕಲವ್ಯನೇ ಅಂಬೇಡ್ಕರನಾಗಿ ಹುಟ್ಟುವ ಅವತಾರದ ಕಲ್ಪನೆಯನ್ನು ವಾಲೀಕಾರರು ಸೃಷ್ಟಿಸುತ್ತಾರೆ.

'' ಆ 'ಏಕಲವ್ಯನೇ ಅಂಬೇಡ್ಕರೀಗ ಆಗ್ಯಾನ ಗುರುವೆ
ತನ್ನ ಜನರಿಗೆ ಕೊಡ್ಸಲಾಕ ಸುಟ್ಟ್ಯಾನ ಗುರುವೆ'' ಇಲ್ಲಿ ತಾಯಿಯ ಸಂವೇದನೆಯೇ ವಾಲೀಕಾರರ ಆಶಯವಾಗಿ ಬಿಡುತ್ತದೆ. ಕೊನೆಗೆ,

'' ಮತ್ತ ಹೀಂಗನ್ಯಾಯ ಆಗಾ ಇನ್ರು ಕೇಳು ಗುರುವೆ
ಕೋಟಿ ಕೋಟಿ ಅಂಬೇಡ್ಕರ ಹುಟ್ಟ್ಯಾರಿಲ್ಲಿ ತಿಳಿಯೊ ಗುರುವೆ'' ಎಂದು

ಎಚ್ಚರಿಸುತ್ತಾಳೆ. ಇಂಥ ಬೌದ್ಧಿಕತೆಯ ಭಾರವನ್ನು ಇಲ್ಲಿಯ ತಾಯಿ ಹೊರಲಾರಳು ಎನಿಸುತ್ತದೆ. ವಜ್ರಮಟ್ಟಿಯವರ (ಏಷ್ಟಸ್ತು 'ಏಕಲವ್ಯ') ತಾಯಿ, ಸತ್ಯಾನಂದ ಪಾತ್ರೋಟರ (ಮತ್ತೊಬ್ಬ 'ಏಕಲವ್ಯ')ತಾಯಿ ~~ಕೊನಡ~~ ಇದೇ ಮಾದರಿಯಲ್ಲಿದ್ದಾರೆ. ತಾಯಿಯ ಒಳಗಡೆಯಿಂದ ಕ್ರಾಂತಿ ಹುಟ್ಟುವುದಿಲ್ಲ. ಬದಲಾಗಿ ಹೊರಗಡೆಯಿಂದ ಹೇರಿಸುವ ಕ್ರಾಂತಿಯಾಗುತ್ತದೆ. ಇವರೆಲ್ಲರ ಸೃಷ್ಟಿಯ 'ತಾಯಿ' ತನ್ನ ಸಂಸ್ಕೃತಿಯ ಹಿನ್ನೆಲೆಯಲ್ಲಿ, ಆಕೆ ಹೊಂದಿರಬಹುದಾದ ವ್ಯಕ್ತಿತ್ವದ ಸ್ವರೂಪಕ್ಕಿಂತ ಭಿನ್ನವಾಗಿ, ತನ್ನ ಜವಾಬ್ದಾರಿಯ ಸ್ವರೂಪಕ್ಕಿಂತ ಬದಲಾಗಿ ಚಿತ್ರಿತವಾಗಿರುವುದರಿಂದ, ಸಹಜತೆ ಮಾಯವಾಗಿ, ಆಯಾ ~~ಲೇಖಕರ~~ (ಲೇಖಕರ) ಮುಖವಾಣಿಯಾಗಿ ಬಿಟ್ಟಿದ್ದಾಳೆ. ಶಿವರುದ್ರಪ್ಪನವರ ತಾಯಿ(ತಾಯಿಯ ಕೊರಗು)ಯಲ್ಲಿರಬಹುದಾದ ತಲ್ಲಣ, ಆಯ ಸಂವೇದನೆ ಮತ್ತು ಒಳಗಡೆಯೇ ಹುಟ್ಟಬಹುದಾದ ಕ್ರಾಂತಿ, ವಾಲೀಕಾರ, ವಜ್ರಮಟ್ಟಿ, ಪಾತ್ರೋಟರ ತಾಯಿಯಲ್ಲಿ ಕಾಣಲು ಸಾಧ್ಯವಾಗುವುದಿಲ್ಲ. ಕುವೆಂಪುರವರ ಅಬ್ಬೆ (ಬೆರಳ್ ಗೆ ಕೊರಳ್)ಯ ಪ್ರಭಾವ ಶಿವರುದ್ರಪ್ಪನವರ 'ತಾಯಿ'ಯ ಮೇಲಿದೆ. ಒಂದೇ ಬಗೆಯ ಸ್ವರೂಪ ಇವರದು. 'ಏಕಲವ್ಯನ

ಶಾಂತಿಯ ಮೂಲಕ ಈ ಬಗೆಯ ಹುಡುಕಾಟ ಒಂದು ಬಗೆಯಾದರೆ, ಏಕಲವ್ಯನನ್ನು ಬರಿ ಮಾಟದ ದ್ರೋಣನನ್ನು ನಮ್ಮ ಲೇಖಕರು ನೋಡುವ ಬಗೆ ಇನ್ನೊಂದು ತೆರನಾದುದು. ದಲಿತ-ಬಂಡಾಯ ಸಾಹಿತ್ಯದ ಲೇಖಕರು ದ್ರೋಣನನ್ನು ಆಳುವ ವ್ಯವಸ್ಥೆಯ ಭಾಗವಾಗಿರುವ, ಪುರೋಹಿತಶಾಹಿ ವ್ಯವಸ್ಥೆಯ ಸಂಕೇತವಾಗಿಯೇ ನೋಡುತ್ತಾರೆ. ಇದರಿಂದ ಸಹಜವಾಗಿ ದ್ರೋಣ ದುಷ್ಟನಾಗಿಬಿಡುತ್ತಾನೆ. 'ದ್ರೋಣರ ದ್ರೋಹವನ್ನು ಕುರಿತು' ಎಂದೇ ಬಿ.ಎನ್.ಮಲ್ಲೇಶರು ಕವಿತೆಯನ್ನು ಬರೆಯುತ್ತಾರೆ. 'ಏಕಲವ್ಯನ ಬಿಲ್ವಿದ್ಯಾ ಸಾಮರ್ಥ್ಯವು, ದ್ರೋಣರ ಎದೆಗೆ ಕೋಟಿ ಸೂರ್ಯರು ತಾಗಿದಂತೆ ಆಗುತ್ತದೆ. ಅರ್ಜುನನಿಗಿಂತ ಇನ್ನೊಬ್ಬ ಸಮರ್ಥನಿರಬಾರದೆಂಬ ದ್ರೋಣ ನೀತಿಯಿಂದಾಗಿ 'ಏಕಲವ್ಯ ದುರಂತಕ್ಕೀಡಾದ. ಆದರೆ ಇಲ್ಲಿ ಕವಿಗೆ ಇರುವ ಆತಂಕವೆಂದರೆ 'ಏಕಲವ್ಯನ '' ಅಸೀಮ ಭಕ್ತಿಯನ್ನು ಧೀರ ಮನಸ್ಸನ್ನು ಹಾಡಿ ಹರಸಿದ ಜನ.

——> ದ್ರೋಣರ ದ್ರೋಹವನ್ನು ಕುರಿತು ಉಸಿರಾಡಲಿಲ್ಲ'' ಎಂಬುದು; ಅಂದಿನ ವ್ಯವಸ್ಥೆಯಲ್ಲಿ ದ್ರೋಣನಿಗೆ ಯಾರೂ 'ಏನೂ ಅನ್ನುವಂತಿಲ್ಲ. ಮೇಲಾಗಿ ದ್ರೋಣನಿಗೆ ಆಳುವ ವರ್ಗದ ಬೆಂಬಲವಿದೆ. ನಂತರದ ಕಾಲದಲ್ಲಿ ಚರಿತ್ರೆಯು 'ಏಕಲವ್ಯನ ಗುರುಭಕ್ತಿ, ತ್ಯಾಗದ ಹಣೆಪಟ್ಟಿಕಟ್ಟಿ ವೈಭವೀಕರಿಸಿ ದ್ರೋಣನ ಬಗ್ಗೆ ತಟಸ್ಥವಾಯಿತು. ಇದು ಕವಿಗೆ ಕಾಡಿರುವ ಸಂಗತಿ. ದ್ರೋಣನು ಮಾಡಿದ ದ್ರೋಹದ ಬಗ್ಗೆ ಯಾರಾರೂ ಯಾಕೆ ಪ್ರತಿಭಟಿಸಲಿಲ್ಲ? ಎಂಬ ಕವಿಯ ಕೊರಗಿಗೆ ಇತಿಹಾಸದಲ್ಲೇ ಉತ್ತರವಿದೆ.

'ದ್ರೋಣರಿದ್ದಾರೆ' ಎಂಬುದು ಎಲ್.ಹನುಮಂತಯ್ಯನವರ ಕವಿತೆ. ವಿಶ್ವಾಸದ್ರೋಹಗೈದ ದ್ರೋಣ ಮೇಲ್ವ್ಯವಸ್ಥೆಯ ಸಂಕೇತವಾಗಿ, 'ಏಕಲವ್ಯನು ಆ ವ್ಯವಸ್ಥೆಯಿಂದ ಶೋಷಿತವಾದ ಕೆಳವರ್ಗದ ವ್ಯವಸ್ಥೆಯ ಸಂಕೇತವಾಗುತ್ತಾನೆ. ಹನುಮಂತಯ್ಯನವರು 'ಏಕಲವ್ಯನ ಪರವಾಗಿ ನಿಂತು ವ್ಯವಹರಿಸುತ್ತಾರೆ;

''ಅರಮನೆಯಿಲ್ಲ ಆಸ್ಥಾನವಿಲ್ಲ ಶಿಷ್ಯ ಅರ್ಜುನನೂ ಇಲ್ಲ
'ಏಕಲವ್ಯನ' ಹೆಬ್ಬೆರಳು ಕಾಣಿಕೆ ಕೇಳುವ ದ್ರೋಣರಿದ್ದಾರೆ''_ಎಂದು ಶುರುವಾಗುವ ಕವಿತೆ ಸ್ವಲ್ಪ ವಿರೋಧಭಾಸದಂತೆ ಕಾಣುತ್ತದೆ. ಅಂದಿನ ಅರಮನೆ ಇಂದಿರಲಿಕ್ಕಿಲ್ಲ. ಅರಮನೆಯ ಜನರಿದ್ದಾರೆ; ಅರಮನೆಯಂಥ ಬಂಗಲೆಗಳಿವೆ. ಅಂಥ ವೈಭವವೂ ಇದೆ. ಆಸ್ಥಾನವಿಲ್ಲ ನಿಜ. ಆಸ್ಥಾನದಲ್ಲಿ ಇರಲು ಯೋಗ್ಯರಾದ ಜನರಿದ್ದಾರೆ. ಅರ್ಜುನನಿರಲಿಕ್ಕಿಲ್ಲ. ಆಳುವವರ ಮಕ್ಕಳಿದ್ದಾರೆ. 'ದ್ರೋಣರಿದ್ದಾರೆ' — ಎನ್ನುವ ಕವಿ ಮಾತಿನಂತೆ ದ್ರೋಣ ಇದ್ದಾರೆ ಎಂದ ಬಳಿಕ, ದ್ರೋಣನನ್ನು ಸಾಕುವ ಅರಸರೂ ಇರಲೇಬೇಕು. ದ್ರೋಣರಿದ್ದಾರೆ ಅಂದ ಬಳಿಕ 'ಏಕಲವ್ಯನಂಥವರೂ ಇರಲೇಬೇಕು. 'ಏಕಲವ್ಯ ಇರದ ಸಮಾಜದಲ್ಲಿ ದ್ರೋಣರು ಇರಲು ಸಾಧ್ಯವಿಲ್ಲ.

''ಊರಿಲ್ಲದೂರಿನಲಿ ನೂರೆಂಟು ವೇಷದಲಿ
ವಿದ್ಯುತ್ತಿನಲಿ ವಿಹರಿಸುವ ದ್ರೋಣರು ಇಂದಿಗೂ ಇದ್ದಾರೆ'' — ಕವಿತೆಯು ಉದ್ದಕ್ಕೂ

ದ್ರೋಣನ ಗುಣಗಳನ್ನು ನಿರೂಪಿಸಿದ್ದಾರೆ. ಕರ್ಣನನ್ನು ಸೂತಕುಲ ಎಂದು ಘೃತಪಡುವ ಫಲ್ಗುಣನ ಪರವಾಗಿ ಮೆರೆವ, ಕೌರವರಿಗೆ ನಿಷ್ಠೆಯನ್ನು ತೋರುವ ದ್ರೋಣರು ಇದ್ದಾರೆ. ಇಂಥ ದ್ರೋಣರು ಇರುವವರೆಗೆ 'ಏಕಲವ್ಯನಂಥ ಕಂದಮ್ಮಗಳು ಬಲಿಯಾಗುತ್ತಲೇ ಇರುತ್ತಾರೆ.

'' ಬಾಲಕರ ಬಲಿ ಕೊಡುವ ಬಲೆಯ ನೇಯುವ ಚತುರ

ಚಿಗುರ ಚಿವುಟುವ ಗುರು ಆಚಾರ್ಯರಿದ್ದಾರೆ.'' ಸಮಾಜದಲ್ಲಿರಬಹುದಾದ ವ್ಯವಸ್ಥೆಗಳ ನಿರಂತರತೆಯನ್ನು ಇಲ್ಲಿ ನಿರೂಪಿಸಲಾಗಿದೆ.

ಒಂದು ಕಾಲದಲ್ಲಿ ಪೂಜ್ಯರಾದ ವ್ಯಕ್ತಿಗಳು ಈ ಹೊತ್ತಿನ ಸಾಂಸ್ಕೃತಿಕ ಸಂದರ್ಭದಲ್ಲಿ ಜನರು ಅಂಥ ಪೂಜ್ಯ ವ್ಯಕ್ತಿಗಳನ್ನು ತಿರಸ್ಕರಿಸಿದ್ದಾರೆ. ದಲಿತ ಬಂಡಾಯದ ಹಿನ್ನೆಲೆಯಲ್ಲಿ ಬರೆಯುವ ಕವಿಗಳು ಎತ್ತಿಕೊಳ್ಳುವ ವಸ್ತು ಸಾಮಾನ್ಯವಾಗಿ ಅನ್ಯಾಯಕ್ಕೆ ಒಳಗಾದವರ ಕುರಿತು, ಮೇಲ್ವರ್ಗದವರ ದೌರ್ಜನ್ಯ ಬಯಲು ಮಾಡುವುದು. ಇಂಥಹ ವಸ್ತುವನ್ನು ಸಮಕಾಲಿನ ಸಮಾಜದಿಂದಲೂ ಪಡೆಯುತ್ತಾರೆ. ಪುರಾಣ ಮತ್ತು ಚರಿತ್ರೆಗಳಲ್ಲಿ ಸಿಗುವ ಉದಾಹರಣೆಗಳಿಂದಲೂ ಪಡೆಯುತ್ತಾರೆ. ಕರ್ಣ, ಏಕಲವ್ಯ, ಶಂಬೂಕ ಮುಂತಾದವರಾಗಬಹುದು. ನೆಲ್ಸನ್‌ಮಂಡೆಲಾ, ಬೆಂಜಾಮಿನ್ ಮೊಲಾಯಿಸ್ ಆಗಬಹುದು. ಸಮರ್ಥವಾದ ಲೇಖಕ ಇಂಥ ಉದಾಹರಣೆಗಳಿಂದ ಮಹತ್ತಾದುದನ್ನು ಪುನರ್ ಸೃಷ್ಟಿಸುತ್ತಾನೆ. ದುರ್ಬಲ ಲೇಖಕನ ಕೈಯಿಗೆ ಸಿಕ್ಕರೆ ಬರಿ ಶಬ್ದವಾಗುವ ಸಾಧ್ಯತೆಗಳಿರುತ್ತವೆ. ಚೆನ್ನಣ್ಣ ವಾಲೀಕಾರರ ಇನ್ನೊಂದು ಕವಿತೆ ''ಏಕಲವ್ಯ''. ಇಲ್ಲಿ 'ಏಕಲವ್ಯ ನೆಪವಾಗಿ ಸಂಪೂರ್ಣ ಸಮಕಾಲಿನ ದಲಿತ ಬದುಕಿಗೊಂದು ಅಸ್ತಿತ್ವ ಕೊಡಲು ವಾಲೀಕಾರರು ಆಲೋಚಿಸುವುದು ಹೀಗೆ: '' ಎಡದ ಪಕ್ಷಕಟ್ಟಿಕೊಂಡು

'ಎಟಿಗೇಟು ನೀಡಬೇಕು

ಎಲ್ಲರೊಂದು ಆಗಿ ಈಗ 'ಏಕಲವ್ಯ

ಕುಡಗೋಲತ್ತು ನಿಲ್ಲಬೇಕು 'ಏಕಲವ್ಯ.'' ರಾಜಕೀಯ

ಆಸಕ್ತಿಯನ್ನು ಹುಟ್ಟಿಕೆ ತೋರಿಸುತ್ತದೆ. ಈ ರೀತಿಯ 'ಏಕಲವ್ಯನ ಮೂಲಕ ವ್ಯಕ್ತಪಡಿಸಲು ಇರಬಹುದಾದ ಸಾಧ್ಯತೆಗಳು ಕೆ.ನರಸಿಂಹಪ್ಪನವರಿಗೆ ದಕ್ಕುವುದಿಲ್ಲ. ಅವರ ''ಏಕಲವ್ಯ'' ಕವಿತೆಯು 'ಏಕಲವ್ಯನನ್ನು ತನ್ನದೇ ಆದ ರೀತಿಯಲ್ಲಿ ಅರ್ಥೈಸಲು ಅಸಮರ್ಥವಾಗಿ, ಬೆರಳು ಕೊಟ್ಟ 'ಏಕಲವ್ಯನನ್ನು ' ಎಂಥ ತ್ಯಾಗಿ' ಎನ್ನುವುದು; ಬೆರಳು ಪಡೆದ ದ್ರೋಣನನ್ನು ' ಇವನೆಂಥ ನೀಚ' ಎಂಬ ತೀರ್ಮಾನಕ್ಕೆ ಬರುತ್ತದೆ ಯಾವ ಅರ್ಥವೂ ಇರದೆ ಕವಿತೆ ಬರಿ ಶಬ್ದವಾಗಿದೆ. ಬೆರಳು ಕೊಟ್ಟ, ಬೆರಳು ಪಡೆದ ಘಟನೆಯ ಹಿಂದೆ ಧಾರ್ಮಿಕ, ರಾಜಕೀಯ, ಉತ್ತರಗಳು ಮಾನವೀಯತೆ ಇವು ಯಾವ ಬಗೆಯಲ್ಲಿ ತಮ್ಮ ಕಾರ್ಯನಿರ್ವಹಿಸಿವೆ ಎಂಬ ಚಿಂತನೆ ಮಾಡದೆ ಹೋದರೆ, ಈ ಬಗೆಗಿನ ರಚನೆಗಳಿಗೆ ಅರ್ಥವಿರುವುದಿಲ್ಲ. ಇದೇ ಮಾದರಿಯ ಇನ್ನೊಂದು ಕವಿತೆ ಎಂ.ಲೋಕೇಶರ 'ಏಕಲವ್ಯ':

' ದಟ್ಟಡವಿ ಹೂವಾಗಿ

ಹಣ್ಣಾಗಿ ಉರುವಲಾಗಿ

ನಾಡ ತೊಳದಸಿದೊಡಲ

ತುಂಬಬಾರದೆ ಲವ್ಯ

ನಿನಗೇಕೆ ಬಿಲ್ಲು ವಿದ್ಯೆಯ ಕನಸು'' — ಎಂದು ಸಂತೈಸುವ ಕವಿ,

'ಏಕಲವ್ಯನ ಕನಸು'' ವನ್ಯಜೀವಿಗಳ ಕಾಪಾಡ ಹೊರಟ'' ದುಂ ತಪ್ಪಾಯಿತು.

'' ರಾಜರರಮನೆಯಲ್ಲಿ — ಆಚಾರ್ಯ ಭಿಕ್ಷುಕನಾಗಿ

ರಾಜನೆಂಜಲಿಗೆ ಬಾಯಿ ತೆರೆದು....'' — ಇತ್ತ ದ್ರೋಣನು 'ಏಕಲವ್ಯನ ಕನಸಿಗೆ ಕೊಡಲಿಯಿಕ್ಕಿದ. ಈ ನೋವ್ ಯಾರನ್ನು ಕಾಡಿದೆ? ಎಂದು ನೊಂದು ಪ್ರಶ್ನಿಸುತ್ತಾರೆ.

ನೇರವಾಗಿ 'ಏಕಲವ್ಯನನ್ನು, ಇಲ್ಲವೆ ದ್ರೋಣನನ್ನು ಇಲ್ಲವೆ 'ಏಕಲವ್ಯನ ತಾಯಿಯನ್ನು ಸಂಬೋಧಿಸಿ ಹೇಳುವ ಕವಿತೆಗಳು ಒಂದು ಬಗೆಯಾದರೆ, 'ಏಕಲವ್ಯನನ್ನು ಒಂದು ಸಂಕೇತವಾಗಿ, ಒಂದು ವ್ಯವಸ್ಥೆಯಾಗಿ ನೋಡಿ ರಚಿತವಾಗುವ ಕವಿತೆಗಳು ಇನ್ನೊಂದು ಬಗೆಯವು. ಜಿ.ಎಸ್.ಶಿವರುದ್ರಪ್ಪನವರ 'ಚಕ್ರಗತಿ', 'ಪ್ರಶ್ನೆ — ಉತ್ತರ', 'ತಾಯಿಯ ಕರುಳು' ಈ ಮೂರು ಕವಿತೆಗಳು ಚರಿತ್ರೆಯನ್ನು ಭೂತ, ವರ್ತಮಾನ, ಭವಿಷ್ಯತ್ ಕಾಲದಲ್ಲಿಟ್ಟು ನೋಡುವ ಚಿಂತಿಸುವ ಅರ್ಥೈಸುವ ವಿಸ್ತಾರವಾದ ಅರವನ್ನು ಪಡೆದುಕೊಂಡಿವೆ. ವಾಲೀಕಾರರು ತಮ್ಮ 'ಏಕಲವ್ಯನ ತಾಯಿ', 'ಏಕಲವ್ಯ' ಕವಿತೆಗಳಲ್ಲಿ ಆಗಿಹೋದ ದುರಂತವನ್ನು ನೆನೆಸಿಕೊಂಡು, ವರ್ತಮಾನದಲ್ಲಿ ಆಗಬೇಕಾಗಿರುವ ಸಂಗತಿಗಳತ್ತ ಯೋಚಿಸುತ್ತಾರೆ. ಕೆ.ನರಸಿಂಹಪ್ಪ, ಎಂ.ಲೋಕೇಶ ಇವರ ಕವಿತೆಗಳಲ್ಲಿ 'ಏಕಲವ್ಯನ ಮೂಲಕ ಬೇರೆ ಆಯಾಮಗಳಲ್ಲಿ ಅದನ್ನು ಅರ್ಥೈಸುವ ಗುಣವಿಲ್ಲದೆ ಕೇವಲ ಅಂದಿನ 'ಏಕಲವ್ಯನಿಗಾದ ಅನ್ಯಾಯದ ಬಗ್ಗೆ ಸಿಟ್ಟಿನಿಂದ ಮಾತಾಡುವುದು ಇಲ್ಲವೇ ಕೊರಗುವುದು ನಡೆದಿದೆ. ಎಲ್. ಹನುಮಂತಯ್ಯನವರು ಈ ಹೊತ್ತಿನ ಸಂದರ್ಭದಲ್ಲೂ ದ್ರೋಣರಿದ್ದಾರೆ — ಎಂದು ಎಚ್ಚರಿಸುತ್ತಾರೆ. ಬಿ.ಎನ್.ಮಲ್ಲೇಶರು ದ್ರೋಣನ ದ್ರೋಹವನ್ನು ನೆನೆದು ಕೊರಗುತ್ತಾರೆ.

ಇವರೆಲ್ಲರಿಗಿಂತಲೂ ಭಿನ್ನವಾಗಿ ಯೋಚಿಸುತ್ತಾರೆ, ಬರಗೂರು ರಾಮಚಂದ್ರಪ್ಪನವರು ತಮ್ಮ 'ಪಾಠ ಕೇಳುವ ಪ್ರಾಣಗಳು' ಕವಿತೆಯಲ್ಲಿ. 'ಏಕಲವ್ಯನ ಚರಿತ್ರೆಯ ಮೂಲಕ ಭೂತ ಮತ್ತು ವರ್ತಮಾನಗಳಲ್ಲಿ ಮನುಷ್ಯ ಜನಾಂಗದ ಸಂಬಂಧವನ್ನು ಕುತೂಹಲ ಮತ್ತು ವಿಷಾದದಿಂದಲೇ ಗ್ರಹಿಸತೊಡಗುತ್ತಾರೆ; ಅಕ್ಷರ ಕಲಿತ ಜನ, ಅಕ್ಷರವನ್ನೇ ಮಾಧ್ಯಮವನ್ನಾಗಿ ಮಾಡಿಕೊಂಡು ಪ್ರಭುತ್ವ ಪಡೆದು, ಅನಕ್ಷರಸ್ಥರನ್ನು ಬಲಿತೆಗೆದುಕೊಂಡವರ ಚರಿತ್ರೆಯೊಂದಿದೆ.

ಅವರು '' ನಡೆದ ಕಡೆಯೆಲ್ಲ

ನೆರಳು ನೆಟ್ಟವರು

ಮುಸಕು ಮಾಡಿದರು ಮನಸ್ಸನ್ನು'' — ದಮನಗೊಂಡವರು ಕತ್ತಲಲ್ಲಿ

ಹುದುಗಿ ಹೋದರು. ಇಂದು ಈ ಚರಿತ್ರೆ ಬದಲಾಗಿದೆಯೇ?

'' ಬೆರಳು ಕೊಟ್ಟವರೆ ಕರುಳು ಕೇಳುವ

ಕಾಲ ಬಂತೆ ಈಗ;

ಬೆರಳು — ಕರಳುಗಳ ರಾಜಕೀಯದಲಿ

ಬತ್ತಿ ಹೋಯಿತೆ ರಾಗ;'' — ಬದಲಾಗುವ ಸಮಾಜದಲ್ಲಿ ಮನುಷ್ಯನ ಮನಸ್ಸುಗಳು ದ್ವೇಷಾಸೂಯೆಗಳಿಂದ ಮುಕ್ತವಾಗಿ ಪರಿವರ್ತನಶೀಲವಾಗುವತ್ತ ಸಾಗಬೇಕಾಗಿದೆ. ಆದರೆ ವರ್ತಮಾನದಲ್ಲಿಯೂ ಸಮಾನತೆ ಕಾಣುವ ಸೂಚನೆಗಳಿಲ್ಲದ ಸಂದರ್ಭದಲ್ಲಿ 'ಪ್ರೀತಿ' ಇರಲು ಸಾಧ್ಯವೆ? ಮನುಷ್ಯ ಕುಲದ ಒಳಿತಿಗೆ ದಾರಿಯಿದೆಯೇ ಎಂಬ ಆತಂಕವನ್ನು ಕವಿ ಈ ಕವಿತೆಯಲ್ಲಿ ವ್ಯಕ್ತಪಡುತ್ತಾನೆ.

''ಏಕಲವ್ಯನ ಬೆನ್ನಿನ ಮೇಲೆ

ಪಾಠ ಕೇಳುವ ಪ್ರಾಣಗಳು'' 'ಏಕಲವ್ಯನ ಚರಿತ್ರೆ ಕೇಳುವ ಅಕ್ಷರಸ್ಥರು ಕೂಡ 'ಏಕಲವ್ಯನಂತವರ ಬಲಿಯು ನಿರಂತರತೆ ಕಂಡು ವಿಷಾದ ಪಡುವ ಕವಿ ಮಹಾಭಾರತದ ಚರಿತ್ರೆಯನ್ನು, ಮನುಷ್ಯ ಚರಿತ್ರೆಯನ್ನು ಪ್ರಶ್ನಿಸುತ್ತಾನೆ:

'' ಸ್ವಂತ ಸಸಿಗಳಿಗೆ ಜೋಗುಳ ಹಾಡಿ
ಸಂತರಾದವರು ಎಲ್ಲಿ?
ಕೊಳ್ಳಿದೆವ್ವಗಳ ಕಾಲ ಕುಣಿತಕೆ
ಮೌನವಾದವರು ಎಲ್ಲಿ ?

ಮುಕ್ತಾಯ

ವರ್ಣವ್ಯವಸ್ಥೆಯಿಂದಾಗಿ ಕರ್ಣ, ಏಕಲವ್ಯ, ಶಂಬೂಕ ಮುಂತಾದವರು ಆಳುವ ಮತ್ತು ಪುರೋಹಿತ ವರ್ಗದವರಿಂದ ಅವಮಾನಿತರಾಗಿ ದಮನಗೊಂಡರು. ಪುರುಷ ಪ್ರಧಾನ ಸಮಾಜವಾದ ಕಾರಣ ರೇಣುಕೆ, ಅಹಲ್ಯೆ, ಸೀತೆ, ದ್ರೌಪದಿ ಮುಂತಾದವರು ಪುರುಷರಿಂದ ಹಿಂಸೆ ಅನುಭವಿಸಿದರು. ಇದು ಪುರಾಣ ಮತ್ತು ಚರಿತ್ರೆಯಿಂದ ಕಂಡುಕೊಂಡ ಸತ್ಯ ಸಂಗತಿಯಾಗಿದೆ. ಆಧುನಿಕತೆಯಿಂದಾಗಿ ವರ್ಣವ್ಯವಸ್ಥೆ ಸಡಿಲಗೊಂಡು, ಪುರುಷ ಪ್ರಾಬಲ್ಯ ಕಡಿಮೆಯಾದ ಈ ಹೊತ್ತಿನಲ್ಲಿ, ಹೊಸ ಹೊಸ ಆಲೋಚನೆಗಳಿಂದ, ಚಿಂತನೆಗಳಿಂದ ಸಮಾಜ ಪರಿವರ್ತನವಾಗುತ್ತ ಸಾಗಿದಂತೆ ಪುರಾಣ ಅಥವಾ ಚರಿತ್ರೆಯನ್ನು ಪುನರ್ ರಚಿಸುವ ಮತ್ತು ಒಡೆದು ಕಟ್ಟುವುದಕ್ಕೆ ಸಾಂಸ್ಕೃತಿಕ ಒತ್ತಡಗಳು ಸೃಷ್ಟಿಯಾದವು. ಇದರಿಂದಾಗಿ ಒಂದು ಕಾಲದಲ್ಲಿ ದಮನಕ್ಕೊಳಗಾದ ಕರ್ಣ, ಏಕಲವ್ಯ, ಶಂಬೂಕ, ರೇಣುಕೆ, ಅಹಲ್ಯೆ, ಸೀತೆ, ದ್ರೌಪದಿ ಮುಂತಾದ ಪುರಾಣದ ವ್ಯಕ್ತಿಗಳು ಈ ಹೊತ್ತಿನ ಸಂದರ್ಭದಲ್ಲಿ ಮುಖ್ಯರಾರುವರು; ಸಾಂಸ್ಕೃತಿಕ ಹೀರೋಗಳಾಗಿರುವರು.

ಈ ಶತಮಾನದ ಸಂದರ್ಭದಲ್ಲಿ ಕುವೆಂಪುರವರು ಪುರಾಣ ಪ್ರತಿಮೆಗಳನ್ನು ಇಂದಿನ ಸಾಂಸ್ಕೃತಿಕ ಅಗತ್ಯಗಳಿಗೆ ಅನುಗುಣವಾಗಿ ಮರುವ್ಯಾಖ್ಯಾನ ಮಾಡುವ ಸಾಹಸವನ್ನು ತೋರಿಸಿದರು. ಅವರು 'ಶೂದ್ರ ತಪಸ್ವಿ' ಎಂಬ ಕೃತಿಯನ್ನು ಮರು ಸೃಷ್ಟಿಸಿದರು. ಅದರಲ್ಲಿ ಶೂದ್ರ ಶಂಬೂಕನನ್ನೇ ನಾಯಕನನ್ನಾಗಿ ಮಾಡಿ, ಮೇಲ್ವರ್ಗದ ರಾಮ ಮತ್ತು ಪುರೋಹಿತರನ್ನು ಕಡೆಗಣಿಸಿ ನೋಡಿದರು. ಇದರಿಂದ ಕುವೆಂಪು ಮೇಲ್ವರ್ಗದವರಿಂದ ಟೀಕೆಗೆ ಒಳಗಾದರು. ಕುವೆಂಪು ತಮ್ಮ ನಿಲುವನ್ನೇ ಸಮರ್ಥಿಸಿಕೊಂಡುದು ಅಲ್ಲದೆ ಆ ಬಗೆಗೆ ಅನೇಕ ಕೃತಿಗಳನ್ನು ರಚಿಸುತ್ತಲೇ ಬಂದರು. ಕರ್ಣ, ಏಕಲವ್ಯ, ಶಂಬೂಕ ಮುಂತಾದ ವ್ಯಕ್ತಿಗಳನ್ನು ಆಧುನಿಕ ಕಾಲದ ಚಿಂತನೆಗಳಲ್ಲಿಟ್ಟು ನೋಡುವ ಸಾಹಸ ಸಣ್ಣವಿಷಯವಾಗಿರಲಿಲ್ಲ. ಅದೊಂದು ಸಾಂಸ್ಕೃತಿಕ ಸವಾಲೇ ಸರಿ. ಕುವೆಂಪು ಶೂದ್ರರಾಗಿ ಹುಟ್ಟಿದ ಕಾರಣ ಅವರಿಗೆ ಇಂಥ ಯೋಚನೆ ಹೊಳೆಯಲು ಸಾಧ್ಯವಾಗಿರಬಹುದು. ಮುಂದೆ ಕನ್ನಡದ ಅನೇಕ ಲೇಖಕರು ಪುರಾಣ ಮತ್ತು ಚರಿತ್ರೆಯ ವಸ್ತುವನ್ನಾಧರಿಸಿ, ತಮ ತಮಗೆ ಸರಿಕಂಡಂತೆ ಅರ್ಥೈಸಲು ಪ್ರಯತ್ನಿಸಿರುವುದನ್ನು ಕನ್ನಡ ಸಾಹಿತ್ಯದಲ್ಲಿ ನೋಡುತ್ತೇವೆ.

ವ್ಯಾಸಭಾರತದಲ್ಲಿ ಬರುವ 'ಏಕಲವ್ಯನು, ಅರಸರ ಮತ್ತು ಪುರೋಹಿತರಿಂದ ದಮನಕ್ಕೆ ಒಳಗಾದವನು. ಅವನ ಚರಿತ್ರೆಯನ್ನು ಗಮನಿಸಿದರೆ ಯಾರಿಗೂ ಅರಿವಿಗೆ ಬರುವ ಸಂಗತಿಯೆಂದರೆ ಅವನೊಬ್ಬ 'ನಿರಪರಾಧಿ'. ಅವನ ಚರಿತ್ರೆ ಬಲ್ಲ ಎಲ್ಲರಿಗೂ ಅವನು ಪ್ರಿಯನಾಗಬಲ್ಲವನು. ಆದರೂ 'ಏಕಲವ್ಯನನ್ನು ಕುರಿತು ಬರೆಯುವುದು ಈ ಶತಮಾನದ ಪ್ರಾರಂಭದಲ್ಲಿ ಅಷ್ಟು ಸುಲಭವಾಗಿರಲಿಲ್ಲ. ಯಾಕೆಂದರೆ 'ಏಕಲವ್ಯನು ಅವಮಾನಗೊಳ್ಳಲು ಹಿಂದೆ ದ್ರೋಣನಿದ್ದಾನೆ. (ಪುರೋಹಿತ) ಈ ದ್ರೋಣನನ್ನು 'ಏಕಲವ್ಯನ ದೆಸೆಯಿಂದ 'ಕೆಟ್ಟವನು' ಎಂದು ಹೇಳಲು ಯಾರಿಗೂ ಧೈರ್ಯವಿರಲಿಲ್ಲ. 'ಬೆರಳ್ ಗೆ ಕೊರಳ್' ಕುವೆಂಪು ಬರೆದರೂ ಅಲ್ಲಿ ದ್ರೋಣನನ್ನು ದುಷ್ಟನನ್ನಾಗಿ ನೋಡುವುದು ಅವರಿಗೂ ಸಾಧ್ಯವಾಗುವುದಿಲ್ಲ. ಕರ್ಮತತ್ವ ತಂದು, ದ್ರೋಣ ಮಾಡುವುದು 'ದೇವನಿಚ್ಛೆಯ ದಿವ್ಯಲೀಲಾ ಪ್ರಯೋಜನಕೆ' ಎಂದು ಸಮರ್ಥಿಸಿಕೊಂಡರು. ಇದರಿಂದ ದ್ರೋಣನಿಗೆ ಅಪವಾದ ಹತ್ತಲಿಲ್ಲ. ಆದರೆ 'ಏಕಲವ್ಯನಿಗೆ ನ್ಯಾಯ ಸಿಕ್ಕಿತೆ ಎಂಬ ಪ್ರಶ್ನೆ ಉಳಿಯುತ್ತದೆ.

ಗೋವಿಂದ ಪೈರವರು 'ಹೆಬ್ಬೆರಳು' ನಾಟಕದಲ್ಲಿ 'ಏಕಲವ್ಯನನ್ನು ಯಥಾಸ್ಥಿತಿಯಲ್ಲಿ ನೋಡಿದ್ದಾರೆ. ದ್ರೋಣನು ಅಪ್ಪಟ ವೈದಿಕವಾಗಿ ಚಿತ್ರಿತನಾಗಿ ಕೊನೆಗೆ ತಕ್ಷಣ ಬದಲಾಗುತ್ತಾನಾದರೂ ನಾಟಕದಲ್ಲಿ ದ್ರೋಣನ ಪರಿವರ್ತನೆಗೆ ಹಿನ್ನೆಲೆಯಾಗಿ ಯಾವುದೇ ಘಟನೆ, ಸನ್ನಿವೇಶ ಸೃಷ್ಟಿಯಾಗುವುದಿಲ್ಲ. ಗೋವಿಂದ ಪೈರವರ ಆರ್ಯ — ಅನಾರ್ಯರು ಒಂದುಗೂಡಿದರೆ ಸಮಾಜಕ್ಕೆ ಒಳಿತಾಗುತ್ತದೆ — ಎಂಬ ಆಶಯ ಉತ್ಕೃಷ್ಟವಾಗಿದೆ ನಿಜ. ಅದು 'ಏಕಲವ್ಯ ಮತ್ತು ದ್ರೋಣ ಇವರಿಬ್ಬರ ಸಂಬಂಧದಲ್ಲಿ ಸಮಂಜಸ ಅನ್ನಬಹುದು. ಆದರೆ ಮಹಾಭಾರತದ ಯುದ್ಧಕ್ಕೂ ಮತ್ತು ಆರ್ಯ — ಅನಾರ್ಯರ ಒಂದುಗೂಡುವಿಕೆಗೂ ಸಂಬಂಧವಿಲ್ಲ ಎನಿಸುತ್ತದೆ.

ಯಾಕೆಂದರೆ ಅನಾರ್ಯನಾದ 'ಏಕಲವ್ಯ ಮಹಾಭಾರತದ ಯುದ್ಧಕ್ಕೆ ಕಾರಣನಾಗುವುದಿಲ್ಲ. ಗೋವಿಂದ ಪೈ ದ್ರೋಣನ ಪಾತ್ರವನ್ನು ಗೊಂದಲಕ್ಕೀಡಾದವಂತೆ ಚಿತ್ರಿಸಿರುವುದರಿಂದ ದಕ್ಕಬಹುದಾಗಿದ್ದ ಎಷ್ಟೋ ತಾತ್ವಿಕ ಸೂಕ್ಷ್ಮಗಳು ತಪ್ಪಿಹೋದವು.

ಕೈಲಾಸಂ ಅವರ 'The Purpose' ನಾಟಕದಲ್ಲಿ 'ಏಕಲವ್ಯನ ಉದ್ದೇಶ' ಸಮರ್ಪಣಾ ಪರಾರ್ಥ' ವಾದರೂ ಅವನ ಮನೋಭಿಲಾಸೆಗೆ ಭೀಷ್ಮ (ಅರಸ) ದ್ರೋಣ(ಪುರೋಹಿತ)ರಿಂದ ಬೆಂಬಲ ಸಿಗುವುದಿಲ್ಲ. ಅದಕ್ಕೆ ಅವನು ಶೂದ್ರನಾಗಿ ಹುಟ್ಟಿರುವುದು ಒಂದು ಕಾರಣವಾದರೆ ಇನ್ನೊಂದು ಅನುತ್ತರ ಸಮರ್ಥ್ಯಗಳಿಸಿದ್ದು. ಇದರಿಂದ 'ಏಕಲವ್ಯನ ಉದ್ದೇಶಕ್ಕೆ ಇಂಥ ಪರಿಸ್ಥಿತಿಯಲ್ಲಿ ಅರ್ಥಸಿಗುವುದಿಲ್ಲ. ಒಟ್ಟಿನಲ್ಲಿ ಕುವೆಂಪು, ಗೋವಿಂದ ಪೈ, ಕೈಲಾಸಂ ಮೂವರು ತಮ್ಮ ತಮ್ಮ 'ಏಕಲವ್ಯನ ಮೂಲಕ ವ್ಯಕ್ತಪಡಿಸುವ ಆಶಯಗಳು ಭಿನ್ನವಾಗಿವೆ.

ಸಮಾಜವಾದದ ಹಿನ್ನೆಲೆಯಲ್ಲಿ ರಚಿತವಾದ 'ಎಚ್ಚೆತ್ತ 'ಏಕಲವ್ಯ' ದಲ್ಲಿ ವರ್ಗ ಹೋರಾಟದ ಪ್ರತಿಪಾದನೆಯಿದೆ. ವಜ್ರಮುಷ್ಟಿಯವರು ಸಮಾನತೆ ಬಯಸುವುದರಿಂದ, ಆಳುವ ಮತ್ತು ಆಳಿಸಿಕೊಳ್ಳುವ ವರ್ಗ ನಾಶವಾಗಬೇಕೆಂಬ ಆಶಯ ಪ್ರಧಾನವಾಗಿದೆ. ಸಿದ್ಧಲಿಂಗಯ್ಯನವರು 'ಏಕಲವ್ಯ' ನ ಮೂಲಕ ಸೂಚಿಸುವ ಆಶಯ, ಈ ಹೊತ್ತಿನ ದಲಿತರ ನಿರ್ಧಾರವಾಬೇಕಾಗಿದೆ. ಕುರು — ಪಾಂಡವರ ಯುದ್ಧ ಕೇವಲ ಉಳ್ಳವರ ನಡುವಿನ ಸ್ವಾರ್ಥದ್ದು. ಯಾರ ಪರವಾಗಿ 'ಏಕಲವ್ಯ ಯುದ್ಧಕ್ಕೆ ನಿಂತರೂ ಅವನ ಪಾಲಿಗೆ ಒಳ್ಳೆಯ ಫಲಿತಾಂಶವಿಲ್ಲ. ಅದಕ್ಕಾಗಿ ಉಳ್ಳದನರ ಪರವಾಗಿ ನಿಲ್ಲುವ 'ಏಕಲವ್ಯನ ನಿರ್ಧಾರ, ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ದಲಿತರ ಪಾತ್ರ 'ಏನೆಂಬುದುದು ಇಲ್ಲಿ ಸಿದ್ದಲಿಂಗಯ್ಯ ವ್ಯಕ್ತಪಡಿಸಿದ್ದಾರೆ.

ಜಾತಿ ರಾಜಕಾರಣದ ಹಿನ್ನೆಲೆಯಲ್ಲಿ ಸತ್ಯಾನಂದ ಪಾತ್ರೋಟರ ‘ ಮತ್ತೊಬ್ಬ ‘ಏಕಲವ್ಯ ’ ರಚಿತವಾಗಿದೆ. ನೇರವಾಗಿ ವ್ಯಾಸ ಭಾರತದ ವಸ್ತುವನ್ನಾಧರಿಸದೆ ದಲಿತ ಸಂಕಷ್ಟಗಳು ಹೆಚ್ಚಾಗಿರುವ ಈ ಹೊತ್ತಿನ ಗ್ರಾಮಗಳಲ್ಲಿ ನಡೆಯಬಹುದಾದ ಉಳ್ಳವರ, ದಲಿತರ ನಡುವಿನ ಸಂಘರ್ಷವನ್ನು ಈ ನಾಟಕ ಬಿಂಬಿಸಿದೆ. ಜಾತಿ ರಾಜಕಾರಣದಿಂದ ‘ ‘ಏಕನಾಥ ’ ನಿಷ್ಕ್ರಿಯನಾಗುವುದನ್ನು ಪಾತ್ರೋಟ ಹೇಳುತ್ತಾರೆಯೇ ಹೊರತು, ಇಂದಿನ ಪರಿಸ್ಥಿತಿಯಲ್ಲಿ ‘ಏಕನಾಥನ ನಿಷ್ಕ್ರಿಯತೆ ಉತ್ತರವಾಗುವುದಿಲ್ಲ. ಸಿದ್ಧಲಿಂಗಯ್ಯ, ವಜ್ರಮಟ್ಟಿ ಮತ್ತು ಪಾತ್ರೋಟರ ತಾತ್ತ್ವಿಕತೆಯು ಒಂದರ್ಥದಲ್ಲಿ ಒಂದೇ ಸ್ತರದಲ್ಲಿದ್ದರೂ ಅವರವರ ಚಿಂತನೆಗಳು ಮತ್ತು ಆಶಯಗಳು ಬೇರೆ ಬೇರೆಯಾಗಿವೆ. ತಮ್ಮ ನಿಲುವನ್ನು, ಅದರ ಮೂಲಕ ವ್ಯಕ್ತಪಡಿಸುವ ಆಶಯವನ್ನು ಕಲಾತ್ಮಕವಾಗಿ ನಿರೂಪಿಸುವಲ್ಲಿ ಸಿದ್ಧಲಿಂಗಯ್ಯನವರು ಯಶಸ್ವಿಯಾದಷ್ಟು ಉಳಿದಿಬ್ಬರಿಂದ ಸಾಧ್ಯವಾಗಿಲ್ಲ. ಹಾಗೆ ನೋಡಿದರೆ ವಜ್ರಮಟ್ಟಿ ಮತ್ತು ಸಿದ್ಧಲಿಂಗಯ್ಯನವರು ಪುರಾಣದ ‘ಏಕಲವ್ಯನೆ ಆದರೂ ಇಲ್ಲಿ ಮರುಸೃಷ್ಟಿಯಾಗಿದೆ.

ಮಹಾಭಾರತವನ್ನು ಸಮಾಜಶಾಸ್ತ್ರೀಯ ಅಧ್ಯಯನದ ಹಿನ್ನೆಲೆಯಲ್ಲಿ ನೋಡಿರುವುದರಿಂದ ಎಸ್.ಎಲ್.ಭೈರಪ್ಪನವರ ಪರ್ವ ಕಾದಂಬರಿಯು ನೆಲೆಯನ್ನು ಪಡೆದುಕೊಂಡಿದೆ. ಮಾನವ ಸಮುದಾಯಗಳಲ್ಲಿ ಮನುಷ್ಯ – ಮನುಷ್ಯರ ಸಂಬಂಧಗಳ ಸ್ವರೂಪಗಳು ಸಹಜ ರೀತಿಯಲ್ಲಿ ವ್ಯಕ್ತವಾಗುತ್ತವೆ. ‘ಏಕಲವ್ಯ ಒಬ್ಬ ಬುಡಕಟ್ಟಿನ ಅರಣ್ಯವಾಸಿಯಾಗಿದ್ದಾನೆ. ಅರಸರ ಜೊತೆ ಅವರ ಸಂಬಂಧಗಳು ಯಾವ ಬಗೆಯಲ್ಲಿದ್ದವು ಎಂಬುದನ್ನು ಕುತೂಹಲಕರವಾಗಿ ಚಿತ್ರಿಸಿದ್ದಾರೆ; ಭೈರಪ್ಪನವರು. ಮಾನವಂತನಾದ ‘ಏಕಲವ್ಯ ಕೊನೆಯ ಗಳಿಗೆಯಲ್ಲಿ ಕುರು –ಪಾಂಡವರ ನೀತಿ – ನಿಯಮಗಳು ಸರಿ ಬರದೆ ತನ್ನ ಬೀಡಿಗೆ ಮರಳುತ್ತಾನೆ.

‘ ಅದಮ್ಯ ’ ಕಾದಂಬರಿ ಮಾತ್ರ ‘ಏಕಲವ್ಯನ ಬಗೆಗೆ ನ್ಯಾಯ ದೊರಕಿಸಿಕೊಟ್ಟಿದೆ. ಉಳಿದೆಲ್ಲ ಕೃತಿಕಾರರಿಗಿಂತ ‘ ಅದಮ್ಯ ’ ದ ಕರ್ತೃ ಜ.ಹೊ.ನಾರಾಯಣಸ್ವಾಮಿಯವರು ‘ಏಕಲವ್ಯನ ಬೆರಳು ಉಳಿಸಿ ಹೊಸ ಸಾಂಸ್ಕೃತಿಕ ಸವಾಲನ್ನು ನಿರ್ಮಾಣ ಮಾಡಿದ್ದಾರೆ. ಸರ್ವರ ಪರಿವರ್ತನೆಯಂಥ ವಿಕಾಸ ತತ್ವದ ನೆಲೆಯಿಂದ ‘ಏಕಲವ್ಯನ ಚರಿತ್ರೆಯನ್ನು ನೋಡಿರುವುದರಿಂದ ‘ ಅದಮ್ಯ ’ ಕಾದಂಬರಿಯಲ್ಲಿ ದ್ರೋಣ, ಅರ್ಜುನ ದುಷ್ಟರಾಗಿ ಉಳಿಯುವುದಿಲ್ಲ. ಮನುಷ್ಯ ಸಂಬಂಧಗಳು ಉತ್ತಮಗೊಳ್ಳುವ ಆಶಾವಾದವನ್ನು ಪ್ರಕಟಿಸುತ್ತವೆ. ಈ ಕಾರಣದಿಂದ ಇದು ಭಿನ್ನ ಆಶಯವನ್ನು ಹೊಂದಿದೆ.

ಕುವೆಂಪುರವರ 'ಬೆರಳ್ ಗೆ ಕೊರಳ್' ನಿಂದ, ಸಿದ್ಧಲಿಂಗಯ್ಯನವರ ''ಏಕಲವ್ಯ' ನಾಟಕದ ಹಾದಿಯಾಗಿ ಜ.ಹೊ.ನಾರಾಯಣಸ್ವಾಮಿಯವರ 'ಅದಮ್ಯ' ದ ತನಕ ಕನ್ನಡದ ಸೃಜನಶೀಲತೆಯು ತೋರಿರುವ ಸಾಂಸ್ಕೃತಿ ಸ್ಪಂದನ ಚರಿತ್ರೆಯ ವಿಮರ್ಶೆಯೂ ಆಗಿದೆ. ಹಾಗೂ ಸಮಕಾಲೀನ ಸಾಮಾಜಿಕ ರಾಜಕೀಯವಾದ ತಾತ್ವಿಕ ಆಕೃತಿಗಳ ರೂಪಕಗಳೂ ಆಗಿವೆ.

ಅನುಬಂಧ–1

ಅರ್ಜುನ ದ್ರೋಣರಿಗೆ ಪ್ರಶಸ್ತಿ, ಏಕಲವ್ಯನಿಗೆ ನಾಸ್ತಿ—ಬಿ.ವಿ.ವೀರಭದ್ರಪ್ಪ

'ಏಕಲವ್ಯನು ಯಾರ ಸಹಾಯವಿಲ್ಲದೆ ಸ್ವಪರಿಶ್ರಮದಿಂದ, ಸ್ವಪ್ರಯತ್ನದಿಂದ ಬೆಳೆದ ಯುವಕ ಎಂಬುದು ಪ್ರಜ್ಞಾವಂತರಾದ ಎಲ್ಲರಿಗೂ ಗೊತ್ತಿರುವ ಸಂಗತಿ. ಕುಲಪಕ್ಷಪಾತಿಯಾದ ದ್ರೋಣನು, 'ಏಕಲವ್ಯನಿಗೆ ಶೂದ್ರನೆಂಬ ಕಾರಣಕ್ಕೆ ವಿದ್ಯೆ ಕಲಿಸಲು ನಿರಾಕರಿಸಿದ. ಆಳುವ ವರ್ಗದ ಅರ್ಜುನನು ತಾನು ಲೋಕೋತ್ತರ ಧನುರ್ಧಾರಿಯಾಗಬೇಕೆಂಬ ಮಹತ್ವಾಕಾಂಕ್ಷಿಯಾಗಿದ್ದ. ಅದಕ್ಕೆ ತಕ್ಕಂತ ವಾತಾವರಣ ಅವನಿಗೆ ಸಹಜವಾಗಿಯೇ ಒದಗಿಬಂತು. ಆದರೆ ಅರ್ಜುನನಷ್ಟೇ ಮಹತ್ವಾಕಾಂಕ್ಷಿಯಾಗಿದ್ದರೂ 'ಏಕಲವ್ಯನಿಗೆ ಅಂಥ ವಾತಾವರಣ ಒದಗಿಸಿಕೊಳ್ಳಲು ಎಷ್ಟೇ ಪ್ರಯತ್ನಿಸಿದರೂ ಸಿಗದಿರಲು ಕಾರಣ ಅವನು ಶೂದ್ರನಾಗಿ ಹುಟ್ಟಿದ್ದರಿಂದ. ಅಂದಿನಿಂದ ಇಂದಿನವರೆಗೆ ಇಂಥ ಪರಿಸ್ಥಿತಿಯಲ್ಲಿ ಬದಲಾವಣೆಯಾಗಿಲ್ಲವೆಂಬುದು ಅಷ್ಟೇ ಸತ್ಯ. ಭಾರತದ ವಿಷಯದಲ್ಲಿ ಇದು ಸೋಜಿಗದ ವಿಷಯವೇನಲ್ಲ. ಕ್ರೀಡಾವಲಯದಲ್ಲಿ ಇಂದಿಗೂ ಅರ್ಜುನ, 'ಏಕಲವ್ಯರ ನಡುವಿನ ಸ್ಪರ್ಧೆ ನಡದೇ ಇದೆ. ಎಂದಿನಂತೆ. ಅರ್ಜುನನಂಥವರಿಗೆ ಸಾಮರ್ಥ್ಯ ಇರದಿದ್ದರೂ ಅವಕಾಶ ಮಾತ್ರ ಪಡೆಯುತ್ತಲೇ ಸಾಗಿದ್ದಾರೆ. 'ಏಕಲವ್ಯನಂಥವರಿಗೆ ಎಷ್ಟೇ ಸಾಮರ್ಥ್ಯವಿದ್ದರೂ ಆಳುವವರ, ಅಧಿಕಾರಿಗಳ ಬೆಂಬಲ್ಲವಿಲ್ಲದೆ ಅವಕಾಶದಿಂದ ವಂಚಿತರಾಗುತ್ತಲೇ ಹಿಂದುಳಿದಿದ್ದಾರೆ.

ಬಿ.ವಿ.ವೀರಭದ್ರಪ್ಪನವರು '' ಅರ್ಜುನ ದ್ರೋಣರಿಗೆ ಪ್ರಶಸ್ತಿ, ಏಕಲವ್ಯನಿಗೆ ನಾಸ್ತಿ '' ಎಂಬ ತಮ್ಮ ಒಂದು ಲೇಖನದಲ್ಲಿ ಹೀಗೆ ಬರೆದಿದ್ದಾರೆ: '' ಕ್ರೀಡಾ ಪಟುಗಳಲ್ಲಿ ಹಾಗೂ ಕೋಚ್‌ಗಳಲ್ಲಿ ಶ್ರೇಷ್ಠರಾದವರನ್ನು ಗುರುತಿಸುವ ಸಲುವಾಗಿ ಸ್ಥಾಪಿತವಾದ ಪ್ರಶಸ್ತಿಗಳಿಗೆ ಅರ್ಜುನ, ದ್ರೋಣರ ಹೆಸರನ್ನಿಟ್ಟಿರುವುದು ಆಕಸ್ಮಿಕವಲ್ಲ. ಅಂದು ಮಹಾಭಾರತದ ಅರ್ಜುನ ಮತ್ತು ದ್ರೋಣರು ಯಾವ ಕ್ರೀಡಾ ಮನೋಭಾವ ಮತ್ತು ಶ್ರೇಷ್ಠತೆಗಳನ್ನು ಪ್ರತಿನಿಧಿಸಿದ್ದರೋ ಇಂದು ಅಂಥದೇ ಮೌಲ್ಯಗಳನ್ನು ಎತ್ತಿ ಹಿಡಿಯುವ ಉದ್ದೇಶದಿಂದ ಅರ್ಜುನ ಪ್ರಶಸ್ತಿ ಮತ್ತು ದ್ರೋಣ ಪ್ರಶಸ್ತಿಗಳನ್ನು ಸ್ಥಾಪಿಸಲಾಗಿದೆ ಎಂಬುದು ಸ್ವಯಂವೇದ್ಯವಾಗುತ್ತದೆ. ''[1]

ಕ್ರೀಡಾರಂಗದಲ್ಲಿಯೂ ಕೂಡ ಅರ್ಹರಿಗೆ ಅವಕಾಶ ಸಿಗದೆ, ಕೇವಲ ಆಳುವ ವರ್ಗದ ಬೆಂಬಲವಿರುವ ಮೇಲ್ವರ್ಗದವರಿಗೆ ಮಾತ್ರ ಅವಕಾಶಗಳು ಸಿಗುವುದರಿಂದ, ಇಂಥವರು ಅನರ್ಹರಿದ್ದರೂ ಅನೇಕ ಕ್ರೀಡೆಗಳ ಹೆಸರಿನಲ್ಲಿ ದೇಶ ವಿದೇಶಗಳಿಗೆ ಹೋಗಿ ಕಾಲ ಕಳೆದು ಬರುತ್ತಾರೆ. ಇದರಿಂದ ನಿರೀಕ್ಷಿಸುವ ಫಲಿತಾಂಶ ಮಾತ್ರ ಸೊನ್ನೆ. ಆದರೆ ಇವರು ದ್ರೋಣಾರ್ಜುನರ ಕುಲಕ್ಕೆ ಸೇರಿ ಹುಟ್ಟಿದ್ದೇ ಇವರಿಗಿರುವ ಅರ್ಹತೆ — ಎನ್ನದೇ ಬೇರೆ ದಾರಿಯಿಲ್ಲ. '' ನೂರಾರು, ಸಾವಿರಾರು

'ಏಕಲವ್ಯ'ರನ್ನು ಕಡೆಗಣಿಸಿ ಅನರ್ಹ ಅರ್ಜುನರಿಗೆ ಸಲ್ಲದ ಪ್ರೋತ್ಸಾಹ ನೀಡುತ್ತಿರುವುದರ ಫಲವನ್ನು ನಾವು 1984ರ ಒಲಂಪಿಕ್ಸ್‌ನಲ್ಲಿ ಚೆನ್ನಾಗಿ ಕಂಡಿದ್ದೇವೆ. ಭಾರತ ಒಂದು ಕಂಚಿನ ಪದಕವನ್ನು ಗಳಿಸದೆ ಪದಕ ಪಟ್ಟಿಯಲ್ಲಿ ಹೇಳಹೆಸರಿಲ್ಲದೆ ಹೋಗಿದೆ. ಈ ನಾಚಿಗೇಡಿನ ಸ್ಥಿತಿಗೆ 'ಏಕಲವ್ಯ'ನನ್ನು ಕಡೆಗಣಿಸಿರುವ ದ್ರೋಣಾರ್ಜುನ ಸಂಸ್ಕೃತಿಯಲ್ಲದೆ ಬೇರೆ ಕಾರಣವಿಲ್ಲ."

ಈ ಹೊತ್ತಿನ ಸಂದರ್ಭದಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗಗಳಿಗೆ ಹಲವು ಬಗೆಯಲ್ಲಿ ಸವಲತ್ತುಗಳನ್ನು ಒದಗಿಸಬೇಕೆಂದು ಭಾರತ ಸರಕಾರ ತಾತ್ವಿಕವಾಗಿ ಒಪ್ಪಿಕೊಂಡು ಕೆಲಸ ನಡೆಸಿದರೂ ಆಡಳಿತದಲ್ಲಿರುವ ದ್ರೋಣಾರ್ಜುನರಂಥ ಅಧಿಕಾರಿಗಳು ಒಳ ಕೂಟ, 'ಏಕಲವ್ಯ'ನಂಥರುವವರಿಗೆ ಸಿಗಬೇಕಾದ ಸೌಲಭ್ಯ ಸಿಗದಂತೆ ನೋಡಿಕೊಳ್ಳುವ ಪ್ರಯತ್ನಗಳನ್ನು ಮಾಡುತ್ತಲೇ ಇದ್ದಾರೆ. ಇದಕ್ಕೆ ಅನೇಕ ಸಾಕ್ಷಿಗಳಿವೆ. ಸರಕಾರಿ ಹುದ್ದೆಗಳು, ಮೆಡಿಕಲ್ ಸೀಟುಗಳು, ಸ್ಕಾಲರ್‌ಷಿಪ್‌ಗಳು ಮುಂತಾದವು.

'ಏಕಲವ್ಯ'ನಂಥವರಿಗೆ ನ್ಯಾಯ ಸಿಗಬೇಕಾದರೆ ಕಾನೂನು, ಶಾಸನಗಳ ಜೊತೆಗೆ ಮೇಲ್ವರ್ಗದವರು — ಎನಿಸಿಕೊಂಡವರಲ್ಲಿ ಕೆಳವರ್ಗದವರ ಬಗ್ಗೆ, ಅವರ ಇತಿಹಾಸದ ಬಗ್ಗೆ ಅರಿವು ಮೂಡಬೇಕಾಗಿದೆ. ಮನುಷ್ಯ — ಮನುಷ್ಯರ ನಡುವಿನ ತಾರತಮ್ಯ ಮಾಸಿಹೋಗಿ 'ಪ್ರೀತಿ' ಏರ್ಪಡುವ ಅನಿವಾರ್ಯತೆ ಹೆಚ್ಚಾಗಬೇಕಾಗಿದೆ.

<u>ಅಡಿ ಟಿಪ್ಪಣಿ</u>

1 ಮತ್ತು 2) ಬಿ.ವಿ.ವೀರಭದ್ರಪ್ಪ: ವೇದಾಂತ ರೆಜಿಮೆಂಟ್(1991) ಪತ್ರಿಕೆ ಪ್ರಕಾಶನ, ಬೆಂಗಳೂರು. ಪುಟ—49.

ಅಭ್ಯಾಸ ಸೂಚಿ –1

1.1. ಕುವೆಂಪು: ಬೆರಳ್‌ಗೆ ಕೊರಳ್ (ಎಂಟನೆಯ ಮುದ್ರಣ–1990) ಉದಯರವಿ ಪ್ರಕಾಶನ, ಮೈಸೂರು.

1.2. ಗೋವಿಂದ ಪೈ: ಹೆಬ್ಬೆರಳು (1987) ಕಾವ್ಯಾಲಯ ಪ್ರಕಾಶನ, ಮೈಸೂರು.

1.3. ಜ.ಹೊ.ನಾರಾಯಣ ಸ್ವಾಮಿ: ಅದಮ್ಯ (1993)ನೂತನ ಪ್ರಕಾಶನ, ಹಾಸನ.

1.4. ಎಸ್.ಎಲ್.ಭೈರಪ್ಪ: ಪರ್ವ (ಮೂರನೆಯ ಮುದ್ರಣ–1989) ಸಾಹಿತ್ಯ ಭಂಡಾರ, ಬೆಂಗಳೂರು.

1.5. ಬಿ.ಎಸ್.ರಾಮರಾವ್: 'ಏಕಲವ್ಯ (ನಾಟಕದ ಅನುವಾದ) ಬಿ.ಎಸ್.ರಾಮರಾವ್ ಪ್ರಕಾಶನ, ಬೆಂಗಳೂರು.

1.6. ಮೇಘಮಿತ್ರ : ಏ[illegible]ತ್ರ 'ಏಕಲವ್ಯ (1984) ವಿದ್ಯಾಭಾರತಿ ಪ್ರಕಾಶನ, ಜಮಖಂಡಿ.

1.7. ಸೂರ್ಯಾನಂದ ಪಾತ್ರೋಟ: ಮತ್ತೊಬ್ಬ 'ಏಕಲವ್ಯ (1988) ಸಮತಾ ಪ್ರಕಾಶನ, ಬಾಗಲಕೋಟೆ.

1.8. ಸಿದ್ಧಲಿಂಗಯ್ಯ: 'ಏಕಲವ್ಯ (1986) ಅಜಂತ ಪ್ರಕಾಶನ, ಬೆಂಗಳೂರು.

:: 2 ::

2.1. ಡಾ.ಚೆನ್ನಣ್ಣ ವಾಲೀಕಾರ: ಆಯ್ದ ಕವನಗಳು (1987)ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

2.2. ಡಾ.ಚೆನ್ನಣ್ಣ ವಾಲೀಕರ: ವೈರಿಗಳ ಮಧ್ಯ ಎದ್ದು ಕಗ್ಗತ್ತಲೆ ಖಂಡದ ಕಾವ್ಯ (1993) ಅಂಬೇಡ್ಕರ ವಿಚಾರ ಪ್ರಚಾರ ಸಮಿತಿ, ಗುಲಬರ್ಗಾ.

2.3. ಕೆ.ನರಸಿಂಹಪ್ಪ: ಮುಗಿಲ ಮಲ್ಲಿಗೆ (1993) ವಿಮೋಚನಾ ಪ್ರಕಾಶನ, ಚಿತ್ರದುರ್ಗ.

2.4. ಬಿ.ಎಸ್.ಮಲ್ಲೇಶ: ' ಬೇರು ಒಣಗಿದ ಪ್ರೀತಿ '(1990) ಅನ್ವೇಷಣ ಪ್ರಕಾಶನ, ಬೆಂಗಳೂರು.

2.5. ಡಾ.ಬರಗೂರು ರಾಮಚಂದ್ರಪ್ಪ: ಮಗುವಿನ ಹಾಡು (1993) ವೈಚಾರಿಕ ಪುಸ್ತಕ ಮಾಲೆ, ಬೆಂಗಳೂರು.

2.6. ಎಂ.ಲೋಕೇಶ: ಬರುತ್ತಾನೆ ಸೂರ್ಯ (1989) 'ಏಕಲವ್ಯ ಪ್ರಕಾಶನ, ಮೈಸೂರು.

2.7. ಜಿ.ಎಸ್.ಶಿವರುದ್ರಪ್ಪ: ಚಕ್ರಗತಿ (1992) ಕಾಮಧೇನು ಪ್ರಕಾಶನ, ಬೆಂಗಳೂರು.

ಅಭ್ಯಾಸ ಸೂಚಿ –3

3.1. ಕೀರ್ತಿನಾಥ ಕುರ್ತಕೋಟಿ: ಯುಗಧರ್ಮ ಹಾಗೂ ಸಾಹಿತ್ಯ ದರ್ಶನ(19[illegible]) ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

3.2. ಕುವೆಂಪು: ಶೂದ್ರ ತಪಸ್ವಿ (1987) ಉದಯರವಿ ಪ್ರಕಾಶನ, ಮೈಸೂರು.

3.3. ಕೆ.ಎಲ್.ಗೋಪಾಲಕೃಷ್ಣಯ್ಯ : ಕನ್ನಡ ಸಾಹಿತ್ಯದಲ್ಲಿ ಪುರಾಣ ಪ್ರಜ್ಞೆ (1987) ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

3.4. ಕೆ.ಎಲ್.ಗೋಪಾಲಕೃಷ್ಣಯ್ಯ: ಪುರಾಣ (1990) ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

3.5. ಎಂ.ಚಿದಾನಂದಮೂರ್ತಿ: ಶೂನ್ಯಸಂಪಾದನೆಯನ್ನು ಕುರಿತು (1990) ಸ್ನೇಹ ಪ್ರಕಾಶನ, ಬೆಂಗಳೂರು.

3.6. ಹಾ.ಮಾ.ನಾಯಕ (ಸಂ): ಗೋವಿಂದ ಪೈ (1983) ಕನ್ನಡ ಅಧ್ಯಯನ ಸಂಸ್ಥೆ, ಬೆಂಗಳೂರು.

3.7. ಕೆ.ಎಸ್.ನಿಸಾರ್ ಅಹ್ಮದ್ : ದಶವಾರ್ಷಿಕ ವಿಮರ್ಶೆಗಳು (1986) ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

3.8. ಪುರುಷೋತ್ತಮ ಬಿಳಿಮಲೆ : ಬಂಡಾಯ – ದಲಿತ ಸಾಹಿತ್ಯ (1990) ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

3.9. ಪೋಲಂಕಿ ರಾಮಮೂರ್ತಿ: ಪ್ರಬುದ್ಧ ಕರ್ನಾಟಕ (20ನೇ ಸಂಚಿಕೆ –1984) ಮೈಸೂರು ವಿಶ್ವವಿದ್ಯಾಲಯ.

3.10. ಸಂ: ಡಾ.ಬಸವರಾಜ ಸಾದರ : ಆಧುನಿಕ ಕನ್ನಡ ಮಹಾಕಾವ್ಯ (1992) ಕನ್ನಡ ಸಂಘ, ಬೆಂಗಳೂರು.

3.11. ಪ್ರಧಾನ ಸಂ: ಬರಗೂರು ರಾಮಚಂದ್ರಪ್ಪ: ಕನ್ನಡ ಸಾಹಿತ್ಯ ಚರಿತ್ರೆ, ಮರು, ಪುರಾಣ : ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

3.12. ಆರ್.ವಿ.ಭಂಡಾರಿ: ಸಮಾಜವಾದಿ ವಾಸ್ತವ (1989) ರಾಘವೇಂದ್ರ ಪ್ರಕಾಶನ, ಅಂಕೋಲ.

3.13. ಕೆ.ಮರುಳಸಿದ್ದಪ್ಪ: ಆಧುನಿಕ ಕನ್ನಡ ನಾಟಕ (1983) ಪ್ರಿಂಟರ್ಸ್ ಪ್ರಕಾಶನ, ಬೆಂಗಳೂರು.

3.14. ಮಲ್ಲೇಪುರಂ ಜಿ.ವೆಂಕಟೇಶ : ಸಾಹಿತ್ಯ ಮತ್ತು ಪುರಾಣ (1993) ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

3.15. ಅ.ರಾ.ಮಿತ್ರ : ಕೈಲಾಸಂ (1983) ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

3.16. ರಂ.ಶ್ರೀ.ಮುಗಳಿ : ಕನ್ನಡ ಸಾಹಿತ್ಯ ಚರಿತ್ರೆ, ಉಷಾ ಸಾಹಿತ್ಯ ಮಾಲೆ, ಮೈಸೂರು.

3.17. ಮುಳ್ಳೂರು ನಾಗರಾಜ : ನೆಲದ ಜೋಗುಳ (1993) ವಿಚಾರವಾದಿ ಪ್ರಕಾಶನ; ಬೆಂಗಳೂರು.

3.18. ರಹಮತ್ ತರೀಕೆರೆ : ಪ್ರತಿಸಂಸ್ಕೃತಿ (1993) ಕನ್ನಡ ಸಂಘ ಕ್ರೈಸ್ಟ್ ಕಾಲೇಜ್; ಬೆಂಗಳೂರು.

3.19. ಜಿ.ಪಿ.ರಾಜರತ್ನಂ: ಕವಿ ಗೋವಿಂದ ಪೈ (1994) ಜೀವನ ಕಾರ್ಯಾಲಯ, ಬೆಂಗಳೂರು.

3.19. ರಾಮೇಗೌಡ: ಕನ್ನಡ ಕಾವ್ಯಗಳಲ್ಲಿ ಐತಿಹಾಸಿಕ ವಿಚಾರಗಳು (1992) ಚಿತ್ರಕೂಟ ಪ್ರಕಾಶನ, ಮೈಸೂರು.

3.20. ಎಂ.ಸಿ.ವಸಂತಕುಮಾರ(ಸಂ) : ಕುವೆಂಪು ನಾಟಕ ಸಮೀಕ್ಷೆ (1972) [illegible] ಪ್ರಕಾಶನ, ಮೈಸೂರು.

3.21. ವಿದ್ಯಾಶಂಕರ : ವೀರಶೈವ ಪುರಾಣ (196[illegible]) ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

3.22. ಜಿ.ಎಸ್.ಶಿವರುದ್ರಪ್ಪ : ಕನ್ನಡ ಸಾಹಿತ್ಯ ಸಮೀಕ್ಷೆ (9(1975)ಬೆಂಗಳೂರು ವಿಶ್ವ-ವಿದ್ಯಾಲಯ, ಬೆಂಗಳೂರು.

3.23. ಜಿ.ಎಸ್.ಸಣ್ಣಯ್ಯ(ಸಂ) ನೇಮಿನಾಥ ಪುರಾಣ (1961) ಕವಿಕಾವ್ಯ ವಿಹಾರ, ಬೆಂಗಳೂರು.

3.24. ಸ್ವಾಮಿವಿವೇಕಾನಂದ ಕೃತಿ ಶ್ರೇಣಿ : ಸ್ವಾಮಿ ವಿವೇಕಾನಂದ ಸಂಪುಟ –[illegible], ರಾಮಕೃಷ್ಣಾಶ್ರಮ, ಮೈಸೂರು.

3.25. ಸಂ:ಜಿ.ಎಸ್.ಸಿದ್ಧಲಿಂಗಯ್ಯ, ಎಂ.ಎಚ್.ಕೃಷ್ಣಯ್ಯ : ಸಾಲು ದೀಪಗಳು (1990) ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

3.26. ಸುಜನಾ : ಪರಂಪರೆ ಮತ್ತು ಕುವೆಂಪು (1984) ಸಹ್ಯಾದ್ರಿ ಪ್ರಕಾಶನ, ಮೈಸೂರು.

3.27. ಹ.ಸೋಮಶೇಖರ : ಹಿಂದುಳಿದ ವರ್ಗಗಳ ಹೋರಾಟ (1992) ಹೊಸದಿಕ್ಕು ಪ್ರಕಾಶನ, ಬೆಂಗಳೂರು.

oooo